"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೇಳನೆಯ ಅಧಿವೇಶನ

ದಿನಾಂಕ: 22ನೇ ಸೆಪ್ಟೆಂಬರ್ 2022

ಗುರುವಾರ

## ವಿಷಯಾನುಕ್ರಮಣಿಕೆ [INDEX]


01. ಪ್ರಕಟಣೆ

02. "PayCM" ಪೋಸ್ಟರ್ ಅಂಟಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರುಗಳಿಂದ ಧರಣಿ.

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧಪಕ್ಷದ ನಾಯಕರು)
- ಡಾ.ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು)
- ಡಾ.ಆರಗ ಜ್ಞಾನೇಂದ್ರ(ಗೃಹ ಸಚಿವರು)
- ಡಾ.ತೇಜಸ್ವಿನಿಗೌಡ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**೦3. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

(ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಘೋಷಣೆಗಳನ್ನು ಕೂಗುತ್ತಿದ್ದ ಕಾರಣ ಹಾಗೂ ಸದನದಲ್ಲಿ ಗೊಂದಲ ವಾತಾವರಣವಿದ್ದುದರಿಂದ ಪ್ರಶ್ನೋತ್ತರಗಳ ಮೇಲಿನ ಚರ್ಚೆ ಮೊಟಕುಗೊಂಡಿರುತ್ತದೆ.)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಪಟ್ಟಂತೆ ಸಚಿವರ ಹೇಳಿಕೆಗಳು**

**ಅ) ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ಹಾಗೂ ಬೆಳೆ ಹಾನಿಗೆ ಸರ್ಕಾರ ನೀಡಿದ ಪರಿಹಾರ ಕುರಿತು.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಮುಖ್ಯಮಂತ್ರಿಗಳ ಪರವಾಗಿ)

**ಆ) ಪಿ.ಎಸ್.ಐ. ಪರೀಕ್ಷೆಯಲ್ಲಿ ಓ.ಎಂ.ಆರ್. ಶೀಟ್‌ಗಳನ್ನು ತಿದ್ದಿದ ಪ್ರಕರಣದ ಬೆನ್ನಲ್ಲೇ ವಿವಿಧ ವಿಶ್ವವಿದ್ಯಾನಿಲಯಗಳ ಪಿ.ಹೆಚ್.ಡಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಓ.ಎಂ.ಆರ್. ಉತ್ತರ ಪತ್ರಿಕೆಗಳನ್ನು ಖರೀದಿಸಿ ಅಕ್ರಮ ನಡೆದಿರುವ ಬಗ್ಗೆ.**

- **ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು,** ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**ಇ) ಅನುದಾನಿತ ಪದವಿ ಕಾಲೇಜುಗಳಲ್ಲಿ 2015ರ ಪೂರ್ವಕಾಲದಲ್ಲಿ ನಿವೃತ್ತಿ ಮತ್ತು ಮರಣದಿಂದಾಗಿ ತೆರವಾಗಿ ಮಂಜೂರಾದ ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

**– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು,** ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**ಈ) 2022ರ ನಿಯಮ ತಿದ್ದುಪಡಿಯನ್ನು ಗೃಹ ಇಲಾಖೆಯು ಪುನರ್‌ಪರಿಶೀಲಿಸಬೇಕು ಮತ್ತು ಈ ಹಿಂದೆ ಇದ್ದ ನಿಯಮಗಳ ಪ್ರಕಾರ ಅಧಿಕಾರಿ ಮತ್ತು ಸಿಬ್ಬಂದಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುವ ಬಗ್ಗೆ.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಗೃಹ ಸಚಿವರ ಪರವಾಗಿ)

**ಉ) ಬೆಂಗಳೂರು ಮಹಾನಗರದಲ್ಲಿ ವಾಹನಗಳ ಟೋಯಿಂಗ್ ಪದ್ಧತಿ ಜಾರಿಯಿಂದ ಆಗುತ್ತಿರುವ ಅನಾನುಕೂಲಗಳ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಗೃಹ ಸಚಿವರ ಪರವಾಗಿ)

**ಊ) ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆ ಕುರಿತು.**

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಕಾಲ ಸಚಿವರ ಪರವಾಗಿ)

**೦5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**

(ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಭಿತ್ತಿಪತ್ರಗಳನ್ನು ಪ್ರದರ್ಶಿಸಿ ಘೋಷಣೆಗಳನ್ನು ಕೂಗುತ್ತಿದ್ದ ಕಾರಣ, ಸದನದಲ್ಲಿ ಗೊಂದಲದ ವಾತಾವರಣವಿದ್ದುದರಿಂದ ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪವಾಗಲಿದ್ದ ವಿಷಯಗಳು ಮೊಟಕುಗೊಂಡಿರುತ್ತದೆ.)

**೦6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ವಿಧೇಯಕ, 2022**

- ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು, ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ)

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**೦7. ಪ್ರಕಟಣೆ**

**೦8. "PayCM" ಪೋಸ್ಟರ್ ಅಂಟಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮುಂದುವರೆದ ಚರ್ಚೆ**

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧಪಕ್ಷದ ನಾಯಕರು)
- ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು)
- ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)

**೦9. ಸಭೆಯ ಮುಂದಿಡಲಾದ ಕಾಗದಪತ್ರಗಳು**

**1೦. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವುದು**

**11. ನಿಯಮ 68ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು.**

- **ಶ್ರೀ ಯು.ಬಿ.ವೆಂಕಟೇಶ್**

**12. ಪ್ರಕಟಣೆ**

**13. ನಿಯಮ 68ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು.**

- ಶ್ರೀ ಶರವಣ ಟಿ.ಎ.
- ಡಾ.ತೇಜಸ್ವಿನಿ ಗೌಡ
- ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಮರಿತಿಬ್ಬೇಗೌಡ
- ಡಾ.ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಮುನಿರಾಜುಗೌಡ ಪಿ.ಎಂ.
- ಶ್ರೀ ಪ್ರತಾಪಸಿಂಹ ನಾಯಕ್.ಕೆ

**14. ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ, ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವುದು**

**15. ನಿಯಮ 68ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ. ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು.**

- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)
- ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)

**16. ಕಾರ್ಯದರ್ಶಿಯವರ ವರದಿ**

**17. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**(ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2022**

- ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ನಸೀರ್ ಅಹಮದ್
- ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಎಂ.ನಾಗರಾಜು
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಮರಿತಿಬ್ಬೇಗೌಡ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**18. ವರದಿಯನ್ನೊಪ್ಪಿಸುವುದು.**

**ರಾಜ್ಯ ಅಲ್ಪಸಂಖ್ಯಾತರ ಆಯೋಗದ ವರದಿ ಮಂಡನೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ನಸೀರ್ ಅಹಮದ್
- ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧಪಕ್ಷದ ನಾಯಕರು)

<><><>

(987) 22.09.2022 11.00 LL-AK

# ಕರ್ನಾಟಕ ವಿಧಾನ ಪರಿಷತ್ತು

ಗುರುವಾರ, 22ನೇ ಸೆಪ್ಟೆಂಬರ್ 2022

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಗ್ಗೆ 11 ಗಂಟೆ 09 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ರಘುನಾಥ ರಾವ್ ಮಲ್ಕಾಪೂರೆ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

## 1. ಪ್ರಕಟಣೆ

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ:-

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 113ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಯೊಂದಿಗೆ ಅಂಗೀಕಾರವಾದ ರೂಪದಲ್ಲಿರುವ “2022ನೇ ಸಾಲಿನ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕವನ್ನು (2021ರ ವಿಧಾನಸಭೆಯ ವಿಧೇಯಕ ಸಂಖ್ಯೆ:50) ದಿನಾಂಕ:21.09.2022ರಂದು ವಿಧಾನಸಭೆಯು ಪುನರ್‌ಪರ್ಯಾಲೋಚಿಸಿ ಅಂಗೀಕರಿಸಿತೆಂದು ತಿಳಿಸಿರುತ್ತಾರೆ.

(ಮುಂದು...)

(988) 22.09.2022 11.10 ವೈಎಲ್-ಎಕೆ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ.

## 02. “Pay CM” ಪೋಸ್ಟರ್ ಅಂಟಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರುಗಳಿಂದ ಧರಣಿ

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿನ್ನೆ ರಾತ್ರಿ ಸುಮಾರು 2 ಗಂಟೆಯಲ್ಲಿ ಹೋಗಿ,...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ಒಂದು ನಿಮಿಷ.

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯನ್ನು ತೆಗೆದುಕೊಳ್ಳಿ. ಬಹಳ ಗಂಭೀರವಾದಂಥ ವಿಚಾರಗಳಿದ್ದು, ಇದು ಪ್ರಶ್ನೋತ್ತರ ಅವಧಿಯಾಗಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಕಾರ್ಯಕರ್ತರನ್ನು ಅರೆಸ್ಟ್ ಮಾಡಿಲಾಗಿದ್ದು,....

**(ಗೊಂದಲ)**

**ಸಭಾಪತಿಯವರು:-** ಸದನವನ್ನು ನಡೆಸುವುದಕ್ಕೆ ಒಂದು ಕಾರ್ಯಪದ್ಧತಿ ಇದೆ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ದೇಶದ ಭದ್ರತೆ ಮೊದಲ ಆದ್ಯತೆಯಾಗಿದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸರ್ಕಾರ ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳುತ್ತಿದೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಯಾವುದೇ ಪಕ್ಷೀಯವಾಗಿ ಕ್ರಮ ತೆಗೆದುಕೊಂಡಿಲ್ಲ. ನಿಯತ್ತಾಗಿ ಮಾಡಲಾಗಿದೆ. ಅವರು 420 ಕೆಲಸ ಮಾಡಿದ್ದಕ್ಕಾಗಿಯೇ ಅವರನ್ನು ಅರೆಸ್ಟ್ ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಏನೇ ಪ್ರಶ್ನೆ ಇದ್ದರೂ ಪ್ರಶ್ನೋತ್ತರ ಮುಗಿದ ಮೇಲೆ ಒಂದು ನೋಟಿಸ್ ಕಳುಹಿಸಿಕೊಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನನಗೆ ಮಾತನಾಡಲು ಅವಕಾಶ ನೀಡಿ. ನಿನ್ನೆ ದಿವಸ ರಾತ್ರಿ ನಡೆದಿರುವಂಥ ಘಟನೆ,...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ಸದನದ ನಿಯಮ ಪ್ರಕಾರ ಪ್ರಶ್ನೋತ್ತರ ಅವಧಿ ತೆಗೆದುಕೊಳ್ಳಬೇಕು. ಆ ನಂತರ ಅವರಿಗೆ ಅವಕಾಶ ನೀಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸದನದ ಬಾವಿಯ ಒಳಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಪ್ರತ್ಯೇಕವಾಗಿ ಒಂದು ಕಾನೂನು ಇಲ್ಲ. ಎಲ್ಲರಿಗೂ ಒಂದೇ ಕಾನೂನು ಇರುವುದು. **(ಗೊಂದಲ)** ಯಾರು ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡಿದ್ದಾರೆ ಅವರನ್ನು ಪೊಲೀಸ್‌ನವರು ಅರೆಸ್ಟ್ ಮಾಡುತ್ತಾರೆ. ಕಾಂಗ್ರೆಸ್‌ನವರಿಗೆ ಒಂದು ಕಾನೂನು, ಬೇರೆಯವರಿಗೆ ಒಂದು ಕಾನೂನು ಮಾಡಲು ಸಾಧ್ಯವಿಲ್ಲ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮನೆ ಮನೆಯಲ್ಲಿ ಬಾಂಬ್ ಇಡುವುದಕ್ಕೆ ಬಿಡಬೇಕೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ,....**(ಗೊಂದಲ)** ಹೌದು, ಈ ದೇಶದ ಕಾನೂನು ಎಲ್ಲರಿಗೂ ಒಂದೇ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಕಾಂಗ್ರೆಸ್‌ಗೆ ಒಂದು ಕಾನೂನು, ಮತ್ತೊಬ್ಬರಿಗೆ ಇನ್ನೊಂದು ಕಾನೂನು ಇರುವುದಿಲ್ಲ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ ಅಪಮಾನ ಮಾಡುವುದು ಯಾವ ಸಂಸ್ಕೃತಿ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, **(ಗೊಂದಲ)** ಭಾರತೀಯ ಜನತಾ ಪಕ್ಷದವರೂ ಸಹ posters ಹಾಕಿದ್ದರು. Posters ಹಾಕಿದವರನ್ನು ಅರೆಸ್ಟ್ ಮಾಡಬೇಕಾಗಿತ್ತು. ಆದರೆ, ಆ ರೀತಿ ಮಾಡಿಲ್ಲ. **(ಗೊಂದಲ)** ಆದ್ದರಿಂದ, ಸದನದಲ್ಲಿ ಈ ವಿಷಯ ಚರ್ಚೆ ಮಾಡಲು ಅವಕಾಶ ನೀಡಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸೋಶಿಯಾಲ್ ಮಿಡಿಯಾದಲ್ಲಿ,...

**(ಈ ಹಂತದಲ್ಲಿ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಸದನದ ಬಾವಿಯಿಂದ ಅವರ ಸ್ಥಾನಕ್ಕೆ ತೆರಳಿದರು)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಏನು ಸಮಸ್ಯೆ ಇದೆ ಅದರ ಬಗ್ಗೆ ನೋಟಿಸ್ ಕಳುಹಿಸಿಕೊಡಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಸೌಜನ್ಯತೆ ಅದು, ದೌರ್ಜನ್ಯವಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೇವಲ ನಮಗೆ ನೋಟಿಸ್ ಕಳುಹಿಸಿಕೊಟ್ಟರೆ ಅದು ಸರಿದೂಗುವುದಿಲ್ಲ. **(ಗೊಂದಲ)** ಒಂದೇ ರೀತಿಯ ಅಪರಾಧವನ್ನು ಭಾರತೀಯ ಜನತಾ ಪಾರ್ಟಿಯವರು ಮಾಡಿದ್ದಾರೆ. ಮಾನ್ಯ ಗೃಹ ಮಂತ್ರಿಗಳು... **(ಗೊಂದಲ)** ...ಮಾಡಿದ್ದಾರೆ.

**(ಗೊಂದಲ)**

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಒಬ್ಬ ಮುಖ್ಯಮಂತ್ರಿಗಳ ಮನೆಯ ಮುಂದೆ ಪೋಸ್ಟರ್ ಹಾಕುವುದು ಹೇಡಿಗಳು ಮಾಡುವಂಥ ಕೆಲಸ. ಅವರಿಗೆ ಧೈರ್ಯ ಇದ್ದರೆ, ಸದನ ನಡೆಯುತ್ತಿದ್ದು ಇಲ್ಲಿ ಹೇಳಬೇಕಾಗಿತ್ತು.

**(ಗೊಂದಲ)**

**ಡಾ: ವೈ.ಎ. ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇದು ಅಯೋಗ್ಯರು ಮಾಡುವಂತಹ ಕೆಲಸ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಧಮ್ ಇದ್ದರೆ,...

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದವರಿಗೆ ಒಂದು ನ್ಯಾಯ. ಬೇರೆ ಪಕ್ಷದವರಿಗೆ ಒಂದು ನ್ಯಾಯವಿಲ್ಲ. ಈ ರಾಜ್ಯದಲ್ಲಿ ಎಲ್ಲರಿಗೂ ಒಂದೇ ನ್ಯಾಯ. **(ಗೊಂದಲ)** ಕಾನೂನು ಪ್ರಕಾರ ಕ್ರಮ ಆಗುತ್ತದೆ. ಯಾರದ್ದೋ ಚಾರಿತ್ರ್ಯವಧೆ ಮಾಡಿ,..

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ನಾಗರಾಜ್.ಎಂ ರವರು ಸದನದ ಬಾವಿಯಿಂದ ಅವರ ಸ್ಥಾನಕ್ಕೆ ತೆರಳಿದರು)**

**ಸಭಾಪತಿಯವರು:-** ಒಂದು ನಿಮಿಷ ತಾವುಗಳು ನನ್ನ ಮಾತನ್ನು ಕೇಳುತ್ತೀರೋ, ಇಲ್ಲವೋ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಮಗೆ ಮಾತನಾಡಲು ಅವಕಾಶ ನೀಡಿ. ಭಾರತೀಯ ಜನತಾ ಪಾರ್ಟಿಯವರಿಗೆ ಒಂದು ಕಾನೂನು, ಕಾಂಗ್ರೆಸ್ ಪಕ್ಷದವರಿಗೆ ಒಂದು ಕಾನೂನು ಇಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ, ಒಂದು ನಿಮಿಷ ದಯವಿಟ್ಟು ನನ್ನ ಮಾತನ್ನು ಕೇಳಿ. **(ಗೊಂದಲ)** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರೆ ಒಂದು ನಿಮಿಷ ಕುಳಿತುಕೊಳ್ಳಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಅಪಮಾನ ಮಾಡಿದವರಿಗೆ... **(ಗೊಂದಲ)** ...ನಮಗೂ ಬರುತ್ತದೆ ಮಾಡುವುದಕ್ಕೆ...

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಹೇಡಿಗಳು, ಅಯೋಗ್ಯರು ಮಾಡುವಂಥ ಕೆಲಸ ಇದು. ಅವರಿಗೆ ನಾಚಿಕೆಯಾಗುವುದಿಲ್ಲವೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವೈ.ಎ.ನಾರಾಯಣಸ್ವಾಮಿ ಒಂದು ನಿಮಿಷ ನಾನು ಮಾತನಾಡುತ್ತಿದ್ದೇನೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಮುಖ್ಯಮಂತ್ರಿಗಳು ಎಂದರೆ, ಅವರು ಕೇವಲ ಒಬ್ಬ ವ್ಯಕ್ತಿಯೇ? ಹಾಗಾದರೆ, ಅವರಿಗೆ ಬೇರೆ ಮುಖ್ಯಮಂತ್ರಿ ಇದ್ದಾರೆಯೇ? ಮುಖ್ಯಮಂತ್ರಿ ಎಂದರೆ, ಎಲ್ಲರಿಗೂ ಒಬ್ಬರೇ ತಾನೇ?

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಹೇಡಿಗಳು ಮಾಡುವಂಥ ಕೆಲಸ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ಅವರು ಯಾರು? ಅವರೇನು ಧೀರರೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಹೇಡಿಗಳ ಕೆಲಸ.

**(ಈ ಹಂತದಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೆ ಒಂದು ನಿಮಿಷ ನಾನು ಮಾತನಾಡುತ್ತೇನೆ. **(ಗೊಂದಲ)** ಮಾನ್ಯ ಎಂ.ಕೆ.ಪ್ರಾಣೇಶ್, ಮಾನ್ಯ ಆಯನೂರು ಮಂಜುನಾಥ್ ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರಿಗೆ ನಾಚಿಕೆ, ಮಾನಮರ್ಯಾದೆ ಯಾವುದೂ ಇಲ್ಲ. **(ಗೊಂದಲ)** ತಾಕತ್ತು ಇದ್ದರೆ ಅಲ್ಲಿ ಚರ್ಚೆ ಮಾಡಬೇಕಾಗಿತ್ತು.

**(ಗೊಂದಲ)**

**ಸಭಾಪತಿಯವರು:-** ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಂ.ಕೆ.ಪ್ರಾಣೇಶ್‌ರವರೆ, ಮಾನ್ಯ ಸಭಾನಾಯಕರೆ ಒಂದು ನಿಮಿಷ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರು ಹೇಡಿಗಳು, ಅಯೋಗ್ಯರು ಈ ಸದನದಲ್ಲಿ ಅಂತಹ ಕೆಲಸ ಮಾಡಬೇಕಾಗಿತ್ತು. ಮುಖ್ಯಮಂತ್ರಿಗಳ ಮನೆ ಹತ್ತಿರ ಹೋಗಿ ಮಾಡುವುದಲ್ಲ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ನಾಗರಾಜ್.ಎಂ. ರವರು ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಹೇಡಿಗಳಾ, ಅಯ್ಯೋ!

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೊರತುಪಡಿಸಿ, ಸದನದ ಬಾವಿಯಲ್ಲಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಅವರವರ ಸ್ಥಾನದಲ್ಲಿಯೇ ನಿಂತು ವಿರೋಧ ಪಕ್ಷದ ವಿರುದ್ಧ ಧಿಕ್ಕಾರ, ಧಿಕ್ಕಾರ ಎಂದು ಘೋಷಣೆ ಕೂಗುತ್ತಿದ್ದರು)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠದಿಂದ ಎದ್ದು ನಿಂತು ಮಾತನಾಡಿದರು)**

**ಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ಬಾವಿಯಲ್ಲಿ ನಿಂತಿರುವವರು ಯಾರು ದಯವಿಟ್ಟು ಮಾತನಾಡಬಾರದು, ನಾನು ಮಾತನಾಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆದರೆ ಕೂಗಬಹುದು.

**ಸಭಾಪತಿಯವರು:-** ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ಈ ಸದನದಲ್ಲಿ ಒಂದು ಕಾರ್ಯಪದ್ಧತಿ ಇದೆ. ನೀವುಗಳೆಲ್ಲಾ ಹಿರಿಯ ನಾಯಕರು. ಹಾಗೆಯೇ ತಾವು ರಾಜ್ಯಸಭೆಯಲ್ಲಿ ಕೆಲಸ ಮಾಡಿ ಬಂದಿರುವಂಥವರಾಗಿದ್ದು, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಯಾವ ವಿಷಯದ ಮೇಲೆ ಮಾತನಾಡಬೇಕು, ಅದಕ್ಕೆ ಸಂಬಂಧಿಸಿದಂತೆ ಒಂದು ನೋಟಿಸ್ ನೀಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಒಂದೇ ಕಾನೂನು. ಈ ಸದನದ ನಿಯಮ ಎಲ್ಲರಿಗೂ ಒಂದೇ.

**ಸಭಾಪತಿಯವರು:-** ಆಯಿತು. ನನ್ನ ಮಾತು ಇನ್ನು ಮುಗಿದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಆಡಳಿತ ಪಕ್ಷದವರು ಮಾತನಾಡಲು ಯಾವ ರೀತಿ ಅವಕಾಶ ನೀಡಿದ್ದೀರಿ?

**(ಗೊಂದಲ)**

**ಸಭಾಪತಿಯವರು:-** ನಿನ್ನೆ ದಿವಸ ನಾನು ಆಡಳಿತ ಪಕ್ಷದವರನ್ನು allow ಮಾಡಿಲ್ಲ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಅಪಮಾನ ಮಾಡಿರುವಂಥವರು...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ತೇಜಸ್ವಿನಗೌಡರವರೆ ನಾನು ಮಾತನಾಡುತ್ತಿದ್ದೇನೆ. ಸುಮ್ಮನೆ ಇರಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಅವರನ್ನು ಸಹ allow ಮಾಡಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ನನಗೆ ಒಂದು ನೋಟಿಸ್ ಅನ್ನು ಬರೆದು ಕಳುಹಿಸಿಕೊಡಿ. ಪ್ರಶ್ನೋತ್ತರ ಅವಧಿ ಮುಗಿದ ನಂತರ ತಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಿ.ಬಿ.ಐ., ಇ.ಡಿ., ಮತ್ತು ಐ.ಟಿ. ಯನ್ನು ಉಪಯೋಗಿಸಿಕೊಂಡ ಹೇಡಿಗಳು, ರಣಹೇಡಿಗಳು ನೀವು. **(ಗೊಂದಲ)** ಧಮ್ ಇದ್ದರೆ, ತಾಕತ್ತು ಇದ್ದರೆ ಮಾಡಿ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ತಾಕತ್ತು ಇದ್ದರೆ

**(ಗೊಂದಲ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ರಾತ್ರಿ ಹೋಗಿ ವಾಪಸ್ಸು ಹೋಗುತ್ತಾರೆ. **(ಗೊಂದಲ)** ನರ ಹೇಡಿಗಳು ಅವರು. **(ಗೊಂದಲ)** ಧಮ್ ಇದ್ದರೆ, ತಾಕತ್ತು ಇದ್ದರೆ ಮಾಡಲಿ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಕಾನೂನು ಸಚಿವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ರಾಜೀನಾಮೆ ನೀಡಬೇಕು.

**(ಗೊಂದಲ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಸರ್ಕಾರ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅವರದು ಶೇಕಡಾ ೪೦ ರಷ್ಟು ಕಮೀಷನ್ ಸರ್ಕಾರವಾಗಿದ್ದು, ಅವರಿಗೆ ಧಿಕ್ಕಾರ.

**(ಗೊಂದಲ)**

**(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ನಾಯಕರು ಕಾಂಗ್ರೆಸ್ ಪಕ್ಷದವರ ವಿರುದ್ಧ ಅವರವರ ಸ್ಥಾನದಲ್ಲಿಯೇ ನಿಂತು ಧಿಕ್ಕಾರ, ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಿದರು)**

**ಸಭಾಪತಿಯವರು:-** ಸದನವನ್ನು 10 ನಿಮಿಷಗಳವರೆಗೂ ಮುಂದೂಡುತ್ತಿದ್ದೇನೆ.

**(ಸದನವು ಬೆಳಗ್ಗೆ 11 ಗಂಟೆ 19 ನಿಮಿಷಕ್ಕೆ 10 ನಿಮಿಷಗಳ ಅವಧಿಗೆ ಮುಂದೂಡಲ್ಪಟ್ಟಿತು)**

(989)22.9.2022/11.40/ಎಂ.ಎಂ-ಬಿ.ಎನ್.ಎಸ್

**(ಬೆಳಗ್ಗೆ 11 ಗಂಟೆ 19 ನಿಮಿಷದಲ್ಲಿ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟ ಸದನವು ಪುನಃ ಬೆಳಗ್ಗೆ 11 ಗಂಟೆ 48 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿ ಧರಣಿ ನಿರತರಾದರು)**

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ ಮಾತನಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿನಪತ್ರಿಕೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ಒಂದು ಕಡೆ "PayCM" ಎಂದು, ಇನ್ನೊಂದು ಕಡೆ ಬಿ.ಜೆ.ಪಿಗೆ ಎದಿರೇಟು ಎಂದು ಕಾಂಗ್ರೆಸ್ ಪ್ರತಿಯಾಗಿ ಅಂಟಿಸಿದ QR code poster ಎಂದು ದಿನಪತ್ರಿಕೆಯಲ್ಲಿ ಬಂದಿರುವುದು ಬಹಳ ಗಂಭೀರವಾದ ವಿಚಾರವಾಗಿದೆ. ಇದು ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ನಮ್ಮೆಲ್ಲರಿಗೂ ಅನ್ವಯಿಸುತ್ತದೆ.

(ಮುಂದು)

(೨೨೦) 22-09-2022 11-50 KH-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):-**

ಯಾವುದೇ ನಿರ್ದಿಷ್ಟ ವಿಚಾರಗಳು ಇಲ್ಲದೇ ಈ ರೀತಿ ಪತ್ರಿಕೆಗಳ ಮುಖಾಂತರ ಕಿಡಿಗೇಡಿಗಳು ಮಾಡುವಂತಹ ಕೆಲಸ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಂತಹ ಕಿಡಿಗೇಡಿಗಳು ಬಂದಂತಹ ಸಂದರ್ಭದಲ್ಲಿ ನನ್ನ ಅಕೌಂಟ್‌ಗೆ "ಪೇ ಭೋಜೇಗೌಡ" ಎಂದು ಹಾಕಿದರೆ ನಾನು ನಾಳೆ ಬೆಳಗ್ಗೆ ಪ್ರಶ್ನೆ ಮಾಡಬಾರದೇ? ಈ ರೀತಿ ಬಂದಿರುವಂತಹ ಸಂದರ್ಭದಲ್ಲಿ ನನಗೂ ಕೂಡ ಸಂಸಾರ, ಮಕ್ಕಳು, ಫ್ರೆಂಡ್ಸ್ ಎಲ್ಲರೂ ಕೂಡ ಇದ್ದಾರೆ. ಇದು ಒಂದು ರೀತಿಯಲ್ಲಿ ಅವಮಾನವಾಗಿರುವಂತಹ ಸಂಗತಿ ಆಗುತ್ತದೋ ಇಲ್ಲವೋ ಎನ್ನುವ ವಿಚಾರವನ್ನು ನಾವೆಲ್ಲರೂ ಕೂಡ ಚರ್ಚೆ ಮಾಡಬೇಕಾಗುತ್ತದೆ. ಇದನ್ನು ನಾವೆಲ್ಲರೂ ಸಾರ್ವಜನಿಕವಾಗಿ ಒಪ್ಪಲೇಬೇಕಾಗುತ್ತದೆ. ಹಾಗಾಗಿ, ಇಂತಹ ಕಿಡಿಗೇಡಿಗಳ ಮೇಲೆ ತಕ್ಷಣ ಕ್ರಮ ಮಾಡುವಂತಹದ್ದು ನಮ್ಮ ನೆಲದ ಕಾನೂನು. ಈ ಕಾನೂನು ಅಷ್ಟು strong ಇದೆ. ಯಾರು ಕಾನೂನಿಗಿಂತ ದೊಡ್ಡವರು ಅಲ್ಲ. ಇಂತಹ ಒಂದು ಕೆಲಸವನ್ನು ಮಾಡಿದಾಗ ಕಾನೂನು ಪ್ರಕಾರ ಕ್ರಮ ಮಾಡುವಂತಹದ್ದು ಆಗಬೇಕು. ನೂರಕ್ಕೆ ನೂರು ಯಾವುದೇ ಅಧಿಕಾರಿ ಇರಲಿ. ಈ ರೀತಿಯಾದವರು ದೂರು ಕೊಡಲಿ, ಕೊಡದೇ ಇರಲಿ, suo moto ಮಾಡುವಂತಹ ವಿಚಾರ ಕೂಡ ಇದೆ. ಇದರ ಜೊತೆಗೆ ಇವತ್ತು ದೂರು ಕೊಟ್ಟ ಮೇಲೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳುವಂತಹದ್ದು ಇದೆ. ಇಲ್ಲಿ ಇರುವಂತಹ ವಿಚಾರ ಏನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರ ಹತ್ತಿರವೂ ಮಾತನಾಡಿದೆ. ಈ ರೀತಿ "PayCM" ಎಂದು ಹೇಳಬೇಕಾದರೆ, ನಿರ್ದಿಷ್ಟವಾಗಿರುವಂತಹ ವಿಚಾರ ಇರಬೇಕು. ಅವರು ಎಷ್ಟು ಧೈರ್ಯದಲ್ಲಿ ಒಬ್ಬ ಮುಖ್ಯಮಂತ್ರಿಯ ಅಕೌಂಟ್‌ಗೆ ದುಡ್ಡು ಹಾಕಿದ್ದೀನಿ ಎಂದು ಹೇಳಿರುವಂತಹ ಸಂದರ್ಭದಲ್ಲಿ ಅದನ್ನು ವಿರೋಧ ಪಕ್ಷದವರು ಇರಬಹುದು, ಯಾರು ಬೇಕಾದರೂ ಇರಬಹುದು, ಎಲ್ಲರೂ ಕೂಡ ಒಕ್ಕೊರಲಿನಿಂದ condemn ಮಾಡಬೇಕಾಗುತ್ತದೆ. ಮಾಜಿ ಮುಖ್ಯಮಂತ್ರಿಯವರಾದ ಸಿದ್ದರಾಮಯ್ಯನವರ ಮತ್ತು ಕ್ಯಾಬಿನೆಟ್ ಮಂತ್ರಿಯಾಗಿದ್ದಂತಹ ಡಿ.ಕೆ.ಶಿವಕುಮಾರ್‌ರವರ ಪೋಸ್ಟರ್ ಹಾಕಿ, ಅದರಲ್ಲೂ ಕೂಡ "PayCM" ಎಂದು ಹಾಕಿದ್ದಾರೆ. ಈ ರೀತಿ ಹಾಕಿರುವಂತಹ ಸಂದರ್ಭದಲ್ಲಿ ಅವರ ಮೇಲೆ ಕ್ರಮ ಮಾಡುವಂತಹ ವಿಚಾರ

ಖಂಡಿತವಾಗಿಯೂ ನ್ಯಾಯಯುತವಾಗಿದೆ. ಸದನದಲ್ಲಿ ಮಾನ್ಯ ಗೃಹ ಮಂತ್ರಿಗಳು ಇದ್ದಾರೆ. Forthwith ಅವರು ಕ್ರಮ ತೆಗೆದುಕೊಳ್ಳುವುದಕ್ಕೆ ನನಗೇನೂ ದೊಡ್ಡ ವಿಚಾರ ಎಂದು ಅನಿಸುವುದಿಲ್ಲ. ಅದಕ್ಕೆ ನಾವು ಸದನದ ಸಮಯವನ್ನು ಏಕೆ ಹಾಳು ಮಾಡಬೇಕು? ಖಂಡಿತವಾಗಿ ಈ ರೀತಿ ಆಡಳಿತ ಮಾಡುವಂತಹ ಒಬ್ಬ ಮುಖ್ಯಮಂತ್ರಿಗೆ ವಿನಾಕಾರಣ ಈ ರೀತಿಯ ಕೃತ್ಯ ಎಸಗಿದ್ದಾರೆಯಲ್ಲವೇ? ಯಾವುದೇ heinous ಕೃತ್ಯಕ್ಕಿಂತಲೂ ಕೂಡ ಬಹಳ ಗಂಭೀರವಾದ ವಿಚಾರವಾಗಿದೆ. ಇದನ್ನು ಪ್ರಶ್ನೆ ಮಾಡುವುದಕ್ಕೆ there are so many forums. ಇದಕ್ಕೆ ಈ ಕಾನೂನು ಅವಕಾಶ ಮಾಡಿಕೊಡುತ್ತದೆ. ಆ ರೀತಿ ಮಾಡಲಿ. ದಯಮಾಡಿ, ಸದನದ ಸಮಯವನ್ನು ಹಾಳು ಮಾಡುವುದು ಬೇಡ. ಈಗ ಆಗಿರುವಂತಹ ವಿಚಾರದಲ್ಲಿ ಕ್ರಮ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ.... Minister of Parliamentary Affairs ರವರು ಮಾತನಾಡಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ಎಲ್. ಭೋಜೇಗೌಡರವರು ಹೇಳಿರುವುದಕ್ಕೆ ನಾನು ಸಹಮತ ವ್ಯಕ್ತಪಡಿಸುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರಾದ ಬಿ.ಕೆ.ಹರಿಪ್ರಸಾದ್‌ರವರ ಹತ್ತಿರ ಮನವಿ ಮಾಡುತ್ತೇನೆ. ಈ ರೀತಿ ಇನ್ನು ಮುಂದೆ ಸಾರ್ವಜನಿಕ ಕ್ಷೇತ್ರದಲ್ಲಿರುವವರಿಗೆ ಯಾರಾದರೂ Paytm ನಲ್ಲಿ, ಮತ್ತೊಂದರಲ್ಲಿ, ಮಗದೊಂದರಲ್ಲಿ ನಾನು ಹಣ ವರ್ಗಾವಣೆ ಮಾಡಿದೆ, ಹಾಗೆ ಹೀಗೆ ಎಂದು ಹೇಳಿ ಚಾರಿತ್ರ್ಯವಧೆ ಮಾಡಿದರೆ ನಾನು ಅದನ್ನು ತನಿಖೆ ಮಾಡಿಸುವವರೆಗೆ ನನಗೆ ಆಯಸ್ಸು ಇರುತ್ತದೆಯೇ ಎನ್ನುವುದು ನನ್ನ ಪ್ರಶ್ನೆ. ಇದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳದೇ ಹೋದರೆ ಸಾರ್ವಜನಿಕ ಜೀವನದಲ್ಲಿ ನಾವು ಇರುವುದಕ್ಕೆ ಆಗುವುದಿಲ್ಲ. ಒಂದೇ ಒಂದು issue ಅನ್ನು ಅವರು ಎತ್ತಿದರು. ಮಾಜಿ ಮುಖ್ಯಮಂತ್ರಿಯವರಾದ ಸಿದ್ದರಾಮಯ್ಯನವರದ್ದು, ಮಾನ್ಯ ಡಿ.ಕೆ.ಶಿವಕುಮಾರ್‌ರವರದ್ದು ಇದೇ ರೀತಿ ಬಂದಿರುವುದಕ್ಕೆ ಏಕೆ ಕ್ರಮ ಮಾಡಲಿಲ್ಲ ಎಂದು ಹೇಳಿದರು. ನಾನು ಆಗ ಮಾನ್ಯ ಸದಸ್ಯರಿಗೆ ಇದಕ್ಕೆ ಕಂಪ್ಲೈಂಟ್ ಮಾಡಿದ್ದೇವೆ. ತಾವು

ಕಂಪ್ಲೈಟ್ ಕೊಡಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದೆ. ಸರ್ಕಾರ ಆ ಪಕ್ಷ, ಈ ಪಕ್ಷ ಅಲ್ಲ. ನಾವೆಲ್ಲರೂ ರಾಜಕೀಯದವರೇ. ನಾವೆಲ್ಲಾ ಒಂದೇ cadre. ಗೌರವ ಉಳಿದರೆ ಎಲ್ಲರದ್ದೂ ಉಳಿಯುತ್ತದೆ. ಗೌರವ ಹೋದರೆ ಎಲ್ಲರದ್ದೂ ಹೋಗುತ್ತದೆ. ಇದನ್ನು ಮುಖ್ಯಮಂತ್ರಿಗಳ ಮೇಲೆ, ಇನ್ನೊಬ್ಬ ಸಚಿವರ ಮೇಲೆ ಯಾರ್ಯಾರು ಏನೇನು ಬೇಕೋ ಬರೆಯುವುದು, ಅದನ್ನು ರಾಷ್ಟ್ರವ್ಯಾಪ್ತಿ ಚರ್ಚೆ ಮಾಡುವುದು, ಈ ಸತ್ಯ ಆಚೆ ಬರುವಷ್ಟರಲ್ಲಿ ನಮ್ಮ ಅರ್ಧ ಆಯಸ್ಸು ಹೊರಟು ಹೋಗಿರುವುದು, ಈ ರೀತಿ ಪರಿಸ್ಥಿತಿಗಳು ನಿರ್ಮಾಣವಾದರೆ ಸಾರ್ವಜನಿಕ ಜೀವನದಲ್ಲಿ ಯಾರು ಇರುವುದಕ್ಕೆ ಆಗುವುದಿಲ್ಲ. ನಿಮ್ಮದ್ಯಾವುದಾದರೂ ಕ್ರಮ ತೆಗೆದುಕೊಂಡಿಲ್ಲ ಎನ್ನುವ ಭಾವನೆ ಇದ್ದರೆ ದಯಮಾಡಿ ಕೊಡಿ. We will initiate action. ಅದರಲ್ಲಿ ಏನೂ ದಾಕ್ಷಿಣ್ಯ ಇಲ್ಲ. ಈ ಮನೆಯಲ್ಲಿ ಎಲ್ಲರೂ ಒಂದೇ. Opposition ಬೇರೆ, ರೂಲಿಂಗ್ ಬೇರೆ ಎಂದು ಹೇಳಿ ನಾವು ಯಾರ ಎದುರಿಗೂ ಬೆತ್ತಲೆ ಆಗುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳನ್ನೇ ಈ ಮಟ್ಟಕ್ಕೆ ತರುತ್ತಾರೆ ಎನ್ನುವುದಕ್ಕೆ ತಾವು ಸಹಕಾರ ಕೊಡದೇ ಇದ್ದರೆ, ಇನ್ನು ಮುಂದೆ ಕಾನೂನು ಪಾಲನೆ ಮಾಡುವುದು ಹೇಗೆ? ಯಾರದ್ದಾದರೂ ಚಾರಿತ್ರ್ಯಗಳ ಗತಿ ಏನು? ಯಾರು ಏನು ಬೇಕಾದರೂ ಮಾಡಿಕೊಂಡು ಹೋದರೆ ನಾವು ನೋಡಿಕೊಂಡು ಇಲ್ಲಿ ಕುಳಿತುಕೊಳ್ಳುವುದೇ? ನಾವು ಅನೇಕ ಬಾರಿ ಯೋಚನೆ ಮಾಡುತ್ತಿರುತ್ತೇವೆ. ಸೈಬರ್ ಆಕ್ಟ್ ತಿದ್ದುಪಡಿಯಾಗಬೇಕು. ಎಲ್ಲಾ ರೀತಿಯ ಮೆಸೇಜ್‌ಗಳನ್ನು ಹಾಕುವುದು, ಆಡಿಯೋ ರೆಕಾರ್ಡ್ ಮಾಡುವುದು, ವಿಡಿಯೋ ರೆಕಾರ್ಡ್ ಮಾಡುವುದು, ಇದಕ್ಕೆ ಕಾನೂನು ಇದೆ, unless you are told that your voice is recorded, record ಮಾಡಬಾರದು ಎಂಬ ಕಾನೂನು ಇದೆ. ಯಾರು ಹೇಳುತ್ತಾರೆ? ಯಾರೋ ಮಾತನಾಡುತ್ತಿದ್ದರೆ... ನನ್ನದೇ ಬಂದಿತು, ಯಾರೋ ಒಬ್ಬ ನನ್ನ ಸಾಲ ಹೀಗೆ ಆಗಿದೆ ಎಂದು ಹೇಳಿದ್ದಕ್ಕೆ ಏನೋ ಅಂದಿದ್ದಕ್ಕೆ, ಒಂದು ದೊಡ್ಡ ನ್ಯೂಸ್ ಆಗಿ ಹೋಯಿತು. If it continues, ಯಾರ ಜೊತೆ ಮಾತನಾಡುವಾಗಿಲ್ಲ. ಯಾರ ಜೊತೆ ಕುಳಿತುಕೊಳ್ಳುವಾಗಿಲ್ಲ. ಮುಖ್ಯಮಂತ್ರಿಗಳು ಏನಾದರೂ ಇಷ್ಟು ದುಡ್ಡು ಹಾಕಪ್ಪ ಎಂದು ಕೇಳಿರುವುದು ಇದ್ದರೆ, ಮುಖ್ಯಮಂತ್ರಿಗಳು ಏನಾದರೂ consideration ತೋರಿಸುವ ಹಾಗಿದ್ದರೆ, ಅವನಿಗೆ ಬೇರೆ ಬೇರೆ forum ಗಳಿದ್ದರೆ ಅವರು ಮಾಡಲಿ. ಸಾರ್ವಜನಿಕವಾಗಿ ಇಂತಹದೆಲ್ಲಾ

ಮಾಡುವುದಕ್ಕೆ ಮಾನ್ಯ ಬಿ.ಕೆ ಹರಿಪ್ರಸಾದ್‌ರವರಂತಹ season ಆದವರು, ಇಲ್ಲಿ ನಿಂತುಕೊಂಡು ಅವರುಗಳಿಗೆ ರಕ್ಷಣೆ ಕೊಡುವುದಕ್ಕೆ ಪ್ರಾರಂಭ ಮಾಡಿದರೆ, he will also face the same consequence. ಇದು ಹೇಗೆ ಸಾಧ್ಯ? ನಾಳೆ ಮಾನ್ಯ ಬಿ.ಕೆ ಹರಿಪ್ರಸಾದ್‌ರವರಿಗೆ ಈ ರೀತಿ ಏನಾದರೂ ಮಾಡಿದರೆ ಕ್ರಮ ತೆಗೆದುಕೊಳ್ಳಬೇಕಲ್ಲವೇ ಅಥವಾ ಇನ್ನೊಬ್ಬರಿಗೆ ಮಾಡಿದರೂ ನಾವು ಕ್ರಮ ತೆಗೆದುಕೊಳ್ಳಬೇಕಲ್ಲವೇ? ದಯಮಾಡಿ ಈ ವಿಷಯವನ್ನು ಉದ್ದ ಮಾಡಬೇಡಿ. ನನಗೆ, ಮಾಜಿ ಮುಖ್ಯಮಂತ್ರಿಯವರಾದ ಸಿದ್ದರಾಮಯ್ಯನವರದ್ದು, ಮಾನ್ಯ ಡಿ.ಕೆ.ಶಿವಕುಮಾರ್‌ರವರದ್ದು ಹೀಗೆ ಬೇಕು ಬೇಕಾಗಿ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ದಯಮಾಡಿ ಇದಕ್ಕೆ ಒಂದು ದೂರು ಕೊಡಿ. We will initiate action. ನಾವು, ನೀವು ಜಗಳವಾಡುವುದು ಬೇರೆ. ದಯವಿಟ್ಟು, ನಾವು ಸಾರ್ವಜನಿಕವಾಗಿ ನಗ್ನವಾಗುವಂತಹ ಹಂತಕ್ಕೆ ರಾಜಕಾರಣವನ್ನು ತರಬೇಡಿ. ಈಗಲೇ ರಾಜಕೀಯ ಮಾಡುತ್ತಿರುವವರಿಗೆ ಮೂರು ಕಾಸಿನ ಬೆಲೆ ಇಲ್ಲ. ಇನ್ನು ನಾವು ಅಧೋಪತನಕ್ಕೆ ಹೋಗಬೇಕೇ? We have been projected as villains. ಮೀಡಿಯಾ, ಸಿನಿಮಾ, ನಾಟಕ, ಹರಿಕಥೆಯಲ್ಲಿ ಕುಳಿತುಕೊಂಡ ಹಾಗೆ ಕುಳಿತುಕೊಂಡು ಎಂಎಲ್‌ಎ ಮತ್ತು ಸಚಿವರನ್ನು ಟೀಕೆ ಮಾಡುವುದು. ಶ್ರೇಷ್ಠವಾದ ಸದನದ ಸದಸ್ಯರನ್ನು ಇನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೀರಿ? ದಯಮಾಡಿ ಅವರನ್ನು protect ಮಾಡಬೇಡಿ. ಕಾನೂನು ಅದರ ಕೆಲಸ ಮಾಡುವುದಕ್ಕೆ ಬಿಡಿ. ನಿಮಗೇನಾದರೂ ಇದ್ದರೆ ದಯಮಾಡಿ ಮಾನ್ಯ ಗೃಹ ಸಚಿವರಿಗೆ ಅಥವಾ ಪೊಲೀಸ್ ಠಾಣೆಗೆ ದೂರು ಕೊಡಿ. We will certainly initiate action. ಮಾನ್ಯ ಮುಖ್ಯಮಂತ್ರಿಯವರಿಗೆ "PayCM" ನಲ್ಲಿ ಅವನು ಏನು ಹೇಳಿದ್ದಾನೆ, ಇದಕ್ಕೆ 5 ಕಡೆಗಳಲ್ಲಿ ದೂರುಗಳು ಆಗಿದೆ. ದೂರು ಕೊಟ್ಟ ಮೇಲೆ ಪೊಲೀಸ್‌ನವರು ಕೆಲಸ ಮಾಡಿದ್ದಾರೆ. ಇದನ್ನು ನಾವು ಕೂಡ ಅಂದುಕೊಂಡಿರಲಿಲ್ಲ. ಕಾಂಗ್ರೆಸ್‌ನವರು ಈ ಸ್ಥಿತಿಗೆ ಇಳಿದು ಯಾರೋ ಕೈಯಲ್ಲಿ ಈ ರೀತಿಯ ಕೆಲಸ ಮಾಡಿಸುತ್ತೀರೆಂದು ನಾವು ಅಂದುಕೊಂಡಿಲ್ಲ. ತಾವು ಈ ರೀತಿ ಅವರಿಗೆ ಬೆನ್ನುಲುಬಾಗಿ ನಿಂತುಕೊಳ್ಳುವುದು, ಎಲ್ಲೋ ಒಂದು ರೀತಿ ವೈಯಕ್ತಿಕವಾಗಿ ನನಗೆ ಸರಿಕಾಣುವುದಿಲ್ಲ. ದಯವಿಟ್ಟು ಇದನ್ನು ವಿತ್‌ಡ್ರಾ ಮಾಡಿಕೊಳ್ಳಿ. ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ ಮಾನ್ಯ ಸಭಾಪತಿಯವರಿಗೆ ಒಂದು ನೋಟಿಸ್ ಕೊಡಿ. ಆ ಚರ್ಚೆಗೂ ನಾವು ಸಿದ್ಧರಿದ್ದೇವೆ.

ನಮಗೇನೂ ತೊಂದರೆ ಇಲ್ಲ. ಆದರೆ, ಸದನವನ್ನು ಈ ರೀತಿ ಮಾಡುವುದು ಸರಿಯಲ್ಲ. ಮಾನ್ಯ ಸಭಾಪತಿಯವರೇ, ನಾನು ಸುಮ್ಮನೆ ಕುಳಿತುಕೊಂಡಿದ್ದೆ. ನನಗೆ ಏನೂ ವಿಷಯವೇ ಗೊತ್ತಿಲ್ಲ. ಹಾಗಾಗಿ ಏನಾದರೂ ಒಂದು ನೋಟಿಸ್ ಅನ್ನು ಕೊಡಿ. ನಾವು ತಯಾರಾಗಿ ಬರುತ್ತೇವೆ. ಏನು ನಡೆದಿದೆ ಎಂದು ಹೇಳುತ್ತೇವೆ. ದಯಮಾಡಿ, ಸದನವನ್ನು ನಡೆಸುವುದಕ್ಕೆ ಬಿಡಿ. ಮಾನ್ಯ ಸಭಾಪತಿಯವರೇ, ತಮಗೊಂದು ವಿನಂತಿಯೇನೆಂದರೆ, ಭೋಜನ ವಿರಾಮದಲ್ಲೋ, ಪ್ರಶ್ನೋತರ ಅವಧಿ ಮುಗಿದ ಮೇಲೆ leader of the opposition ರವರನ್ನು ಕರೆಯಿಸಿ, ನಮ್ಮನ್ನು ಕರೆಯಿಸಿ ಮಾತನಾಡಿ. We will sort it out.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಮಾನ್ಯ ಬಿ.ಕೆ.ಹರಿಪ್ರಸಾದ್‌ರಂತಹವರು ಎದ್ದು ನಿಂತುಕೊಳ್ಳಬಾರದಿತ್ತು, ಈ ರೀತಿಯ ಸಾಮಾಜಿಕ ಜಾಲತಾಣದಲ್ಲಿ ನಾಳೆ ದಿವಸ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರ ಮೇಲೂ ಬರಬಹುದು ಎಂದು ಮಾನ್ಯ ಸಚಿವರು ಏನು ಹೇಳಿದರು. ನಾನು ಅದನ್ನು ಇವತ್ತು ಅಲ್ಲ. ಸಾಮಾಜಿಕ ಜಾಲತಾಣ ಬರುವುದಕ್ಕಿಂತ ಮೊದಲಿನಿಂದಲೂ ಇದನ್ನು ಎದುರಿಸುತ್ತಿದ್ದೇನೆ. ಮುಂದೇನೂ ಎದುರಿಸುತ್ತೇನೆ. ಆ ರೀತಿ ತಿಳಿದುಕೊಳ್ಳಬೇಡಿ. ನಿದ್ದೆ ರಾಮಯ್ಯ ಎಂದು ಯಾರೋ ಹೇಳಿದಾಗ ತಮ್ಮನ್ನು ಅರೆಸ್ಟ್ ಮಾಡಿದರೇ ಅಥವಾ ಶೇಕಡಾ 10 ರಷ್ಟು ಕಮಿಷನ್ ತೆಗೆದುಕೊಂಡ ಎಂದು ವಿಶ್ವಗುರು ಹೇಳಿದಾಗ ಯಾರಾದರೂ ಬಂದು ಅರೆಸ್ಟ್ ಮಾಡಿದರೇ. ಆಗ ಸರ್ಕಾರ ನಮ್ಮದೇ ಇತ್ತು. ನಮ್ಮ ವಿಚಾರ ಏನೆಂದರೆ, ಮಾನ್ಯ ಸಚಿವರು ದೂರು ಇತ್ತು. ಹಾಗಾಗಿ ಅರೆಸ್ಟ್ ಮಾಡಿದ್ದೇವೆ ಎಂದು ನೇರವಾಗಿ ಹೇಳುತ್ತಿದ್ದಾರೆ. ಶ್ರೀ ಬಿ.ಆರ್.ನಾಯ್ಡು ಮತ್ತು ಕೆ.ಆರ್.ಪುರಂನ ಶ್ರೀ ಯಾದವ್ ಮೇಲೆ ದೂರು ಇದೆಯೇ? ತಾವು ದೂರು ಇದ್ದರೆ ಕ್ರಮ ಜರುಗಿಸುತ್ತೇವೆ ಎಂದು ಹೇಳಿದ್ದೀರಿ. ಹೈಗ್ರೌಂಡ್ಸ್ ಪೋಲೀಸ್ ಠಾಣೆಯಲ್ಲಿ ನಮ್ಮದು ಎಷ್ಟು ದೂರುಗಳು ಇಲ್ಲ ಹೇಳಿ. ಈ ಸದನದ ಮಾಜಿ ಸದಸ್ಯರು ಮತ್ತು ಮಾಜಿ ಮಂತ್ರಿಗಳಾದ ಬಿ.ಟಿ.ಲಲಿತನಾಯಕ್‌ರವರು ದುರ್ಬಲ ವರ್ಗಕ್ಕೆ ಸೇರಿದಂತಹವರಿಗೆ ನಿಮ್ಮನ್ನು ಜೀವಂತವಾಗಿ ಕೊಲ್ಲುತ್ತೇವೆ ಎಂದು 9 ಪತ್ರಗಳು ಬಂದಿವೆ. ಅದರ 3 ಪತ್ರಗಳಲ್ಲಿ ಮಾಜಿ ಮುಖ್ಯಮಂತ್ರಿಯವರಾದ ಸಿದ್ಧರಾಮಯ್ಯನವರನ್ನು ಕೊಲ್ಲುತ್ತೇವೆ. ಮಾಜಿ ಮುಖ್ಯಮಂತ್ರಿಯವರಾದ

ಹೆಚ್.ಡಿ.ಕುಮಾರಸ್ವಾಮಿಯವರನ್ನು ಕೊಲ್ಲುತ್ತೇವೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರನ್ನು ಕೊಲ್ಲುತ್ತೇವೆ ಎಂದು ಹೇಳಿದ್ದಾರೆ. ಇದಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಕಾನೂನು ಎಲ್ಲರಿಗೂ ಒಂದೇ. ನೆನ್ನೆಯ ದಿವಸ Supreme Court, hate speech ಮಾಡಬಾರದು, ದ್ವೇಷ ಭಾಷಣಗಳನ್ನು ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದನ್ನು ದಿನನಿತ್ಯ ಮಾಡುತ್ತಿರುವುದು ಯಾರು ಸ್ವಾಮಿ, ಇದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ? ಆ ರೀತಿ ನಾನು ಹೇಳುವುದಕ್ಕೆ ಹೋದರೆ ಬಹಳಷ್ಟು ವಿಚಾರಗಳನ್ನು ವಿವರವಾಗಿ ಹೇಳುವುದಕ್ಕೆ ಸಾಧ್ಯ ಇದೆ. ಸರ್ಕಾರ ಇರುವಂತಹದ್ದು ಭಾರತೀಯ ಜನತಾ ಪಕ್ಷಕ್ಕೆ ಮಾತ್ರ ಅಲ್ಲ. ಈ ರಾಜ್ಯದ ಆರೂವರೆ ಕೋಟಿ ಜನರ ಸರ್ಕಾರ ಇದು. ನ್ಯಾಯ ಎನ್ನುವುದು ಎಲ್ಲರಿಗೂ ಸಿಗಬೇಕಾಗಿರುವಂತಹದ್ದು. ಅದನ್ನು ಬಿಟ್ಟು ರಾತ್ರಿ 2 ಗಂಟೆಗೆ ಹೋಗಿ ಮನೆಯಲ್ಲಿರುವ ಹೆಂಗಸರು, ಮಕ್ಕಳಿಗೆಲ್ಲಾ ಭಯ ಬೀಳಿಸಿ, ಪಾತ್ರೆಗಳೆಲ್ಲಾ ಕೆಳಗಡೆ ಹಾಕಿದ್ದಾರೆ. ಆ ಹುಡುಗ ಏನಾದರೂ ಟೆರರಿಸ್ಟ್ ಆಗಿದ್ದಾನೆಯೇ? ಅವನ ಮೇಲೆ ನಿರ್ದಿಷ್ಟವಾದ ಆಪಾದನೆ ಇದೆಯೇ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯವಿಟ್ಟು ನಾನು ಹೇಳುತ್ತೇನೆ ಕೇಳಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಕೇಳಿ. ಆದರೆ, ಪ್ರಶ್ನೋತ್ತರ ಅವಧಿ ಆಗದೇ ಯಾವುದೇ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ಕೊಡುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮಂತ್ರಿಗಳು ಮಾತನಾಡುವಾಗ ತಾವು ಸುಮ್ಮನೆ ಕುಳಿತಿದ್ದೀರಿ. ನಾನು ಅದನ್ನು counter ಮಾಡುತ್ತಿದ್ದೇನೆ. ಅವರು ಹೇಳಿರುವ ವಿಚಾರಗಳು ತಪ್ಪಿದೆ ಎಂದು ನಾನು ಹೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸಚಿವರು ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಿಬಿಟ್ಟಿದ್ದಾರೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಮ್ಮ ಘಂಟೆ ಯಾವುದೂ ಎಂದು ಗೊತ್ತಿಲ್ಲ. ನಮ್ಮ ಘಂಟೆ ಯಾವುದೂ ಎಂದು ಗೊತ್ತಿಲ್ಲ. ಅದಕ್ಕೆ ಎರಡು ನಿಮಿಷದಲ್ಲಿ ಮುಗಿಸಿರುವಂತಹದ್ದು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ದಯವಿಟ್ಟು ವಿಷಯಕ್ಕೆ ಬನ್ನಿ. ಸದನ ನಡೆಸೋಣ ಎಂದು ಹೇಳಿದೆ. ಇವತ್ತು ಮತ್ತು ನಾಳೆ ಎರಡು ದಿವಸ ಸದನ ನಡೆಯುವುದು. ತಾವು ಈ ರೀತಿ ಸಮಯ ವ್ಯರ್ಥ ಮಾಡಿಕೊಂಡು ಕುಳಿತರೆ ನಾನೇನು ಮಾಡುವುದಕ್ಕೆ ಆಗುವುದಿಲ್ಲ. ತಾವು ಅದನ್ನು ಎದುರಿಸಬೇಕಾಗುತ್ತದೆ ಅಷ್ಟೆ. ನಾನು ಜವಾಬ್ದಾರಿ ಸ್ಥಾನದಿಂದ ಹೇಳುತ್ತಿದ್ದೇನೆ. ದಯವಿಟ್ಟು, ಇವತ್ತು, ನಾಳೆ ಎರಡು ದಿವಸ ಮಾತ್ರ ಸದನ ಇದೆ. ಎಲ್ಲಾ ಮಾನ್ಯ ಸದಸ್ಯರುಗಳು ಸಂಪೂರ್ಣ ಸೌಲಭ್ಯಗಳನ್ನು ತೆಗೆದುಕೊಳ್ಳಬೇಕು. **(ಗೊಂದಲ)** ಸಮಯದ ವ್ಯರ್ಥ ಮಾಡಬೇಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರನ್ನು ಬಿಡಬೇಕು. ಇಲ್ಲದಿದ್ದರೆ, ನಾವು ಹೀಗೆ ನಿಂತಿರುತ್ತೇವೆ. ಆದ್ದರಿಂದ, ಭಾರತೀಯ ಜನತಾ ಪಕ್ಷದವರು ಹೇಳುವುದೆಲ್ಲಾ ವೇದ ವಾಕ್ಯ ಅಲ್ಲ. ಸ್ವಲ್ಪ ನಾವು ಹೇಳುವುದನ್ನು ಕೇಳಿ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದರೆ ನೋಟಿಸ್ ಕೊಡಲಿ. ಖಂಡಿತವಾಗಿಯೂ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ. ಅವರು ಏನು ಹೇಳುತ್ತಾರೋ ಹೇಳಲಿ. ನಾವೇನು ಉತ್ತರ ಕೊಡಬೇಕೋ ಕೊಡುತ್ತೇವೆ. ಆದರೆ, ಪ್ರಶ್ನೋತ್ತರ ಅವಧಿಯನ್ನು stall ಮಾಡಿ ಮಾಡುವುದಕ್ಕೆ ಅವಕಾಶ ಇಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯವಿಟ್ಟು ನೋಟಿಸ್ ಕೊಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಚರ್ಚೆಗೆ ನೋಟಿಸ್ ಕೊಡುತ್ತೇವೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು. ನೋಟೀಸ್ ಕೊಡಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ದಯವಿಟ್ಟು, conclude ಮಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, I will conclude.

(ಮುಂದು)

(991)22-09-2022(12-00) bsd-ks

(ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಿನ್ನೆ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. Question Hour ಅಂತ ಹೇಳಿದರು……

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾನು ನಿನ್ನೆನು ಹೇಳಿದೆ, ನೀವು bad precedent ಮಾಡುತ್ತಿದ್ದೀರಾ.

**ಸಭಾಪತಿಯವರು:-** ನಾನು ನಿನ್ನೆನು allow ಮಾಡಿಲ್ಲ. ನಾನು bad precedent ಗೆ allow ಮಾಡಿಲ್ಲ. I have not allowed.

**ಸಭಾಪತಿಯವರು:-** ನಾನು ನಿನ್ನೆನು ಅವರನ್ನು ತಪ್ಪು ಅಂತ ಹೇಳಿದ್ದೇನೆ. ಇದು ಸರಿಯಲ್ಲ ಎಂದು ಹೇಳಿದ್ದೇನೆ. Don't say like that.

**(ಗೊಂದಲ)**

**Dr. TEJASWINI GOWDA:-** Hon'ble Chairman, Chief Minister is an institution.

**(ಗೊಂದಲ)**

**ಸಭಾಪತಿಯವರು:-** ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇಲ್ಲಿಯ ಸಂಪ್ರದಾಯದಂತೆ ಯಾವುದೇ ತುರ್ತು ವಿಷಯಗಳಿದ್ದರೂ ಪ್ರಶ್ನೋತ್ತರ ಮುಗಿದ ನಂತರವೇ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡುವುದಿದೆ. ತಾವು ದಯಮಾಡಿ ಪ್ರಶ್ನೋತ್ತರವನ್ನು ಮುಗಿಸಬೇಕು, ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಸಭಾಪತಿಯವರು:-** ತಾವು ದಯವಿಟ್ಟು ನೋಟೀಸ್ ಕೊಡಿ, ಈಗ ಮಾತನಾಡಿ ಮುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾವು ಆ ಕಡೆ ಇರುವಾಗ ಇದೇ ನಿಯಮವನ್ನು ಅನುಸರಿಸಿದ್ದವೇ?

**ಸಭಾಪತಿಯವರು:-** ಕೊನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ತಮ್ಮ ವಿಷಯವನ್ನು conclude ಮಾಡಿ, business ನಡೆಯಲು ಬಿಡಿ, ಇಲ್ಲದಿದ್ದರೆ ನಾನು ಪ್ರಶ್ನೋತ್ತರವನ್ನು ಪ್ರಾರಂಭ ಮಾಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು 40% ವಿಷಯವನ್ನು ಅರ್ಧ ಗಂಟೆ ಚರ್ಚೆಯ ವಿಷಯದಲ್ಲಿ ಚರ್ಚೆ ಮಾಡಲು ತಯಾರಿದ್ದೇವೆ ಎಂದು ಹೇಳಿದರು, ನಾನು 40% ಗೆ ಬರಲಿಲ್ಲ.

**(ಗೊಂದಲ)**

**ಸಭಾಪತಿಯವರು:-** ತಾವು ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇವತ್ತು ಮತ್ತು ನಾಳೆ ಸದನ ನಡೆಯುವುದಿದ್ದು, 40%, 100% ಯಾವ ಪರ್ಸೆಂಟ್ ವಿಷಯ ಇದ್ದರೂ ಎಲ್ಲಾ ವಿಷಯಗಳ ಚರ್ಚೆಗೆ ಸಿದ್ಧರಿದ್ದೇವೆ. ಆ ಪ್ರಶ್ನೆಯೇ ಇಲ್ಲ, ಇದನ್ನು ಕೆಳಮನೆಯಲ್ಲಿಯೂ ಹೇಳಿದ್ದೇನೆ, ಇಲ್ಲಿಯೂ ಹೇಳುತ್ತಿದ್ದೇನೆ.

ಈಗ ಧರಣಿ ಮಾಡುತ್ತಿರುವ ವಿಷಯಕ್ಕೆ ಸಂಬಂಧಪಟ್ಟಂತೆ ನೋಟೀಸ್ ಕೊಟ್ಟರೆ, ಈ ವಿಷಯವನ್ನು ಚರ್ಚೆ ಮಾಡಲು ಸಿದ್ಧರಿದ್ದೇವೆ ಎಂದು ನಾನು ಹೇಳಿದ್ದೇನೆ.

**ಶ್ರೀ ಆರಗ ಜ್ಞಾನೇಂದ್ರ:-** ೩ ತಲೆಮಾರುಗಳಿಂದ ಆಗಿರುವುದು ಚರ್ಚೆಯಾಗಲಿ.

**Mr. CHAIRMAN :-** Please conclude.

**(ಗೊಂದಲ)**

**Mr. CHAIRMAN:-** Hon'ble Opposition Leader, I am listening to you.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮೂರು ತಲೆಮಾರು ಅಲ್ಲ, ಹತ್ತು ತಲೆಮಾರುಗಳ ವಿಷಯಗಳೂ ಚರ್ಚೆಯಾಗಲೀ, ಯಾರೂ ಬೇಡ ಎಂದು ಹೇಳುವುದಿಲ್ಲ. ನಾನು ಹೇಳಿರುವುದಲ್ಲ, ಹೈಕೋರ್ಟ್ ಹೇಳಿರುವುದು.

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ರಮೇಶ್ ಕುಮಾರ್ ಹೇಳಿದ್ದಾರೆ, ಕಾಂಗ್ರೆಸ್ ಹೇಳಿದ್ದಾರೆ, ಅದಲ್ಲ ಚರ್ಚೆ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ರಮೇಶ್ ಕುಮಾರ್ ಮತ್ತು ಮಾನ್ಯ ಉಗ್ರಪ್ಪ ಹೇಳಿರುವುದನ್ನೂ ಚರ್ಚೆ ಮಾಡೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ, ಅಮಾಯಕರನ್ನು ರಾತ್ರಿ 2 ಗಂಟೆಗೆ ಭಯೋತ್ಪಾದಕರ ರೀತಿಯಲ್ಲಿ.....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅಮಾಯಕರು ಯಾರು?

**ಶ್ರೀ ಬಿ.ಕೆ. ಹರಿಪ್ರಸಾದ್:–** ಅವರು ನ್ಯಾಯಾಧೀಶರೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಪ್ಪು ಮಾಡಿರುವವರು ಅಮಾಯಕರೇ? ಒಬ್ಬ ಕ್ರಿಮಿನಲ್...

**ಶ್ರೀ ಬಿ.ಕೆ. ಹರಿಪ್ರಸಾದ್:–** ಅವರು ನ್ಯಾಯಾಧೀಶರೇ?

**Dr. Y.A. NARAYANASWAMY:–** You are not a Judge.

**(ಗೊಂದಲ)**

## ೩. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**(ಗೊಂದಲ)**

**ಸಭಾಪತಿಯವರು:-** ನಾನು ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತಿದ್ದೇನೆ, ಶ್ರೀ ಶರಣಗೌಡ ಬಯ್ಯಾಪುರ ಪ್ರಶ್ನೆ ಕೇಳಿ, ತಾವು ಸ್ಥಾನಕ್ಕೆ ಬಂದು ಕೇಳದಿದ್ದರೆ ಬೇರೆ ಪ್ರಶ್ನೆಗೆ ಹೋಗುತ್ತೇನೆ. ಶ್ರೀ ಮಧು ಮಾದೇಗೌಡ ಪ್ರಶ್ನೆ ಕೇಳಿ. ನಂತರ ಶ್ರೀ ಅಡಗೂರು ಹೆಚ್. ವಿಶ್ವನಾಥ್ ರವರ ಪರವಾಗಿ ಶ್ರೀ ರವಿಕುಮಾರ್ ಪ್ರಶ್ನೆ ಕೇಳಿ.

**(ಈ ಹಂತದಲ್ಲಿ ಬಾವಿಯಲ್ಲಿ ಧರಣಿ ನಿರತರಾದ ಕಾಂಗ್ರೆಸ್ ಪಕ್ಷದ ಸದಸ್ಯರು "ಧಿಕ್ಕಾರ, ಧಿಕ್ಕಾರ, ಬಿಜೆಪಿ ಗೆ ಧಿಕ್ಕಾರ, 40% ಸರ್ಕಾರಕ್ಕೆ ಧಿಕ್ಕಾರ, ಆಪರೇಷನ್ ಕಮಲ ಸರ್ಕಾರಕ್ಕೆ ಧಿಕ್ಕಾರ" ಎಂಬ ಘೋಷಣೆಗಳನ್ನು ಕೂಗುತ್ತಿದ್ದರು)**

**ಡಾ॥ ತೇಜಸ್ವಿನಿ ಗೌಡ:-** ಬಾವಿಯಲ್ಲಿ ನಿಂತು ಘೋಷಣೆಗಳನ್ನು ಕೂಗುವಂತಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು ಇಲ್ಲ, ಹೊರಗೆ ಹೋಗಿದ್ದಾರೆ. ನಂತರ ಶ್ರೀ ವೈ.ಎಂ. ಸತೀಶ್ ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ ೧೦೮೮**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ವೈ.ಎಂ. ಸತೀಶ್:–** ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂದರೆ.....

**(ಈ ಹಂತದಲ್ಲಿ ಬಿಜೆಪಿ ಪಕ್ಷದ ಕೆಲವು ಸದಸ್ಯರು “ಕಾಂಗ್ರೆಸ್ ರಕ್ತ ಚರಿತ್ರೆ, ಭ್ರಷ್ಟ ರಾಮಯ್ಯ, ಕೆಪಿಎಸ್‌ಸಿ ಹಗರಣ ೩೦೦ ಕೋಟಿ” ಇತ್ಯಾದಿ ಭಿತ್ತಿ ಪತ್ರಗಳನ್ನು ಹಿಡಿದು, ಸ್ವಸ್ಥಾನದಲ್ಲಿ ಎದ್ದುನಿಂತು ಪ್ರದರ್ಶಿಸುತ್ತಿದ್ದರು)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರಿಗೆ ಭಿತ್ತಿ ಪತ್ರ ತೋರಿಸುವುದಕ್ಕೆ ಹೇಳುತ್ತಿದ್ದೀರಾ?

**ಸಭಾಪತಿಯವರು:–** ನೀವೆಲ್ಲರೂ ಬಿಟ್ಟುಬಿಡಿ, ಇದು ಸರಿಯಲ್ಲ, ಇದು ಒಳ್ಳೆಯ ವಾಡಿಕೆ ಅಲ್ಲ, ದಯವಿಟ್ಟು ತೆಗೆದುಬಿಡಿ.

**(ಗೊಂದಲ)**

**(ಈ ಹಂತದಲ್ಲಿ ಬಾವಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು ಸ್ವಸ್ಥಾನಕ್ಕೆ ತೆರಳಿ ಭಿತ್ತಿಪತ್ರಗಳನ್ನು ತೆಗೆದುಕೊಂಡು ಪುನಃ ಬಾವಿಗೆ ಆಗಮಿಸಿ ಪ್ರದರ್ಶಿಸುತ್ತಾ, ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ದಯವಿಟ್ಟು placard ಗಳನ್ನು ತೋರಿಸಬಾರದು. ಆಡಳಿತ ಮತ್ತು ವಿರೋಧ ಪಕ್ಷದ ಎಲ್ಲಾ ಸದಸ್ಯರಿಗೆ ವಿನಂತಿ ಮಾಡುತ್ತೇನೆ, ದಯವಿಟ್ಟು ತಮ್ಮ placard ಗಳನ್ನು ತೆಗೆಯಿರಿ. ಮುಂದಿನ ಪ್ರಶ್ನೆ ಶ್ರೀ ಯು.ಬಿ. ವೆಂಕಟೇಶ್ ರವರು ಕೇಳಿ, ನಂತರ ಶ್ರೀ ಮಂಜುನಾಥ ಭಂಡಾರಿ ರವರು ಪ್ರಶ್ನೆ ಕೇಳಿ. ನಂತರ ಶ್ರೀ ನಸೀರ್ ಅಹಮದ್ ರವರು ಪ್ರಶ್ನೆ ಕೇಳಿ, ನಂತರ ಶ್ರೀಮತಿ ಭಾರತಿ ಶೆಟ್ಟಿ ಪರವಾಗಿ ಶ್ರೀ ಆಯನೂರು ಮಂಜುನಾಥ್ ರವರು ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ 1151**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ) (ಶ್ರೀಮತಿ ಭಾರತಿಶೆಟ್ಟಿ ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವೈ.ಎ. ನಾರಾಯಣಸ್ವಾಮಿ ರವರೇ, ಉತ್ತರ ಕೊಡುತ್ತಿದ್ದಾರೆ, ಶ್ರೀ ಟಿ.ಎ. ಶರವಣ ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ 747**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಏನೂ ಕೇಳುತ್ತಿಲ್ಲ…..

**(ಗೊಂದಲ)**

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು) (ಅರಣ್ಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿರುವಂತೆ 2,04,442.16 ಎಕರೆ ಅರಣ್ಯ ಪ್ರದೇಶ ಒತ್ತುವರಿಯಾಗಿರುತ್ತದೆ ಹಾಗೂ ಅರಣ್ಯ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯಂತೆ 42,114.09 ಹೆಕ್ಟೇರ್ ಕಾಯ್ದಿಟ್ಟ ಅರಣ್ಯ ಪ್ರದೇಶವನ್ನು ಮಂಜೂರು ಮಾಡಲಾಗಿರುತ್ತದೆ. ನ್ಯಾಯಾಲಯದ ಆದೇಶ ಇದ್ದರೂ ಕೂಡ….. ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಮಂಜೂರು ಮಾಡಿರುವುದು ಕಾನೂನು ಬಾಹಿರವಾಗಿದ್ದು, ಸದರಿ ಮಂಜೂರಾತಿಗಳನ್ನು ರದ್ದುಪಡಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗಿದೆ. ಯಾವ್ಯಾವ ಜಮೀನುಗಳು ಒತ್ತುವರಿಯಾಗಿದೆಯೋ, ಆ ಒತ್ತುವರಿಯನ್ನು ತೆರವುಗೊಳಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಯಾವುದೇ ಹಿಂಜರಿಕೆಯನ್ನು ಸರ್ಕಾರ ಮಾಡುವುದಿಲ್ಲ. ಅರಣ್ಯ ಉಳಿಯಬೇಕು ಮತ್ತು ಅರಣ್ಯ ಉಳಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆಯು ಚರ್ಚೆ ಮಾಡಿ ಅರಣ್ಯ ಒತ್ತುವರಿ ತೆರವುಗೊಳಸಲಾಗುತ್ತದೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಏನೂ ಕೇಳಸುತ್ತಿಲ್ಲ.

**ಸಭಾಪತಿಯವರು:-** ಶ್ರೀ ಆಯನೂರು ಮಂಜುನಾಥ್ ಪ್ರಶ್ನೆ ಕೇಳ.

**ಪ್ರಶ್ನೆ ಸಂಖ್ಯೆ 1017**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ, ಉತ್ತರ ಸರಿಯಿದೆ.

(ಮುಂದು)

(992) 22.09.2022 12.10 ಹೆಚ್‌ವಿ:ಕೆಎಸ್

(ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಕೆ,ಎ,ತಿಪ್ಪೇಸ್ವಾಮಿಯವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1157.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಿ.ಎನ್.ಮಂಜೇಗೌಡರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1091.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸೂರಜ್ ರೇವಣ್ಣನವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1109.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಈ ಗಲಾಟೆಯಲ್ಲಿ ನಮಗೆ ಏನೂ ಕೇಳಿಸುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:–** ನನಗೆ ಕೇಳಿಸುತ್ತಿದೆ.

**(ಗೊಂದಲ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಪುನಃ repeat ಮಾಡಿ ಸಾರ್.

**(ಗೊಂದಲ)**

**ಸಭಾಪತಿಯವರು:–** ಸೂರಜ್ ರೇವಣ್ಣ....

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, the House is not in Order.

**(ಗೊಂದಲ)**

**ಸಭಾಪತಿಯವರು:–** ಶ್ರೀ ರಾಜೇಂದ್ರ ರಾಜಣ್ಣರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1152.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, the House is not in Order. ದಯವಿಟ್ಟು ಸದನವನ್ನು order ಗೆ ತನ್ನಿ.

**(ಗೊಂದಲ)**

**(ಗೊಂದಲ)**

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 22ನೇ ಸೆಪ್ಟೆಂಬರ್ 2022 ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 157 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**(ಗೊಂದಲ)**

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟಂತೆ ಸಚಿವರ ಹೇಳಿಕೆಗಳು

**ಅ) ವಿಷಯ:- ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ಹಾಗೂ ಬೆಳೆ ಹಾನಿಗೆ ಸರ್ಕಾರ ನೀಡಿದ ಪರಿಹಾರ ಕುರಿತು.**

*****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ದಿನಾಂಕ 15/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**(ಗೊಂದಲ)**

**ಆ) ವಿಷಯ:- ಪಿ.ಎಸ್.ಐ. ಪರೀಕ್ಷೆಯಲ್ಲಿ ಓ.ಎಂ.ಆರ್. ಶೀಟ್‌ಗಳನ್ನು ತಿದ್ದಿದ ಪ್ರಕರಣದ ಬೆನ್ನಲ್ಲೇ ವಿವಿಧ ವಿಶ್ವವಿದ್ಯಾನಿಲಯಗಳ ಪಿ.ಹೆಚ್.ಡಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಓ.ಎಂ.ಆರ್. ಉತ್ತರ ಪತ್ರಿಕೆಗಳನ್ನು ಖರೀದಿಸಿ ಅಕ್ರಮ ನಡೆದಿರುವ ಬಗ್ಗೆ.**

***

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿಯವರು ದಿನಾಂಕ 15/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**(ಗೊಂದಲ)**

**ಇ) ವಿಷಯ: ಅನುದಾನಿತ ಪದವಿ ಕಾಲೇಜುಗಳಲ್ಲಿ 2015ರ ಪೂರ್ವಕಾಲದಲ್ಲಿ ನಿವೃತ್ತಿ ಮತ್ತು ಮರಣದಿಂದಾಗಿ ತೆರವಾಗಿ ಮಂಜೂರಾದ ಬೋಧಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.**

**********

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರು ದಿನಾಂಕ 16/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**(ಗೊಂದಲ)**

**‘ಈ) 2022ರ ನಿಯಮ ತಿದ್ದುಪಡಿಯನ್ನು ಗೃಹ ಇಲಾಖೆಯು ಪುನರ್‌ಪರಿಶೀಲಿಸಬೇಕು ಮತ್ತು ಈ ಹಿಂದೆ ಇದ್ದ ನಿಯಮಗಳ ಪ್ರಕಾರ ಅಧಿಕಾರಿ ಮತ್ತು ಸಿಬ್ಬಂದಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡುವ ಬಗ್ಗೆ.**

**********

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ದಿನಾಂಕ 16/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಗೃಹ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**(ಗೊಂದಲ)**

**ಉ) ವಿಷಯ: ಬೆಂಗಳೂರು ಮಹಾನಗರದಲ್ಲಿ ವಾಹನಗಳ ಟೋಯಿಂಗ್ ಪದ್ಧತಿ ಜಾರಿಯಿಂದ ಆಗುತ್ತಿರುವ ಅನಾನುಕೂಲಗಳ ಕುರಿತು.**

***

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಮುನಿರಾಜುಗೌಡ.ಪಿ.ಎಂ.ರವರು ದಿನಾಂಕ 19/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಗೃಹ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**(ಗೊಂದಲ)**

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಊ) ವಿಷಯ:- ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆ ಕುರಿತು.**

*********

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ್‌ರವರು ದಿನಾಂಕ 21/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿ ಲಗತ್ತಿಸಲಾಗಿದೆ)**

**(ಗೊಂದಲ)**

**ಸಭಾಪತಿಯವರು:-** ಈಗ ಶೂನ್ಯವೇಳೆಯ ಪ್ರಸ್ತಾವಗಳು. ಶ್ರೀ ಡಿ.ಎಸ್. ಅರುಣ್.....

**(ಗೊಂದಲ)**

## 5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**(ಭ್ರಷ್ಟ ಕಾಂಗ್ರೆಸ್ ಪಕ್ಷಕ್ಕೆ ಧಿಕ್ಕಾರ.... ಧಿಕ್ಕಾರ ಎನ್ನುವ ಘೋಷಣೆಯನ್ನು ಆಡಳಿತ ಪಕ್ಷದ ಸದಸ್ಯರು ಕೂಗುತ್ತಿದ್ದರು)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಶಿವಮೊಗ್ಗ ಜಿಲ್ಲೆ ಪ್ರಬುದ್ಧ ರಾಜಕಾರಣಿಗಳು ಹಾಗೂ ರಾಜಕಾರಣಕ್ಕೆ ಹೆಸರುವಾಸಿಯಾದ ಜಿಲ್ಲೆ. ರಾಜಕೀಯ ಮತ್ತು ಸಾಹಿತ್ಯಕ್ಕೆ ತವರೂರು ಕೂಡ. ರಾಷ್ಟ್ರಕವಿ ಕುವೆಂಪುರವರು "ಸರ್ವಜನಾಂಗದ ಶಾಂತಿಯ ತೋಟ" ಎಂದು ಹಾಡಿ ಹೊಗಳಿದ ಇಂತಹ ನೆಲದಲ್ಲಿ ಕೋಮು ಸೌಹಾರ್ದತೆಯನ್ನು ಹದಗೆಡಿಸುವಂತಹ ಘಟನೆಗಳು ಜರುಗಿ, ನಮಗೆ ನಾವೇ ಮಸಿ ಬಳಿದುಕೊಳ್ಳುವಂತಹ ಕಾನೂನು ಬಾಹಿರ .............

**(ಗೊಂದಲ)**

**ಸಭಾಪತಿಯವರು:-** ಈಗ ಶಾಸನ ರಚನೆ.

**(ಗೊಂದಲ)**

**6. ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**(ಅ) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ವಿಧೇಯಕ, 2022**

**ಪ್ರರ್ಯಾಲೋಚನಾ ಪ್ರಸ್ತಾವ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು, ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು, ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು 8 ವಿಶ್ವವಿದ್ಯಾನಿಲಯಗಳನ್ನು ಹೊಸದಾಗಿ ಸ್ಥಾಪನೆ ಮಾಡುತ್ತಿದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ವಿಧೇಯಕವನ್ನು ತಂದಿದ್ದೇವೆ. ಈ ವಿಧೇಯಕಕ್ಕೆ ಸದನವು ಅಂಗೀಕಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**“ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು”**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 14**

**ಸಭಾಪತಿಯವರು:-** “ಖಂಡ 2 ರಿಂದ 14ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 14ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು, ಮಾನ್ಯ ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುನ 2022ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 12.00 ಗಂಟೆ 16 ನಿಮಿಷಗಳಿಗೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

993/22-09-2022/3-30/bkp-md(vk)

**(ಮಧ್ಯಾಹ್ನ 12 ಗಂಟೆ 16ನಿಮಿಷಗಳಿಗೆ ಮುಂದೂಡಿದ ಸದನವು ಮತ್ತೆ ಮಧ್ಯಾಹ್ನ 3 ಗಂಟೆ 35 ನಿಮಿಷಕ್ಕೆ ಆರಂಭಗೊಂಡಿತು)**

**(ಪೀಠದಲ್ಲಿ ಮಾನ್ಯಸಭಾಪತಿಯವರು ಉಪಸ್ಥಿತರಿದ್ದರು)**

**ಡಾ॥ ಕೆ. ಗೋವಿಂದರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-**ಮಾನ್ಯ ಸಭಾಪತಿಯವರೆ, ತಾವು ಇವತ್ತು ಎಡ ಭಾಗಕ್ಕೆ ತಿರುಗಿ ನೋಡುತ್ತಿದ್ದೀರಿ.

**ಸಭಾಪತಿಯವರು:-**ನಾನು ಎಡ ಮತ್ತು ಬಲ ಭಾಗವನ್ನು ಸಮವಾಗಿ ನೋಡಬೇಕಾಗುತ್ತದೆ.

**ಡಾ॥ ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೆ, ಇವತ್ತು ಎಡಕ್ಕೆ ತಿರುಗಿದ್ದೀರಿ, ಇವತ್ತು ವಾಸ್ತು ಸರಿಯಾಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ (ಸಣ್ಣನೀರಾವರಿ, ಹಾಗೂ ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು)** ಮಾನ್ಯಗೋವಿಂದರಾಜುರವರೆ, ಮಿಲಿಟರಿ ಕವಾಯತ್ ಲೆಫ್ಟ್‌ನಿಂದಲೇ ಶುರುವಾಗೋದು, ಬಲಕ್ಕೆ ಶುರುವಾಗುವುದಿಲ್ಲ.

**ಡಾ॥ ಕೆ. ಗೋವಿಂದರಾಜು:-** ಇಲ್ಲ, ನಿನ್ನೆಯವರೆಗೆ ಬಲಕ್ಕೆ ಇತ್ತು ಇವತ್ತು ಎಡಕ್ಕೆ ಆಗಿದೆ, ವಾಸ್ತು ಬದಲಾವಣೆ ಆಗಿದೆ.

## <u>07. ಪ್ರಕಟಣೆ</u>

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯಕಲಾಪ, ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ 22-09-2022ರಂದು **2022ನೇ**

**ಸಾಲಿನ ಧನವಿನಿಯೋಗ ಸಂಖ್ಯೆ–3** ಅನ್ನು ಅಂಗೀಕರಿಸಿತು ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಸಭಾಪತಿಯವರು:–** ಬೆಳಗ್ಗೆ ಒಂದು ವಿಷಯದ ಮೇಲೆ ಚರ್ಚೆಯಾಗಿ, ಗಲಾಟೆಯಾಗಿ ಸದನವನ್ನು ಮುಂದಕ್ಕೆ ಹಾಕಿದ್ದೆವು. ದಯವಿಟ್ಟು, ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಕು ಚೆಲ್ಲಬೇಕು.

**೦೮. "PayCM" ಪೋಸ್ಟರ್ ಅಂಟಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮುಂದುವರೆದ ಚರ್ಚೆ**

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):–**ಮಾನ್ಯ ಸಭಾಪತಿಯವರೆ, ಬೆಳಗ್ಗೆ ವಿಚಾರ ಗಲಾಟೆ ಅಲ್ಲ, ಅದರ ಬಗ್ಗೆ ಪ್ರತಿಭಟನೆ ಮಾಡಿದೆವು. ಪ್ರಜಾಪ್ರಭುತ್ವದಲ್ಲಿ, ಅದರಲ್ಲೂ ನಮ್ಮ ದೇಶದಲ್ಲಿ ವಿಮರ್ಶೆ, ಸ್ವವಿಮರ್ಶೆ ಸಹಜ. ಅದರಲ್ಲೂ ಆಳುವ ಪಕ್ಷದ ಮಾನ್ಯ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಪ್ರಶ್ನೆ ಮಾಡತಕ್ಕಂತಹ ಹಕ್ಕು, ಸಂಪೂರ್ಣವಾಗಿ ವಿರೋಧ ಪಕ್ಷಕ್ಕೆ ಮಾತ್ರ ಇದೆ ಎಂದು ತಿಳಿದುಕೊಳ್ಳಬಾರದು.

ಸರ್ಕಾರದ 4ನೇ ಅಂಗವಾಗಿರತಕ್ಕಂತಹ ಏನು 'Fourth Estate' ಎಂದು ಹೇಳುತ್ತೀರಿ, ಮೀಡಿಯಾದವರು ಸಹ ಮಾಡುತ್ತಾರೆ. ಅದರ ಜೊತೆಗೆ ಸಾಮಾಜಿಕ ಜಾಲ ತಾಣದವರು ಮಾಡಿದಾಗ, ಅದು ಮೀಡಿಯಾದವರಿಗೆ ಏನು ಕಡಿಮೆ ಇಲ್ಲ. ಸಾಮಾಜಿಕ ಜಾಲ ತಾಣದಲ್ಲಿ ಯಾರು ಮುಂದೆ ಇದ್ದಾರೆಂದು ಪ್ರಪಂಚಕ್ಕೆ ಹೇಳಬೇಕಾಗಿಲ್ಲ. ಬೇರೆಯವರ ಬಗ್ಗೆ ತಾವು ಟೀಕೆ–ಟಿಪ್ಪಣಿಗಳನ್ನು ಮಾಡಿದಾಗ ಅದೆಲ್ಲವೂ ಸರಿ. ವಿರೋಧ ಪಕ್ಷದವರು ಟೀಕೆ–ಟಿಪ್ಪಣಿಗಳನ್ನು ಮಾಡಿದಾಗ ಅದು ಸರಿಯಲ್ಲ, ಪೋಲೀಸನವರು ಅರೆಸ್ಟ್ ಮಾಡುವುದೇನೂ ಹೊಸದಲ್ಲ. ನಾನು ಕಾರವಾರದಲ್ಲೂ ಹೋಗಿ ನಾನು ಪೋಲೀಸ್ ಸ್ಟೇಷನ್‌ನಲ್ಲಿ ಪ್ರೊಟೆಸ್ಟ್ ಮಾಡಿದ್ದೆ. ಶಿವಮೊಗ್ಗದಲ್ಲಿ ಹೋಗಿದ್ದೆ, ಮಂಗಳೂರಿನಲ್ಲಿ ಹೋಗಿದ್ದೆ. ಸಾಮಾಜಿಕ ಜಾಲ ತಾಣದಲ್ಲಿ ಬಿಜೆಪಿ, ಅದರಲ್ಲೂ ವಿಶ್ವಗುರು ಅಥವಾ ಬಿಜೆಪಿಯ ಮುಖ್ಯಸ್ಥರೇನಾದರೂ ಟೀಕೆ–ಟಿಪ್ಪಣಿಗಳನ್ನು ಮಾಡಿದಾಗ ಸಾಮಾಜಿಕ ಜಾಲ ತಾಣದಲ್ಲಿ ಪೋಲೀಸನವರು ಹೋಗಿ ಬೆದರಿಕೆ ಹಾಕುವಂತಹದ್ದು.

ಪೋಲೀಸ್‌ನವರಿಗೆ ಯಾರು ಈ ರೀತಿಯ ಹಕ್ಕನ್ನು ಕೊಟ್ಟಿದ್ದಾರೆ. ಪೋಲೀಸ್‌ನವರಿಗೆ ಬೇರೆ ಕೆಲಸ ಇಲ್ಲವೇ? ಯಾವ ಯಾವ ಪ್ರಕರಣಗಳು ನೆನಗುದಿಗೆ ಬಿದ್ದಿವೆ ಎನ್ನುವುದನ್ನು ಯೋಚನೆ ಮಾಡಿ ಅದನ್ನು ಕಂಡು ಹಿಡಿದು ತಪ್ಪಿತಸ್ತರಿಗೆ ಶಿಕ್ಷೆ ಕೊಡುವುದನ್ನು ಬಿಟ್ಟು, ರಾಜಕೀಯ ಪಕ್ಷದಲ್ಲಿ ಇರತಕ್ಕವರು ನಿನ್ನೆ ರಾತ್ರಿ ಎರಡು ಗಂಟೆಗೆ ನಮ್ಮ ಸೋಷಿಯಲ್ ಮಿಡಿಯಾದ ಮಾಜಿ ಅಧ್ಯಕ್ಷರಾದ ಶ್ರೀ ಬಿ.ಆರ್. ನಾಯ್ಡು ಎಂದು ಹೇಳಿ, ಮತ್ತೊಬ್ಬರು ಪದಾಧಿಕಾರಿಗಳು ಕೆ.ಆರ್. ಪುರಂನಲ್ಲಿದ್ದವರು, ರಾತ್ರಿ 2-00 ಗಂಟೆಗೆ ಹೋಗಿ ಮನೆ ಬಾಗಿಲು ತಟ್ಟಿ, ಬಾಗಿಲು ತೆಗೆಯುವುದಿಲ್ಲವೆಂದರೆ ಬಾಗಿಲು ಹೊಡೆಯುತ್ತೇವೆಂದು ಭಯ ಬೀಳಿಸಿದರೆ, ಮಕ್ಕಳು ಮತ್ತು ಮನೆಯವರ ಕಥೆ ಏನಾಗಬೇಕು. ಅದಲ್ಲದೆ, ಅವರುಗಳನ್ನು ರಾತ್ರಿ ಕರೆದುಕೊಂಡು ಬಂದು , ಚೆನ್ನಾಗಿ ಕೆಲಸ ಮಾಡುತ್ತಾರೆಂದರೆ 'PAY CM' ಎಂದು ರಾತ್ರಿಯೇ ಹಾಕಿದ್ದಾರೆ. 11 -00 ಗಂಟೆಗೆ ಅದನ್ನು ಕೀಳಲಿಕ್ಕೆ ಹೋಗುತ್ತಿದ್ದಾರೆ. ಅಂದರೆ, ನಿಮ್ಮ Intelligence ಎಷ್ಟು ಚೆನ್ನಾಗಿದೆ ಎಂದರೆ, ಮುಖ್ಯಮಂತ್ರಿಗಳ ಮನೆ ಮುಂದೆ ಹಾಕುತ್ತಾರೆ.

**ಮುಂದು.**

**(994) 22.09.2022 03.40 ಎಸ್‌ವಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ನೀವು ಈ ಒಂದು ವಿ.ಐ.ಪಿ. ಏರಿಯಾ ಏನಂತೀರಿ, ಇಲ್ಲೆಲ್ಲಾ ಅವರಿಗೆ ರಾತ್ರಿ 11 ಗಂಟೆಯವರೆವಿಗೂ ಕಾಣಲೇ ಇಲ್ಲ. ಪತ್ರಿಕೆಯವರು ಸ್ವಲ್ಪ ಅದನ್ನು ಪ್ರದರ್ಶನ ಮಾಡಿದಾಗ ಮುಖ್ಯಮಂತ್ರಿಗಳು ಸ್ವಲ್ಪ ಎಚ್ಚೆತ್ತು ಏನಾಗುತ್ತಿದೆ ಎಂದು ಕೆಲವರಿಗೆ ಹೇಳಿದ್ದಾರೆ. ತದನಂತರ ಸಾಯಂಕಾಲದೊಳಗೆ ಅರೆಸ್ಟ್ ಮಾಡಬಹುದಾಗಿತ್ತು. ಇಲ್ಲವೇ ಬೆಳಗ್ಗೆಯಾದರೂ ಮಾಡಬಹುದಿತ್ತು. ನಾವೇನು ರಣಹೇಡಿಗಳಲ್ಲ. ಈಗಾಗಲೇ ನಾವು ಇ.ಡಿ., ಐ.ಟಿ., ಸಿ.ಬಿ.ಐ. ಅನ್ನು face ಮಾಡುತ್ತಲೇ ಇರುತ್ತೇವೆ. ನಾವು ಓಡಿ

ಹೋಗುವ ಜನರಲ್ಲ. ಬೆಳಗ್ಗೆ ಹೋಗಿ ಕರೆದಿದ್ದರೆ ನಾವೇ ಸ್ಟೇಷನ್‌ಗೆ ಬರುತ್ತಿದ್ದೆವು. ಅವರಿಗೆ 28 threat. ಈ ರೀತಿಯ ಕೆಲಸಗಳು ಆಗಬಾರದು.

ಆರೋಪಗಳು ಪ್ರತ್ಯಾರೋಪಗಳು ಬರುತ್ತಲೇ ಇರುತ್ತವೆ. ಯಾರ ಮೇಲೆ ಆರೋಪ ಬಂದಿಲ್ಲ. ನಮ್ಮ ಮೇಲೆ ಆರೋಪ ಬಂದಷ್ಟು ಇನ್ಯಾರ ಮೇಲೂ ಮಾಡಿರುವುದಿಲ್ಲ. ಅದು ನಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ರಾಷ್ಟ ಮಟ್ಟದಲ್ಲಿರಬಹುದು ಅಥವಾ ರಾಜ್ಯ ಮಟ್ಟದ ಇತರ ನಾಯಕರಿರಬಹುದು. ಸಾಮಾಜಿಕ ಜಾಲತಾಣಗಳವೆ ಎಂದು ಹೇಳಿ ನಿರಂತರವಾಗಿ ಅವರ ಮೇಲೆ ಏನು ಬೇಕಾದರೂ ಮಾಡುತ್ತಿರುತ್ತಾರೆ, ನಾವು ಯಾರಿಗೂ ಸಹ ದೂರನ್ನು ಕೊಡುವುದಿಲ್ಲ. ಈ ರೀತಿ ಎಲ್ಲವನ್ನು ಅನ್ನಿಸಿಕೊಳ್ಳಬೇಕೆಂದು ನಾವು ಮಾಡುತ್ತೇವೆ. ನಾನು ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡುವುದೇನೆಂದರೆ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಭಾರತೀಯ ಜನತಾ ಪಾರ್ಟಿಯವರ ಮೇಲೆ ಕ್ರಮ ತೆಗೆದುಕೊಳ್ಳುವಂತಿಲ್ಲ, ಉಳಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂಬುದಾಗಿ ಇಲ್ಲ.

ಇಷ್ಟೆಲ್ಲಾ ಆಯಿತು. ಶಿವಮೊಗ್ಗದ ಒಬ್ಬ ಮಾಜಿ ಮಂತ್ರಿಗಳ ಮೇಲೆ ಒಬ್ಬ Death Note ಬರೆದು ಸತ್ತಿದ್ದನು. ಅವರನ್ನು ಯಾವತ್ತಾದರೂ ಒಂದು ದಿನ ಸ್ಟೇಷನ್‌ಗೆ ಕರೆಸಿದ್ದಾರೆಯೇ? ಕ್ಷಮಿಸಿ, ಮಾನ್ಯ ಈಶ್ವರಪ್ಪನವರ ಹೆಸರನ್ನು ನಾನು ಹೇಳಬಾರದು. ಅವರು ಈ ಸದನದಲ್ಲಿ ಇಲ್ಲ. ಒಂದು ದಿನವಾದರೂ ಅವರು ಸ್ಟೇಷನ್‌ಗೆ ಕರೆಸಿದ್ದಾರೆಯೇ? ಪಾಪ.. ಆ ಹೆಣ್ಣುಮಗಳು ಇವತ್ತೂ ಅಳುತ್ತಾಳೆ. ಆ ರೀತಿಯ ಉದಾಹರಣೆಗಳು ಎಷ್ಟಾಗಿದೆ ಎಂದು ನಾನು ಉದಾಹರಣೆಯನ್ನು ಕೊಡಬಹುದು. ಅಮಾಯಕರಾದ ಇಬ್ಬರು ಹುಡುಗರನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಧಮಕಿ ಹಾಕಿದ್ದನ್ನು ನಾನು ಯಾವತ್ತೂ ಸಹ ನೋಡಿಲ್ಲ. ಕಾಂಗ್ರೆಸ್‌ನಲ್ಲಿಯೇ ಇದ್ದುಕೊಂಡು ಕಾಂಗ್ರೆಸ್ ಅವರನ್ನು ಟೀಕೆ ಮಾಡಿದರೂ ನಮಗೆ ಯಾರೂ ಸಹ ಆ ರೀತಿ ಮಾಡುತ್ತಿರಲಿಲ್ಲ. ಇದೆಲ್ಲಾ ಉತ್ತರ ಪ್ರದೇಶ, ಬಿಹಾರದಲ್ಲಿ ನಡೆಯುತ್ತದೆ. ಆ ಮಾದರಿ ನಮಗೆ ಬೇಕಾಗಿಲ್ಲ. ಕಾನೂನು ಚೌಕಟ್ಟಿನಲ್ಲಿ ಏನು ಕ್ರಮ ಬೇಕೋ ಅದನ್ನು ತೆಗೆದುಕೊಳ್ಳಿ. We are ready for that.

40% ಭ್ರಷ್ಟಾಚಾರದ ವಿಷಯದಲ್ಲಿ ನಾವು ಈಗಾಗಲೇ ಪತ್ರಿಕೆಯಲ್ಲಿ ಹೇಳಿದ್ದೇವೆ. ಇದರ ಬಗ್ಗೆ ನಮ್ಮ ಅಧ್ಯಕ್ಷರು ಹೇಳಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಹರಿಪ್ರಸಾದ್ ಅವರೇ, ಮೂರು-ಮೂರು ತಲೆಮಾರಿನ ಬಗ್ಗೆಯೂ ಏನಾದರೂ ಹೇಳಿ ಸ್ವಲ್ಪ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಗೃಹ ಸಚಿವರೇ, ನಿಮ್ಮಲ್ಲಿ ತಾಕತ್ತಿದ್ದರೆ ಧಮ್ ಇದ್ದರೆ ತನಿಖೆ ಮಾಡಿ. ಇ.ಡಿ., ಸಿ.ಬಿ.ಐ ಎಲ್ಲವನ್ನೂ ಇಟ್ಟುಕೊಂಡಿದ್ದೀರಿ. ತನಿಖೆ ಮಾಡಿ ಯಾರು ಬೇಡ ಎಂದು ಹೇಳಿದರು? ನಾವು ಬೇಡ ಎಂದು ಹೇಳಿದ್ದೇವೆಯೇ? ನಿಮಗೆ ಧೈರ್ಯ ಇದೆಯೇ? ಮೂರಲ್ಲ, ಹತ್ತು ತಲೆಮಾರು ಮಾಡಿ. ನೀವು ಯಾವ ರೀತಿ ಮಾಡಿದ್ದೀರೆಂದು ನಾನು ಹೇಳಲೇ?

**(ಗೊಂದಲ)**

**Mr. CHAIRMAN:** Please continue.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, 2ಜಿ, 3ಜಿ ಎಲ್ಲಾ ಒಂದೊಂದೇ ಕೇಸ್ ಬೀಳುತ್ತಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಎಲ್ಲರೂ ಮಾತನಾಡುತ್ತಾ ಹೋದರೆ ಪುನಃ ಬೆಳಗಿನ ಪರಿಸ್ಥಿತಿಯೇ ನಿರ್ಮಾಣವಾಗುತ್ತದೆ. ಮಾನ್ಯ ಮಾಧುಸ್ವಾಮಿಯವರೇ, ಎಲ್ಲರೂ ಮಾತನಾಡಿದರೆ ನಾವೇನು ಬಾಯಿಲ್ಲದವರಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇನ್ನೊಂದು ಮಾತನ್ನು ನಾನು ಬೆಳಗ್ಗೆನೂ ಹೇಳಿದೆ. ಈಗಲೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮತಿ ಬಿ.ಟಿ.ಲಲಿತಾ ನಾಯಕ್ ಅವರು ಈ ಸದನದ ಗೌರವಾನ್ವಿತ ಸದಸ್ಯರಾಗಿದ್ದವರು ಹಾಗೂ ಮಾಜಿ ಮಂತ್ರಿಗಳಾಗಿದ್ದವರು. ಮಾನ್ಯ ಮಾಧುಸ್ವಾಮಿಯವರ ಹಳೆಯ ಪಕ್ಷದಲ್ಲಿ ಇದ್ದವರು ಅವರು. ಪಾಪ, ಹೆಣ್ಣುಹೆಂಗಸು. ಅವರನ್ನು ಕೊಲೆ ಮಾಡುತ್ತೇವೆ ಎಂದು 9 ಪತ್ರಗಳನ್ನು ಬರೆದಿದ್ದಾರೆ. ಅವರು

ಪೋಲೀಸರಿಗೆ ದೂರು ನೀಡಿದ್ದಾರೆ. ಇದುವರೆವಿಗೂ ಒಬ್ಬರನ್ನು ಕರೆಸಿ ಕೇಳಲಿಲ್ಲ. ಒಬ್ಬನೇ ಎಲ್ಲಾ ಪತ್ರಗಳನ್ನು ಬರೆದಿದ್ದಾನೆ. ಅದರಲ್ಲಿ ಕೇವಲ ಲಲಿತಾ ನಾಯಕ್ ಮಾತ್ರವಲ್ಲ, ಪ್ರೊ.ಭಗವಾನ್ ಹೆಸರು ಹೇಳಿದ್ದಾರೆ. ಇನ್ನೊಂದಷ್ಟು ಚಿಂತಕರ ಹೆಸರು ಹೇಳಿದ್ದಾರೆ. ಸಾಹಿತಿಗಳ ಹೆಸರನ್ನು ಹೇಳಿದ್ದಾರೆ. ಜೊತೆಗೆ ಮಾನ್ಯ ಸಿದ್ಧರಾಮಯ್ಯನವರ, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಮತ್ತು ನನ್ನ ಹೆಸರನ್ನು ಹೇಳಿ ನಿಮ್ಮನ್ನು ಕೊಲೆ ಮಾಡುತ್ತೇವೆಂದು ಹೇಳಿ ಬೆದರಿಕೆ ಹಾಕಿದ್ದಾರೆ. ಅವರು ನಮಗಂತೂ ಪೋಲೀಸ್ ಸೆಕ್ಯೂರಿಟಿ ಕೊಡುವುದಿಲ್ಲ, ನಾವು ಕೇಳುವುದಿಲ್ಲ. ನಮ್ಮನ್ನು ನಾವು ನೋಡಿಕೊಳ್ಳುತ್ತೇವೆ. ಆದರೆ ಒಂದು ಹೆಣ್ಣುಹೆಂಗಸಿಗೆ ರಕ್ಷಣೆಯನ್ನು ಕೊಡುವುದಕ್ಕಾಗದೆ ಇರುವವರು ಇನ್ನೂ ಸಹ ಗೃಹ ಸಚಿವರಾಗಿದ್ದಾರೆ. ಅದು ಸಹ ತಕ್ಷಣ ತನಿಖೆಯಾಗಿ ಯಾರು ತಪ್ಪಿತಸ್ಥರಿದ್ದಾರೆಯೋ ಅವರನ್ನು ಅರೆಸ್ಟ್ ಮಾಡಬೇಕು.

ಸಾಮಾಜಿಕ ಜಾಲತಾಣಗಳಲ್ಲಿ ಬಂದಿರುವುದಕ್ಕೆ ಧಮಕಿ ಹಾಕಿದರೆ ನಾವು ಭಯ ಪಡುವುದಿಲ್ಲ. ತಮ್ಮಲ್ಲಿಯೂ ನಮ್ಮ ಮನವಿ ಏನೆಂದರೆ ಇಂದು ಬೆಳಗ್ಗೆ ವಿಶ್ವವಿದ್ಯಾಲಯ ವಿಧೇಯಕವನ್ನು ಚರ್ಚೆ ಇಲ್ಲದೆ ಪಾಸ್ ಮಾಡಿಬಿಟ್ಟಿರಿ. ಅದರಲ್ಲಿರತಕ್ಕಂತಹ ಹಗರಣ ಯಾವುದರಲ್ಲಿಯೂ ಇಲ್ಲ, ಅಷ್ಟೊಂದು ಹಗರಣ ಇದೆ. ತಾವು ನಮ್ಮನ್ನು ಕರೆಸಿ ಹೇಳಬಹುದಿತ್ತು. ಅದು ಏಕಪಕ್ಷೀಯವಾಗಿ ನಿರ್ಧಾರವಾದರೆ ಸದನದ ಗೌರವ ಉಳಿಯುವುದಿಲ್ಲ ಎಂಬ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಮಾತುಗಳನ್ನು ನಾವು ಕೇಳಿದ್ದೇವೆ. ಅಲ್ಲಿ ಕುಳಿತಾಗಲೂ ಸಹ ಹೇಳಿದ್ದೇವೆ. ತನಿಖೆ ಮಾಡುವುದಕ್ಕೆ ದೂರನ್ನು ಯಾವ ಪಕ್ಷದವರು ಕೊಟ್ಟಿದ್ದಾರೆ, ಏಕೆ ಕೊಟ್ಟಿದ್ದಾರೆ ಎಂಬುದನ್ನು ನೋಡಿ ಸರ್ಕಾರ ನಡೆಸುವುದಕ್ಕಾಗುವುದಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಏನು ಬಂದಿತ್ತು ಅದಕ್ಕೆ ಅವರ ಕಡೆಯಿಂದ ದೂರು ದಾಖಲಾಗಿದ್ದರೆ, ಪೋಲೀಸರು ಕ್ರಮವನ್ನು ಕೈಗೊಳ್ಳಬೇಕಾಗಿತ್ತು. ಪೋಲೀಸರು ಕ್ರಮ ತೆಗೆದುಕೊಂಡಿರುತ್ತಿದ್ದರು. ವಿಫಲರಾಗಿದ್ದರೆ ಮಾನ್ಯ ಗೃಹ ಸಚಿವರು ಉತ್ತರವನ್ನು ಹೇಳಬೇಕಾಗಿತ್ತು. ನಿನ್ನೆ ಆಗಿರುವುದಕ್ಕೆ ನಾವು ದೂರು ನೀಡಿದ್ದೇವೆ. ದೂರು ನೀಡಿದ ಮೇಲೆ clue ಹುಡುಕುವುದು, source ಹುಡುಕುವುದು,

ಯಾವ ಮೂಲದಿಂದ ತನಿಖೆಯನ್ನು ಮಾಡಬೇಕು. ಒಂದು ಕೇಸ್ ಅನ್ನು ರಿಜಿಸ್ಟರ್ ಮಾಡಿದ ಮೇಲೆ ಏನಾದರೂ ತನಿಖೆಯನ್ನು ಮಾಡಲು ಯಾರನ್ನಾದರೂ ಅರೆಸ್ಟ್ ಮಾಡಬೇಕಾಗುತ್ತದೆ. ಯಾರನ್ನಾದರೂ ವಿಚಾರಣೆ ಮಾಡಬೇಕಾಗುತ್ತದೆ. ಇದು ಮಾನ್ಯ ಭೋಜೇಗೌಡರಿಗೂ ಸಹ ತಿಳಿದಿದೆ.

ಮಾನ್ಯ ಹರಿಪ್ರಸಾದ್ ಅವರ ಗಮನಕ್ಕೆ ಒಂದು ಮಾತನ್ನು ತರಲಿಕ್ಕೆ ಇಚ್ಛೆ ಪಡುತ್ತೇನೆ. All criminal cases need not be through arrest. ಎಲ್ಲಾ ಕೇಸ್‌ಗಳಲ್ಲಿಯೂ ಮನುಷ್ಯನನ್ನು ಅರೆಸ್ಟ್ ಮಾಡಿ ತನಿಖೆ ಮಾಡಬೇಕೆಂದು ಏನಿಲ್ಲ. ಯಾವುದರಲ್ಲಿ ಪೊಲೀಸರಿಗೆ ಸಹಕಾರ ಸಿಗುವುದಿಲ್ಲ, ಯಾವುದರಲ್ಲಿ ಪೊಲೀಸರಿಗೆ ಅನಿವಾರ್ಯ ಅನ್ನಿಸುತ್ತದೆ ಅಂತಹ ಕೇಸ್‌ಗಳಲ್ಲಿ ಅರೆಸ್ಟ್ ಮಾಡುತ್ತಾರೆ. ತನಿಖೆಗೆ ಸಹಕರಿಸಿದರೆ ಅರೆಸ್ಟ್ ಮಾಡದಿರಬಹುದು. ನಮಗೆ ಬೇಕಾಗಿರುವ ಮಾಹಿತಿಯನ್ನು ಸ್ಟೇಟ್‌ಮೆಂಟ್ ಮೂಲಕ ಪಡೆದುಕೊಳ್ಳಬಹುದು. ಹಾಗಾಗಿ ಮಾನ್ಯ ಈಶ್ವರಪ್ಪನವರನ್ನು ಅರೆಸ್ಟ್ ಮಾಡಬೇಕಿತ್ತೋ ಬೇಡವೋ ಹಾಗೆಯೇ ಹೇಳಿಕೆ ತೆಗೆದುಕೊಳ್ಳಬೇಕೋ, it is for the I.O (Investigation Officer) to decide. ತನಿಖಾಧಿಕಾರಿ ತೀರ್ಮಾನ ಮಾಡುತ್ತಾರೆ. ದೂರು ನೀಡುತ್ತಿದ್ದಂತೆಯೇ ಎಲ್ಲರನ್ನೂ ಅರೆಸ್ಟ್ ಮಾಡಬೇಕೆಂದು ಕಾನೂನು ಇಲ್ಲ. I am sorry to say that.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಮಾಧುಸ್ವಾಮಿಯವರೇ, ಮಾನ್ಯ ಈಶ್ವರಪ್ಪನವರ ಮೇಲೆ ಆರೋಪ ಬಂದದ್ದಕ್ಕೆ ಅವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರು. ಡೆತ್ ನೋಟ್‌ನಲ್ಲಿ ಹೇಳಿದ್ದಾರೆ. ಅದಕ್ಕಿಂತ ಇನ್ನೇನು ಬೇಕು? ಸೆಕ್ಷನ್ ೩೦೬ರ ಅಡಿಯಲ್ಲಿ ಕೇಸ್ ದಾಖಲಾಗಬೇಕಿತ್ತು. ಅದನ್ನೂ ಮಾಡಲಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ;-** ಮಾನ್ಯ ಹರಿಪ್ರಸಾದ್ ಅವರೇ, ಕೇಸ್ ಬುಕ್ ಆಗಿದೆ. ಮಾನ್ಯ ಈಶ್ವರಪ್ಪನವರು ತನಿಖೆಗೆ ಸಹಕಾರ ಕೊಟ್ಟಿದ್ದಾರೆ. ಎಲ್ಲಾ ಮಾಹಿತಿಯನ್ನು ಪೊಲೀಸರಿಗೆ ಕೊಟ್ಟಿದ್ದಾರೆ. ತಮ್ಮ ಪ್ರಭಾವ ಬರಬಾರದು ಎಂದು ಹೇಳಿ ಮಾನ್ಯ ಈಶ್ವರಪ್ಪನವರು ಮಂತ್ರಿ ಸ್ಥಾನವನ್ನೂ ತ್ಯಾಗ

ಮಾಡಿದ್ದಾರೆ. ಹಾಗಾಗಿ ತನಿಖಾಧಿಕಾರಿಗಳಿಗೆ ಇದು ಅರೆಸ್ಟ್ ಮಾಡಲೇಬೇಕಾದ ತನಿಖೆ ಎಂದು ಅನ್ನಿಸಲಿಲ್ಲ. That is for the police and court to decide.

ಎರಡನೆಯದಾಗಿ ಸಾಮಾಜಿಕ ಜಾಲತಾಣಗಳು ಏನು ಬೇಕಾದರೂ ಮಾಡಲಿ, ಹೇಗೆ ಬೇಕಾದರೂ ಮಾಡಲಿ ಎಂದು ಇಷ್ಟೊಂದು scot-free ಆಗಿ ಬಿಡುವುದಕ್ಕಾಗುವುದಿಲ್ಲ. ನೀವು ಸಹಿಸಿಕೊಳ್ಳುತ್ತೀರಿ. ನಿಮಗೆ ಶಕ್ತಿ ಇದೆ. ಹೋರಾಟ ಮಾಡಿ ಅಭ್ಯಾಸವಿದೆ. ನಮ್ಮಂತಹವರಿಗೆ ಆಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳನ್ನು ಹಬ್ಬಿಸುವ ಕಾರ್ಖಾನೆ ಇರುವುದೇ ನಿಮ್ಮಲ್ಲಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಹರಿಪ್ರಸಾದ್ ಅವರೇ, ತಾವು ಮಾತನಾಡುವಾಗ ನಾನು ಎದ್ದು ನಿಂತಿದ್ದೆನಾ? ಈಗ ತಾವು ಕುಳಿತುಕೊಳ್ಳಿ.

ನಮಗೆ ಅಷ್ಟೊಂದು ಶಕ್ತಿ ಇಲ್ಲ. ಯಾರು ಏನು ಬೇಕಾದರೂ ಅಂದುಕೊಡು ಹೋಗಲಿ, ಏನು ಬೇಕಾದರೂ ಮಾಡಿಕೊಂಡು ಹೋಗಲಿ ಎನ್ನುವಷ್ಟು ನಮಗೆ ಜಿಡ್ಡು ಹಿಡಿದಿಲ್ಲ. ಹಾಗಾಗಿ ನಾವು ನಿನ್ನೆ ಸ್ವಲ್ಪ ಪ್ರತಿಕ್ರಿಯಿಸಿದೆವು. ನೀವೂ ಸೂಕ್ಷ್ಮವಾಗಿ ಪ್ರತಿಕ್ರಿಯಿಸಿ. ನೀವು ಕೊಟ್ಟ ದೂರನ್ನೂ honour ಮಾಡುತ್ತೇವೆ. ನೀವು ಕೊಟ್ಟ ದೂರನ್ನೂ ಸಹ ಪೊಲೀಸರು ಶಕ್ತಿ ಮೀರಿ ತನಿಖೆ ಮಾಡಿ ನ್ಯಾಯ ಒದಗಿಸುವಂತೆ ಮಾಡುತ್ತೇವೆ. ಒಂದು ಮಾತನ್ನು ನಿಮಗೆ ಹೇಳುತ್ತೇನೆ. ರಾಜಕೀಯದಲ್ಲಿ ಆ ಕಡೆ ಈ ಕಡೆ ಎಂದು ಬಹಳ ದಿನಗಳ ಕಾಲ ಜಂಜಾಡುವುದಕ್ಕೆ ಆಗುವುದಿಲ್ಲ. ಯಾರು ಯಾವಾಗ ಯಾವ ಸ್ಥಿತಿಯಲ್ಲಿರುತ್ತೇವೆಯೋ? ನಮ್ಮ ರಕ್ಷಣೆಯ ಜೊತೆಗೆ ಜನಪ್ರತಿನಿಧಿಗಳ ರಕ್ಷಣೆಯೂ ಆಗಬೇಕು. ಹಾಗಾಗಿ ಎಲ್ಲಿಯಾದರೂ ಸ್ವಲ್ಪ ಹಿಡಿತಕ್ಕೆ ತೆಗೆದುಕೊಂಡು ಹೋಗುವುದು ಗೌರವ. ದೂರು ದಾಖಲಾಗಿರುವುದರಿಂದ ಅರೆಸ್ಟ್ ಆಗಿದೆ. ನಿಮಗೆ ತಿಳಿದಿರುವಂತೆ ಈಗ ಕಾನೂನು ಪ್ರಕಾರ ಜಾಮೀನು ಕೊಟ್ಟು ಕಳುಹಿಸಿದ್ದಾರೆ. ಮುಂದೆ ನ್ಯಾಯಾಲಯ ಏನು ನಿರ್ಧಾರ ಮಾಡುತ್ತದೆ, ಪೊಲೀಸರು ಏನು ಪುರಾವೆಯನ್ನು ಒದಗಿಸುತ್ತಾರೆಯೋ ಅದರ ಮೇಲೆ ನಿರ್ಧಾರವಾಗುತ್ತದೆ.

ಸದನ ಇನ್ನು ಕೇವಲ ಒಂದೇ ಒಂದು ದಿನ ನಡೆಯಲಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ದಯಮಾಡಿ ಸಹಕಾರ ಮಾಡಬೇಕು. ಬೇರೆ ವಿಷಯಗಳನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಮಾಧುಸ್ವಾಮಿಯವರೇ, ದೂರು ಇದ್ದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಾವು ಹೇಳಿದಿರಿ. ಕಡಲೆಕಾಯಿ ಕಾಂಗ್ರೆಸ್ ಎಂದು ಸುಳ್ಳಿನ ಕಾರ್ಖಾನೆಯವರು ಪ್ರಾರಂಭ ಮಾಡಿದ್ದಾರೆ. ಅದರ ವಿರುದ್ಧ ಸೈಬರ್ ಕ್ರೈಂ ಪೋಲೀಸರಿಗೆ ನಾನೇ ದೂರನ್ನು ಕೊಡಿಸಿರುತ್ತೇನೆ. ಒಬ್ಬರನ್ನೂ ಕರೆಸಿಲ್ಲ, ಒಬ್ಬರನ್ನೂ ಅರೆಸ್ಟ್ ಮಾಡಿಲ್ಲ. ಇನ್ನೂ ಜೋರಾಗಿ ಮಾಡಿ ಎಂದು ಹೇಳಿ ಕಳುಹಿಸಿದ್ದಾರೆ. ನಾವು ಇದನ್ನು ಜೀವನಪೂರ್ತಿ ನೋಡಿ ಬಂದಿದ್ದೇವೆ. ನೀವು ಅಲ್ಲಿ ಸೇರಿಕೊಂಡಿದ್ದೀರಿ. ನಿಮಗೆ ಗೊತ್ತಾಗುವುದಿಲ್ಲ. ನಾವು ಈ ಸುಳ್ಳಿನ ಕಾರ್ಖಾನೆಗಳನ್ನು ನೋಡಿಕೊಂಡು ಬಂದಿದ್ದೇವೆ.

ಕಾನೂನು ಎಲ್ಲರಿಗೂ ಒಂದೇ. ಕಾನೂನು ಅವರಿಗೊಂದು ನಮಗೊಂದು ಅಲ್ಲ. ಎಷ್ಟೇ ಪ್ರಯತ್ನ ಮಾಡಿದರೂ ಅದರ ವಿರುದ್ಧ ನಾವು ಹೋರಾಟ ಮಾಡುತ್ತೇವೆ.

## ೦9. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I **ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-**

ಮಾನ್ಯ ಸಭಾಪತಿಯವರೇ,

1.**ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2003, ಪ್ರಕರಣ 8(2)ರ ಮೇರೆಗೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಆರ್ಥಿಕ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ) ನಿಯಮಗಳು, 2021 ಅನ್ನು ರಚಿಸಿ ದಿನಾಂಕ:10.03.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ 18 ಎಸ್ಎಡಿ 2021 (II)

**2. ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ 1957 ಪ್ರಕರಣ 39ರ ಮೇರೆಗೆ**

ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957 ಅನ್ನು ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸಾಂದ್ರೀಕೃತ ಅನಿಲದ ಮಾರಾಟದ ಮೇಲೆ ವಿತರಕರು ಪಾವತಿಸಬೇಕಾದ ತೆರಿಗೆಯ ಕುರಿತು, ದಿನಾಂಕ 01.09.2022ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ ಎಫ್‌ಡಿ 57 ಸಿಎಸ್‌ಎಲ್ 2022

**3. ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ 1957 ಪ್ರಕರಣ 39ರ ಮೇರೆಗೆ**

2017ರ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ನಿಯಮಗಳನ್ನು ರಚಿಸಿ, ಹೊರಡಿಸಿರುವ ಅಧಿಸೂಚನೆ ಹಾಗೂ ನಿಯಮಗಳಿಗೆ ಮತ್ತು ಅದರಲ್ಲಿನ ನಮೂನೆಗಳು ಸೇರಿದಂತೆ ಕೆಲವು ತಿದ್ದುಪಡಿಗಳು/ಪ್ರತ್ಯಾಯೋಜನೆ ಮತ್ತು ಹೊಸದಾಗಿ ಸೇರ್ಪಡೆಗೊಳಿಸಿ ಹೊರಡಿಸಲಾಗಿರುವ ಈ ಕೆಳಕಂಡ ಅಧಿಸೂಚನೆಗಳು

| ಕ್ರ.ಸಂ. | ಅಧಿಸೂಚನೆಗಳ ಸಂಖ್ಯೆ | ದಿನಾಂಕ |
|---|---|---|
| 01 | ಅಧಿಸೂಚನೆ (4-ಕೆ/2021 ಸಂಖ್ಯೆ ಆಇ 02 ಸಿಎಸ್‌ಎಲ್ 2021 | 10.02.2022 |
| | ಕೆ.ಜಿ.ಎಸ್.ಟಿ ಕಾನೂನು ತೆರಿಗೆ ಅಧಿಸೂಚನೆ | |
| 01 | ಅಧಿಸೂಚನೆ (01/2022) ಸಂಖ್ಯೆ: ಆಇ 07 ಸಿಎಸ್‌ಎಲ್ 2022 | 03.03.2022 |
| 02. | ಅಧಿಸೂಚನೆ (02/2022) ಸಂಖ್ಯೆ: ಆಇ 07 ಸಿಎಸ್‌ಎಲ್ 2022 | 31.03.2022 |
| 03. | ಅಧಿಸೂಚನೆ (03/2022) ಸಂಖ್ಯೆ: ಆಇ 07 ಸಿಎಸ್‌ಎಲ್ 2022 | 31.03.2022 |
| 04. | ಅಧಿಸೂಚನೆ (04/2022) ಸಂಖ್ಯೆ: ಆಇ 07 ಸಿಎಸ್‌ಎಲ್ 2022 | 03.06.2022 |
| 05 | ಅಧಿಸೂಚನೆ (05/2022) ಸಂಖ್ಯೆ: ಆಇ 07 ಸಿಎಸ್‌ಎಲ್ 2022 | 17.06.2022 |

| ಕೆ.ಜಿ.ಎಸ್.ಟಿ. ತೆರಿಗೆ ದರ ಅಧಿಸೂಚನೆ | | |
|---|---|---|
| 01. | ಅಧಿಸೂಚನೆ (01/2022) ಸಂಖ್ಯೆ: ಆಇ 20 ಸಿಎಸ್‌ಎಲ್ 2022 | 31.03.2022 |
| 02 | ಅಧಿಸೂಚನೆ (02/2022) ಸಂಖ್ಯೆ: ಆಇ 20 ಸಿಎಸ್‌ಎಲ್ 2022 | 31.03.2022 |

**II ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಬೃಹತ್ ಮಧ್ಯಮ ಕೈಗಾರಿಕೆಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002, ಪ್ರಕರಣ 21(2)ರ ಮೇರೆಗೆ:

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ನಿಯಮಗಳು, 2020ರ ನಿಯಮ 2ಕ್ಕೆ ತಿದ್ದುಪಡಿ, 8ಎ ಮತ್ತು 8ಬಿ ಹೊಸ ನಿಯಮಗಳ ಸೇರ್ಪಡೆ, 9ನೇ ನಿಯಮ ತಿದ್ದುಪಡಿ, 9ಎ ಮತ್ತು 9ಬಿ ನಿಯಮಗಳ ಸೇರ್ಪಡೆ ಹಾಗೂ ಹೊಸ ನಮೂನೆ IV, V ಮತ್ತು VI ರ ಸೇರ್ಪಡೆಗೊಳಿಸಿ ದಿನಾಂಕ 04.11.2020ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಸಿಐ 60 ಎಸ್‌ಪಿಐ 2020(ಇ).

**ಸಭಾಪತಿಯವರು:-** ಮಂಡಿಸಲಾಯಿತು.

**(...ಮುಂದು)**

**(995) 22-09-2022 (3.50) ಕೆಜಿ-ಎಕೆ (ಸಭಾಪತಿಯವರ ಉಪಸ್ಥಿತಿ)**

**ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ನಾಲ್ಕನೇ ಪಟ್ಟಿ**

**I ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯ ಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

**(1) ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ-25 (4) ರನ್ವಯ**

ಕರ್ನಾಟಕ ಮಾಹಿತಿ ಆಯೋಗದ 2019-20 ನೇ ಸಾಲಿನ ವಾರ್ಷಿಕ ವರದಿ.

**(2) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 ರ ಕಲಂ 68ಸಿ ಡಿ(2) ರನ್ವಯ**

ರಾಮದುರ್ಗ ನಗರ ಯೋಜನಾ ಪ್ರಾಧಿಕಾರದ 2019-20 ಮತ್ತು 2020-21 ನೇ ಸಾಲಿನ ವಾರ್ಷಿಕ ವರದಿಗಳು.

**(3) ಬೆಂಗಳೂರು ನೀರು ಸರಬರಾಜು ಒಳಚರಂಡಿ 1964 ರ ಕಲಂ 86ರ ಪ್ರಕಾರ**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ವರದಿಗಳು.

**(4) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1956ರ ಕಲಂ: 13ರನ್ವಯ**

ಬೆಂಗಳೂರು ಮಹಾನಗರ ಪ್ರದೇಶಾವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ.

**(5) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇದ 262(3) ರಂತೆ**

1. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

2. ರಾಯಚೂರು ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

**(6) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 300ರ ಉಪ ಪ್ರಕರಣ (5)ರನ್ವಯ**

1. ಧಾರವಾಡ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ.

2. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2021-21ನೇ ಸಾಲಿನ ವಾರ್ಷಿಕ ವರದಿ.

3. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ (ಮಂಗಳೂರು) 2021-22ನೇ ಸಾಲಿನ ವಾರ್ಷಿಕ ವರದಿ.

4. ಹಾಸನ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ

5. ಗದಗ ಜಿಲ್ಲಾ ಪಂಚಾಯತ್‌ನ 2021-22ನೇ ಸಾಲಿನ ವಾರ್ಷಿಕ ವರದಿ.

**II ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕಾಡಾ ಅಧಿನಿಯಮ 1980 ಕಲಂ 25ರನ್ವಯ**

ಕಾಡಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ, ಯಾದಗಿರಿ ಇವರ 2021-22ನೇ ಸಾಲಿನ ವಾರ್ಷಿಕ ವರದಿ.

**III ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ರಸ್ತೆ ಸಾರಿಗೆ ನಿಗಮಗಳ ಕಾಯ್ದೆ 1950 ಅಧಿನಿಯಮ 35(3)**

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2020-21ನೇ ಸಾಲಿನ ವಾರ್ಷಿಕ ವರದಿ.

**IV ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ,

**ಕಂಪನಿಗಳ ಕಾಯ್ದೆ 2013 ಕಲಂ. 394 (2)ರ ಪ್ರಕಾರ**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ 2019-20 ಮತ್ತು 2020-21ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

**V ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ರ ಕಲಂ 40(3) ರಂತೆ,**

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

**VI ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ನಗರಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 48 (5)ರನ್ವಯ** ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ **2015-16, 2017-18 ಮತ್ತು 2018-2019 ನೇ ಸಾಲಿನ** ಲೆಕ್ಕಪರಿಶೋಧನಾ ವರದಿಗಳು.

**VII ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಸೆಕ್ಷನ್ 65, ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಸೆಕ್ಷನ್ 83 ರಂತೆ**

ರಾಜ್ಯ ಅಂಗವಿಕಲ ವ್ಯಕ್ತಿಗಳ (ಸಮಾನ ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) 1999-2000 ರಿಂದ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

**<u>10. ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ</u>**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು** ತನ್ನ ಅವಧಿಯನ್ನು ಇನ್ನು 6 ತಿಂಗಳವರೆಗೆ ವಿಸ್ತರಿಸುವ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ; "**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಹಣವನ್ನು ಅವ್ಯವಹಾರ ಮಾಡಿರುವ ಸಂಬಂಧ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಅವಧಿಯನ್ನು ದಿನಾಂಕ 21-06-2022 ರಿಂದ 6 ತಿಂಗಳವರೆಗೆ** ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿದ್ದ ಅವಧಿಗೆ ಸದನದ ಸಹಮತಿ ಪಡೆಯುವುದು"

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಶೇಷ ಸದನ ಸಮಿತಿಯ ಕಾಲಾವಕಾಶ ವಿಸ್ತರಣೆಗೆ ಸದನ ಅನುಮೋದನೆ ನೀಡಿತು)**

11. **ನಿಯಮ 68 ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ**

**ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು.**

– – –

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಕಾರ್ಯಸೂಚಿಯ ಪ್ರಕಾರ, ಶಾಸನ ರಚನೆಯನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ನಿಯಮ 68 ರಡಿ ಮಾತನಾಡುವುದಕ್ಕೆ ಏಕೆ ಅವಕಾಶ ನೀಡಲಾಗಿದೆ ಎಂದರೆ, ಇನ್ನು ಕೆಲವು ಸದಸ್ಯರು ಮಾತನಾಡಬೇಕಾಗಿದೆ. ಅದಾದ ಮೇಲೆ ಮಾನ್ಯ ಗೃಹ ಸಚಿವರು ಉತ್ತರ ಕೊಡಬೇಕಾಗಿದೆ. ತಾವು ಒಂದು ನಿಲುವಳಿ ಸೂಚನಾ ಪ್ರಸ್ತಾವವನ್ನು ಕೊಟ್ಟಿದ್ದೀರಿ. ಅವರು ಒಂದು ನಿಲುವಳಿ ಸೂಚನಾ ಪ್ರಸ್ತಾವವನ್ನು ಕೊಟ್ಟಿದ್ದಾರೆ. ಅದನ್ನು ಸಹ ನಿಯಮ 68 ಕ್ಕೆ convert ಮಾಡಿದೆ. ಇನ್ನು discussion start ಆಗಿಲ್ಲ. ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿದೆ. ಹಾಗಾಗಿ, ದಯವಿಟ್ಟು ನಿಯಮ 68ರಡಿ ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರೇ, ತಾವೀಗ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ತಾವು ನಿಯಮ 68 ರಡಿ ಚರ್ಚೆಗೆ ಅವಕಾಶ ಕೊಡುವುದಕ್ಕೆ ನನ್ನ ವಿರೋಧ ಇಲ್ಲ. ಮೊದಲು ವಿಧೇಯಕದ ಮೇಲಿನ ಚರ್ಚೆಯನ್ನು ಮುಗಿಸಿದ್ದರೆ, ಆಮೇಲೆ ನಿಯಮ 68 ರಡಿಯ ವಿಷಯದ ಮುಂದುವರೆದ ಚರ್ಚೆಗೆ ಹೋಗಬಹುದಾಗಿತ್ತು. ಮೊದಲು University Bill ಮುಖ್ಯವಲ್ಲವೇ,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ನಾನು ಈಗ ಯು.ಬಿ.ವೆಂಕಟೇಶ್‌ರವರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಬಿಲ್ಲನ್ನು ಯಾವಾಗ ಚರ್ಚೆಗೆ ತೆಗೆದುಕೊಳ್ಳುತ್ತೀರಿ?

**(ಗೊಂದಲ)**

**ಸಭಾಪತಿಯವರು:–** ವೆಂಕಟೇಶ್‌ರವರೇ, ತಾವು ಈಗ ಮಾತನಾಡುತ್ತೀರೋ ಇಲ್ಲವೋ, ಇಲ್ಲವೆಂದರೆ ನಾನು ಬೇರೆಯವರ ಹೆಸರನ್ನು ಕರೆಯುತ್ತೇನೆ,

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವದ ವಿಧೇಯಕವಾದ್ದರಿಂದ ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಹಾಗಾಗಿ, ದಯವಿಟ್ಟು bill ಅನ್ನು ತೆಗೆದುಕೊಳ್ಳಿ.

(ಗೊಂದಲ)

**ಸಭಾಪತಿಯವರು:–** ಮರಿತಿಬ್ಬೇಗೌಡರವರೇ, ತಾವು ಕೇಳುತ್ತಿರುವಂತಹ bill pass ಆಗಿದೆ. ಮಾನ್ಯ ವೆಂಕಟೇಶ್‌ರವರೇ, ತಾವು ಮಾತನಾಡಿ. ತಾವು ಮಾತನಾಡಲಿಲ್ಲವೆಂದರೆ, ನಾನು ಬೇರೆಯವರಿಗೆ ಅವಕಾಶ ಕೊಡುತ್ತೇನೆ. ಇವತ್ತು ಮತ್ತು ನಾಳೆ ಮಧ್ಯಾಹ್ನದವರೆಗೆ ಮಾತ್ರ ಸದನದ

ಕಲಾಪಕ್ಕೆ ಸಮಯ ಇದೆ. ಇರುವಂತಹ ಸಮಯವನ್ನು ಈ ರೀತಿ ವ್ಯರ್ಥ ಮಾಡಿಕೊಂಡು ಮುಂದೆ ಹೋದರೆ ನಮ್ಮ ಅಜೆಂಡಾದಲ್ಲಿರುವ ವಿಷಯ ಯಾವುದು ಮುಗಿಯುವುದಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-**ಮಾನ್ಯ ಸಭಾಪತಿಯವರೇ, ನಾವು ಅಡ್ಡಿಪಡಿಸುತ್ತಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮರಿತಿಬ್ಬೇಗೌಡರವರೇ, ನಾನು ತಮಗೆ allow ಮಾಡಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ಯು.ಬಿ.ವೆಂಕಟೇಶ್‌ರವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಈ bill ಬಹಳ ಮಹತ್ವದ್ದು. ಹಾಗಾಗಿ, ಈ bill ಬಗ್ಗೆ ಚರ್ಚೆ ಆಗಬೇಕಲ್ಲವೇ, ಇದಕ್ಕೆ ಯಾವಾಗ ಅವಕಾಶ ಕೊಡುತ್ತೀರಿ ಹೇಳಿ.

**(ಗೊಂದಲ)**

**ಸಭಾಪತಿಯವರು:-** ಮರಿತಿಬ್ಬೇಗೌಡರೇ, ನಾನು ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. I have not called you to talk.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ತಾವು ಈ ರೀತಿ ಹೇಳಿದರೆ ಹೇಗೆ? ನಾನು ವಿಧೇಯಕದ ಬಗ್ಗೆ ಚರ್ಚೆಯಾಗಬೇಕೆಂದು ಕೇಳುತ್ತಿದ್ದೇನೆ. ಅದು ಅಜೆಂಡಾದಲ್ಲಿ ಇದೆ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, University Bill ನ ಕಥೆ ಏನು ಹೇಳಿ?

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ತಮಗೆ ಸದನ ನಡೆಯಬೇಕೆಂಬ ಉದ್ದೇಶ ಇದೆಯೋ ಇಲ್ಲವೋ ಹೇಳಿ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ವಿರೋಧ ಪಕ್ಷದ ನಾಯಕರಿಗೂ ಗೊತ್ತು, ಮಾನ್ಯ ಮರಿತಿಬ್ಬೇಗೌಡರಿಗೂ ಗೊತ್ತು. ತಾವು ವಿವಾದದ ಮಧ್ಯೆ bill ನ್ನು ತೆಗೆದುಕೊಂಡಿದ್ದೀರಿ, ಆಗ ಯಾರಾದರೂ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಚರ್ಚೆಗೆ ಅವಕಾಶ ಇತ್ತು. ಆ ಸಂದರ್ಭದಲ್ಲಿ ಸುಮ್ಮನಿದ್ದು, bill pass ಆದ ನಂತರ bill ಏಕೆ pass ಆಯಿತು ಎಂದು ಕೇಳಿದರೆ ಏನು ಅರ್ಥ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೆ, ಆ bill pass ಆಗಿದೆ..

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಬಾರದು.

**(ಗೊಂದಲ)**

**(ಮಾನ್ಯ ಸಭಾಪತಿಯವರ ನಿರ್ದೇಶನದ ಮೇರೆಗೆ ಈ ಹಂತದಲ್ಲಿ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಮಾತನಾಡಿದ್ದನ್ನು ನಡವಳಿಗಳಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬಿಜೆಪಿ ಸರ್ಕಾರ ಬಂದು ಮೂರು ವರ್ಷಗಳು ತುಂಬಿ 4ನೇ ವರ್ಷಕ್ಕೆ ಕಾಲಿಟ್ಟಿದೆ. ಎಲ್ಲರೂ ಉತ್ಸವಗಳನ್ನು ಮಾಡಿಕೊಂಡಿದ್ದಾರೆ. ಒಂದು ಒಳ್ಳೆಯ ವಿಚಾರವೆಂದರೆ, ಬರ ಬರುತ್ತದೆ. ಇಲ್ಲವೆಂದರೆ, ಅತಿವೃಷ್ಟಿ ಅನಾವೃಷ್ಟಿ ಆಗುತ್ತದೆ. ಈ ಎರಡನ್ನು ಇವರ ಕೈಯಲ್ಲಿ ಸರಿಯಾಗಿ control ಮಾಡುವುದಕ್ಕೆ ಆಗಲಿಲ್ಲ. ನಮ್ಮ ರಾಜ್ಯದ ಬಗ್ಗೆ ಎಲ್ಲರೂ ಹೇಳಿದ್ದಾರೆ. ನಾನು ಅದರ ಬಗೆ ಕೊನೆಗೆ ಬರುತ್ತೇನೆ. ಬೆಂಗಳೂರಿನಲ್ಲಿ ಅತಿಹೆಚ್ಚು ಮಳೆಯಾಗಿದೆ. ಮಳೆ ಬಂದಿದ್ದರಿಂದ ಹಳೆಯ ಬೆಂಗಳೂರು ಏನು ಆಗಲಿಲ್ಲ. ಆದರೆ, ಹೊಸ ಬೆಂಗಳೂರು ಎಲ್ಲೆಲ್ಲಿ ಇದೆ, ಆ ಕಡೆ ಸಮುದ್ರದ ತರಹ ಆಗಿತ್ತು. ಮಳೆ ನೀರಿನಿಂದ ರಸ್ತೆಗಳು, ಮನೆಗಳು ಸಮುದ್ರ ತರಹ ಆಗಿತ್ತು. ಮನೆಯೊಳಗೆ ಹಾವು, ಮೀನುಗಳು ಬಂದವು. ಅಲ್ಲದೇ, ಏನೇನು ರಸ್ತೆಗಳಲ್ಲಿದ್ದವೋ, ಅದೆಲ್ಲವೂ ಅವರವರ ಮನೆಗಳಿಗೆ ಬಂದವು. ಮೊದಲು ಇದ್ದಂತಹ ರಾಜಕಾಲುವೆಗಳು Bengaluru is a City of Lakes and a City of Gardens and it is called the Silicon City. ಇವರು ಬಂದ ಮೇಲೆ Garbage City, Sinking City. ಮೊದಲು ರಾಜಕಾಲುವೆ ಸುಮಾರು 80% ರಷ್ಟು ನೀರನ್ನು ಭೂಮಿಯಲ್ಲಿ ಹಿರಿಕೊಳ್ಳುತ್ತಿದ್ದವು. ಆದರೆ, ಇವತ್ತು ಸುಮಾರು 10% ನೀರನ್ನು ಸಹ ಭೂಮಿ ಹಿರಿಕೊಳ್ಳುತ್ತಿಲ್ಲ. ಜೊತೆಗೆ sewage ಅನ್ನು ಸಹ ರಾಜಕಾಲುವೆಗಳಿಗೆ connect ಮಾಡಿದ್ದಾರೆ. ನನ್ನನ್ನು ಕರೆದುಕೊಂಡು ಹೋದರೆ, ಬೇಕಾದಷ್ಟು ಕಡೆ ಈ ರೀತಿ ಇರುವುದನ್ನು ತೋರಿಸುತ್ತೇನೆ. ರಾಜಕಾಲುವೆಗಳಲ್ಲಿ ಮಳೆ ನೀರಿನ ಜೊತೆಗೆ sewage ಗಲೀಜು ಸಹ ಹೋಗುತ್ತದೆ. ಹಾಗಾಗಿ, ವಾಸನೆ ಬರುತ್ತದೆ. ಈ ಮೊದಲು ರಾಜಕಾಲುವೆಗಳ ಅಳತೆ 10 ಮೀಟರ್ ಅಥವಾ 20 ಮೀಟರ್ ಇತ್ತು, ಈಗ ಜನಸಂಖ್ಯಾ ಆಧಾರದ ಮೇಲೆ ಅದನ್ನು ಇನ್ನು ದೊಡ್ಡದು ಮಾಡಬೇಕಾಗಿತ್ತು. ಆದರೆ, ರಾಜಕಾಲುವೆಗಳನ್ನು ಮುಚ್ಚಿಕೊಂಡು ಅದರ ಮೇಲೆ ಮನೆಗಳನ್ನು ಕಟ್ಟಿ ಕೊನೆಗೆ ರಾಜಕಾಲುವೆಗಳಲ್ಲಿ ನೀರು ಹೋಗದಂತೆ ಮಾಡಿ ಆ ನೀರನ್ನು ಮನೆಯೊಳಗೆ ಬರುವಂತೆ ಮಾಡಿಕೊಂಡಿದ್ದೇವೆ, ಅದರ ಪರಿಸ್ಥಿತಿ ಯಾವ ರೀತಿ ಆಗಿದೆ ಎಂದರೆ,

ಕೆರೆಯ ನುಂಗಿ ಮನೆಯ ಮಾಡಿ,

ನೆರೆಗೆ ಅಂಜಿದಡೆಂತಯ್ಯ
ಕೆರೆ ನುಂಗಿದವರ ಮನೆ ನುಂಗಿತು ಸರ್ವಜ್ಞ.

ಮಾನ್ಯ ಸಭಾಪತಿಯವರೇ, ಬೆಂಗಳೂರು 709 square kilometres ಇದೆ. ಇಲ್ಲಿ ಸುಮಾರು ಒಂದೂವರೆ ಕೋಟಿ ಜನರು ಇಲ್ಲಿ ವಾಸ ಮಾಡುತ್ತಿದ್ದಾರೆ. This population is bigger than Israel and the area of Bengaluru is bigger than Singapore. ಇಲ್ಲಿ ಒಂದು ವರ್ಷಕ್ಕೆ ಮಳೆ ಒಂದು ಸಾವಿರ millimetre ಬರುತ್ತದೆ. 22 ಟಿ.ಎಂ.ಸಿ.ಯಷ್ಟು ಮಳೆ ಬರುತ್ತದೆ. ನಾವು ಸರಿಯಾಗಿ ನೀರನ್ನು ಹಿಡಿದು ಇಟ್ಟುಕೊಳ್ಳುತ್ತಿಲ್ಲ. ನಾವು ಸರಿಯಾಗಿ Rainwater Harvesting ಅನ್ನು ಮಾಡಿದರೆ, ನಮಗೆ ನೀರಿನ ಅವಶ್ಯಕತೆ ಬರುವುದಿಲ್ಲ. ಅಲ್ಲದೆ, ಇದು I.T. City, Silicon Valley. ಬೆಂಗಳೂರು ನಗರದಲ್ಲಿ ಸುಮಾರು 40 ಲಕ್ಷಕ್ಕೂ ಹೆಚ್ಚಿಗೆ ಜನರು 1 ಲಕ್ಷಕ್ಕೂ ಹೆಚ್ಚಿಗೆ ವೇತನ ಪಡೆಯುವವರು ಕೆಲಸ ಮಾಡುತ್ತಿದ್ದಾರೆ.

**(ಮುಂದು)**

**(996) 22-09-2022 (4.00) ಎಂ.ವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಯು.ಬಿ.ವೆಂಕಟೇಶ್ (ಮುಂದು...):-**

ನನ್ನ ಒಂದು ಎಸ್ಟಿಮೇಟ್ ಪ್ರಕಾರ. ನಾನು ಕಿಯೋನಿಕ್ಸ್‌ನಲ್ಲಿ ಛೇರ್ಮನ್ ಆಗಿದ್ದೆ. ಆಗ 30 ಲಕ್ಷವಿತ್ತು. By the year 2022 four million ಆಗುತ್ತದೆಂದು ಎಸ್ಟಿಮೇಟ್ ಮಾಡಿದ್ದೆವು. ಕರ್ನಾಟಕ ರಾಜ್ಯದ 2/3$^{rd}$ of the revenue ಬೆಂಗಳೂರಿನಿಂದ ಬರುತ್ತದೆ. ಅದೇ ರೀತಿ ಭಾರತದ ಎರಡನೇ ರೆವಿನ್ಯೂ ಬೆಂಗಳೂರಿನಿಂದ ಬರುತ್ತದೆ. ಅಂದರೆ, ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಕ್ಕೆ ಮೂರು ಲಕ್ಷ ಕೋಟಿ ರೂಪಾಯಿ ಸಂಗ್ರಹವಾಗುತ್ತದೆ. ಆದರೂ ಸಹ ನಾವು ಬೆಂಗಳೂರನ್ನು ಯಾವ ಪರಿಸ್ಥಿತಿಯಲ್ಲಿ ಇಟ್ಟಿದ್ದೇವೆ. ಎಲ್ಲರೂ ಕಳ್ಳರು ಎನ್ನುವುದು, ಐ.ಟಿ.ಯವರು ಕಳ್ಳರು ಎನ್ನುವುದು, ಬಿ.ಟಿ.ಯವರು ಕಳ್ಳರು ಎನ್ನುವುದು, ಹಾಗಾದರೆ ಅವರುಗಳು

ಏನಾದರೂ ಪಾಪ ಮಾಡಿಕೊಂಡು ಇಲ್ಲಿಗೆ ಬಂದಿದ್ದಾರೆಯೇ? ಬೆಂಗಳೂರು ಸಿಟಿಯಲ್ಲಿ ಒಂದೆ ಕಡೆ 500 Research and Development Centres ಇರುವುದು. ಅದೇ ರೀತಿ ಸುಮಾರು 450 Multinational Companies ಇವೆ. ಪ್ರಪಂಚದ ಇದು ಒಂದೆ ಸಿಟಿಯಲ್ಲಿ ಈ ರೀತಿ ಇರುವುದು. ಇಂತಹ ಸಿಟಿಯನ್ನು ನಾವು ಹೇಗೆ ಇಡಬೇಕು. ಆದರೆ, ಅದನ್ನು ಹೇಗೆ ಇಟ್ಟಿದ್ದೇವೆ ಎಂದು ಬಹಳ ಯೋಚನೆ ಮಾಡಬೇಕಾಗಿದೆ. ಏಕೆಂದರೆ, 830 ರಿಂದ 840 ಕಿಲೋಮೀಟರ್ ಇರುವಂತಹ ರಾಜಕಾಲುವೆಗೆ, ಇಲ್ಲಿಯವರೆಗೆ ರಾಜಕಾಲುವೆ ಮಾಡಿರುವುದು ಕೇವಲ 350 ರಿಂದ 400 ಕಿಲೋಮೀಟರ್ ಮಾತ್ರ. ಇನ್ನು ಶೇಕಡಾ 50ರಷ್ಟು ಕೆಲಸವೇ ಆಗಿಲ್ಲ. ಅದು ನಮ್ಮ ಸರ್ಕಾರವೇ ಇರಲಿ, ಅವರ ಸರ್ಕಾರವೇ ಇರಲಿ. ಕೋರ್ಟ್‌ಗೆ ಹೋಗುತ್ತಾರೆ ಆದೇಶ ತರುತ್ತಾರೆ. ಅವರು ಯಾವುದಾದರು ಆದೇಶವನ್ನು ತೆಗೆದುಕೊಂಡು ಬಂದು, ಈಗ ಎಲ್ಲೆಲ್ಲಿ ರಾಜಕಾಲುವೆ ಇದೆ, ಅಲ್ಲಿಗೆಲ್ಲ ಬುಲ್ಡೋಜರ್ ಮತ್ತೊಂದನ್ನು ನುಗ್ಗಿಸಿ, ನೀರು ಹೋಗುವ ರೀತಿ ಮಾಡಿದರೆ, ಅವರಿಗೆ ಪುಣ್ಯ ಬರುತ್ತದೆ. ಈಗ ಬೇಕಾದಷ್ಟು ಕಡೆಗಳಲ್ಲಿ ಮಳೆಯ ನೀರನ್ನು ಹಿಡಿದು ಇಟ್ಟರೆ, ಸ್ಯಾಂಕಿಟ್ಯಾಂಕ್ ರೀತಿ ಬೇರೆ ಕಡೆಗಳಲ್ಲಿ ಬೇಕಾದಷ್ಟು ಸರ್ಕಾರಿ ಜಾಗಗಳಿವೆ. ಅವುಗಳ ಹೂಳನ್ನು ಎತ್ತಿ, ಅಲ್ಲಿಗೆ ಮಳೆ ನೀರು ಬರುವ ರೀತಿ ಮಾಡಿದರೆ, ಸ್ವಚ್ಛವಾದ ಕೆರೆಗಳು ನಿರ್ಮಾಣವಾಗುತ್ತವೆ ಮತ್ತು ಆಗ ಅಲ್ಲಿಗೆ ಪಕ್ಷಿಗಳು ಬರುತ್ತವೆ. ಮತ್ತೆ ಅದೇ ರೀತಿ ಅಲ್ಲಿ ಜನರು ವಾಕಿಂಗ್ ಮಾಡುತ್ತಾರೆ. ಈ ಸರ್ಕಾರಕ್ಕೆ ಕೆಲಸದ ಮೇಲೆ ಆಸಕ್ತಿ ಕಡಿಮೆ ಇದೆ. ಒಂದು ಕಾಲದಲ್ಲಿ ಬಿ.ಬಿ.ಎಂ.ಪಿ.ಯಲ್ಲಿ 48 ಜನ ಸದಸ್ಯರಿದ್ದರು, ಆದರೆ, ಇವತ್ತು 243 ಜನರಾಗಿದ್ದಾರೆ. ಮೊದಲು 198 ಜನ ಸದಸ್ಯರಿದ್ದರು, ಈಗ ಅದನ್ನು 243 ಜನ ಸದಸ್ಯರು ಎಂದು ಮಾಡಿದ್ದಾರೆ. ನಾವು ಈಗ ಚುನಾವಣೆ ನಡೆಸುತ್ತೇವೆ, ಈ ವಿಧೇಯಕವನ್ನು ಪಾಸ್ ಮಾಡಿಕೊಡಿ ಎಂದು ಮಾನ್ಯ ಕಾನೂನು ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರು ಕೇಳಿದರು. ಆಗ ಆ ಜನಪ್ರತಿನಿಧಿಗಳು ಏನಾದರೂ ಇದ್ದಿದ್ದರೆ, ಆ ಭಾಗದ ಜನರು ಹೋಗಿ ಅವರ ಗಲ್ಲಾಪಟ್ಟಿಯನ್ನು ಹಿಡಿದುಕೊಳ್ಳುತ್ತಿದ್ದರು. ಅಂದರೆ, ಏನಯ್ಯ ನಾವು ನಿಮಗೆ ಓಟ್ ಹಾಕಿದ್ದೇವೆ, ಬಂದು ಏನಾದರೂ ಮಾಡು ಎನ್ನುತ್ತಿದ್ದರು. ಈಗ ನಿಮ್ಮನ್ನು ಹಿಡಿಯುವವರು ಯಾರು? ಬೆಂಗಳೂರಿಗೆ ಒಬ್ಬ ಮಂತ್ರಿ ಇಲ್ಲ. ಇರುವಂತಹ 7 ರಿಂದ 8 ಜನ ಮಂತ್ರಿಗಳು ಬೆಂಗಳೂರಿನಿಂದ ಹೊರಗೆ ಇದ್ದಾರೆ. ಈಗ ಬೆಂಗಳೂರಿಗೆ ಸಂಬಂಧಪಟ್ಟಂತೆ ಯಾರಾದರೂ ಹಾಕಿಸಿಕೊಂಡಿದ್ದರೆ, ಮಾನ್ಯ ಎನ್.ನಾಗರಾಜು (ಎಂ.ಟಿ.ಬಿ.) ರವರೆ, ಈ ರೀತಿ ಇದೆ ತಾವು ಇಂತಹ ರಸ್ತೆಗೆ ಬನ್ನಿ ಎಂದು ಹೇಳಬಹುದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಸರ್ಕಾರವನ್ನು ನೋಡುವುದೆ, ಮಂತ್ರಿಗಳನ್ನು ನೋಡುವುದೆ, ಶಾಸಕರನ್ನು ನೋಡುವುದೆ ಅಥವಾ

ವಿಧಾನ ಪರಿಷತ್ತಿನ ಸದಸ್ಯರನ್ನು ನೋಡುವುದೆ. ಮಾನ್ಯ ಮುಖ್ಯಮಂತ್ರಿಗಳನ್ನು ಬೆಂಗಳೂರಿನಲ್ಲಿ ಒಂದು ಬಸ್ಸ್‌ನಲ್ಲಿ ಕರೆದುಕೊಂಡು ಹೋಗಿ, ಒಂದು ನಿಮಿಷದಲ್ಲಿ ಬರುತ್ತೀರಿ. ಈಗ ಬೆಂಗಳೂರು ನೋಡಬೇಕಾದರೆ ಮತ್ತು ಅಲ್ಲಿ ಏನೆಲ್ಲಾ ಇದೆ ಎಂದು ಜನರ ಕಷ್ಟಸುಖ ಅರಿತುಕೊಳ್ಳಬೇಕಾದರೆ, ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಸಹ ಅರ್ಧ ದಿವಸ ಹೋಗಬೇಕು. ಈಗ ಯಾರೋ ಹತ್ತು ಜನ ಬಂದು, ಒಂದು ಬಸ್ಸ್ ಮಾಡುತ್ತಾರೆ, ಅವರ ವಿಧಾನಸಭಾ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ, ಎಲ್ಲೋ ಒಂದು ಕಡೆ ತೋರಿಸಿಕೊಂಡು ಬಂದು ಬಿಡುತ್ತಾರೆ. ಅಂದರೆ, ಮಾನ್ಯ ಮುಖ್ಯಮಂತ್ರಿಗಳಂದ ನಗರ ಪ್ರದಕ್ಷಿಣೆ. ಆಗ ಅವರಿಗೆ ಜನರ ಕಷ್ಟ ಅರ್ಥವಾಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೆ ತಾವು ಇನ್ನು ಇಷ್ಟು ನಿಮಿಷಗಳ ಕಾಲ ಮಾತನಾಡುತ್ತೀರಿ?

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಶುರುನೇ ಮಾಡಿಲ್ಲ.

**ಸಭಾಪತಿಯವರು:-** ತಾವು ತಮ್ಮ ಮಾತನ್ನು ಯಾವಾಗ ಮುಗಿಸಬೇಕೆಂದು ಇದ್ದೀರಿ. ನನಗೆ ಏನು ಅಭ್ಯಂತರವಿಲ್ಲ. ತಾವು ಹೇಗೆ ಹೇಳುತ್ತೀರಿ, ಆ ರೀತಿ ಮಾಡಬಹುದು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಬೇಗ ಮುಗಿಸುತ್ತೇನೆ.

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. I will be very happy. ನನ್ನದೇನು ಅಭ್ಯಂತರವಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೆ, ನನಗೆ ನೀಡಿರುವ ಪಟ್ಟಿಯ ಪ್ರಕಾರ ಕಾಂಗ್ರೆಸ್‌ನಿಂದ ಇನ್ನು 12 ಜನ ಸದಸ್ಯರು ಮಾತನಾಡಬೇಕು. ಜಾತ್ಯತೀತ ಜನತಾ ದಳದಿಂದ ಇನ್ನು 5 ಜನ ಸದಸ್ಯರು ಮಾತನಾಡಬೇಕು. ಭಾರತೀಯ ಜನತಾ ಪಕ್ಷದಿಂದ ಇನ್ನು 4 ಜನ ಸದಸ್ಯರು ಮಾತನಾಡಬೇಕು. ಅಂದರೆ, ಇನ್ನು 19 ಜನರು ಮಾತನಾಡಬೇಕು. ನಾನು ದಯವಿಟ್ಟು ಮಾನ್ಯ ಸದಸ್ಯರಿಗೆ ವಿನಂತಿ ಮಾಡುತ್ತೇನೆ. ತಾವು ತಮ್ಮ ಮುಖ್ಯ ಸಚೇತಕರ ಮುಖಾಂತರ shortlist ಮಾಡಿ, time fix ಮಾಡಿ ನನಗೆ ನೀಡಿದರೆ, ಅಂದರೆ ನನ್ನ ಉದ್ದೇಶವೇನೆಂದರೆ, ನಿಮ್ಮ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬರಲಿ ಎಂದು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಕಾಂಗ್ರೆಸ್ ಪಕ್ಷದಿಂದ ಮಾನ್ಯ ಯು.ಬಿ.ವೆಂಕಟೇಶ್ ಮತ್ತು ಮುಖ್ಯ ಸಚೇತಕರಾದ ಪ್ರಕಾಶ್ ಕೆ. ರಾಥೋಡ್ ಈ ಇಬ್ಬರು ಸದಸ್ಯರು ಮಾತ್ರ ಮಾತನಾಡುತ್ತಾರೆ. ನಮ್ಮ ಪಕ್ಷದ ಬೇರೆ ಯಾವ ಸದಸ್ಯರು ಸಹ ಮಾತನಾಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾತನಾಡುವುದಕ್ಕೆ ಇನ್ನು ಎಷ್ಟು ಸಮಯ ಬೇಕು?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಕಾಲು ಗಂಟೆಯಲ್ಲಿ ಮುಗಿಸಲೇ, ಅರ್ಧ ಗಂಟೆಯಲ್ಲಿ ಮುಗಿಸಲೇ ಅಥವಾ ಒಂದು ಗಂಟೆಯಲ್ಲಿ ಮುಗಿಸಲೇ ಎಂದು ತಾವೇ ಹೇಳಿ.

**ಸಭಾಪತಿಯವರು:-** ತಾವು ತಮ್ಮ ಮಾತನ್ನು ಕೇವಲ ಐದು ನಿಮಿಷದಲ್ಲಿ ಮುಗಿಸಿಬಿಡಿ

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ನಾನು ಮಾತನಾಡುವುದೇ ಇಲ್ಲ.

**ಸಭಾಪತಿಯವರು:-** ತಾವು ಕೇಳಿದ್ದಕ್ಕೆ, ನಾನು ಆ ರೀತಿ ಹೇಳುತ್ತಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದಂತೆ, ಬೆಂಗಳೂರು ನಗರ ಸಿಂಗಾಪುರಕ್ಕಿಂತ ಬಹಳ ದೊಡ್ಡದು ಮತ್ತು ಇಸ್ರೇಲ್ ದೇಶಕ್ಕಿಂತ ಜನಸಂಖ್ಯೆಯಲ್ಲಿ ಜಾಸ್ತಿ ಇದೆ.

**ಸಭಾಪತಿಯವರು:-** ನಾನು ಅದಕ್ಕೆ ಇಲ್ಲವೆಂದು ಹೇಳಿಯೇ ಇಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ತಾವು ಈಗ ನಾನು ಮಾತನಾಡುವುದಕ್ಕೆ ಬಿಡಿ. ನಾನು ನನ್ನ ಮಾತನ್ನು ಕಾಲುಗಂಟೆಯಲ್ಲಿ ಮುಗಿಸುತ್ತೇನೆ. ಈಗ ಈ ಬೆಂಗಳೂರನ್ನು ನೋಡಿಕೊಳ್ಳುವುದಕ್ಕೆ ಬಿ.ಬಿ.ಎಂ.ಪಿ.ಯಲ್ಲಿ ಒಬ್ಬರು ಮುಖ್ಯ ಕಮೀಷನರ್ ಇದ್ದಾರೆ. ಮೊದಲು 198 ವಾರ್ಡ್‌ಗಳಿದ್ದವು, ಈಗ 243 ವಾರ್ಡ್‌ಗಳಾಗಿವೆ. ಒಬ್ಬ ಕಮೀಷನರ್ ಹೇಗೆ ಕೆಲಸ ಮಾಡುವುದಕ್ಕೆ ಆಗುತ್ತದೆ? ಈಗ ಜೆ.ಸಿ.ಗಳು ಏನೇನು ಮಾಡುತ್ತಾರೆ ಮತ್ತು ಅವರ ಜಾಗಕ್ಕೆ ಐ.ಎ.ಎಸ್. ಮತ್ತು ಕೆ.ಎ.ಎಸ್. ನವರನ್ನು ಹಾಕಿ ಎಂದು ನಾನು ಮೊನ್ನೆಯ ದಿವಸ ಸಹ ಹೇಳಿದ್ದೇನೆ. ಅಧಿಕಾರ

ಮಾಡುವಂತಹವರು ಸ್ವಲ್ಪ ಕೇಳುವಂತಹರಾಗಿ ಇರಬೇಕಲ್ಲವೇ? ಈಗ ಎಂಟು ಡಿವಿಜನ್ ಮಾಡಿದ್ದಾರೆ. ಎಲ್ಲಿ ನೋಡಿದರು ಸಹ ಎರವಲು ಸೇವೆ. ಎರವಲು ಸೇವೆಯವರಿಗೆ ಸರಿಯಾದ ವಿದ್ಯಾರ್ಹತೆಯೇ ಇರುವುದಿಲ್ಲ. ಅಂದರೆ, ಕೆ.ಎಸ್.ಐ.ಐ.ಡಿ.ಸಿ.ಯಿಂದ ಮತ್ತು ಫೇಡರೇಷನ್‌ಗಳಿಂದ ಇಲ್ಲಿಗೆ ಜೆ.ಸಿ.ಯಾಗಿ ಬಂದು ಕುಳಿತುಕೊಳ್ಳುತ್ತಾರೆ. ಈಗ ಅವನು ನಾಲ್ಕು ಲಕ್ಷ ಲಂಚ ತೆಗೆದುಕೊಳ್ಳುವಾಗ ರೆಡ್‌ಹ್ಯಾಂಡ್ ಆಗಿ ಸಿಕ್ಕಿಹಾಕಿಕೊಳ್ಳುತ್ತಾನೆ. ಈಗ ಯಾರಾದರೂ selected ಜನರನ್ನು, ಹಿಂದೆ ನಾನು ಹೇಳಿದಂತೆ, ಮಹಾರಾಷ್ಟ್ರದಲ್ಲಿ Municipal Administration ಗೆ ಒಂದು cadre ಇದೆ. ಅದಕ್ಕೆ ಒಂದು ಪ್ರತ್ಯೇಕವಾದ ಪರೀಕ್ಷೆ ಇದೆ. ಅದು ಪಾಸ್ ಆದರೆ ಮಾತ್ರ he will be eligible for that post. ಇವತ್ತಿನ ವೈಜ್ಞಾನಿಕ ಯುಗದಲ್ಲಿ ಸರ್ಕಾರ ಏನಾದರೂ ಸ್ವಲ್ಪ ಬದಲಾವಣೆ ಮಾಡಬೇಕು. ಈಗ ಯಾರೋ ಬರುತ್ತಾರೆ, ಅವರು ದುಡ್ಡು ಕೊಡುತ್ತಾರೆ, ಹುದ್ದೆಯನ್ನು ಹಾಕಿಸಿಕೊಳ್ಳುತ್ತಾನೆ. ಅವನು ದುಡ್ಡು ತಿಂದು, ಈ ಜಾಗವನ್ನು ಹಾಳು ಮಾಡಿ ಹೋಗುತ್ತಾನೆ. ಅವನಿಗೆ ಏನು ಮಾಡಬೇಕೆಂದು ಯಾವುದೇ ರೀತಿಯ commitment ಇರುವುದಿಲ್ಲ. ಏಕೆಂದರೆ, he won't be aware of his tenure. ಅವನನ್ನು ಒಂದು ವರ್ಷಕ್ಕೆ ತೆಗೆಯುತ್ತಾರೋ, ಇನ್ನೊಬ್ಬ ಡಬಲ್ ದುಡ್ಡು ಕೊಟ್ಟರೆ ಅವನನ್ನು ನಾಳೆಯೇ ತೆಗೆಯುತ್ತಾರೋ? ಅವನು ಎಷ್ಟು ಬೇಗ ಕಿತ್ತುಕೊಂಡು ಹೋಗಬಹುದು ಎನ್ನುವುದರಲ್ಲಿ, ಏನೇನು ಮಾಡಬೇಕೋ, ಏನೇನು ಮಾಡಬಾರದೋ ಅದೆಲ್ಲವನ್ನು ಮಾಡಿ ಹೊರಟು ಹೋಗುತ್ತಾನೆ. ಬೆಂಗಳೂರು ನಗರದ ಪಾರ್ಕ್‌ಗಳಿಗೆ ಸಂಬಂಧಪಟ್ಟಂತೆ ಬೆಳಗ್ಗೆ ಚುಕ್ಕೆ ಗುರುತಿನ ಪ್ರಶ್ನೆ ಹಾಕಿದ್ದೆ. ಆದರೆ, ಬೆಳಗ್ಗೆ ಸದನದಲ್ಲಿ ಗಲಾಟೆಯಾದ್ದರಿಂದ ಉತ್ತರ ಬಂದಿರಲಿಲ್ಲ. ಈಗ ಬೆಂಗಳೂರು ನಗರದಲ್ಲಿ ಸುಮಾರು 400 ಪಾರ್ಕ್‌ಗಳಿವೆ ಎಂದು ಮಾಹಿತಿ ನೀಡಿದ್ದಾರೆ. ಆದರೆ, ಆ ಪಾರ್ಕ್‌ಗಳ ನಿರ್ವಹಣೆ ಯಾರು ಮಾಡುತ್ತಾರೆ? ಸರ್ಕಾರಕ್ಕೆ ಏನು ಬದ್ಧತೆ ಇದೆ? ಸರ್ಕಾರ ಹತ್ತು, ಇಪ್ಪತ್ತು ಮತ್ತು ಐವತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆ ರೀತಿ ಖರ್ಚು ಮಾಡಿದ ಮೇಲೆ ಅದಕ್ಕೆ ಮುಂದೆ ಏನು? ಅವುಗಳಿಗೆ ಬಿ.ಬಿ.ಎಂ.ಪಿ.ಯವರು ಇಲ್ಲ ಮತ್ತು ಕಂಟ್ರಾಕ್ಟರ್‌ಗಳು ಸಹ ಪತ್ತೆ ಇಲ್ಲ. ಮೊದಲು ನಾವು ಚಿಕ್ಕವರಿದ್ದಾಗ ಜಾರುಬಂಡಿ ಆಡಬೇಕಾದರೆ, ಆ ಜಾರುಬಂಡಿ ಸಿಮೆಂಟ್‌ನಿಂದ ಇರುತ್ತಿತ್ತು. ಆದರೆ, ಈಗ ಎಲ್ಲವನ್ನು ಸಹ ಪ್ಲಾಸ್ಟಿಕ್ ತಂದು ಇಟ್ಟಿದ್ದಾರೆ. ಅವುಗಳು ಆರು ತಿಂಗಳಿಗೆ ಮಳೆ ಮತ್ತು ಬಿಸಿಲಿಗೆ ಯಾವುದೋ ರೋಗ ಬಂದ ರೀತಿಯಾಗಿ, ಬಿಟ್ಟುಕೊಂಡು ಬಿಡುತ್ತವೆ. ಅವುಗಳ ಮೇಲೆ ಜಾರಿದರೆ, ಅಲ್ಲಿ ಜಾರುವುದೇ ಇಲ್ಲ. ವೈಜ್ಞಾನಿಕವಾಗಿ ಮಾಡಿ ಎಂದು ಇವರಿಗೆ ಯಾರು ಹೇಳುವುದು? ಹಳೆಯ ಕಾಲದಲ್ಲಿ ಒಂದು ಜಾರುಬಂಡಿ ಎಂದರೆ, ಅದಕ್ಕೆ ಸಿಮೆಂಟ್ ಹಾಕಿ ಜಾರುವಂತೆ ಮಾಡಿ, ಅದರಲ್ಲಿ ಮಕ್ಕಳೆಲ್ಲರೂ

ಆಟವಾಡುತ್ತಿದ್ದರು. ಈಗ ಬೆಂಗಳೂರಿನಲ್ಲಿ ಶೇಕಡಾ 21ರಷ್ಟು ಪಾರ್ಕ್‌ಗಳು ಇಲ್ಲ. ಈಗ ಇರುವಂತಹ ಪಾರ್ಕ್‌ಗಳಲ್ಲಿ ಬಹಳ ಅದ್ವಾನವಿದೆ. ಈಗ ಇವರು ಎರಡು-ಮೂರು ವರ್ಷದಿಂದ ಮಳೆಗೆ ಖರ್ಚು ಮಾಡಿದ್ದೇವೆಂದು ಹೇಳಿದರು. ಸರ್ಕಾರಕ್ಕೆ ಸಂಬಂಧಪಟ್ಟಂತೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಕಳೆದ ಮೂರು ವರ್ಷದಿಂದ ಅಧಿಕಾರದಲ್ಲಿ ಇವರೆ ಇದ್ದಾರೆ. ಈಗ 2019-20ನೇ ಸಾಲಿನಲ್ಲಿ ಬರಕ್ಕೆ, ಇನ್ನಿತರ ಅವಗಡಗಳು ಸಂಭವಿಸಿದರೆ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಸುಮಾರು 35 ಸಾವಿರ ಕೋಟಿ ರೂಪಾಯಿ ಪರಿಹಾರ ಹಣವನ್ನು ಘೋಷಿಸಿಸುತ್ತಾರೆ. ಆದರೆ, ಸರ್ಕಾರ ಶೇಕಡಾ 8.32 ರಷ್ಟು ಮಾತ್ರ ಹಣ ಖರ್ಚು ಮಾಡಿದ್ದಾರೆ. ಅಂದರೆ, 2,924/- ಕೋಟಿ ರೂಪಾಯಿಗಳು. ಸುಮಾರು 35 ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಅಂದಾಜು ಮಾಡಿ, ಕೇವಲ ರೂ.2,924/- ಕೋಟಿ ಕೊಟ್ಟರೆ, ಏನಾಗುತ್ತದೆ? 2020-21ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಘೋಷಿಸಿರುವ ಅಂದಾಜು ನಷ್ಟದ ಮೊತ್ತ, 29,941/- ಕೋಟಿ ರೂಪಾಯಿಗಳು. ಅಂದರೆ, ಎಸ್.ಡಿ.ಆರ್.ಎಫ್.ನಿಂದ 790 ಕೋಟಿ ರೂಪಾಯಿಗಳು, ರಾಜ್ಯದ ಪಾಲು 263 ಕೋಟಿ ರೂಪಾಯಿ, ರಾಜ್ಯದಿಂದ ಬಿಡುಗಡೆಯಾಗಿದ್ದು 492 ಕೋಟಿ ರೂಪಾಯಿಗಳು. ಒಟ್ಟು 2,864 ಕೋಟಿ ರೂಪಾಯಿಗಳು. ಇಲ್ಲಿ 22 ಸಾವಿರ ಕೋಟಿ ರೂಪಾಯಿ ಕಡಿಮೆಯಾಗಿದೆ. ಅಂದರೆ, ಶೇಕಡಾ 11ರಷ್ಟು ಮಾತ್ರ. 2021-22ನೇ ಸಾಲಿನಲ್ಲಿ 18,292/- ಕೋಟಿ ರೂಪಾಯಿಗಳಷ್ಟು ನಷ್ಟವೆಂದು ಘೋಷಣೆ ಮಾಡುತ್ತಾರೆ. ಆದರೆ, ಬಿಡುಗಡೆಯಾಗಿದ್ದು 4,500/- ಕೋಟಿ ರೂಪಾಯಿಗಳು ಮಾತ್ರ. ಅಂದರೆ, ಶೇಕಡಾ 24ರಷ್ಟು ಇದೆ. ಈ ಮೂರು ವರ್ಷದಿಂದ ಸುಮಾರು 78 ಸಾವಿರ ಕೋಟಿ ರೂಪಾಯಿ ನಷ್ಟವಾದರೆ, ಸರ್ಕಾರ ಬಿಡುಗಡೆ ಮಾಡಿರುವುದು ಕೇವಲ 10 ಸಾವಿರ ಕೋಟಿ ರೂಪಾಯಿ ಮಾತ್ರ. ಇದು ಸರ್ಕಾರದ ಅಂಕಿಅಂಶ, ನಾನು ಯಾವುದನ್ನು ಉತ್ಪ್ರೇಕ್ಷೆಯಿಂದ ಹೇಳುತ್ತಿಲ್ಲ. ಸರ್ಕಾರದಿಂದ ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿದ್ದೆ. ಅದರಲ್ಲಿ ಕೊಟ್ಟಿರುವಂತಹ figure, ಪ್ರತಿವರ್ಷ ಪ್ರವಾಹ ಬಂದಾಗಲೂ ಸಹ ರಾಜ್ಯ ಸರ್ಕಾರ ಮಾಡಿರುವ ಅಂದಾಜಿಗೂ ಸರ್ಕಾರ ಬಿಡುಗಡೆ ಮಾಡಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದ್ದು, ಸರ್ಕಾರದ ಕಾರ್ಯವೈಖರಿಯು ಸಾರ್ವಜನಿಕ ವಲಯದಲ್ಲಿ ತೀವ್ರ ಮುಜಗರಕ್ಕೆ ಈಡಾಗಿದೆ. ಮೊದಲು ಬೆಂಗಳೂರಿಗೆ ಮಳೆ ಬರುತ್ತದೆ ಎಂದರೆ, ಅದಕ್ಕೆ ಮೊದಲೇ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದರು. ಮುಂದಿನ ಆರು ದಿನ ಅಥವಾ ಹತ್ತು ದಿನಗಳಂದು ಬಹಳ ಮಳೆಯಾಗುತ್ತದೆ ಎಂದು ಹವಮಾನ ಇಲಾಖೆಯವರು ಹೇಳುತ್ತಿದ್ದರು. ಆಗ ಸರ್ಕಾರ ಐ.ಟಿ.

ಕಂಪನಿಯವರಿಗೆಲ್ಲಾ work from home ಮಾಡಿ, ದಯವಿಟ್ಟು ಯಾರು ಕೆಲಸಕ್ಕೆ ಬರುವುದು ಬೇಡ, ಒಂದು ವಾರ rest ತೆಗೆದುಕೊಳ್ಳಿ ಎಂದು ಸರ್ಕಾರ ಹೇಳಬಹುದಾಗಿತ್ತು, ಆದರೆ ಸರ್ಕಾರ ಅದನ್ನು ಏಕೆ ಮಾಡಲಿಲ್ಲ. ಅವರೆಲ್ಲರೂ ಸತ್ತು ಸುಣ್ಣವಾಗಿ, ಬೋಟ್‌ಗಳಲ್ಲಿ ಹೋದವರು ಒಂದೊಂದು ವಾರ ಮನೆಗೆ ಬಾರದೆ, ಸುಮಾರು 225 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಐ.ಟಿ. ಕಂಪನಿಯವರು ಸರ್ಕಾರಕ್ಕೆ ಪತ್ರ ಬರೆಯುತ್ತಾರೆ. ಅದರಲ್ಲಿ ಒಬ್ಬ ಗೌರವಾನ್ವಿತ ಮೋಹನದಾಸ್ ಪೈ ಯವರು ಸರ್ಕಾರ ಮಾಡುತ್ತಿರುವುದು ಸರಿಯಲ್ಲವೆಂದು ಹೇಳುತ್ತಾರೆ. ಆಗ ಅವರ ಮೇಲೆ ಸರ್ಕಾರದವರೆಲ್ಲರೂ ಮುಗಿ ಬೀಳುತ್ತಾರೆ. ಈಗ ಯಾರಾದರೂ ಏನಾದರೂ ಸಲಹೆ ನೀಡಿದರೆ, ಈಗ ಇಷ್ಟೆಲ್ಲಾ ಆಗಿರುವುದರಿಂದ, ಅವರು ಒಂದು ಸರ್ವಪಕ್ಷ ಸಭೆ ಕರೆದು, ಇದಕ್ಕೆ ಏನು ಮಾಡಬೇಕೆಂದು ಏಕೆ ಮಾಡಬಾರದಾಗಿತ್ತು?

**( ಮುಂದು...)**

(997) 22.09.2022 04.10 LL-VK

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಯು.ಬಿ. ವೆಂಕಟೇಶ್(ಮುಂದು):-**

ಯಾರಾದರೂ ಏನಾದರೂ ಸಲಹೆ ನೀಡಿದರೆ ಅದನ್ನು ಕೇಳಬೇಕಲ್ಲವೇ? ಇಷ್ಟೆಲ್ಲಾ ಆದಾಗ, ಒಂದು ಸರ್ವ ಪಕ್ಷ ಸಭೆ ಕರೆದು, ಈ ಸಮಸ್ಯೆಗೆ ಏನು ಮಾಡಬೇಕು ಎಂದು ಏತಕ್ಕೆ ಮಾಡಬಾರದಿತ್ತು? ಆಯಿತು. ತಾವು ನಮ್ಮ ಸಲಹೆ ತೆಗೆದುಕೊಳ್ಳಬೇಡಿ. ಆದರೆ, ಕನಿಷ್ಠ ಪಕ್ಷ ನಮ್ಮ ಸಲಹೆಯನ್ನಾದರೂ ಕೇಳಬಹುದಿತ್ತಲ್ಲವೇ? ಮಳೆ ಬರುತ್ತದೆ ಎಂದು ವಾರ, ಹದಿನೈದು ದಿನಕ್ಕೆ ಮೊದಲೇ ಮುನ್ಸೂಚನೆ ನೀಡುತ್ತಿದ್ದಾರೆ. ಭೀಕರ ಮಳೆ, ಪ್ರವಾಹ ಎಂದೆಲ್ಲಾ ಎಚ್ಚರಿಕೆ ಕೊಡುತ್ತಿದ್ದಾರೆ.

**ಡಾ: ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ವೆಂಕಟೇಶ್‌ರವರೇ, 'ಯೆಲ್ಲೋ ಅಲರ್ಟ್' ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುತ್ತದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, Government is sleeping and who you do with alert. ನಾನು ಒಂದು ಹೇಳಿದರೆ, ಅವರು ಒಂದು ಹೇಳುತ್ತಾರೆ. ಈ ವಿಷಯದಲ್ಲಿ ಸರ್ಕಾರದವರು ಮಲಗಿಬಿಟ್ಟಿದ್ದಾರೆ. ಅವರಿಗೆ ಯಾವುದೇ ಅಲರ್ಟ್ ಇಲ್ಲ. ಕೋವಿಡ್-19 ಮತ್ತು ಮಳೆ ಬಂದದ್ದು, ಸರ್ಕಾರಕ್ಕೆ ಒಂದು ವರ. ಆದರೆ, ಜನರಿಗೆ ಮಾತ್ರ ಶಾಪ. ಏಕೆಂದರೆ, ಸರ್ಕಾರ ತೆಗೆದಂತಹ ಬಿಲ್ ಬಗ್ಗೆ ಯಾರೂ ಕೇಳುವುದಿಲ್ಲ. ಅದರಂತೆ, ಏನು ಬಿಲ್ ತೆಗೆದಿದ್ದೇವೆ, ಏನಾಗುತ್ತದೆ ಎಂದು ಕೇಳುವವರು ಇಲ್ಲ. ಈ ರೀತಿ ಆಗುವುದರಿಂದ ಇದೊಂದು ಸರ್ಕಾರಕ್ಕೆ ವರವಾಗಿದೆ.

ನಾನು ಇಷ್ಟು ಹೇಳುವುದೇನೆಂದರೆ, ಮಳೆ ಹಾನಿ ವಿಚಾರದಲ್ಲಿ ವೈಜ್ಞಾನಿಕವಾಗಿ ಒಂದು ಸಮೀಕ್ಷೆ ಮಾಡಿ, ಸರ್ವ ಪಕ್ಷಗಳ ಸಭೆ ಕರೆದು, ಇದಕ್ಕೆ ಏನು ಮಾಡಬೇಕೆಂದು ಚರ್ಚೆ ಮಾಡಿ, ಒಂದೇ ಬಾರಿ ಈ ಸಮಸ್ಯೆಯನ್ನು ಬಗೆಹರಿಸಬೇಕು. "ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಆಯಿತೆಂದು" ಆಡಳಿತ ಪಕ್ಷದವರು ಹೇಳುತ್ತಾರೆ. ಆದರೆ, ಇದರಲ್ಲಿ ನಮ್ಮ ಕಾಲ ಅಥವಾ ನಿಮ್ಮ ಕಾಲ ಇಲ್ಲ. ಸರ್ಕಾರಕ್ಕೆ ಪುಣ್ಯ ಬರಲಿ. ನಮ್ಮ ಕಾಲದಲ್ಲಿ ಆದಂತಹ ಸಮಸ್ಯೆಗಳನ್ನು ಬಗೆಹರಿಸಿ, ಸರ್ಕಾರವೇ ಒಳ್ಳೆಯದು ಮಾಡಲಿ. ಒತ್ತುವರಿ ತೆರವು ವಿಚಾರದಲ್ಲಿ ನಮ್ಮ ಆಸ್ತಿಗಳು ಇದ್ದರೆ, ನಮ್ಮದೂ ಸಹ ಒಡೆದು ಹಾಕಲಿ. ಬೇಡವೆಂದು ಯಾರಾದರೂ ಹೇಳಿದರೆ, ನಮಗೆ ಹೇಳಿ. ಇಷ್ಟೆಲ್ಲಾ ಮಾಡಿ ಸರ್ಕಾರದಿಂದ ಜನರಿಗೆ ಪರಿಹಾರ ಕೊಡಬೇಕು.

ನಾನು ಕೇಳಿದಂತಹ ಪ್ರಶ್ನೆಗೆ ಮಾನ್ಯ ಮಂತ್ರಿಗಳು ನಮ್ಮ ಸರ್ಕಾರದಲ್ಲಿ ಒಂದು ತಿಂಗಳಿನಲ್ಲಿಯೇ ಮಳೆಹಾನಿಗೊಳಗಾದವರಿಗೆ ಪರಿಹಾರ ಕೊಡುತ್ತೇವೆಂದು ಹೇಳುತ್ತಿದ್ದರು. ಅದರಂತೆ, ಎಷ್ಟು ಜನರಿಗೆ ಪರಿಹಾರ ಕೊಟ್ಟಿದ್ದಾರೆ ಮತ್ತು ಎಷ್ಟು ಜನರಿಗೆ ಅನ್ಯಾಯ ಆಗಿರುತ್ತದೆ. ಆದಾಗ್ಯೂ, ಪರಿಹಾರ ಕೊಟ್ಟಿರುವುದಷ್ಟು ಎಂದರೆ, ಒಂದು ಮನೆಗೆ ಕೇವಲ 10 ಸಾವಿರ ರೂಪಾಯಿ. ಈ ಹಣದಿಂದ ಬೆಂಗಳೂರಿನಲ್ಲಿ ಏನು ಆಗುತ್ತದೆ? ಏನಾದರೂ ಮನುಷ್ಯತ್ವ ಇದೆಯೇ? ಜನರ ಜೀವನಕ್ಕೆ, ತಿಂಡಿ-ಊಟಕ್ಕೆ ಆ ಹಣ ಸಾಕಾಗುತ್ತದೆಯೇ? ಹದಿನೈದು ದಿನ ಜನರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದಕ್ಕೆ ಆಗಲಿಲ್ಲ. ಆ ನೀರಿನಲ್ಲಿ ಜನ ಬೋಟ್‌ನಲ್ಲಿ ಓಡಾಡಿರುತ್ತಾರೆ. IT/BT ಯವರು ಟ್ರ್ಯಾಕ್ಟರ್‌ನಲ್ಲಿ ಕುಳಿತುಕೊಂಡು ಬಂದಿರುತ್ತಾರೆ.

ನನಗೆ ಪರಿಚಯಸ್ಥರೊಬ್ಬರು ಮಹದೇವಪುರದ ಮುನ್ನೇಕೊಳಲ್ ಎನ್ನುವ ಪ್ರದೇಶದಲ್ಲಿ ವಾಸವಾಗಿದ್ದಾರೆ. ಅವರು ಮೂಲತಃ ದೇವಸ್ಥಾನದ ಅರ್ಚಕರು. ಆ ಮನೆಯ ಹೆಂಗಸು ಒಂದು ದಿನ ನನಗೆ ಫೋನ್ ಮಾಡಿ ಅಳುತ್ತಿದ್ದಳು. ನಾನು ಏತಕ್ಕೆ ಅಳುತ್ತಿದ್ದೀರಿ ಎಂದು ಕೇಳಿದೆನು. ಅದಕ್ಕೆ ಆಕೆ, "ನಾವೆಲ್ಲರೂ ಮನೆಯ ಮಹಡಿಯ ಮೇಲೆ ಕುಳಿತಿದ್ದೇವೆ. ಏನಾದರೂ ಮಾಡಿ, ನಮ್ಮನ್ನು ಬದುಕಿಸಿ" ಎಂದು ಕೇಳಿದಳು. ಅದಕ್ಕೆ ನಾನು ಏನು ಸಮಸ್ಯೆ ಎಂದು ಕೇಳಿದೆನು. ಅದಕ್ಕೆ ಆಕೆ, "ಮಳೆ ಬಂದು ದೇವಸ್ಥಾನ ಮತ್ತು ಮನೆಯ ತುಂಬಾ ನೀರು ತುಂಬಿರುತ್ತದೆ. ಅದರಿಂದಾಗಿ, ಮನೆಯ ಮಹಡಿಯ ಮೇಲೆ ಹತ್ತಿ ಕುಳಿತಿದ್ದೇವೆ. ಇನ್ನು ಸ್ವಲ್ಪ ಹೊತ್ತಾದರೆ ನಾವು ಹೋಗಿಬಿಡುತ್ತೇವೆ" ಎಂದು ಹೇಳಿರುತ್ತಾರೆ. ಆ ಸಂದರ್ಭದಲ್ಲಿ ನಾವು ಯಾರಿಗೆ ಫೋನ್ ಮಾಡಬೇಕು? ಏಕೆಂದರೆ, ಅಂತಹ ಸಂದರ್ಭದಲ್ಲಿ ಬಿ.ಬಿ.ಎಂ.ಪಿ. ಸಹಾಯವಾಣಿಯ ಯಾವುದೇ ಸಂಪರ್ಕ ಸಿಗುವುದೇ ಇಲ್ಲ. ಅಂದರೆ, ಜನರ ಕಷ್ಟಗಳನ್ನು ಕೇಳುವಂತಹ ಸಹಾಯವಾಣಿಗಳು ಏನು ಇವೆ, ಅವು ಆ ಸಮಯದಲ್ಲಿ ಕೆಲಸವನ್ನು ಮಾಡುವುದೇ ಇಲ್ಲ. ಅದಕ್ಕೂ ಸಹ ನೀರು ಹೋಗಿಬಿಟ್ಟಿರುತ್ತದೆ. ಅವರಿಗೂ ಸಹ ಈ ಸಮಯದಲ್ಲಿ ಇಂತಹ ವಿಷಯಗಳ ಬಗ್ಗೆ ಫೋನ್ ಕರೆಗಳು ಹೆಚ್ಚಾಗಿ ಬರುತ್ತವೆಯೆಂದು ಗೊತ್ತಿರುತ್ತದೆ. ಅದರಿಂದಾಗಿ, ಅವರು ಸಹ ಕಣ್ಣು ಮುಚ್ಚಿಕೊಂಡು ಹೋಗಿಬಿಡುತ್ತಾರೆ. ನಾನು ಯಾವುದೋ ವಿಷಯದ ಬಗ್ಗೆ ಮಾತನಾಡಿ, ಎಲ್ಲೆಲ್ಲೋ ಹೋಗುವುದು ಬೇಡ. ಅದರಿಂದಾಗಿ, ತಾವು ಬೇಜಾರು ಮಾಡಿಕೊಳ್ಳುವುದು ಬೇಡ.

**ಶ್ರೀ ಶರವಣ ಟಿ.ಎ.(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ವೆಂಕಟೇಶ್‌ರವರೇ, ತಾವು ವಾಸ್ತವಾಂಶ ಹೇಳುತ್ತಿದ್ದೀರಿ, ಹೇಳಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿರುತ್ತೇನೆ.

**ಸಭಾಪತಿಯವರು:-** ಮಾನ್ಯ ಶರವಣರವರೇ, ತಾವು ಮಾತನಾಡುವಾಗ ಅದನ್ನು ಹೇಳಿ. ಆದರೆ, ಈಗ ಏತಕ್ಕೆ ಮಾನ್ಯ ಸದಸ್ಯರಿಗೆ ತೊಂದರೆ ಕೊಡುತ್ತಿದ್ದೀರಿ? ಮೊದಲೇ ಸಮಯದ ಅಭಾವ ಇದೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೌದು ಸಮಯದ ಅಭಾವ ಇದೆ. ಈ ವಿಷಯದ ಬಗ್ಗೆ ಸರ್ಕಾರ ತಕ್ಷಣವೇ ಒಂದು ಸರ್ವ ಪಕ್ಷಗಳ ಸಭೆ ಕರೆದು, ಇದಕ್ಕೆ ವೈಜ್ಞಾನಿಕ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಇದರಲ್ಲಿ ನಾವು, ನೀವು ಎಂದು ಬೇಡ.

**ಸಭಾಪತಿಯವರು:-** ಅದಕ್ಕಾಗಿ, ಈ ವಿಷಯದಲ್ಲಿ ಸರ್ಕಾರ ಉತ್ತರ ಕೊಟ್ಟರೆ ನಿಮಗೆ ಸ್ವಲ್ಪ ಸ್ಪಷ್ಟವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ಮೊದಲು ಸರ್ಕಾರ ನಾವು ಹೇಳಿದ್ದರಲ್ಲಿ ಒಂದು ಚೂರಾದರೂ ಕೇಳಲಿ ಎನ್ನುವುದು ನಮ್ಮ ಉದ್ದೇಶವಾಗಿರುತ್ತದೆ. ನಾವು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಬೇಕು. ಅದನ್ನು ಹೊರತುಪಡಿಸಿ ನಾವು ಏನು ಮಾಡೋಣ?

**ಸಭಾಪತಿಯವರು:-** ಆಯಿತು ಹೇಳಿ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ಸರ್ಕಾರ ಕಲ್ಲಾಗಿರುತ್ತದೆ. ಮನುಷ್ಯತ್ವ ಇರುವಂತಹ ಸರ್ಕಾರಕ್ಕಾದರೆ ನಾವು ಹೇಳಬಹುದು. ಈಗ ಏನಾಗಿದೆಯೆಂದರೆ, ತಮ್ಮ ಮುಖಾಂತರ ಸರ್ಕಾರವನ್ನು ಒಡೆದು ಒಡೆದು ಎಬ್ಬಿಸಬೇಕಾಗಿರುತ್ತದೆ. ದಯವಿಟ್ಟು, ಬೆಂಗಳೂರು ಜನರಿಗೆ ಬದುಕುವುದಕ್ಕೆ ಅವಕಾಶ ಕೊಡಿ. ಬೆಂಗಳೂರು ನಗರದ ಬ್ರಾಂಡ್ ಉಳಿಯುವ ಹಾಗೆ ಮಾಡಿ. ನಾನು ಒಂದು ಉದಾಹರಣೆ ನೀಡುವುದೇನೆಂದರೆ, ನಾನು ಬೆಂಗಳೂರಿಗೆ ಬಂದು, 4 ವರ್ಷ ಆಯಿತು. ಚಾಲುಕ್ಯ ವೃತ್ತದಿಂದ ಮೇಖ್ರಿ ವೃತ್ತದವರೆಗೆ ಫ್ಲೈ ಓವರ್ ಮಾಡುವ ವಿಷಯಕ್ಕೆ ಸಂಬಂಧಪಟ್ಟಂತೆ ಬಂದಾಗಿನಿಂದಲೂ ಸಹ ನಾನು ಹೇಳುತ್ತಿದ್ದೆನು. ಈ ಹಿಂದೆ ಮಾನ್ಯ ಸಭಾಪತಿಯವರಾಗಿದ್ದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಹ ಎರಡು ಬಾರಿ ಸಭೆ ಕರೆಯುತ್ತೇನೆಂದು ಹೇಳಿದ್ದರು. ಆದರೆ, ಯಾವುದೇ ಸಭೆ ಕರೆದಿರುವುದಿಲ್ಲ. ಹಾಗಾಗಿ, ನಾನು ಆ ವಿಷಯವನ್ನು ಕೇಳುವುದನ್ನು ಬಿಟ್ಟಿರುತ್ತೇನೆ. ಒಂದು ಬಾರಿ, ಶ್ರೀ ಗೋವಿಂದ ಎಂ. ಕಾರಜೋಳರವರು ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಸಭೆ ಕರೆಯುತ್ತೇನೆಂದು ಹೇಳಿದ್ದರು. ಆ ನಂತರ, ಶ್ರೀ ಸಿ.ಸಿ. ಪಾಟೀಲ್‌ರವರು ಲೋಕೋಪಯೋಗಿ ಮಂತ್ರಿಯಾದಾಗಲೂ ಸಹ ಸಭೆ ಕರೆಯುತ್ತೇನೆಂದು ಹೇಳಿದ್ದರು. ಇದುವರೆವಿಗೂ

ಯಾವುದೇ ಸಭೆ ಕರೆದಿರುವುದಿಲ್ಲ. ಈ ಬ್ರ್ಯಾಂಡ್ ಬೆಂಗಳೂರು ಉಳಿಸುವುದಕ್ಕೆ, ಬೆಂಗಳೂರಿಗೆ ಒಂದು ಒಳ್ಳೆಯ ಹೆಸರು ತರುವುದಕ್ಕೆ ನಾವೆಲ್ಲರೂ ಸೇರಿ ಕೆಲಸ ಮಾಡೋಣ. ಈ ನಗರಕ್ಕೆ ಒಂದು ಒಳ್ಳೆಯ ಹೆಸರು ಬರಲಿ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

## 12. ಪ್ರಕಟಣೆ

**ಸಭಾಪತಿಯವರು:–** ಕರ್ನಾಟಕ ಜನತಾದಳ(ಜಾತ್ಯಾತೀತ) ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಸಿ.ಎಂ. ಇಬ್ರಾಹಿಂ ಅವರು ದಿನಾಂಕ: 22.09.2022ರಂದು ತಮ್ಮ ಪತ್ರದಲ್ಲಿ ತಿಳಿಸಿರುವ ರೀತ್ಯಾ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಶ್ರೀ ಶರವಣ ಟಿ.ಎ. ಅವರನ್ನು ಜನತಾದಳ (ಜಾತ್ಯಾತೀತ) ಶಾಸಕಾಂಗ ಪಕ್ಷದ ಉಪ ನಾಯಕರನ್ನಾಗಿ ಮಾನ್ಯತೆ ನೀಡಲಾಗಿದೆ ಎಂಬ ವಿಷಯವನ್ನು ಸದನದ ಗಮನಕ್ಕೆ ತರಲಾಗಿದೆ.

**ಶ್ರೀ ಟಿ.ಎ. ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ನಿಯಮ ೬೮ರಡಿಯಲ್ಲಿ ಮಾತನಾಡುತ್ತೀರಾ?

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅರ್ಧ ತಾಸು ಮಾತನಾಡುತ್ತೇನೆ.

**ಸಭಾಪತಿಯವರು:–** ತಾವು ಐದು ನಿಮಿಷ ಇವೊತ್ತಿನ ದಿವಸ ಮಾತನಾಡಿ. ಉಳಿದಿದ್ದು ನಂತರ ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಿದ್ದರೆ ದಯಮಾಡಿ ನಾನು ಮಾತನಾಡುವುದಿಲ್ಲ.

**ಸಭಾಪತಿಯವರು:–** ಆಯಿತು ಸಂತೋಷ. ಮಾನ್ಯ ಶರವಣ ಟಿ.ಎ. ರವರೇ ಈಗ ತಾವು ಮಾತನಾಡಿ.

**ಶ್ರೀ ಶರವಣ ಟಿ.ಎ.:–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:–** ತಾವು ಬೇಡವೆಂದು ಹೇಳಿದ್ದೀರಲ್ಲಾ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಐದು ನಿಮಿಷ ಮಾತನಾಡುವುದೆಂದರೆ ಹೇಗೆ?

**ಸಭಾಪತಿಯವರು:–** ತಾವು ಬೇಡವೆಂದು ಹೇಳಿದ್ದರಿಂದ ನಾನು ಮಾನ್ಯ ಶರವಣರವರಿಗೆ ಮಾತನಾಡಲು ಹೇಳಿರುತ್ತೇನೆ. ಆಯಿತು, ತಮಗೆ ನಂತರ ಮಾತನಾಡಲು ಅವಕಾಶ ನೀಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ. ನನಗೆ ತಮಗೆ ಅವಕಾಶ ಕೊಡಬಾರದೆಂದು ಇಲ್ಲ. ತಾವು ಬೇಡವೆಂದು ಹೇಳಿದ್ದರಿಂದ ನಾವು ಅವರಿಗೆ ಅವಕಾಶ ನೀಡಿರುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನನಗೆ ಸಮಾಧಾನ ಇರುವುದಿಲ್ಲ. ನನಗೆ ಸ್ವಲ್ಪ ಸಮಯ ಕೊಡಿ. ನಾನು ಸಹ ಒಂದೆರಡು ಮಾತು ಸೇರಿಸುತ್ತೇನೆ.

**ಸಭಾಪತಿಯವರು:–** ಆಯಿತು.

## 13. ನಿಯಮ 68ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಮುಂದುವರೆದ ಚರ್ಚೆ

**ವಿಷಯ: ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು.**

**ಶ್ರೀ ಶರವಣ ಟಿ.ಎ.(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಬಂದಿರತಕ್ಕಂತಹ ಮಳೆಯ ಅವಾಂತರದಿಂದ ಇಡೀ ನಗರದ ಜನ ಯಾವ ರೀತಿ ಸಂಕಷ್ಟಕ್ಕೆ ಒಳಗಾಗಿದ್ದಾರೆ ಎನ್ನುವುದರ ಬಗ್ಗೆ ಹಲವಾರು ಸದಸ್ಯರು ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟಿರತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಇವೊತ್ತಿನ ದಿವಸ ಬೆಂಗಳೂರಿನಲ್ಲಿ ಇಡೀ ದೇಶದಿಂದ ಹಿಡಿದು, ಎಲ್ಲಾ ರಾಜ್ಯಗಳಿಂದಲೂ ಸಹ ಅನೇಕ ಜನರು ಇಲ್ಲಿಗೆ ಬಂದು ವಾಸ ಮಾಡುವವರು ಶೇಕಡ 80 ರಷ್ಟು ಇದ್ದಾರೆ. ಹಳೆ ಬೆಂಗಳೂರು, ಹೊಸ ಬೆಂಗಳೂರು ಎಂದು ಎರಡು ರೀತಿಯ ನಗರ ಇರುತ್ತಕ್ಕಂಥ ಪ್ರದೇಶ ಇದು. ಹಳೇ ಬೆಂಗಳೂರಿನಲ್ಲಿ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಈಗ 110 ಹಳ್ಳಿಗಳು ಮತ್ತು 7 ಪಟ್ಟಣ ಪಂಚಾಯಿತಿಗಳು ಇವುಗಳೆಲ್ಲವನ್ನೂ ಸೇರಿಸಿ ಬೃಹತ್ ಬೆಂಗಳೂರು ಎಂದು ಮಾಡಿದ ಮೇಲೆ ಅಲ್ಲಿ ಯಾವ ರೀತಿಯ ಸವಲತ್ತುಗಳನ್ನು ಕೊಡುವುದರಲ್ಲಿ, plan sanction ನಲ್ಲಿ ಮತ್ತು ಮನೆ ಕಟ್ಟುವಾಗ ಇರಬಹುದು, ರಾಜಕಾಲುವೆಗಳನ್ನು ಮತ್ತು ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಎಲ್ಲ ಜನರು ಸಂಕಷ್ಟಕ್ಕೆ ಒಳಗಾಗಿರತಕ್ಕಂಥದ್ದನ್ನು ಇವೊತ್ತಿನ ದಿವಸ ಸರ್ಕಾರ ಸರಿಯಾದ ರೀತಿಯಲ್ಲಿ ನಿಭಾಯಿಸದೇ, 198 ವಾರ್ಡ್‌ನಿಂದ ಇವೊತ್ತಿನ ದಿವಸ 243 ವಾರ್ಡ್‌ಗೆ ಹೋಗಬೇಕೆಂದು ಹೇಳಿ, ಕಳೆದ ಮೂರು ವರ್ಷಗಳಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆ ಕೂಡ ಆಗದೇ, ಅಲ್ಲಿ ಜನಪ್ರತಿನಿಧಿಗಳು ಸಹ ಇಲ್ಲದೇ ಇರುವುದರಿಂದ, ಜನರು ಇವೊತ್ತಿನ ದಿವಸ ಒಂದು ರೀತಿ ಅನಾಥರಾಗಿರುತ್ತಾರೆ. ಬೆಂಗಳೂರಿಗೆ ಒಬ್ಬರು ಶಾಸಕರು ಮಾತ್ರ ಇರುತ್ತಾರೆ. ಬೆಂಗಳೂರಿನಲ್ಲಿ 28 ವಿಧಾನಸಭಾ ಕ್ಷೇತ್ರ ಇರುತ್ತದೆ. ಶಾಸಕರು

ಎಲ್ಲರನ್ನೂ ಸಹ ಭೇಟಿಯಾಗುವುದಕ್ಕೆ ಆಗುವುದಿಲ್ಲ. ಅದೇ ರೀತಿ ಎಲ್ಲಾ ವಾರ್ಡ್‌ಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಚುನಾವಣೆಯನ್ನು ನಡೆಸುವುದಕ್ಕೆ ಸರ್ಕಾರಕ್ಕೆ ಇಷ್ಟವಿಲ್ಲವೇ ಅಥವಾ ಏನು ಕಾರಣ ಎಂಬುದು ನನಗೆ ಗೊತ್ತಿಲ್ಲ. ಅದು ಪ್ರತಿ ಬಾರಿ ಮುಂದಕ್ಕೆ ಹೋಗುತ್ತಿದೆ. ಅದು ಒಂದು ಕಡೆ ಇರಲಿ.

ಇವೊತ್ತಿನ ದಿವಸ ಐ.ಟಿ. & ಬಿ.ಟಿ. ಸಿಟಿ, ಗಾರ್ಡನ್ ಸಿಟಿ ಮತ್ತು ಗಾರ್ಬೇಜ್ ಸಿಟಿ ಕೂಡ ಹೋಗಿ ಇವೊತ್ತಿನ ದಿವಸ ಗುಂಡಿಗಳ ನಗರ ಆಗಿರುತ್ತದೆ. ಇವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ಯಾರಾದರೂ ಸಂಚಾರ ಮಾಡಬೇಕಾದರೆ, ಎಷ್ಟು ಕಷ್ಟ ಇದೆ. ಇವೊತ್ತಿನ ದಿವಸ ಎಲ್ಲಿಯೋ ಒಂದು ಕಡೆ ನಾವು ಅಧಿಕಾರಿಗಳನ್ನು ದೂಷಿಸುತ್ತೇವೆ. 8 ಸಬ್ ಡಿವಿಷನ್‌ಗಳನ್ನು ಮಾಡಿ, 8 ಕಡೆಗಳಲ್ಲಿಯೂ ಸಹ ಕೇಂದ್ರ ವಿಭಾಗದಲ್ಲಿ ಅಪರ ಜಂಟಿ ಆಯುಕ್ತರು ಏನು ಇರುತ್ತಾರೆ, ಅವರು ಸಹ ಸರಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತಿರುವುದಿಲ್ಲ. ಜನರು ಮಳೆಯಿಂದ ತುಂಬಾ ಕಷ್ಟಗಳಿಗೆ ಒಳಗಾಗುತ್ತಿದ್ದಾರೆ. ನಮ್ಮ ಕೆಂಪೇಗೌಡರು ಕಟ್ಟಿದಂತಹ ಬೆಂಗಳೂರು ನಗರ, ಇವೊತ್ತಿನ ದಿವಸ ಐ.ಟಿ. & ಬಿ.ಟಿ. ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ನಗರದ ಅಭಿವೃದ್ಧಿ ವಿಷಯದಲ್ಲಿ ಎಲ್ಲಿಯೋ ಒಂದು ಕಡೆ ನಾವು ಎಡವುತ್ತಿದ್ದೇವೆ. ಅದು ಯಾವುದೇ ಸರ್ಕಾರ ಇರಲಿ.

ನನಗೆ ತಿಳಿದಿರುವಂತೆ, ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಎರಡು ಬಾರಿ ಮಳೆ ಬಂದಂತಹ ಪ್ರದೇಶಗಳಲ್ಲಿ ನಗರ ಪ್ರದಕ್ಷಿಣೆ ಮಾಡಿರುತ್ತಾರೆ. ಅದರಂತೆ, ಮಾನ್ಯ ಮುಖ್ಯಮಂತ್ರಿಗಳು ನಗರ ಪ್ರದಕ್ಷಿಣೆ ಹೋಗಿ ಬಂದ ನಂತರ ಏನು ಆಗುತ್ತಿದೆ? ಅಲ್ಲಿ ಯಾವುದೇ ರೀತಿಯ ಬದಲಾವಣೆಗಳು ಆಗುತ್ತಿಲ್ಲ. ಆದುದರಿಂದ, ಇವೊತ್ತಿನ ದಿವಸ ಜನರಿಗೆ ತೊಂದರೆಯಾಗುತ್ತಿದೆ. ಈ ವಿಷಯದಲ್ಲಿ ಸರ್ಕಾರ ಸರಿಯಾದ ರೀತಿಯಲ್ಲಿ ಸ್ಪಂದಿಸಬೇಕಾಗುತ್ತದೆ. ಏಕೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ ಒಂದರಲ್ಲಿಯೇ ಶೇಕಡ 50 ರಷ್ಟು revenue generate ಆಗುತ್ತಿದೆ, ಆ ರೆವಿನ್ಯೂಗಳಿಂದ ಸರ್ಕಾರಕ್ಕೆ ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಏನು ಕಷ್ಟ ಇದೆ? ಬೆಂಗಳೂರು ನಗರಕ್ಕೆ ಸುಮಾರು 8,500 ಕೋಟಿ ರೂಪಾಯಿ ವಿಶೇಷವಾದ ಅನುದಾನವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದರು. ಆ ಹಣವೆಲ್ಲಾ ಎಲ್ಲಿಗೆ ಹೋಗುತ್ತಿದೆ? ಇದರ ಬಗ್ಗೆ ಒಂದು ಘಟನೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಮ್ಮ 28 ಕ್ಷೇತ್ರಗಳಲ್ಲಿ ನಮ್ಮ ಜನತಾದಳ(ಜಾತ್ಯಾತೀತ) ಪಕ್ಷದಿಂದ ಒಬ್ಬರೇ

ಶಾಸಕರಿರುತ್ತಾರೆ. ಅವರು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದವರು. ಅವರು ತಮ್ಮ ಗ್ರಾಂಟ್ಸ್ ಅನ್ನು ತೆಗೆದುಕೊಳ್ಳುವುದಕ್ಕೆ ಮಾನ್ಯ ನ್ಯಾಯಾಲಯಕ್ಕೆ ಹೋಗಿ, ಅಲ್ಲಿಂದ ಆದೇಶ ಪಡೆದುಕೊಂಡು ಬಂದು, ಸರ್ಕಾರದಿಂದ ಗ್ರಾಂಟ್ ತೆಗೆದುಕೊಳ್ಳಬೇಕಾದಂತಹ ಹೀನ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ನಿಜವಾಗಿಯೂ ಇದೊಂದು ದುರಂತ. ಬೆಂಗಳೂರು ನಗರಕ್ಕೆ ಇದು ಶಾಪವೋ ಅಥವಾ ವರವೋ ಎಂಬ ಬಗ್ಗೆ ಮಾನ್ಯ ವೆಂಕಟೇಶ್‌ರವರು ಬಹಳ ಚೆನ್ನಾಗಿ ಹೇಳಿದರು. ಅದರ ಬಗ್ಗೆ ನಮಗಂತೂ ಗೊತ್ತಿರುವುದಿಲ್ಲ. ಆದರೆ, ಜನ ಇವೊತ್ತಿನ ದಿವಸ ಬೀದಿ–ಬೀದಿಯಲ್ಲಿ ಹರಾಜು ಹಾಕುತ್ತಿದ್ದಾರೆ. ಇದಕ್ಕೆಲ್ಲಾ ಕಾರಣವೇನು? ಅದಕ್ಕೆ ಅಧಿಕಾರಿಗಳ ವೈಪಲ್ಯ ಕಾರಣವೇ ಅಥವಾ ಸರ್ಕಾರದ ದುರ್ಗತಿಯೇ ಎಂಬ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಇವೊತ್ತಿನ ದಿವಸ ನಾವು ಮಾಡಬೇಕಾಗಿರುವಂಥದ್ದು, ಬೆಂಗಳೂರು ನಗರದ ಮಹಾಜನತೆಯನ್ನು ಉಳಿಸುವಂಥದ್ದಾಗಿರುತ್ತದೆ. ಅದಕ್ಕೆ ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ಕೊಟ್ಟರೂ ಸಹ, ಅದು ಯಾವುದೂ ಸಹ ಜನರಿಗೆ ನೇರವಾಗಿ ಮುಟ್ಟುತ್ತಿಲ್ಲ. ಮತದಾರರು ಪ್ರಶ್ನೆ ಮಾಡುವಂತಹ ಪ್ರತಿ ಹಂತದಲ್ಲಿ ಅದು ಗಾರ್ಬೇಜ್ ಇರಬಹುದು ಅಥವಾ ಮಳೆ ಹಾನಿ ಇರಬಹುದು. ಇವೊತ್ತಿನ ದಿವಸ ರಾಜಕಾಲುವೆ ಒತ್ತುವರಿ ವಿಚಾರದಲ್ಲಿ ಶ್ರೀಮಂತರನ್ನು ಬಿಟ್ಟು, ಬಡವರ ಮನೆಯನ್ನು ಮಾತ್ರ ಒಡೆದುಹಾಕುತ್ತಾರೆಂಬ ವಿಷಯ ದೊಡ್ಡ ಮಟ್ಟದಲ್ಲಿ ಚರ್ಚೆಯಾಗಿರುವುದನ್ನು ನಾವು ಗಮನಿಸಿದ್ದೇವೆ.

(ಮುಂದು...)

(998) 22.09.2022 4.20 ವೈಎಲ್–ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಎ.ಶರವಣ (ಮುಂದು):–**

ಆದರೆ, ಪರಿಹಾರ ಮಾತ್ರ ಸಿಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ನಗರದ ಉಸ್ತುವಾರಿ ಸಚಿವರಾಗಿರಬಹುದು, ಇಲ್ಲವೆಂದು ಹೇಳುವುದಿಲ್ಲ. ಆದರೆ, ಅವರೊಬ್ಬರೇ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಬೆಂಗಳೂರು ನಗರದಲ್ಲಿ 07 ಜನ ಸಪ್ತಸ್ವರ ಸಚಿವರಿದ್ದಾರೆ. ಅವರ ಜೊತೆ ಹೋದರೂ ಸಹ ಯಾವುದೇ ಕೆಲಸವಾಗುತ್ತಿಲ್ಲ. ಹಾಗಾಗಿ ಅಧಿಕಾರಿಗಳು ಸರ್ಕಾರದ ಮಾತನ್ನು

ಕೇಳುತ್ತಿಲ್ಲವೇ ಅಥವಾ ಸರ್ಕಾರಕ್ಕೆ ಯಾವುದೇ ರೀತಿಯ ನೈತಿಕತೆ ಇಲ್ಲವೇ? ಇವತ್ತು ಅದರ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ನಿಜವಾಗಿಯೂ ಇವತ್ತಿನ ಪರಿಸ್ಥಿತಿಯಲ್ಲಿ ಬೆಂಗಳೂರು ನಗರಕ್ಕೆ ಹೊಸ ಪರಿಹಾರ ನೀಡುವಂಥ ಕೆಲಸವನ್ನು ಮಾಡಬೇಕಾಗಿದೆ. ಒಂದು ಮನೆ ಕುಸಿದು ಬಿದ್ದಿರುವುದಕ್ಕೆ ಸರ್ಕಾರವು ಕೇವಲ ರೂ.10,000 ಪರಿಹಾರ ನೀಡುತ್ತದೆ. ಆ ರೂ.10,000 ಗಳಲ್ಲಿ ಆತ ಏನು ಮಾಡುತ್ತಾನೆ ಎಂಬುದನ್ನು ಹೇಳಬೇಕಾಗುತ್ತದೆ. ದೊಡ್ಡ ಮಟ್ಟದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಮಟ್ಟದಲ್ಲಿ ಸರ್ವ ಪಕ್ಷ ಸಭೆ ಕರೆದು, ಈ ಮಳೆ ಅವಾಂತರದ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಾಗಲಿ, ಶ್ರೀ ಹೆಚ್.ಡಿ.ಕುಮಾರಸ್ವಾಮಿರವರಾಗಲಿ ಅಥವಾ ಶ್ರೀ ಸಿದ್ಧರಾಮಯ್ಯನವರವರಾಗಲಿ, ಯಾವುದೇ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಬೆಂಗಳೂರು ನಗರದ ಶಾಸಕರೆಲ್ಲರನ್ನೂ ಕರೆದು, ಒಂದು ಸಭೆ ಮಾಡಿ ಯಾವ ಕ್ಷೇತ್ರದಲ್ಲಿ ಏನೇನು ಸಮಸ್ಯೆಗಳೇನಿವೆ, ಅದಕ್ಕೆ ಯಾವ ರೀತಿ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದರ ಕುರಿತು ನಮ್ಮ ಸಲಹೆ ಸೂಚನೆಯನ್ನು ಪಡೆಯುತ್ತಿದ್ದರು. ಆದರೆ, ಇವತ್ತಿನ ಸರ್ಕಾರ ಕಣ್ಣು ಇದ್ದು ಕುರುಡಾಗಿದೆಯೇ; ಕಿವಿ ಇದ್ದು ಕಿವುಡಾಗಿದೆಯೇ; ಏನೆಂಬುದು ನಮಗೆ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ಸಹ ಸರ್ಕಾರ ಗಮನಹರಿಸಬೇಕಾಗಿದೆ. ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಎಲ್ಲರೂ ಹೋರಾಟ ಮಾಡುವಂಥ ಕೆಲಸವಾಗುತ್ತದೆ. ಇವತ್ತಿನ ದಿವಸ ಐ.ಟಿ.-ಬಿ.ಟಿ. ಕಂಪನಿಗಳ ಹೂಡಿಕೆದಾರರು ಇಲ್ಲಿಯ ಕಂಪನಿಗಳನ್ನು ಮುಚ್ಚಿಕೊಂಡು ತೆಲಂಗಾಣ, ಆಂಧ್ರಪ್ರದೇಶ ರಾಜ್ಯಗಳಿಗೆ ಮಾರು ಹೋಗುತ್ತಿದ್ದು, ಬ್ರ್ಯಾಂಡ್ ಬೆಂಗಳೂರು ಮತ್ತೊಮ್ಮೆ ತೊಂದರೆಗೊಳಗಾಗಿರುವುದು ನಮಗೆ ಬಹಳ ಕಷ್ಟಕರವಾದ ಸಂಗತಿಯಾಗಿದೆ. ಹಾಗಾಗಿ ಬೆಂಗಳೂರನ್ನು ಉಳಿಸುವಂಥ ಹಾದಿಯಲ್ಲಿ ಸರ್ಕಾರ ಕೆಲಸ ಮಾಡಬೇಕಾಗಿದೆ. ಯಾವತ್ತಿಗೂ ನಾವು ಕನ್ನಡಿಗರು. ಹಸಿದಾಗ ತಿನ್ನುವುದು ಪ್ರಕೃತಿ, ಹಸಿವಿರದಾಗ ತಿನ್ನುವುದು ವಿಕೃತಿ, ಹಸಿವಿದ್ದಾಗ ಇನ್ನೊಬ್ಬರಿಗೆ ಕೊಟ್ಟು ತಿನ್ನುವುದೇನಿದೆ, ಅದು ನಮ್ಮ ಕನ್ನಡಿಗರ ಸಂಸ್ಕೃತಿ. ಅಂತಹ ಒಂದು ಸಂಸ್ಕೃತಿ ಇರುವಂಥ ಬೆಂಗಳೂರು ನಗರವನ್ನು ಉಳಿಸಿ, ಬೆಳೆಸುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ತೇಜಸ್ವಿನಿ ಗೌಡರವರು ಮಾತನಾಡಬೇಕು. 5 ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಬೇಕು.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, 5 ನಿಮಿಷವೆಂದರೆ ಸಾಕಾಗುವುದಿಲ್ಲ. ದಯವಿಟ್ಟು ದೊಡ್ಡ ಮನಸ್ಸು ಮಾಡಿ, ಇನ್ನು ಸ್ವಲ್ಪ ಹೆಚ್ಚಿಗೆ ಕಾಲಾವಕಾಶ ನೀಡಿದರೆ ಒಳ್ಳೆಯದು.

**ಸಭಾಪತಿಯವರು:–** ಈಗಾಗಲೇ ಎಲ್ಲರಿಗೂ ಹೇಳಿದ ವಿಚಾರವನ್ನೇ ತಮಗೂ ಹೇಳುತ್ತಿದ್ದೇನೆ, ತಮಗೆ ಮಾತ್ರ ಹೇಳುತ್ತಿಲ್ಲ. ಸಮಯವನ್ನು ನೀಡುವುದಕ್ಕೆ ನನ್ನ ಅಭ್ಯಂತರವೇನಿಲ್ಲ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಿಯಮ 68ರ ಮೇರೆಗೆ ಚರ್ಚೆ ಮಾಡಲು ವಿರೋಧ ಪಕ್ಷದ ನಾಯಕರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಮತ್ತು ಇತರ ಸದಸ್ಯರು "ಇತ್ತೀಚೆಗೆ ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯಿಂದ ಮತ್ತು ರಾಜ್ಯದ ಹೆದ್ದಾರಿ, ರಸ್ತೆಗಳು ಕೊಚ್ಚಿ ಹೋಗಿರುವುದಾಗಿರಬಹುದು, ಕೆರೆ ಕಟ್ಟೆ ಕೋಡಿಗಳು ಹೊಡೆದು ಜನರು ಸಂಕಷ್ಟಕ್ಕೆ ಸಿಲುಕಿರುವಂಥ" ವಿಶೇಷವಾದ ತುರ್ತು ವಿಚಾರವನ್ನು ಈ ನಿಯಮದಡಿ ತಂದಿದ್ದು, ಸದರಿ ವಿಷಯವನ್ನು ಸ್ವಾಗತಿಸುತ್ತೇನೆ. ಸುಮಾರು 8 ದಶಕಗಳಲ್ಲಿ ಕಂಡು ಕೇಳರಿಯದಷ್ಟು ದಾಖಲೆ ಪ್ರಮಾಣದ ಅತಿವೃಷ್ಟಿ ಈ ರಾಜ್ಯದ ಮೇಲೆ ಬಂದು ಎರಗಿದಾಗ ಸಹಜವಾದ ಎಲ್ಲಾ ಮೂಲಭೂತ ಸೌಕರ್ಯಗಳ ಇತಿಮಿತಿಯನ್ನು ಮೀರಿ ಜಲ ಪ್ರವಾಹ ಉಂಟಾಗಿದ್ದು, ಜೊತೆಗೆ ಜೀವ ಹಾನಿ, ಪ್ರಾಣಿಗಳ ಹಾನಿ, ಬೆಳೆ ಹಾನಿ ಮತ್ತು ಮನೆಗಳ ಹಾನಿಯೊಳಗೊಂಡಂತೆ ಬೆಲೆ ಕಟ್ಟಲಾಗದಷ್ಟು ಸಮಸ್ಯೆಯುಂಟಾಗಿದ್ದು, ಅದನ್ನು ಸರ್ಕಾರ ಇನ್ನೂ ಅಂದಾಜು ಮಾಡಬೇಕಾಗಿದೆ. ಅಂತಹ ಒಂದು ಸ್ಥಿತಿ ತಕ್ಷಣವೇ ಎದುರಾಗಿತ್ತು. ಪ್ರವಾಹ ಬರುವ ಮುನ್ನಾ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರವಹಿಸಿಕೊಂಡಾಗ ಪ್ರತಿ ನಿಯಮಿತ ಸಂದರ್ಭದಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಪ್ರವಾಸ ಮಾಡಿದ್ದಾರೆ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದಾರೆ. ವಿಶೇಷವಾಗಿ ಪ್ರವಾಹ ಬಂದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರಿನ ಬಗ್ಗೆ ಇಂಚಿಂಚು

ತಿಳಿದಿರುವ ಹಿರಿಯ ಸಚಿವರಾದ, ಅನುಭವಿಗಳಾದ ಮಾನ್ಯ ವಿ.ಸೋಮಣ್ಣ, ಮಾನ್ಯ ಆರ್.ಅಶೋಕ್, ಮಾನ್ಯ ಗೋಪಾಲಯ್ಯ, ಮಾನ್ಯ ಭೈರತಿ ಬಸವರಾಜು, ಮಾನ್ಯ ಅಶ್ವತ್ ನಾರಾಯಣ ಸಿ.ಎನ್., ಮಾನ್ಯ ಮುನಿರತ್ನ ಇರಬಹುದು, ಎಲ್ಲಾ ಸಚಿವರ ಆದಿಯಾಗಿ ವಿರೋಧ ಪಕ್ಷದ ಶಾಸಕರು ಒಳಗೊಂಡಂತೆ ಎಲ್ಲಾ ಶಾಸಕರನ್ನು ಕರೆದುಕೊಂಡು ಹೋಗಿ ಮಾನ್ಯ ಮುಖ್ಯಮಂತ್ರಿಗಳು ಸ್ವತಃ ಭೇಟಿ ನೀಡಿದ್ದಾರೆ. ಅದರಂತೆ ಮೊದಲ ಆದ್ಯತೆ ಏನೆಂದರೆ, ತುರ್ತು ಪರಿಹಾರವಾಗಿತ್ತು. ಜೀವ ಉಳಿಸುವುದಾಗಿರಬಹುದು, ಆಹಾರದ ಕೇಂದ್ರ ತೆರೆಯುವುದಾಗಿರಬಹುದು ಮತ್ತು ಮಾನ್ಯ ಶರವಣರವರು ಹೇಳಿದ ಹಾಗೆ ತುರ್ತಾಗಿ ಮನೆ ಬಿದ್ದ ಸಂದರ್ಭದಲ್ಲಿ ಸಾಮಾನು ಸರಂಜಾಮು ಕಳೆದು ಹೋಗಿದ್ದು, ಅತ್ಯಂತ ತ್ವರಿತವಾಗಿ ಜೀವನವನ್ನು ದಾರಿಗೆ ತಂದುಕೊಳ್ಳುವುದಕ್ಕೋಸ್ಕರ ರೂ.10,000 ಸರ್ಕಾರ ನೀಡಿರುವಂಥ ಪರಿಹಾರ ಏನಿದೆ, ಅದು ತುರ್ತು ಪರಿಹಾರಕ್ಕಾಗಿ ನೀಡಿರುವಂಥದಾಗುತ್ತದೆ ವಿನಃ ಶಾಶ್ವತ ಪರಿಹಾರವಾಗಿರುವುದಿಲ್ಲ. ಅತ್ಯಂತ ಪ್ರಾಮಾಣಿಕವಾಗಿ ಆ ಒಂದು ಕೆಲಸವನ್ನು ಸರ್ಕಾರ ಮಾಡಿರುವುದರಿಂದ ಇದರಲ್ಲಿ ರಾಜಕಾರಣ ಮಾಡಬಾರದು ಎನ್ನುವಂಥ ಕಳಕಳಿಯನ್ನು ಈ ಸದನದಲ್ಲಿ ವ್ಯಕ್ತಪಡಿಸುತ್ತೇನೆ. ಪ್ರವಾಹ ಪರಿಸ್ಥಿತಿ ಉಂಟಾದ ಸಂದರ್ಭದಲ್ಲಿ ಮುಖ್ಯವಾಗಿ ಹೆದ್ದಾರಿಗಳ ಬಗ್ಗೆ ಹೇಳುವುದಾದರೆ, ಇವತ್ತಿನ ದಿವಸ ಸುಮಾರು ಒಂದು ಕಿಲೋ ಮೀಟರ್ ದಾರಿಯನ್ನು ನಿರ್ಮಾಣ ಮಾಡಬೇಕೆಂದರೆ, ಎಷ್ಟು ಕೋಟಿ ರೂಪಾಯಿ ಖರ್ಚಾಗುತ್ತದೆ ಎನ್ನುವಂಥ ವಿಚಾರ ಎಲ್ಲರಿಗೂ ತಿಳಿದಿದ್ದು, ಪ್ರಶ್ನೋತ್ತರ ಅವಧಿಯಲ್ಲಿ ಪ್ರತಿ ಸದಸ್ಯರು ಪಾಪ ಅವರವರ ಕ್ಷೇತ್ರದ ಅಭಿವೃದ್ಧಿಗೆ ಎಷ್ಟು ಗಟ್ಟಿಯಾಗಿ ಪ್ರಶ್ನೆಗಳ ಮೂಲಕ ಸರ್ಕಾರಕ್ಕೆ ಹಣವನ್ನು ಕೇಳುತ್ತಾರೆ ಎಂಬುದನ್ನು ನಾವೆಲ್ಲರೂ ನೋಡಿದ್ದೇವೆ. ಇಂತಹ ಮೂಲಭೂತ ಸೌಕರ್ಯವನ್ನು ನಿರ್ಮಾಣ ಮಾಡಬೇಕೆಂದರೆ, ನಮ್ಮ ರಾಜ್ಯದಲ್ಲಿ ಒಟ್ಟು ಎಷ್ಟು ನಷ್ಟವಾಗಿದೆ; ರಾಜ್ಯದ ಸಂಪನ್ಮೂಲದಲ್ಲಿ ಎಷ್ಟು ಹಣವನ್ನು ನೀಡಬೇಕು; ಕೇಂದ್ರ ಸರ್ಕಾರದಿಂದ ಏನೇನು ತರಬೇಕು; ಎನ್ನುವಂಥ ನಿಟ್ಟಿನಲ್ಲಿ ಸರ್ಕಾರ ಖಂಡಿತ ವೈಜ್ಞಾನಿಕ ಮತ್ತು ಪ್ರಾಮಾಣಿಕ ರೀತಿಯಲ್ಲಿ ಲೆಕ್ಕಚಾರ ಮಾಡಿ, ಮುಂದಿನ ದಿನಗಳಲ್ಲಿ ದೀರ್ಘಕಾಲ ಪರಿಹಾರ ನೀಡುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

ಈಗಾಗಲೇ ಬೆಳೆ ಹಾನಿ ವಿಚಾರವಾಗಿ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಸದ್ಯಕ್ಕೆ ಬೆಳೆ ಬಿತ್ತನೆ ಮಾಡುವಂತದ್ದು. ಈ ಬಾರಿ ನಿಯಮಿತ ಸನ್ನಿವೇಶವನ್ನು ಮೀರಿ ಅವಧಿಗೂ ಮುನ್ನಾ ಮಳೆ ಶುರುವಾಗಿತ್ತು. ಋತುಮಾನವನ್ನು ಮೀರಿದಂಥ ಅಕಾಲಿಕ ಮಳೆಯಿಂದಾಗಿ ಬಿತ್ತನೆ ಮಾಡಿದಂಥ ಬೆಳೆ ಕೊಚ್ಚಿಕೊಂಡು ಹೋಗಿ ಮಣ್ಣು ಸವಕಲು ಉಂಟಾಗಿದೆ, ಬಿತ್ತನೆ ಪ್ರಮಾಣ ಕಡಿಮೆಯಾಗಿದೆ, ಇದರಿಂದಾಗಿ ಮುಂದಿನ ದಿನಗಳಲ್ಲಿ ಬೆಳೆ ಕ್ಷಾಮದಿಂದಾಗಿ ಆಹಾರ ಸಮಸ್ಯೆ ಉಂಟಾಗುತ್ತದೆ ಎಂಬುದು ಗೊತ್ತಿಲ್ಲ. ಬೆಲೆ ಏರಿಕೆಯುಂಟಾಗಿ ತರಕಾರಿ ಖರೀದಿಗೆ ತೊಂದರೆಯಾಗುತ್ತದೆ. ಇದೆಲ್ಲವನ್ನೂ ನಾವು ಅಂದಾಜಿಸಬೇಕಾಗಿದೆ. ನಿಯಮ 68 ರಡಿ ಚರ್ಚೆ ಮಾಡುವಾಗ ಜಗಳವಾಡುವಂಥ ಸನ್ನಿವೇಶ ಉದ್ಭವಿಸುವುದಿಲ್ಲ. ಆ ಒಂದು ನಿಟ್ಟಿನಲ್ಲಿ ರೈತರ ನೆರವಿಗೆ ರಾಜ್ಯ ಸರ್ಕಾರ ಕಟಿಬದ್ಧವಾಗಿದೆ. ನಮ್ಮ ಸರ್ಕಾರದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ, ಶ್ರೀ ಸದಾನಂದಗೌಡ, ಶ್ರೀ ಜಗದೀಶ್ ಶೆಟ್ಟರ್ ಹಾಗೂ ಇಂದಿನ ಶ್ರೀ ಬಸವರಾಜ ಬೊಮ್ಮಾಯಿರವರ ಸರ್ಕಾರವಾಗಿರಬಹುದು. ನಮ್ಮ ಬಿ.ಜೆ.ಪಿ.ಸರ್ಕಾರವು ರೈತ ಕೇಂದ್ರಿತ ಸರ್ಕಾರ ಎಂದು ಅತ್ಯಂತ ಹೆಮ್ಮೆ / ಕಳಕಳಿಯಿಂದ ಹೇಳಲು ಇಚ್ಛಿಸುತ್ತೇನೆ. ರಾಜ್ಯದ ಸಂಪನ್ಮೂಲದಲ್ಲಿ ಅತೀ ಹೆಚ್ಚು ಆದ್ಯತೆಯನ್ನು, ಪ್ರಥಮ ಆದ್ಯತೆಯನ್ನು ರೈತರ ಜೀವನವನ್ನು ಸುಧಾರಿಸುವುದಕ್ಕಾಗಿ ಹಾಗೂ ಅವರ ಬೆಳೆಗೆ ಮತ್ತು ಭೂಮಿಗೆ ಅವಕಾಶ ಮಾಡಿಕೊಡುತ್ತೇವೆ. ಕೇಂದ್ರದ ಯೋಜನೆಗಳು ಸಹ ಬಹಳ ಸಹಕಾರಿಯಾಗಿವೆ. ಬೆಳೆ ಪರಿಹಾರವಾಗಿರಬಹುದು, ಕನಿಷ್ಠ ಬೆಂಬಲ ಬೆಲೆ ಆಗಿರಬಹುದು, ರಿಯಾಯಿತಿ ದರದಲ್ಲಿ ರೈತರ ಬೆನ್ನೆಲುಬು ಗಟ್ಟಿ ಮಾಡುವಂಥ ಎಲ್ಲಾ ಯೋಜನೆಗಳಾಗಿರಬಹುದು, ರೈತರ ಖಾತೆಗೆ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಕೇಂದ್ರ ಸರ್ಕಾರದ ಯೋಜನೆಯಡಿ ಪರಿಹಾರ ನೀಡುತ್ತಿರುವ ರೂ.6,000 ಇರಬಹುದು ಮತ್ತು ರಾಜ್ಯ ಸರ್ಕಾರದ ಯೋಜನೆಯಡಿ ಪರಿಹಾರ ನೀಡುತ್ತಿರುವ ರೂ.4,000 ಏನಿದೆ, ಇವೆಲ್ಲದಕ್ಕೂ ಖಂಡಿತವಾಗಿ ನಾವು ಬದ್ಧವಾಗಿದ್ದೇವೆ. ಇನ್ನು ಮುಂದೆ ಸಹ ಪ್ರತಿಪಕ್ಷವು ಹೇಳುವಂಥ ಒಳ್ಳೆಯ ಅಭಿಪ್ರಾಯವನ್ನು ತೆಗೆದುಕೊಂಡು, ಆ ನಿಟ್ಟಿನಲ್ಲಿ ಸರ್ಕಾರ ಮುಂದುವರೆಯುತ್ತದೆ ಎನ್ನುವಂಥ ನಂಬಿಕೆಯನ್ನು ನಾನು ಹೊಂದಿದ್ದೇನೆ.

ನನ್ನ ಮನಸ್ಸಿಗೆ ಒಂದು ಸಂದರ್ಭದಲ್ಲಿ ಐ.ಟಿ.–ಬಿ.ಟಿ. ವಿಚಾರವಾಗಿ ಮಾನ್ಯ ಶರವಣನವರು ಮಾತನಾಡುವಾಗ ನೋವು ಸಹ ಆಗಿತ್ತು. ಬೆಂಗಳೂರು ಬ್ರ್ಯಾಂಡ್ international city ಆಗಬೇಕಾದರೆ, ಎಲ್ಲರೂ ಕೂಡಾ ಕೈ ಜೋಡಿಸಬೇಕಾಗುತ್ತದೆ. ಭೂಮಿ ಉಳುವ ಅನ್ನದಾತ ರೈತ ಎಷ್ಟು ಪ್ರಮುಖವಾದ ಕೊಡುಗೆಯನ್ನು ನೀಡುತ್ತಿದ್ದಾನೆ, ಅಷ್ಟೇ ಮಟ್ಟಕ್ಕೆ ಸಿಲಿಕಾನ್ ವ್ಯಾಲಿ ಪ್ರಪಂಚದಲ್ಲಿಯೇ ಅಮೇರಿಕಾ, ಯು.ಕೆ. ಅನ್ನು ಹಿಂದೆ ಹಾಕಿ, ನಮ್ಮ talent pool ಏನಿದ್ದಾರೆ, ಅವರು ನಮ್ಮ ರಾಜ್ಯಕ್ಕೆ ಬಂದು ಐ.ಟಿ.–ಬಿ.ಟಿ. ಉದ್ಯಮದಲ್ಲಿ ಅತೀ ಹೆಚ್ಚು ಕೊಡುಗೆ ನೀಡುವುದರ ಮೂಲಕ, ಉದ್ಯೋಗ ಸೃಷ್ಟಿಯಲ್ಲಿ ಮಾತ್ರವಲ್ಲದೇ, ಅಂತರ ರಾಷ್ಟ್ರೀಯ ಮಟ್ಟದಲ್ಲಿಯೂ ರಾಜಧಾನಿಯಾದ ಬೆಂಗಳೂರಿಗೆ ದೊಡ್ಡ ಹೆಮ್ಮೆಯನ್ನು ತಂದಿದ್ದಾರೆ. ಈ ಒಂದು ಸಂಕಷ್ಟದಲ್ಲಿ ಪರಿಹಾರವನ್ನು ಕಂಡು ಹಿಡಿಯಬೇಕು. ರಾಜಕಾಲುವೆ, ಕೆರೆಗಳು ಏನು ಒತ್ತುವರಿಯಾಗಿದೆ, ಇವೆಲ್ಲವೂ ಒಂದು ದಿನದಲ್ಲಿ ಆಗಿರುವಂಥದ್ದಾಗಿಲ್ಲ. ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದು,.... ಈಗಾಗಲೇ ನಾನು ಹೇಳಿದ ಹಾಗೆ ರಾಜಕಾರಣವನ್ನು ಈ ವಿಷಯದಲ್ಲಿ ಮಿಕ್ಸ್ ಮಾಡುವುದಿಲ್ಲ. ನಾವೆಲ್ಲರೂ ಆ ವಿಚಾರದಲ್ಲಿ ಮೈಮರೆತ್ತಿದ್ದೇವೆ. ಈ ಸದನದಲ್ಲಿ ತಮ್ಮ ಪೀಠದ ಮೇಲೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಹಾಗೂ ಭಾರತದ ಶ್ರೇಷ್ಠ ವಾಸ್ತುಶಿಲ್ಪಿಯಾದ ಶ್ರೀ ಸರ್.ಎಂ.ವಿಶ್ವೇಶ್ವರಯ್ಯನವರ ಭಾವಚಿತ್ರಗಳನ್ನು ಇಡಲಾಗಿದೆ. 192 ಕೆರೆಗಳೇನಿವೆ, ಆ ಕೆರೆಗಳಿಂದಲೇ ಆಸರೆ ಪಡೆದು ಈ ಬೆಂಗಳೂರು ನಗರ ನಿರ್ಮಾಣವಾಗಿರುವುದು. ಪ್ರಪಂಚದ ಯಾವುದೇ ನಾಗರಿಕ ಪಟ್ಟಣಗಳಾಗಿರಲಿ, ನದಿಯಿಲ್ಲದೇ ಪಟ್ಟಣ ನಿರ್ಮಾಣವಾಗಿಲ್ಲ. ಅದನ್ನು ಎಲ್ಲಿ ಬೇಕಾದರೂ ನೋಡಬಹುದು. ಬೆಂಗಳೂರು ಸಮುದ್ರದ ಮಟ್ಟಕ್ಕಿಂತ ಇಷ್ಟು ಎತ್ತರದಲ್ಲಿ ಇದ್ದರೂ ಕೂಡಾ ಆವೊತ್ತಿನ ದಿನ ಶ್ರೀ ನಾಡಪ್ರಭು ಕೆಂಪೇಗೌಡರು ಹಾಗೂ ಶ್ರೀ ಕೆಂಗಲ್ ಹನುಮಂತಯ್ಯನವರು ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರಿಬ್ಬರ ಭಾವಚಿತ್ರಗಳು ಸಹ ಈ ಸದನದಲ್ಲಿ ಇದ್ದರೆ ಈ ಸದನವು ಇನ್ನು ಚೆನ್ನಾಗಿ ಶೋಭಿಸುತ್ತದೆ ಎಂದು ನನಗೆ ಅನಿಸುತ್ತಿದೆ. ಈ ನಾಡನ್ನು ನಮಗೆ ನೀಡಿದಂಥ ಶ್ರೀ ನಾಡಪ್ರಭು ಕೆಂಪೇಗೌಡರವರ ಭಾವಚಿತ್ರವನ್ನು ಕಡ್ಡಾಯವಾಗಿ ಈ ಸದನದೊಳಗೆ ಹಾಕಲೇಬೇಕೆಂದು ನನ್ನ ಅಭಿಪ್ರಾಯವಾಗಿದೆ.

ಹಾಗೆಯೇ ಈ ಸದನವನ್ನು ಕಟ್ಟಿಕೊಟ್ಟಂತಹ ಶ್ರೀ ಕೆಂಗಲ್ ಹನುಮಂತಯ್ಯನವರು ಸಹ ಈ ನಾಡಿನ ಮುತ್ಸದ್ದಿಯಾಗಿದ್ದು, ಅವರ ಭಾವಚಿತ್ರವು ಈ ಸದನದೊಳಗೆ ಹಾಕಿದರೆ, ಅವರು ಪ್ರಾತಃಸ್ಮರಣೀಯರು, ನಮಗೆ ಸ್ಫೂರ್ತಿ ಬರುತ್ತದೆ. ಈ ನಿಟ್ಟನಲ್ಲಿ ಶ್ರೀ ನಾಡಪ್ರಭು ಕೆಂಪೇಗೌಡರು ಯಾವ ದೂರದೃಷ್ಟಿಯನ್ನಿಟ್ಟುಕೊಂಡು ಕೆರೆಗಳನ್ನು ನಿರ್ಮಾಣ ಮಾಡಿದ್ದರು, ಅದನ್ನು ನಾವೆಲ್ಲರೂ ಕೂಡಾ ಮುಂದಾಲೋಚನೆ ಇಲ್ಲದೇ ಸರ್ಕಾರಿ ಭೂಮಿಯನ್ನು ಬೇರೆಯವರಿಗೆ ನೀಡಿರುವುದರಿಂದ, ಕೆರೆಗಳನ್ನೆಲ್ಲಾ unscientifically ಮುಚ್ಚಿಕೊಂಡು ಬಂದು ಇವತ್ತಿನ ದಿವಸ ಯಾವ ಕೆರೆಯನ್ನು ಮುಚ್ಚಿ ಏನೇನು ನಿರ್ಮಾಣ ಮಾಡಿದ್ದೇವೆ ಎಂಬುದನ್ನು ಮಾಧ್ಯಮದಲ್ಲಿ ತೋರಿಸಿದ್ದಾರೆ. ನಾವು ಅಭಿವೃದ್ಧಿ ಮಾಡಲು ಹೋದರೆ, ಅದು ನೀರಿಗೆ ಗೊತ್ತಾಗುವುದಿಲ್ಲ. ಜಲಮಾರ್ಗವು ತನಗೆ ತಾನೇ ಕಂಡುಕೊಳ್ಳುತ್ತದೆ, ಜೌಗು ಪ್ರದೇಶ ಮುಳುಗಡೆಯಾಗಿದೆ. ಹಾಗೆಯೇ ಅರ್ಕಾವತಿ valley, ವೃಷಭಾವತಿ valley ಏನಿದೆ,... ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಏನಿದೆ, ಅದು ಒಂದು ಕಾಲದಲ್ಲಿ ನದಿಯಾಗಿತ್ತು. ೮೪೦ ಕಿಲೋ ಮೀಟರ್ ಈ valley ಏನಿದೆ, ಅಲ್ಲಿ ಮತ್ತೆ ನಾವೆಲ್ಲರೂ ಇಚ್ಛಾಸಕ್ತಿಯನ್ನು ಹೊಂದಿದರೆ ನದಿಯನ್ನು ಪುನರ್ ನಿರ್ಮಾಣ ಮಾಡಲು ಸಾಧ್ಯವಿದೆ. ಕೊಳಚೆ ನೀರನ್ನು ಬೇರ್ಪಡಿಸಿ... ಇಷ್ಟು ಪ್ರಮಾಣದಲ್ಲಿ ಆಗುತ್ತಿರುವ ಮಳೆ ನೀರನ್ನು,... ಮಳೆ ಬಾರದ ಸಂದರ್ಭದಲ್ಲಿ ಮೋಡ ಬಿತ್ತನೆ ಮಾಡಲಾಗಿತ್ತು. ಎಷ್ಟು ಹಣವನ್ನು ಖರ್ಚು ಮಾಡಿದ್ದೆವು? ಈ ಮಳೆಯೂ ದೇವರು ನೀಡುವಂಥ ವರವಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಭೋಜೇಗೌಡರವರೆ ಒಂದು ನಿಮಿಷ. ನಾನು ಮಾತನಾಡಿ ಮುಗಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ತೇಜಸ್ವಿನಿ ಗೌಡರವರೆ ನಾನು ಮಾತನಾಡುವ ಸಂದರ್ಭದಲ್ಲಿ ತಮಗೆ ಮಾತನಾಡಲು ಅವಕಾಶ ನೀಡಿದ್ದೇನೆ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಭೋಜೇಗೌಡರವರೆ ದಯವಿಟ್ಟು ನನ್ನ ಮಾತನ್ನು ಮುಗಿಸಿ ಬಿಡುತ್ತೇನೆ. ಈ ಮಳೆ ನಾವು ಕೇಳಿದಾಗ ಬರುವುದಿಲ್ಲ.

... ಮುಂದು

(999) 22.09.2022/4.30/ಎಸ್‌ಕೆ-ಬಿಎನ್‌ಎಸ್

(ಸಭಾಪತಿಯವರ ಉಪಸ್ಥಿತಿ)

ಡಾ|| **ತೇಜಸ್ವಿನಿ ಗೌಡ (ಮುಂದು):-**

ಮಾನ್ಯ ಸಭಾಪತಿಯವರೇ, ಮಳೆಯನ್ನು "ಅವಾಂತರ" ಎಂದು ಕರೆಯಬೇಡಿ ಎಂದು ನಾನು ಈ ಘನತೆವೆತ್ತ ಸದನದ ಮೂಲಕ ಮೀಡಿಯಾದವರಿಗೆ ವಿನಂತಿ ಮಾಡುತ್ತೇನೆ. ವರುಣ ನಾವು ಕೇಳಿದಾಗ ಬರುವುದಿಲ್ಲ. ನಾವು ತಪ್ಪು ಮಾಡಿದ್ದೇವೆ: ಇವತ್ತು ಈ ಅಕಾಲಿಕ ಮಳೆಗೆ, ವಾತಾವರಣ ಬದಲಾವಣೆಗೆ ನಾವು ಕಾರಣರು. ಮರಗಳನ್ನು ಕಡಿದರೆ, ಭೂಮಿಯ ಫಲವತ್ತತೆಯನ್ನು ಯಾರು ತಡೆಯುತ್ತಾರೆ? ಭೂಮಿಯಲ್ಲಿ ಹುಲ್ಲುಗಾವಲು ಇಲ್ಲ; ಭೂಮಿಯನ್ನು ನುಂಗುತ್ತಿದ್ದೇವೆ, ಭೂಮಿಯನ್ನು ಎಲ್ಲರಿಗೂ ಹಂಚುತ್ತಿದ್ದೇವೆ; ಭೂಮಿಯನ್ನು ಭೂಮಿಯಾಗಿ ಇರುವುದಕ್ಕೆ ಬಿಡದಿದ್ದರೆ, ಮನುಷ್ಯ ಪ್ರಕೃತಿಯ ಮುಂದೆ ಕೇವಲ ಹುಲುಮಾನವ ಎಂಬುದನ್ನು ಅದು ತೋರಿಸಿಕೊಟ್ಟಿದೆ. ನಾವೆಲ್ಲರೂ ಮನಸ್ಸು ಮಾಡಿದರೆ, ದೀರ್ಘಕಾಲದ ನಿರ್ಲಕ್ಷತೆಗೆ ಒಳಗಾಗಿರುವ ಈ ಒಂದು ನಗರವನ್ನು ಮತ್ತೆ ನಿರ್ಮಾಣ ಮಾಡಿದರೆ, ಅದೇನೂ ದೊಡ್ಡ ಸಮಸ್ಯೆಯಲ್ಲ.

**ಸಭಾಪತಿಯವರು:-** ಡಾ|| ತೇಜಸ್ವಿನಿ ಗೌಡರೇ, ತಾವು ಈಗಾಗಲೇ ಹದಿನೈದು ನಿಮಿಷಗಳಷ್ಟು ಸಮಯವನ್ನು ತೆಗೆದುಕೊಂಡಿದ್ದೀರಿ. ತಮ್ಮ ಮಾತನ್ನು ಬೇಗ ಮುಗಿಸಿ.

**ಡಾ|| ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮುಂದಿನ ದಿನಗಳಲ್ಲಿ ಸರ್ಕಾರದ ಎದುರುಗಡೆ ದೊಡ್ಡ ಸವಾಲು ಇದೆ. ನನಗೆ ನಂಬಿಕೆ ಇದೆ. ನಾವೆಲ್ಲರೂ ಈ ಸರ್ಕಾರಕ್ಕೆ ಸಹಕಾರ ಕೊಡೋಣ. ಮತ್ತೊಮ್ಮೆ ಕರ್ನಾಟಕದ ಜನತೆಗೆ

ನೀಡಬೇಕಾದಂತಹ ಪರಿಹಾರಗಳು ಇರಬಹುದು, ಮುಂದಿನ ದಿನಗಳಲ್ಲಿ ಬೆಳೆ ದೃಢೀಕರಣ ಅವರಿಗೆ ಬೇಕಾಗಿದೆ. ಆ ನಿಟ್ಟಿನಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದರೆ, ಖಂಡಿತ ಈ ಪ್ರವಾಹ ಪರಿಸ್ಥಿತಿಯನ್ನು ಮತ್ತು ಕೆರೆ-ಕಟ್ಟೆಗಳ ಒತ್ತುವರಿ ತೆರವು ಮಾಡುವುದಕ್ಕೆ ಪ್ರತಿಯೊಬ್ಬ ಶಾಸಕರು ಮನಸ್ಸು ಮಾಡಬೇಕು. ನಾವು ಯಾರಿಗೂ ಕೆಟ್ಟವರಾಗಬಾರದು. ಕೆರೆ ಒತ್ತುವರಿಯನ್ನು ಯಾರು ತೆರವು ಮಾಡುತ್ತಾರೆ? ಅಧಿಕಾರಿಗಳು ಹೋದರೆ ಏಟು ತಿಂದು ಬರುವುದಕ್ಕಾಗುತ್ತದೆಯೇ? ಜೆ.ಸಿ.ಬಿ.ಗಳ; ನಾನು ಒಂದು ಮಾತನ್ನು ಹೇಳುತ್ತೇನೆ. ನನ್ನ ಸರ್ಕಾರವೇ ಅಧಿಕಾರದಲ್ಲಿ ಇರಬಹುದು; ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುವುದಕ್ಕೆ ಸಮಯವನ್ನು ತೆಗೆದುಕೊಳ್ಳುತ್ತೇನೆ. ದಯವಿಟ್ಟು, ಕಾನೂನನ್ನು violate ಮಾಡಿ, ಯಾವ ಕಾನೂನಿನಡಿಯಲ್ಲಿ ದುರಪಯೋಗ ಮಾಡಿ, ಕಟ್ಟುವುದಕ್ಕೆ ಬಿಟ್ಟಿದ್ದೀರಿ. ಕಾನೂನು ಮತ್ತೆ ಹೇಳುವ ತನಕ ಮನೆ ತೆರವುಗೊಳಸುವ ಕೆಲಸ ಮಾಡಬಾರದು. ಅದನ್ನು mark ಮಾಡಬೇಕು. ಅವರ ಒತ್ತುವರಿ ಮಾಡಿಕೊಂಡಿದ್ದಾರೋ ಇಲ್ಲವೋ ಎಂಬುದರ ದೃಢೀಕರಣ ಆಗಬೇಕು. ದೃಢೀಕರಣವಾದ ಮೇಲೆ ಯಾವುದೇ ಒಂದು ರೀತಿಯ ರಿಯಾಯಿತಿ ತೋರದೇ ತೆರವುಗೊಳಸುವಂತಹ ಕೆಲಸವಾಗಬೇಕು. ಹಾಗಾಗಿ ಕೆರೆಕುಂಟೆಗಳನ್ನು ರಕ್ಷಣೆ ಮಾಡುವ ಮೂಲಕ ಪ್ರವಾಹ ತಡೆಗೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, ಈ ಸರ್ಕಾರದ ಮೇಲೆ ಎಲ್ಲರೂ ಭರವಸೆಯನ್ನು ಇಡಬಹುದು. ಈ ಪ್ರವಾಹ ಪರಿಸ್ಥಿತಿಯನ್ನು ಉತ್ತಮ ರೀತಿಯಲ್ಲಿ ಸರ್ಕಾರ ನಿರ್ವಹಿಸಿದೆ ಮತ್ತು ಮುಂದಿನ ದಿನಗಳಲ್ಲಿ ನಿಭಾಯಿಸುತ್ತದೆ ಎನ್ನುವ ವಿಶ್ವಾಸದ ಜೊತೆಗೆ ನಾನು ಈ ಒಂದು ಚರ್ಚೆಯಲ್ಲಿ ಭಾಗವಹಿಸಿದ್ದೇನೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಾವು ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಮ್ಮ ಮಾತನ್ನು ಐದು ನಿಮಿಷದಲ್ಲಿ ಮುಗಿಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಆದಷ್ಟು ಬೇಗ ಮುಗಿಸುತ್ತೇನೆ.

**ಸಭಾಪತಿಯವರು:-** ವಿರೋಧ ಪಕ್ಷದವರಿಗೆ ಹತ್ತು ನಿಮಿಷ ಮಾತನಾಡುವುದಕ್ಕೆ ಸಮಯ ಕೊಟ್ಟು, ಆಡಳಿತ ಪಕ್ಷದವರಿಗೆ ಐದು ನಿಮಿಷ ಸಮಯ ಕೊಟ್ಟರೆ, ಆಡಳಿತ ಪಕ್ಷದವರು ಏನು ಅನ್ನುತ್ತಾರೆ?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳನಲ್ಲಿ ಧಾರಾಕಾರ ಮಳೆಯಾದ ಮೇಲೆ ಬಹುಶಃ ಬೆಂಗಳೂರು ಅಷ್ಟೇ ಅಲ್ಲ, ರಾಮನಗರ ತೂಮಕೂರು ಮತ್ತು ಬೆಂಗಳೂರು-ಮೈಸೂರು ಹೆದ್ದಾರಿಗಳು ಇವೆಲ್ಲವೂ ಮಳೆಯಿಂದ ಮುಳುಗಿ ಹೋಗಿದ್ದು, ಜನರು ಪಡಬಾರದ ಸಂಕಷ್ಟ ಪಟ್ಟಿರುವ ಸಂಗತಿಯನ್ನು ನಾವು ನೋಡಿದ್ದೇವೆ. ಅವೈಜ್ಞಾನಿಕವಾಗಿ ಚರಂಡಿಗಳು ಮತ್ತು ರಸ್ತೆಗಳನ್ನು ನಿರ್ಮಾಣ ಮಾಡಿದ್ದರಿಂದ ರಾಮನಗರದ ಜನರು ಸಾಕಷ್ಟು ಸಂಕಷ್ಟ ಅನುಭವಿಸುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಹಾಗೆಯೇ ಸ್ಮಾರ್ಟ್ ಸಿಟಿಗಳೆಂದು ಆಯ್ಕೆ ಮಾಡಿದ ಬೆಂಗಳೂರು, ತುಮಕೂರು, ಮಂಗಳೂರು ಮಂತಾದ ನಗರಗಳಲ್ಲಿ ಸಾಕಷ್ಟು ಮಳೆಯಾಗಿದ್ದು, ಇದರಿಂದಾಗಿ, ಜನರು ಬಹಳಷ್ಟು ಪರದಾಡಿದರು. ಅವೈಜ್ಞಾನಿಕ ಕಾಮಗಾರಿಗಳಿಂದಾಗಿ, ಈ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂತು. ಮಳೆ ಯಾವ ಪ್ರಮಾಣದಲ್ಲಿ ಹೆಚ್ಚಾಯಿತು ಎಂದು ಹೇಳಿದರೆ, ಬೆಂಗಳೂರು ನಗರದಲ್ಲಿ ವಾಡಿಕೆಯಂತೆ 475 ಮಿಲಿ ಮೀಟರ್ ಮಳೆ ಬರಬೇಕಾಗಿದ್ದು, ವಾಸ್ತವವಾಗಿ 1086 ಮಿಲಿ ಮೀಟರ್ ಮಳೆ ಬಂತು. ಅಂದರೆ, 128% ಮಳೆ ಜಾಸ್ತಿಯಾಯಿತು. ಅದೇ ತರಹವಾಗಿ ಬೆಂಗಳೂರು ನಗರದಲ್ಲಿ 475 ಮಿಲಿ ಮೀಟರ್ ಮಳೆಯಾಗಬೇಕಾಗಿತ್ತು. ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳನಲ್ಲಿ 1086 ಮಿಲಿ ಮೀಟರ್ ಮಳೆಯಾಗಿದ್ದು, ಶೇಕಡ 128 ರಷ್ಟು ಮಳೆ ಜಾಸ್ತಿಯಾಯಿತು. ತುಮಕೂರು ಜಿಲ್ಲೆಯಲ್ಲಿ 358 ಮಿಲಿ

ಮೀಟರ್ ಮಳೆಯಾಗಬೇಕಾಗಿದ್ದು, 1004 ಮಿಲಿ ಮೀಟರ್‌ಗಳಷ್ಟು ಮಳೆಯಾಗಿದ್ದು, ಶೇಕಡ 180 ರಷ್ಟು ಮಳೆ ಜಾಸ್ತಿಯಾಗಿದ್ದನ್ನು ನಾವು ನೋಡಿದ್ದೇವೆ. ಬಳ್ಳಾರಿ, ವಿಜಯನಗರ, ಯಾದಗಿರಿ, ಬೆಳಗಾವಿ, ಬಾಗಲಕೋಟೆ, ಗದಗ ಇವೆಲ್ಲಾ ಜಿಲ್ಲೆಗಳಲ್ಲಿ ಮಳೆ ಹೆಚ್ಚಾಗಿರುವ ಪ್ರಮಾಣದ ಅಂಕಿ-ಅಂಶಗಳ ಮಾಹಿತಿ ನನ್ನ ಬಳಿ ಇದೆ. ಅದನ್ನು ಹೇಳಿ, ನನ್ನ ಸಮಯವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಮಲೆನಾಡಿನಲ್ಲಿಯೂ ಕೂಡ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಮಳೆಯಾಗಿದೆ. ಮಳೆಯಾದ ಕಾರಣ ಇವತ್ತಿನ ದಿನ ಏನಾಗಿದೆ ಎಂದರೆ, ರೈತರು ಎಲ್ಲಾ ಕಡೆ ಬಿತ್ತನೆ ಮಾಡುವುದು ಕಡಿಮೆಯಾಗಿದೆ. ಧಾರಕಾರ ಮಳೆ ಒಂದು ಕಡೆಯಾದರೆ, ರೈತರು ಬಿತ್ತನೆ ಮಾಡುವಂತಹ ಅವಕಾಶ ಸಿಗದೇ ಇದ್ದುದಕ್ಕೆ, ಭತ್ತದ ಬಿತ್ತನೆಯ ಗುರಿ 10.6 ಲಕ್ಷ ಹೆಕ್ಟೇರ್ ಆಗಿದ್ದರೆ, ಕೇವಲ 8.3 ಲಕ್ಷ ಹೆಕ್ಟೇರ್‌ಗಳಿಗೆ ಮಾತ್ರ ಭತ್ತ ಬಿತ್ತನೆಯಾಗಿದೆ.  ಅಂದರೆ, ಶೇಕಡ 89 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ರೈತರು ಭತ್ತವನ್ನು ಬಿತ್ತನೆ ಮಾಡಿರುವಂತಹದ್ದು. 1.24 ಲಕ್ಷ ಹೆಕ್ಟೇರ್ ಜೋಳ ಬಿತ್ತನೆಯ ಗುರಿಯಾಗಿದ್ದರೆ, ಕೇವಲ 0.59 ಲಕ್ಷ ಹೆಕ್ಟೇರ್‌ಗಳಿಗೆ ಮಾತ್ರ ಜೋಳ ಬಿತ್ತನೆಯಾಗಿದೆ.  ಅಂದರೆ, ಶೇಕಡ 48 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ಜೋಳ ಬಿತ್ತನೆಯಾಗಿದೆ. 7.17 ಲಕ್ಷ ಹೆಕ್ಟೇರ್ ರಾಗಿ  ಬಿತ್ತನೆಯ ಗುರಿಯಾಗಿದ್ದರೆ, ಕೇವಲ 4.75 ಲಕ್ಷ ಹೆಕ್ಟೇರ್‌ಗಳಿಗೆ ಮಾತ್ರ ರಾಗಿ ಬಿತ್ತನೆಯಾಗಿದೆ.  ಅಂದರೆ, ಶೇಕಡ 66 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ರಾಗಿ ಬಿತ್ತನೆಯಾಗಿದೆ.

ಮಾನ್ಯ ಸಭಾಪತಿಯವರೇ, ಎಲ್ಲಾ ಕಡೆಗಳಲ್ಲಿ  ಮುಂಗಾರಿನ ಏಕದಳ ಧಾನ್ಯಗಳನ್ನು ಸುಮಾರು 35.98 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಮಾಡುವ ಗುರಿ ಹಾಕಿಕೊಂಡಿದ್ದರೆ, ಈ ಬಾರಿ ಕೇವಲ 29.39 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ. ಹಾಗೆಯೇ ತೊಗರಿ 22.27 ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆಯಾಗಬೇಕಾಗಿತ್ತು. ಈ ಬಾರಿ ಕೇವಲ 19.58 ಲಕ್ಷ ಹೆಕ್ಟೇರ್‌ಗಳಲ್ಲಿ ಮಾತ್ರ ಬಿತ್ತನೆಯಾಗಿದೆ. ಎಲ್ಲಾ ಕಡೆಗಳಲ್ಲಿ ಬಿತ್ತನೆಯಾಗುವಂತಹದ್ದು ಕಡಿಮೆಯಾಗಿದೆ.  ರೈತರು ಬಿತ್ತನೆ ಮಾಡಲಿಲ್ಲ. ಇದರ ಪರಿಣಾಮವಾಗಿ, ಈ ವರ್ಷ ಬೆಳೆದ ಉತ್ಪನ್ನವೇನಿದೆ, ಅದು ಇವತ್ತು ಕಡಿಮೆಯಾಗುವ ಎಲ್ಲಾ ಸಂಕೇತಗಳು  ಕಾಣಿಸುತ್ತಿದೆ. ಇದರ ಜೊತೆಗೆ ಇವತ್ತು ಬೆಳೆದಂತಹ ಬೆಳೆ ಹಾನಿ ಅಂದಾಜಿನ ಪ್ರಕಾರ ಈ ವರ್ಷ  5.81 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಇವತ್ತು

ಸರ್ಕಾರ ಅಂದಾಜು ಮಾಡಿದೆ. ಆಗಸ್ಟ್ 20ನೇ ತಾರೀಖಿನವರೆಗೆ ಬಿದ್ದ ಮಳೆಯಿಂದಾಗಿ ಕನಿಷ್ಠವಾಗಿ 10 ಲಕ್ಷ ಹೆಕ್ಟೇರ್ ಅಥವಾ 25 ಲಕ್ಷ ಎಕರೆ ಭೂಮಿಯಲ್ಲಿ ಬೆಳೆದ ಬೆಳೆ ಹಾನಿಯಾಗಿದೆ. ಈ ಒಂದು ಮೂರು-ನಾಲ್ಕು ವರ್ಷಗಳಲ್ಲಿ ಮಳೆಯ ಹಾಹಾಕಾರ ಜಾಸ್ತಿಯಾಗಿರುವುದರಿಂದ ಒಟ್ಟು 1.19 ಲಕ್ಷ ಎಕರೆ ಬೆಳೆ ಹಾನಿಯಾಗಿರುವುದನ್ನು ನೋಡಿದ್ದೇವೆ. ನದಿಯ ಬಗ್ಗೆ ಹೇಳಬೇಕಾದರೆ, ವಿಶೇಷವಾಗಿ ನಮ್ಮ ಭಾಗವಾದ ಬಿಜಾಪುರ, ಬಾಗಲಕೋಟೆ, ಬೆಳಗಾವಿಯಲ್ಲಿಯೂ ಕೂಡ ಈ ನದಿಗಳು ಬಹಳಷ್ಟು ಉಕ್ಕಿ ಹರಿಯುತ್ತಿರುವುದನ್ನು ನೋಡಿದ್ದೇವೆ. ಇದರ ಜೊತೆಗೆ ಭೀಮಾ, ಘಟಪ್ರಭಾ, ಮಲಪ್ರಭಾ ಮುಂತಾದ ನದಿಗಳು ಉಕ್ಕಿ ಹರಿಯುತ್ತಿರುವುದನ್ನು ನೋಡಿ, 2009 ರಲ್ಲಿ ಆಗಿರುವಂತಹ ಪ್ರವಾಹದ ಬಗ್ಗೆ ಇವತ್ತು ನನಗೆ ನೆನಪು ಬರುತ್ತಿದೆ. ಇದರಲ್ಲಿ ಏನಾಗಿದೆ ಎಂದರೆ, ಒಂದು ಕಡೆ ಬಿತ್ತನೆಯಾಗಿಲ್ಲ, ಜೊತೆಗೆ ಕೆಲವು ಕಡೆ ಬೆಳೆದಂತಹ ಬೆಳೆ ಸಂಪೂರ್ಣವಾಗಿ ಹಾನಿಯಾಗಿದೆ. ರೈತರಿಗೆ ಸರಿಯಾಗಿ ಪರಿಹಾರ ಸಿಗುತ್ತಿಲ್ಲ. ಯಾವುದೇ ತರಹವಾದಂತಹ ಫಸಲ್ ಭಿಮಾ ಯೋಜನೆಯಡಿಯಲ್ಲಿ ಬಿತ್ತನೆಯಾಗಲಿಲ್ಲ ಎಂದರೆ, ಪರಿಹಾರ ಸಿಗುವುದಿಲ್ಲ. ಇವತ್ತು ರೈತರ ಕಷ್ಟಕ್ಕೆ ಸರ್ಕಾರ ಬರಬೇಕಾಗಿದೆ. ಸರ್ಕಾರಕ್ಕೆ ಪರಿಹಾರ ಕೊಡಬೇಕು. ಅವರಿಗೆ ಯಾವುದೇ ರೀತಿಯ ವಿಮೆಗಳು ಇವತ್ತು ಸಿಗುತ್ತಿಲ್ಲ. ಈ ಮಳೆಯ ಹಾಹಾಕಾರ ಜಾಸ್ತಿಯಾಗಿರುವುದರಿಂದ ಬಿತ್ತನೆ ಕಡಿಮೆಯಾಗಿದ್ದು, ಈ ಫಸಲ್ ಭಿಮಾ ಯೋಜನೆಯಿಂದಾಗಲೀ ಅಥವಾ ಯಾವುದೇ ಯೋಜನೆಗಳಿಂದ ವಿಮೆಗಳು ಅವರಿಗೆ ದೊರಕುತ್ತಿಲ್ಲ. ಬಹುಶಃ ಕೃಷಿ ಇಲಾಖೆಯಿಂದ ಈಗಾಗಲೇ ಸರ್ವೆ ಮಾಡಬೇಕಾಗಿತ್ತು. ಅವರಿಗೆ ಪರಿಹಾರ ಕೊಡಬೇಕಾಗಿತ್ತು. ಇಲ್ಲಿಯವರೆಗೂ ಕೂಡ ಪರಿಹಾರ ಕೊಡುವಂತಹ ಕೆಲಸವಾಗಿಲ್ಲ. ಇದರ ಜೊತೆಗೆ ಮಳೆಯಿಂದಾಗಿ ಮನೆಗಳು ಹಾನಿಗೀಡಾಗಿವೆ. ಮನೆಗಳು ಹಾನಿಗೀಡಾಗಿರುವ ಸಂಖ್ಯೆ ಎಷ್ಟು ಎಂದು ಹೇಳಿದರೆ, ಆಗಸ್ಟ್ 20 ರವರೆಗೆ 24408 ಮನೆಗಳು ಬಿದ್ದು ಹೋಗಿದ್ದು, ಸರ್ಕಾರ ಬಿದ್ದು ಹೋಗಿರುವ ಮನೆಗಳಿಗೆ ಪರಿಹಾರ ಕೊಡಬೇಕಾಗಿರುವಂತಹದ್ದು, ಇವತ್ತಿನವರೆಗೂ ಯಾವುದೇ ಪರಿಹಾರವನ್ನು ಕೊಟ್ಟಿಲ್ಲ. ಯಾವಾಗ ಪರಿಹಾರ ಕೊಡುತ್ತಾರೆ? ಬಡವರ ಮನೆಗಳು ಬಿದ್ದ ಮೇಲೆ, ಅವರು ಎಲ್ಲಿ ಹೋಗಿ ಜೀವನ ನಡೆಸಬೇಕು? ಅವರಿಗೆ ಪರಿಹಾರ ಕೊಡಲಿಲ್ಲವೆಂದರೆ, ಅವರು ಯಾವ ರೀತಿ ಜೀವನ ನಡೆಸುತ್ತಾರೆ ಎಂಬುದರ ಬಗ್ಗೆ ನಾವು ಇವತ್ತು ಚಿಂತನೆ ಮಾಡಬೇಕಾಗಿದೆ. ಪ್ರತಿ ವರ್ಷ 2009 ರಿಂದ ಇದುವರೆಗೆ

3,40,543 ಮನೆಗಳು ಹಾನಿಗೊಳಗಾಗಿವೆ ಎಂದು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದೆ. ಆದರೆ ಈ ನಾಲ್ಕು ವರ್ಷಗಳಲ್ಲಿ ಸಂಭವಿಸಿದ ಪ್ರಕೃತಿ ವಿಕೋಪದಿಂದಾಗಿ ರೂ 16,619 ಕೋಟಿಗಳಷ್ಟು ಮೌಲ್ಯದ ಮನೆಗಳನ್ನು ಇವತ್ತು ಕಳೆದುಕೊಂಡಿದ್ದೇವೆ. ಅದಕ್ಕೆ ಯಾವುದೇ ರೀತಿಯ ಪರಿಹಾರ ಇವತ್ತಿನವರೆಗೂ ಸರ್ಕಾರದಿಂದ ದೊರಕಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮುಂದು)

**(1000) 22-09-2022, 4.40, ಟಿಸಿಹೆಚ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ಮುಂದು)**

ಮಾನ್ಯ ಸಭಾಪತಿಯವರೇ, ನಾನು ಸುಮಾರು ಐದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಕ್ರಿಯಾ ಯೋಜನೆ ಬಗ್ಗೆ ಮಾನ್ಯ ಸದಸ್ಯರುಗಳು ಯಾರು ಮಾತನಾಡಿಲ್ಲ. ಹಾಗಾಗಿ, ನಾನು ಅದರ ಬಗ್ಗೆ ಬೆಳಕು ಚೆಲ್ಲುತ್ತೇನೆ. ರೂ.1,614 ಕೋಟಿಗಳಿಗೆ ಬಿ.ಬಿ.ಎಂ.ಪಿ.,ಯವರು ಸುಮಾರು 180 ಕಿಲೋಮೀಟರ್ ಕ್ರಿಯಾ ಯೋಜನೆ ರೂಪಿಸಿ ಆ ಹಣವನ್ನು ಮೀಸಲಿಟ್ಟಿದ್ದಾರೆ. ಆದರೆ ಬೆಂಗಳೂರಿನಲ್ಲಿ ಇಲ್ಲಿಯವರೆಗೂ ಕ್ರಿಯಾ ಯೋಜನೆಯೇ ಆಗಿಲ್ಲ. ಆ ಮೀಸಲಿಟ್ಟಿರತಕ್ಕಂಥ ಹಣವನ್ನು ಯಾವಾಗ ಖರ್ಚು ಮಾಡುತ್ತಾರೆ? ಬೆಂಗಳೂರಿನಲ್ಲಿ ಯಾವುದೇ ಒಳಚರಂಡಿ ಕೆಲಸಗಳು ಕೂಡ ಆಗುತ್ತಿಲ್ಲ. ಇವತ್ತಿನ ದಿವಸ ರೈತರು, ಬೆಂಗಳೂರಿನ ನಾಗರೀಕರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ನಾಗರಿಕರು ಈ ರೀತಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಳೆ ಹೆಚ್ಚಾದರೂ ಕೂಡ ನನ್ನ ಪ್ರಕಾರ ಸರ್ಕಾರ ಇಲ್ಲಿಯವರೆಗೂ . . . ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಪ್ರತಿಯೊಬ್ಬ ಸಚಿವರು ಪ್ರತಿಯೊಂದು ಜಿಲ್ಲೆಗೆ ಹೋಗಿ ಅಲ್ಲಿ ಆಗಿರತಕ್ಕಂಥ ಹಾನಿಗಳನ್ನು estimate ಮಾಡಿ, ಅದನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟು, ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಕೇಂದ್ರ ಸರ್ಕಾರದಿಂದ ಏನು ಪರಿಹಾರ ಬರಬೇಕಿತ್ತೋ ಅದನ್ನು ತೆಗೆದುಕೊಳ್ಳುವುದಕ್ಕೆ ನಾವು ಸಾಕಷ್ಟು ಪ್ರಯತ್ನಗಳನ್ನು ಮಾಡಿದ್ದೆವು. ವಿಶೇಷವಾಗಿ ಮಾಜಿ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಮನಮೋಹನ್ ಸಿಂಗ್ ರವರ ಸರ್ಕಾರ

ಇದ್ದಾಗ, ತುರ್ತಾಗಿ ಪರಿಹಾರವನ್ನು ಕೊಟ್ಟಿರುವುದನ್ನು ನಾವು ನೋಡಿದ್ದೇವೆ. ಆದರೆ ಇವತ್ತಿನ ದಿವಸ ನಾವು ಬಹಳ ನೋವಿನಿಂದ ಹೇಳಬೇಕಾಗುತ್ತದೆ. ನಮ್ಮ ರಾಜ್ಯದಿಂದ 25 ಜನ ಸಂಸದರು ಇದ್ದಾರೆ. ಡಬಲ್ ಇಂಜಿನ್ ಸರ್ಕಾರ ಇದ್ದರೂ ಕೂಡ ಅವರಿಗೆಲ್ಲಾ ಪರಿಹಾರ ಕೊಡಿಸುವ ಸಲುವಾಗಿ ಒತ್ತಡ ಹೇರಲು ಇವತ್ತಿನವರೆಗೂ ಕೂಡ ನಮ್ಮ ಸಂಸದರು ಕೇಂದ್ರ ಸರ್ಕಾರ ಮತ್ತು ಸನ್ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಹೋಗಿಲ್ಲ. ಸರ್ವಪಕ್ಷಗಳ ನಿಯೋಗ ಕೂಡ ಇದುವರೆಗೂ ಹೋಗಲಿಲ್ಲ. ಇದು ಬಹಳ ದುರದೃಷ್ಟಕರ ಸಂಗತಿ ಎಂದು ನಾನು ಭಾವಿಸಿದ್ದೇನೆ. ವಿಶೇಷವಾಗಿ, ಇದರಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಏನು ನೆರವು ಬರಬೇಕಾಗಿತ್ತು ಈ ನೆರವು ಬರುವುದರಲ್ಲಿ ಈಗಾಗಲೇ ಸಾಕಷ್ಟು ಸಮಯ ಆಗಿದೆ. ಅದನ್ನು ಆದಷ್ಟು ಬೇಗನೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಧನ್ಯವಾದಗಳು..

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿ ಕೇಂದ್ರ ಸರ್ಕಾರದಿಂದ ಬರಬೇಕಾದಂತಹ ಎನ್.ಡಿ.ಆರ್.ಎಫ್. (National Disaster Response Fund), ಏನಿದೆ, ಅದು ಪರಿಷ್ಕರಣೆ ಆಗಬೇಕಿತ್ತು. ಅದನ್ನು ಪ್ರತಿ 5 ವರ್ಷಕ್ಕೊಮ್ಮೆ ಒಂದು ಬಾರಿ ಪರಿಷ್ಕರಣೆ ಮಾಡಬೇಕಾಗಿತ್ತು. ಈ ಹಿಂದೆ 2015-16 ರಿಂದ 2019-20ನೇ ಸಾಲಿಗೆ ಅನ್ವಯವಾಗಿ ನಿಯಮಗಳನ್ನು ಮಾಡಿಕೊಂಡು ಅದನ್ನು ಈಗಾಗಲೇ ಚಾಲನೆ ಮಾಡಲಾಗಿದೆ. ಆದರೆ 2020ನೇ ಇಸವಿಯಾದರೂ ಕೂಡ ಎನ್.ಡಿ.ಆರ್.ಎಫ್., ಮಾರ್ಗಸೂಚಿಯನ್ನು ಪರಿಷ್ಕರಣೆ ಮಾಡುವುದಕ್ಕೆ ಯಾವುದೇ ಕ್ರಮ ತಗೆದುಕೊಂಡಿಲ್ಲ. ರಾಜ್ಯ ಸರ್ಕಾರ ಕೂಡ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ, ಎನ್.ಡಿ.ಆರ್.ಎಫ್. ನ ಏನು ನಿಯಮಗಳಿವೆ ಅವುಗಳನ್ನು ಪರಿಷ್ಕರಣೆ ಮಾಡಿ ಜಾಸ್ತಿ ಮಾಡುವುದಕ್ಕೆ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ. ವಿಶೇಷವಾಗಿ ಕಳೆದ ಎರಡು ವರ್ಷಗಳಿಂದ ಎಲ್ಲಾ ಉತ್ಪನ್ನಗಳ ಬೆಲೆ ದುಪ್ಪಟ್ಟಾಗಿವೆ. ಹಣದುಬ್ಬರ ದಾಖಲೆ ಮಟ್ಟಕ್ಕೆ ತಲುಪಿದೆ. ಇಷ್ಟಾದರೂ ಕೂಡ ಕೇಂದ್ರ ಸರ್ಕಾರ ಎನ್.ಡಿ.ಆರ್.ಎಫ್. ನಿಯಮಗಳನ್ನು ಪರಿಷ್ಕರಿಸಿಲ್ಲ. ಇವತ್ತಿನ ದಿವಸ ಅದನ್ನು ಪರಿಷ್ಕರಣೆ ಮಾಡಬೇಕೆಂದು ನಾವೆಲ್ಲರೂ ಒತ್ತಾಯ ಮಾಡಬೇಕು. ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ನೆರವಿಗೆ

ಬರಬೇಕು. ಇದಕ್ಕೆ ರಾಜ್ಯ ಸರ್ಕಾರ ಮತ್ತು ಸಂಸದರು ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಧನ್ಯವಾದಗಳು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಇನ್ನೊಂದು ಮಹತ್ವವಾದ ವಿಷಯದ ಬಗ್ಗೆ ಹೇಳಬಿಡುತ್ತೇನೆ. ಮಾತನಾಡಲು ಹಲವಾರು ವಿಷಯಗಳಿದ್ದರೂ ಕೂಡ ಸಮಯದ ಕೊರತೆ ಇದೆ. ಈ ವರ್ಷ ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಕೆಲವು ಕಡೆಗಳಲ್ಲಿ ಜಾಸ್ತಿ ಮಳೆಯಾಗಿ ಪ್ರವಾಹ ಉಂಟಾಗಿದೆ. ಇನ್ನೂ ಕೆಲವು ಕಡೆಗಳಲ್ಲಿ ಕಡಿಮೆ ಮಳೆಯಾಗಿದೆ. ಹವಾಮಾನ ತಜ್ಞರು ಮುಂದಿನ ದಿನಗಳಲ್ಲಿ ಹವಾಮಾನ ಬದಲಾವಣೆಯಿಂದ ರಾಜ್ಯದಲ್ಲಿ ಭೀಕರ ಸಮಸ್ಯೆ ಎದುರಾಗುತ್ತದೆ ಎಂದು ಈಗಾಗಲೇ ವರದಿ ಕೊಟ್ಟಿದ್ದಾರೆ. ಸರ್ಕಾರ 2 ವರ್ಷವಾದರೂ ಕೂಡ ಈ ವರದಿಯನ್ನು ಜಾರಿಗೆ ತರಲು ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಉದಾಹರಣೆಗೆ ಹೇಳವುದಾದರೆ, ಮುಂದಿನ ದಿನಗಳಲ್ಲಿ ಭತ್ತ ಶೇ.5.6 ರಷ್ಟು ಉತ್ಪಾದನೆ ಕಡಿಮೆಯಾಗಬಹುದು, ಕಡಲೆ ಶೇ.19 ರಷ್ಟು ಉತ್ಪಾದನೆ ಕಡಿಮೆಯಾಗಬಹುದು, ರಾಗಿ ಶೇ.12 ರಷ್ಟು ಉತ್ಪಾದನೆ ಕಡಿಮೆಯಾಗಬಹುದು, ಶೇಂಗಾ ಶೇ.9.6 ರಷ್ಟು ಉತ್ಪಾದನೆ ಕಡಿಮೆಯಾಗಬಹುದು, ಸೋಯಾಬಿನ್ ಶೇ.26.8 ರಷ್ಟು ಉತ್ಪಾದನೆ ಕಡಿಮೆಯಾಗಬಹುದು ಎಂದು ಅಂದಾಜು ಮಾಡಿದ್ದಾರೆ. ಆಮೇಲೆ ಕೆಲವು ಬೆಳೆಗಳು ಜಾಸ್ತಿಯಾಗುತ್ತಿದೆ. ವಿಶೇಷವಾಗಿ ಹತ್ತಿ, ಮೆಕ್ಕೇ ಜೋಳ, ಕಬ್ಬು ಬೆಳೆಗಳು ಹೆಚ್ಚಾಗುತ್ತವೆ. ಈ ಹವಾಮಾನ ಬದಲಾವಣೆಯಾಗುವುದನ್ನು ಮೊದಲೇ ರೈತರಿಗೆ ಮಾಹಿತಿ ಕೊಟ್ಟು ಅನುಕೂಲ ಮಾಡಿ ಕೊಡಬೇಕಾದಂಥ ಕರ್ತವ್ಯ ರಾಜ್ಯ ಸರ್ಕಾರದ್ದಾಗಿದೆ. ರಾಜ್ಯ ಸರ್ಕಾರ ಆ ರಿಪೋರ್ಟ್‌ನ್ನು ಅಲ್ಲೇ ಇಟ್ಟುಕೊಂಡು ಇಲ್ಲಿಯವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ನಾವು ಬಹಳ ದುಃಖದಿಂದ ಹೇಳಬೇಕಾಗಿದೆ. ರಾಜ್ಯದ ಅರಣ್ಯ ಮತ್ತು ಪರಿಸರ ಜೀವ ವಿಜ್ಞಾನ ಇಲಾಖೆಯ ಅಧೀನದಲ್ಲಿ ಬರುವ ಅಟಾನಮಸ್ ಸಂಸ್ಥೆಯಾದ "Environmental Management and Policy Research Institute" (EMPRI) ಕಳೆದ ವರ್ಷ ವರದಿಯೊಂದನ್ನು ಸಿದ್ಧಪಡಿಸಿದೆ. ಈ ವರದಿಯ ಹೆಸರು, "Karnataka State Action Plan on Climate Change". ಈ

ವರದಿಯನ್ನು ಕೇಂದ್ರದ ಪರಿಸರ ಮತ್ತು ಅರಣ್ಯ (MoEF)ಗೆ ಕಳುಹಿಸಲಾಗಿದೆ. ಆದರೆ ಇಲ್ಲಿಯವರೆಗೂ ಆ ಸರ್ಕಾರ ವರದಿಯನ್ನು ಹಾಗೆಯೇ ಇಟ್ಟುಕೊಂಡು, ಅದರ ಮೇಲೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವೆಂದು ನಾವು ಇವತ್ತಿನ ದಿವಸ ಬಹಳ ದುಃಖದಿಂದ ಹೇಳಬೇಕಾಗಿದೆ. ಮಾನ್ಯ ಸಭಾಪತಿಯವರೇ, ಈ ಒಂದು ಹವಾಮಾನ ಬದಲಾವಣೆಯಿಂದಾಗಿ ಕೃಷಿಕರು ತೀವ್ರವಾದ ಸಂಕಷ್ಟಕ್ಕೆ ಸಿಲುಕುತ್ತಾರೆಂದು ಹವಾಮಾನ ತಜ್ಞರು ಹಲವಾರು ವರದಿಗಳಲ್ಲಿ ಹೇಳಿದ್ದಾರೆ. ಆದರೆ ಸರ್ಕಾರ ಇದರ ಬಗ್ಗೆ ಗಮನಹರಿಸಿ, ಕ್ರಮತೆಗೆದುಕೊಳ್ಳಬೇಕಿತ್ತು. ಆದರೆ ಆ ಕ್ರಮಗಳನ್ನು ತೆಗೆದುಕೊಂಡಿಲ್ಲ. ವಿಶೇಷವಾಗಿ ಎ.ಟಿ.ರಾಮಸ್ವಾಮಿಯವರು ಬೆಂಗಳೂರಿನಲ್ಲಿ 11980 ಎಕರೆ ಭೂಮಿ ಒತ್ತುವರಿಯಾಗಿತ್ತು ಎಂದು ವರದಿ ನೀಡಿದ್ದರು. 11980 ಎಕರೆ ಭೂಮಿಯನ್ನು ನಮ್ಮ ಸರ್ಕಾರದ ಅವಧಿಯಲ್ಲಿ ತೆರವುಗೊಳಿಸಿದ್ದೆವು. ಎ.ಟಿ.ರಾಮಸ್ವಾಮಿಯವರು ಅತಿಕ್ರಮಣ ಆಗಿದೆಯೆಂದು ಹೇಳಿದ ಜಾಗವನ್ನು ತೆರವುಗೊಳಿಸುವುದರ ಜೊತೆಗೆ 7 ಸಾವಿರ ಎಕರೆಗಳನ್ನು ಹೆಚ್ಚುವರಿ ಜಾಗವನ್ನು ನಾವು ತೆರವುಗೊಳಿಸಿದ್ದೆವು. ಅಂದರೆ ಆ ಜಮೀನಿನ ಮೌಲ್ಯ ಸುಮಾರು ರೂ. 4 ಲಕ್ಷ ಕೋಟಿಗಳೆಂದು ಅಂದಾಜು ಮಾಡಲಾಗಿತ್ತು. ಇಷ್ಟು ಜಮೀನನ್ನು ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ಸರ್ಕಾರ ಇದ್ದಾಗ ತೆರವು ಮಾಡಿದ್ದೆವು. ಅದಾದ ನಂತರ ಈ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು ಎರಡೂವರೆ ವರ್ಷಗಳಾದರೂ ಕೂಡ ಇವತ್ತಿನವರೆಗೂ ಎ.ಟಿ.ರಾಮಸ್ವಾಮಿಯವರ ವರದಿಯನುಸಾರ ಒತ್ತುವರಿಯನ್ನು ತೆರವುಗೊಳಿಸುವಂತಹ ಯಾವುದೇ ಕ್ರಮ ತೆಗೆದುಕೊಳ್ಳಲು ಸರ್ಕಾರ ವಿಫಲವಾಗಿದೆಯೆಂದು ಮಾನ್ಯ ಸಭಾಪತಿಯವರೇ, ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರೇ, ತಮಗೆ ಧನ್ಯವಾದಗಳು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರ ಇದೆ, ಅದನ್ನು ಹೇಳಿಬಿಡುತ್ತೇನೆ. ಈ ಸರ್ಕಾರಕ್ಕೆ ಇವತ್ತು ಏನಾಗಿದೆಯೆಂದರೆ, ಬಹುಶಃ ನಾನೇನಾದರೂ ಹೇಳಿದರೆ, ಅದು ನನ್ನಿಂದ ಮತ್ತು ನಮ್ಮ ಪಕ್ಷದಿಂದ ಎಂದು ಹೇಳುತ್ತಿದ್ದಾರೆ. ಆದರೆ ದಿನಾಂಕ 06.09.2022 ಹಾಗೂ ವಿವಿಧ ದಿನಾಂಕಗಳಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಬರೀ ಹೆಡ್ ಲೈನ್ಸ್ ಓದುತ್ತೇನೆ. "ಡಬಲ್ ಇಂಜಿನ್ ಸರ್ಕಾರ ಇದ್ದರೂ ಮೂಲಭೂತ ಸೌಕರ್ಯದ ಕೊರತೆ, ಮಹಾ

ಮಳೆಗೆ ನಗರ ಅಯೋಮಯ, ವರುಣಾಘಾತಕ್ಕೆ ಜನರ ಬದುಕು ಬರ್ಬಾದ್, ಅರ್ಧ ಬೆಂಗಳೂರಿಗೆ ಕಾವೇರಿ ನೀರಿಲ್ಲ, ರಾಜ ಕಾಲುವೆಯಲ್ಲಿ ಹೂಳು, ಜನರಿಗೆ ತಪ್ಪದ ಗೋಳು, ಬೆಂಗಳೂರು ಮುಳುಗಿರುವುದು ಮಳೆಯಲ್ಲಲ್ಲ, ಬಿ.ಜೆ.ಪಿ ಸರ್ಕಾರದ ಶೇ.40 ರಷ್ಟು ಭ್ರಷ್ಟಾಚಾರದಲ್ಲಿ, ಮುಳುಗಿದ ಬೆಂಗಳೂರು ಪೂರ್ವ, ಬಿಡಿಎ, ಬಿಬಿಎಂಪಿ ಯಿಂದಲೇ ಒತ್ತುವರಿ".**(ಗೊಂದಲ)**ಇದನ್ನು ನಾನು ಹೇಳಿಲ್ಲ, ಪತ್ರಿಕೆಗಳಲ್ಲಿ ಬಂದಿರುವುದು.

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಯಾರು ಹೇಳಿದ್ದು, ಅದು ಯಾವ ಪತ್ರಿಕೆಯಲ್ಲಿ ಬಂದಿದೆ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದುತ್ತಿದ್ದೇನೆ. ಅವರು ಮಾತನಾಡುವಾಗ ಹೇಳಲಿ ಸ್ವಾಮಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯಾಗಲು ಸುಮಾರು ರೂ. 2,000 ಕೋಟಿಗಳು, ಸಚಿವರಾಗಲು ರೂ.100 ಕೋಟಿಗಳು ಬೇಕು, ಛೇರ್ಮನ್ ಆಗುವುದಕ್ಕೆ ರೂ. 50 ಕೋಟಿಗಳು ಬೇಕು ಮತ್ತು ನೀವು ಗೃಹ ಸಚಿವರಾಗುವುದಕ್ಕೆ ಎಷ್ಟು ದುಡ್ಡು ಕೊಟ್ಟಿದ್ದೀರಿ ಹೇಳಿ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು):–** ಮಾನ್ಯ ರಮೇಶ್ ಕುಮಾರ್ ರವರು ಹೇಳಿದ್ದನ್ನೂ ಹೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಕುಮಾರ್ ರವರು ಹೇಳಿದ್ದು ಆಗಲಿ, ಮಾನ್ಯ ಬಸವರಾಜ್ ಪಾಟೀಲ್ ಯತ್ನಾಳ್ ರವರು ಹೇಳಿದ್ದು ಕೂಡ ನಿಮಗೆ ಗೊತ್ತಾಗಲಿ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಆಯಿತು ನೋಡೋಣ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ವಿಶ್ವನಾಥ್ ರವರು ಹೇಳಿದ್ದು ಹೇಳಿ ಮತ್ತು ಸನ್ಮಾನ್ಯ ಶ್ರೀ ಕೆ.ಎಸ್.ಈಶ್ವರಪ್ಪನವರ ಮೇಲೆ ಎಫ್.ಐ.ಆರ್., ದಾಖಲಾಗಿರುವುದನ್ನೂ ಹೇಳಿ. ನೀವು ಮೊದಲು ಅದನ್ನು ಹೇಳಿ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ನಿಮ್ಮ ಎರಡೂವರೆ ಸಾವಿರ ಜನ ಜಾಮೀನಿನ ಮೇಲೆ ಇದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ಬೇಗ ಮಾತನಾಡಿ ಮುಗಿಸಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರೇ, ನೀವು ಮತ್ತು ನಿಮ್ಮ ಹತ್ತಿರ ಇ.ಡಿ., ಮತ್ತು ಸಿ.ಬಿ.ಐ., **(ಗೊಂದಲ)** ಯವರು ಇದ್ದಾರೆ, ಏನೂ ಮಾಡುವುದಕ್ಕೆ ಆಗುವುದಿಲ್ಲ. 2G ಎಂದರೆ ಏನಾಯಿತು.

(ಗೊಂದಲ)

**ಡಾ.ವೈ.ಎ.ನಾರಾಯಣಸ್ವಾಮಿ:-** ಪತ್ರಿಕೆಯ ಹೆಸರನ್ನು ಹೇಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ನಿಮಗೆ newspaper cuttings ಕಳುಹಿಸಿ ಕೊಡುತ್ತೇವೆ. ನಿಮಗೆ ಪತ್ರಿಕೆ ಓದುವ ಅಭ್ಯಾಸವೇ ಇಲ್ಲ ಬಿಡಿ.

**ಡಾ.ವೈ.ಎ.ನಾರಾಯಣಸ್ವಾಮಿ:-** ನಿಮ್ಮ ಪೇಪರ್ ಸುಳ್ಳು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ ಆ ಪೀಠಕ್ಕೆ . . .

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇವರು ಜೈಲಿಗೆ ಹೋಗಿ ಬಂದವರಲ್ಲವೇ. **(ಗೊಂದಲ)** ಗಡಿಪಾರು ಗೃಹ ಸಚಿವರು ನಿಮ್ಮ ಅಮಿತ್ ಶಾ.

**(ಗೊಂದಲ)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಹೌದು ರೀ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಮ್ಮ ಅಮಿತ್ ಶಾ ರವರನ್ನು ಗಡಿಪಾರು ಮಾಡಿಸಿ.

(**ಗೊಂದಲ**)

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** ಮಾನ್ಯ ಸಭಾಪತಿಯವರೇ, ಏನು ದೇಶ ಕಟ್ಟುವುದಕ್ಕೆ ಹೋರಾಟ ಮಾಡಿದ್ದೀರಾ. ದೇಶ ಒಡೆಯುವುದಕ್ಕಾಗಿ ಹೋರಾಟ ಮಾಡಿದ್ದೀರಿ.

**(ಗೊಂದಲ)**

**ಡಾ.ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಅವರು ಮಾಡಿದ್ದೇ ರಾಜಕೀಯ ಕುಚೋದ್ಯ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆದರೆ ಸುಪ್ರೀಂ ಕೋರ್ಟ್ ನಮ್ಮದಲ್ಲ. ಸುಪ್ರೀಂ ಕೋರ್ಟ್ ಬಗ್ಗೆ ನಿಮಗೆ ಅಗೌರವ ಇದೆ. ಅದಕ್ಕಾಗಿ ನಮ್ಮ ದೇಶ ಈ ರೀತಿ ಆಗಿರುವುದು.

**(ಗೊಂದಲ)**

**ಡಾ.ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:-** ಡಾ.ವೈ.ಎ.ನಾರಾಯಣಸ್ವಾಮಿಯವರೇ, ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರು ಮಾತನಾಡಿ ಮುಗಿಸಲಿ. ನೀವು ಮತ್ತೆ ಅವರನ್ನು ಸಿಕ್ಕಿಸುತ್ತಿದ್ದೀರಿ. ದಯವಿಟ್ಟು ತಾವು ಕುಳಿತುಕೊಳ್ಳಿ. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ದಯವಿಟ್ಟು ಮಾತನಾಡಿ ಮುಗಿಸಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, "ಬಿಡಿಎ, ಬಿಬಿಎಂಪಿಯಿಂದಲೇ ಒತ್ತುವರಿ, ಅಪಾರ್ಟ್‌ಮೆಂಟ್‌ಗಳಿಗೆ ನುಗ್ಗಿದ ನೀರು, ಔಟರ್ ರಿಂಗ್ ರೋಡ್ ಈಗ ಔಟರ್ ರಿವರ್ ರೋಡ್ ಆಗಿದೆ, ಸರ್ಜಾಪುರ ರಸ್ತೆಯಲ್ಲಿ ಸುಮಾರು 10 ಕಿ.ಮೀ. ಟ್ರಾಫಿಕ್ ಜಾಮ್, 1 ರಿಂದ 2 ಗಂಟೆ ನಿಂತಲ್ಲೇ ನಿಂತ ವಾಹನಗಳು, ಅಪಾರ್ಟ್‌ಮೆಂಟ್‌ಗಳಿಂದ ಏಣಿ ಬಳಸಿ ಹೊರ ಬಂದ ಜನ".

**(ಮುಂದು...)**

(1001)22.9.2022/4.50/ಎಂ.ಎಂ-ಕೆ.ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-**

"ಜನ, ಮನೆಯ ಸುತ್ತಲೂ ನೀರಿದ್ದರೂ ಕುಡಿಯುವ ನೀರಿಗೆ ಹಾಹಾಕಾರ. ಇಂದಿರಾನಗರದ 100 ಅಡಿ ರಸ್ತೆಯಲ್ಲಿ 6 ಅಡಿ ನೀರು. ಜವಾಬ್ದಾರಿ ಕೊಡಲಿಲ್ಲ, ಹೊರೆ ಹೊರಲು ಯಾರೂ ತಯಾರಿಲ್ಲ!". ಇದರ ಜೊತೆಗೆ ಹೈಕೋರ್ಟ್ ಏನು ಹೇಳಿದೆ, ಎಲ್ಲೆಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಛೀಮಾರಿ ಹಾಕಿದೆ ಎಂದರೆ, "ಬೆಂಗಳೂರಿನ ರಸ್ತೆ ಗುಂಡಿ ಮುಚ್ಚಲು ವಲಯವಾರು ಕ್ರಿಯಾಯೋಜನೆ ರೂಪಿಸಲು ಆದೇಶ. ರಸ್ತೆ ಗುಂಡಿ ಮುಚ್ಚುವ ವಿಚಾರದಲ್ಲಿ ಕಣ್ಣೊರೆಸುವ ತಂತ್ರ ಬೇಡ. ರಸ್ತೆ ಗುಂಡಿ ಮುಚ್ಚಿಸಲು ಬಿ.ಬಿ.ಎಂ.ಪಿ ವಿಳಂಬ- ಪಾಲಿಕೆಗೆ ಹೈಕೋರ್ಟ್ ತರಾಟೆ; ರಸ್ತೆ ಗುಂಡಿ ಮುಚ್ಚುವ ಯಂತ್ರದ ಮೊತ್ತ ಎಷ್ಟು? ಹೈಕೋರ್ಟ್ ಪ್ರಶ್ನೆ; ದಿನಾಂಕ 5-2-2022ರಂದು ರಸ್ತೆ ಗುಂಡಿ ವಿವಾದ- ಹೈಕೋರ್ಟ್‌ಗೆ ಬೇಷರತ್ ಕ್ಷಮೆ ಯಾಚಿಸಿದ ಬಿ.ಬಿ.ಎಂ.ಪಿ.; ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗೆ ಕಾರ್ಯಾದೇಶ ನೀಡಿ- ಹೈಕೋರ್ಟ್; ರಸ್ತೆ ಗುಂಡಿ ಮುಚ್ಚಲು ಬಿ.ಬಿ.ಎಂ.ಪಿ.ಗೆ ಆಗಸ್ಟ್ 03ರವರೆಗೆ ಗಡುವು ನೀಡಿದ ಹೈಕೋರ್ಟ್; ತಾಳ್ಮೆ ಪರೀಕ್ಷಿಸಬೇಡಿ ಎಂದ ಹೈಕೋರ್ಟ್....."

**ಡಾ: ತೇಜಸ್ವಿನಿಗೌಡ:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ಗುಂಡಿಯೊಳಗೆ ರಸ್ತೆ ಮಾಡಿದ್ದನ್ನು ನಮ್ಮವರು ಹೇಳಲಿಲ್ಲ. ರಸ್ತೆ ಮಾಡಿದ್ದು ಗುಂಡಿಯೊಳಗಿನಿಂದ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ತೇಜಸ್ವಿನಿಗೌಡರವರೇ, ನಾನು ಹೇಳುತ್ತಿಲ್ಲ, ನೀವು ಹೋಗಿ ಹೈಕೋರ್ಟ್‌ಗೆ ಹೇಳಿ.

**ಡಾ: ತೇಜಸ್ವಿನಿಗೌಡ:-** ರಸ್ತೆಗಳನ್ನು ಮಾಡಿದ್ದೇ ನಮ್ಮ ಸರ್ಕಾರ ಬಂದ ಮೇಲೆ.

**ಶ್ರೀ ಶರಣಗೌಡ ಬಯ್ಯಪುರ:-** ನೀವು ಬಂಗಾರದ ರಸ್ತೆಗಳನ್ನು ಮಾಡುತ್ತೇವೆ ಎಂದು ಹೇಳಿದಿರಿ. ಇದ್ದ ರಸ್ತೆಗಳೇ ಕಿತ್ತುಕೊಂಡು ಹೋದವು. (ಗೊಂದಲ)

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ ಮುಗಿಸಿಬಿಡಿ. ಮರಿತಿಬ್ಬೇಗೌಡರೇ ಮಾತನಾಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷ ಮುಗಿಸುತ್ತೇನೆ. ಪ್ರಜಾವಾಣಿ ಪತ್ರಿಕೆಯಲ್ಲಿ ಸರ್ಕಾರ ಪರ್ಸೆಂಟೇಜ್ ಮೇಲೆ ನಡೆಯುತ್ತಿದೆಯೇ ಎಂದು ಹೈಕೋರ್ಟ್ ಕೇಳಿದೆ.

**ಶ್ರೀ ನಸೀರ್ ಅಹಮದ್:-** ಇಡೀ ರಾಜ್ಯದಲ್ಲಿ ಪ್ರವಾಹ ಬಂದಿರುವಂತಹ ಒಂದು ಪ್ರಮುಖವಾದ ವಿಷಯವನ್ನು ಚರ್ಚೆ ಮಾಡುವಾಗ Revenue Minister ಅವರನ್ನು ಕರೆಸಬೇಕಲ್ಲವೇ ಅವರನ್ನು ಕರೆಸಿ.

**ಸಭಾಪತಿಯವರು:-** ಕರೆಸುತ್ತೇನೆ.

(ಗೊಂದಲ)

**ಡಾ: ವೈ.ಎ. ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ನಸೀರ್ ಅಹಮದ್‌ರವರೇ, ಅವರು ಬಂದಿದ್ದರು. ನೀವು ಆಗ ಬಂದಿರಲಿಲ್ಲ, ಈಗ ಬಂದಿದ್ದೀರಿ. ಅವರು ಮತ್ತೆ ಇನ್ನೈದು ನಿಮಿಷಕ್ಕೆ ಬರುತ್ತಾರೆ.

**ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಮಂತ್ರಿಗಳನ್ನು ಸದನಕ್ಕೆ ಕರೆಯಿರಿ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಅವರು ಬಂದು ಮುಖ ತೋರಿಸಿಕೊಂಡು ಹೋಗಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಿ.ಎಂ. ಲಿಂಗಪ್ಪನವರು ಹೇಳಿದ ಹಾಗೆ ಕಂದಾಯ ಸಚಿವರು ನಾಗರಹಾವು ಬಂದ ಹಾಗೆ ಬಂದು ಹೊರಟು ಹೋದರು.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಮರಿತಿಬ್ಬೇಗೌಡರೇ, ನಾಗರಹಾವಿನ ಮೇಲೆಯೂ ನಿಮಗೇಕೆ ದ್ವೇಷ? ನಾಗರಹಾವು ದ್ವೇಷ ಮಾಡುತ್ತದೆ ನೀವು ನಾಗರಹಾವಿನ ಮೇಲೇ ದ್ವೇಷ ಮಾಡುತ್ತೀರಾ?

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರ ಹೇಳಿಕೆಗೆ ಪೂರಕವಾಗಿ ಒಂದು ವಿಷಯವಿದೆ. ಹೈಕೋರ್ಟ್ ಇಂತಹವುಗಳನ್ನೆಲ್ಲಾ ಗಮನಹರಿಸಿದೆ. ರಸ್ತೆ ಗುಂಡಿ ಮುಚ್ಚುವ ವಿಚಾರದಲ್ಲಿ ಹೈಕೋರ್ಟ್ ಹೇಳಿದೆ ಎಂದರೆ ಅದು ಸರಿ. ಅದರಲ್ಲಿ ನ್ಯಾಯಾಲಯಗಳು intervene ಆಗಬೇಕಾಗುತ್ತದೆ ಇಲ್ಲವೆಂದು ಹೇಳುವುದಿಲ್ಲ. ಆದರೆ ಕೋರ್ಟ್‌ಗಳು ಮಿತಿಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾನು ಬೇಕಾದಷ್ಟು ಸಲ ಮಾತನಾಡಿದ್ದೇನೆ. ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ, ಇವತ್ತು ಕಟ್ಟಕಡೆಯ ಮನುಷ್ಯ ಒಂದು ಕೇಸ್‌ಗೆ 10-20 ವರ್ಷಗಳಾದರೂ ಕೋರ್ಟ್‌ಗೆ ಅಲೆಯುತ್ತಾನೆ. ಅವರು ಎಷ್ಟು speed ಇದ್ದಾರೆ ಎಂಬುದನ್ನು ಮೊದಲು check ಮಾಡಿಕೊಳ್ಳಬೇಕು. ಕರ್ನಾಟಕದ ಹೆಚ್ಚು oldest cases 25 ವರ್ಷಗಳಿಂದ ಸುಪ್ರೀಂ ಕೋರ್ಟ್‌ನಲ್ಲಿ ಬಿದ್ದಿವೆ. ಹಾಗಾದರೆ ಸುಪ್ರೀಂ ಕೋರ್ಟ್ ಜಡ್ಜ್‌ಗಳು ಏನು ಮಾಡುತ್ತಿದ್ದಾರೆ? ದೀಪದ ಕೆಳಗೆ ಕತ್ತಲು ಎನ್ನುವ ಹಾಗೆ ನಮಗೆ ಹೇಳುವ ವಿಚಾರದಲ್ಲಿ judiciary ಕೂಡ ಅವರ ಬೆನ್ನನ್ನು ನೋಡಿಕೊಳ್ಳಬೇಕಾಗುತ್ತದೆ. ಈ ವಿಚಾರದಲ್ಲಿ ನಾವೆಲ್ಲರೂ . . .

**ಸಭಾಪತಿಯವರು:–** ಮಾನ್ಯ ಪ್ರಕಾಶ್ ರಾಥೋಡ್‌ರವರೇ, Please conclude.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿರುವ "ಸರ್ಕಾರ ಪರ್ಸೆಂಟೇಜ್ ಮೇಲೆ ನಡೆಯುತ್ತಿದೆಯೇ– ಹೈಕೋರ್ಟ್", "ಪ್ರವಾಸೋದ್ಯಮ ಇಲಾಖೆ ಕಟ್ಟಡವೊಂದರ ನವೀಕರಣ ಕಾಮಗಾರಿಯ ಹಣ ಬಿಡುಗಡೆಯಲ್ಲಿ ವಿಳಂಬ ಧೋರಣೆ ಪ್ರದರ್ಶಿಸಿದ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ರೂ. 2 ಲಕ್ಷ ದಂಡ ವಿಧಿಸಿರುವ ಹೈಕೋರ್ಟ್".

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ಮಾತನಾಡಿ.

**Dr. TEJASWINI GOWDA: –** Mr. Rathod, the House is Supreme.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ರೂ. 2 ಲಕ್ಷ ರೂಪಾಯಿ ದಂಡವನ್ನು ಹೈಕೋರ್ಟ್ ಹಾಕಿದೆ. ಈ ಸರ್ಕಾರ ಪರ್ಸೆಂಟೇಜ್ ಆಧಾರದಲ್ಲಿ ನಡೆಯುತ್ತಿದೆಯೇ ಎಂದು ಕೇಳಿದೆ. ಆಮೇಲೆ ಅಧಿಕಾರಿಗಳ ವಿರುದ್ಧ ಎಫ್.ಐ.ಆರ್., ದಾಖಲಿಸಿ ಜೈಲಿಗೆ ಕಳುಹಿಸಿರಿ ಎಂದು ಹೈಕೋರ್ಟ್ ದಿನಾಂಕ 8-2-2022ರಂದು ಹೇಳಿದೆ. ಗುಂಡಿ ಬಿದ್ದ ರಸ್ತೆ– ಅಪಘಾತಕ್ಕೆ ಅಧಿಕಾರಿಗಳೇ ಹೊಣೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)**:– ಮಾನ್ಯ ಸಭಾಪತಿಯವರೇ, ಒಂದು ವಿಚಾರ ತಮ್ಮ ಗಮನದಲ್ಲಿರಬೇಕು. ಪ್ರವಾಹ ಬಂದಿರುವುದು ಇದೊಂದೇ ವರ್ಷದಲ್ಲಲ್ಲ. ಈ ವರ್ಷ ಬಂದಿರುವ ವಿಪರೀತ ಮಳೆಯಿಂದ ಒಂದಷ್ಟು ಅನಾಹುತಗಳಾಗಿವೆ. ಆದರೆ ಸರ್ಕಾರ ಎಲ್ಲರ ನಿರೀಕ್ಷೆ ಮೀರಿ ಜನರ ಮಧ್ಯೆ ಹೋಗಿದೆ. ಮಾತನಾಡುವಾಗ ರೂ. 10,000/- ಕೊಟ್ಟರು ಎಂದು ಹೇಳುತ್ತಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾನಾಯಕರೇ, ಈ ಪ್ರವಾಹ ಬಂದ ಸಮಯದಲ್ಲಿ ನೀವೆಲ್ಲಾ ಡಾನ್ಸ್ ಮಾಡುತ್ತಿದ್ದೀರಿ ನಾವೇನು ಮಾಡೋಣ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯಾರೆಂದು ಹೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಯಾರು ಮಾಡುತ್ತಿದ್ದರು ಎಂಬುದು ನಿಮಗೇ ಗೊತ್ತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅದನ್ನೆಲ್ಲಾ ಬಿಡಿ. ಇದು ಗಂಭೀರವಾದಂತಹ ಚರ್ಚೆ. ಪ್ರತಿ ಸಲ;

**ಶ್ರೀ ಮಂಜುನಾಥ ಭಂಡಾರಿ:-** ಡಾನ್ಸ್ ಮಾಡುವುದೆಲ್ಲಾ ಅವರಿಗೆ ಗೊತ್ತಿಲ್ಲ. ಅವರನ್ನೇತಕ್ಕೆ ಎಳೆಯುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಪ್ರತಿ ಸಲ ರೂ. 10,000/- ಕೊಡುತ್ತೇವೆ ಎಂದಲ್ಲ, ಆಕಸ್ಮಿಕವಾಗಿ ಯಾವುದಾದರೂ ಮನೆಗೆ ಸ್ವಲ್ಪ ನೀರು ನುಗ್ಗಿದ್ದರೂ ಕೂಡ ರೂ. 10,000/- ಪರಿಹಾರ ಕೊಟ್ಟಿದ್ದೇವೆ. ಸ್ವಲ್ಪ ಸಣ್ಣ ಅನಾಹುತವಾದರೂ ಅದಕ್ಕೆ ಪರಿಹಾರ ಕೊಟ್ಟಿದ್ದೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಇದನ್ನು ನಾನು ಹೇಳುತ್ತಿಲ್ಲ. ನಾನು ಹೈಕೋರ್ಟ್ ಹೇಳಿರುವುದನ್ನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಒಂದು ಮನೆ ಬಿದ್ದರೆ ರೂ. 5 ಲಕ್ಷ ಪರಿಹಾರವನ್ನು ಕೊಡುತ್ತೇವೆ ಹಾಗೂ ಮನೆಯನ್ನು ಕಟ್ಟಿ ಕೊಡುತ್ತಿದ್ದೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಇದು ನನ್ನ ಆಪಾದನೆಯಲ್ಲ. (ಗೊಂದಲ) ಇದಕ್ಕೆ writ petition ಹಾಕಿ, ಹೈಕೋರ್ಟ್ ಮುಂದೆ ಪ್ರಶ್ನಿಸಿ. (ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಜವಾಬ್ದಾರಿ ಸ್ಥಾನದಲ್ಲಿರುವವರು . . . ಪತ್ರಿಕೆಯನ್ನು ಉಲ್ಲೇಖ ಬೇಕಾದರೆ ಮಾಡಬಹುದು. ಪತ್ರಿಕೆಯಲ್ಲಿ ಹೇಳಿದ್ದು ತಮಗೆ ಸಂಬಂಧವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ (ಗೊಂದಲ)

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ತಾವು ಮುಗಿಸಿ. ಮಾನ್ಯ ಸಭಾನಾಯಕರೇ, ಅವರು ಮುಗಿಸುತ್ತಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಈ ದೇಶದ ಪ್ರಧಾನ ಮಂತ್ರಿಯವರು ಬೆಂಗಳೂರಿಗೆ ಬರುತ್ತಾರೆ ಎಂದು ರಸ್ತೆಗಳನ್ನೆಲ್ಲಾ ಬಹಳ ಚೆನ್ನಾಗಿ ಮಾಡಿದ್ದಾರೆ ಬಹಳ ಸಂತೋಷವಾಗಿದೆ. ಆದರೆ 2-3 ದಿವಸಗಳಲ್ಲಿಯೇ ಡಾಂಬರು ಕಿತ್ತು ಬರುತ್ತಿದೆ. ಇದು ನಮಗಲ್ಲ, ಪ್ರಧಾನಮಂತ್ರಿಯವರಿಗೆ ಅಗೌರವ ತೋರಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಬಹುಶಃ ಇದು ಸರ್ಕಾರದ ಗಮನಕ್ಕೆ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, . . .

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಕೆ.ಐ.ಎ.ಡಿ.ಬಿ., ತಾವು ಏನು ಜಮೀನುಗಳನ್ನು ವಶಪಡಿಸಿಕೊಳ್ಳುತ್ತಿದ್ದೀರಿ ಅದನ್ನು ರೈತರ ವಿರುದ್ಧ ಜಮೀನುಗಳನ್ನು ವಶಪಡಿಸಿಕೊಂಡು ಬೆಂಗಳೂರನ್ನು ನರಕ ಮಾಡುತ್ತಿರುವುದು ಈ ಸರ್ಕಾರ. ಮುಂದಿನ ದಿನಗಳಲ್ಲಿ ಇದಕ್ಕೆ ಒಳ್ಳೆಯ ಪರಿಹಾರ ಕೊಡುತ್ತಾರೆಂದು ಭಾವಿಸುತ್ತೇನೆ. ಗಾರ್ಡನ್ ಸಿಟಿ ಎನ್ನುವ ಬೆಂಗಳೂರನ್ನು ನರಕ ಮಾಡಬೇಡಿ ಎಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರಿಗೆ ಧನ್ಯವಾದಗಳು. ಮಾನ್ಯ ಮರಿತಿಬ್ಬೇಗೌಡರೇ, ದಯವಿಟ್ಟು ಐದು ನಿಮಿಷದಲ್ಲಿ ಮುಗಿಸಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗ ನಮ್ಮ ಸದನದಲ್ಲಿ ಅತಿವೃಷ್ಟಿ ಬಗ್ಗೆ ೯೦ ವರ್ಷಗಳ ನಂತರ ಬಿದ್ದಂತಹ ಭಾರಿ ಮಳೆಯಿಂದ ಆದಂತಹ ಅನಾಹುತಗಳ ಬಗ್ಗೆ, ಜನಜೀವನದ ಮೇಲೆ ಆದಂತಹ ಪರಿಣಾಮಗಳ ಬಗ್ಗೆ ವಿರೋಧಪಕ್ಷದ ನಾಯಕರು, ಆಡಳಿತ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲಾ ಹಿರಿಯ ಸದಸ್ಯರುಗಳೂ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಆ ವಿಚಾರಗಳ ಬಗ್ಗೆ ನಾನು ಮತ್ತೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತು ಬಡವರ ಬದುಕು ಬಹಳ ದುಸ್ತರವಾಗಿದೆ. ರೈತರು, ಕೂಲಿ ಕಾರ್ಮಿಕರು ಮತ್ತು ಅತ್ಯಂತ ಕಡು ಬಡವರ ಜೀವನ ಮಳೆ ಹಾನಿಯಿಂದ ಬಹಳ ದುಸ್ತರವಾಗಿದೆ. ಉದಾಹರಣೆಗೆ

ಹೇಳುವುದಾದರೆ ಮೊದಲನೆಯದಾಗಿ ಮಂಡ್ಯ ಜಿಲ್ಲೆಯಲ್ಲಿ ನಾನು ಈ 60ನೇ ವಯಸ್ಸಿನಲ್ಲಿ ಮಳೆಯಿಂದ ಇಷ್ಟೊಂದು ಹಾನಿಯಾದದ್ದನ್ನು ಎಂದೂ ನೋಡಿಲ್ಲ. ಜಿಲ್ಲಾಧಿಕಾರಿಗಳು ಸುಮಾರು 833 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ವರದಿ ಕೊಟ್ಟಿದ್ದಾರೆ. ಅದರಲ್ಲಿ ಇದುವರೆಗೂ ಸರ್ಕಾರ ಪರಿಹಾರ ಕೊಟ್ಟಿರುವುದು ಕೇವಲ ರೂ. 12 ಕೋಟಿ ಮಾತ್ರ. ಇದೇ ರೀತಿ ಚಾಮರಾಜನಗರ ಜಿಲ್ಲೆ, ಹಾಸನ ಜಿಲ್ಲೆ ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲಾ ಕಡೆ ಬಾದಾಮಿ ಇರಬಹುದು, ಬಾಗಲಕೋಟೆ, ಗುಲ್ಬರ್ಗ, ಬೀದರ್ ಇರಬಹುದು ಈ ಅತಿಯಾದ ಮಳೆ ಜನಜೀವನವನ್ನು ಮತ್ತು ಬೆಳೆಯನ್ನೂ ಹಾಳು ಮಾಡಿದೆ. ಇವತ್ತು ಸುಮಾರು 21 ಜಿಲ್ಲೆಗಳಲ್ಲಿ ಮಳೆ ಆಧಾರಿತ ಬೆಳೆ ಏನಿತ್ತು ಅದನ್ನು ಕೂಡ ಮಾಡುವುದಕ್ಕಾಗಲಿಲ್ಲ. ಬಹಳಷ್ಟು ಕೆರೆ ಕಟ್ಟೆಗಳೆಲ್ಲವೂ ಕೂಡ ಅಪಾಯದ ಅಂಚನ್ನು ತಲುಪಿದವು.

(ಮುಂದು)

(1002) 22-09-2022 5-00 KH-GR

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಆದರೆ, ಅಂತರ್ಜಲ ಮಾತ್ರ ಒಂದು ವೃದ್ಧಿಯಾಯಿತು ಎನ್ನುವುದು ಬಿಟ್ಟರೆ, ಇನ್ನುಳಿದಿರುವುದೆಲ್ಲವೂ ಕೂಡ ಈ ಮಳೆಯಿಂದ ನಾವು ತುಂಬಾ ನಷ್ಟವನ್ನು ಅನುಭವಿಸುತ್ತಿದ್ದೇವೆ. ಆದರೆ, ಸರ್ಕಾರ ಎನ್.ಡಿ.ಆರ್.ಎಫ್., ಎಸ್.ಡಿ.ಆರ್.ಎಫ್., ನಿಯಮಗಳನ್ನಾಧರಿಸಿ ನಾವು ಪರಿಹಾರವನ್ನು ಕೊಡುತ್ತಿದ್ದೇವೆ. ಹಾಗೆಯೇ ಪರಿಹಾರ ಹಣವನ್ನು ಜಿಲ್ಲಾವಾರು ಬಿಡುಗಡೆ ಮಾಡಿದ್ದೇವೆ ಎಂದು ನಮಗೆಲ್ಲಾ ಮಾಹಿತಿ ಕೊಟ್ಟಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್‌ಮನ್‌ರವರಾದ ಡಾ॥ ತೇಜಸ್ವಿನಿಗೌಡರವರು ಪೀಠವನ್ನು ಅಲಂಕರಿಸಿದರು)**

ಇದನ್ನು ನಾವು ಮಾಧ್ಯಮದಲ್ಲಿಯೂ ಕೂಡ ನೋಡುತ್ತಿದ್ದೇವೆ. ದಯಮಾಡಿ, ಈ ಎನ್.ಡಿ.ಆರ್.ಎಫ್., ನಿಯಮವನ್ನು ತಿದ್ದುಪಡಿ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರದಿಂದ ಆಗುವುದಿಲ್ಲ. ಆದರೆ, ಕೇಂದ್ರ ಸರ್ಕಾರವಾದರೂ 5 ವರ್ಷಗಳಿಗೊಮ್ಮೆ ಮಾಡಬೇಕಾಗಿರುವುದನ್ನು 7 ವರ್ಷಗಳಾದರೂ ಎನ್.ಡಿ.ಆರ್.ಎಫ್., ಮಾನದಂಡ ಮತ್ತು ಮಾರ್ಗಸೂಚಿಯನ್ನು ಪರಿಷ್ಕರಣೆ ಮಾಡದೇ ಇರುವಂತಹದ್ದು ದೊಡ್ಡ ವಿಷಾದನೀಯ ಸಂಗತಿಯಾಗಿದೆ. ನಮ್ಮ ರಾಜ್ಯ ಸರ್ಕಾರ ಕಳೆದ ಬಾರಿ ಸ್ವಲ್ಪಮಟ್ಟಿಗೆ ಎಸ್.ಡಿ.ಆರ್.ಎಫ್., ನಲ್ಲಿ ಬದಲಾವಣೆ ಮಾಡಿ ಕೊಟ್ಟಿದ್ದಾರೆ. ನಾನು ಕಳೆದ ಬಾರಿ ಆದಂತಹ ಅನಾಹುತಕ್ಕೆ ಸಂಬಂಧಿಸಿದಂತೆ ಸರ್ಕಾರ ಮಾಡಿದ ಕೆಲಸವನ್ನು ಅಭಿನಂದಿಸುತ್ತೇನೆ. ಆದರೆ, ಈ ಬಾರಿ ಆದಂತಹ ದೊಡ್ಡ ಅನಾಹುತ ಹಿಂದೆಂದೂ ಕೂಡ ೨೦ ವರ್ಷಗಳಲ್ಲಿ, ನಮ್ಮ ಸಮಕಾಲಿನಲ್ಲಿ ಆಗಿಲ್ಲ. ಆದ್ದರಿಂದ, ಈ ಬಾರಿ ಎಸ್.ಡಿ.ಆರ್.ಎಫ್., ಫಂಡ್ ಅನ್ನು ನಾವು ಗರಿಷ್ಠ ಪ್ರಮಾಣದಲ್ಲಿ ಈ ಪರಿಹಾರದ ಮೊತ್ತವನ್ನು ಹೆಚ್ಚಿಸುವುದಕ್ಕೆ ಸರ್ಕಾರ ಇನ್ನು ಕೂಡ ಪ್ರಯತ್ನ ಮಾಡದೇ ಇರುವಂತಹದ್ದು ನನಗೆ ಬಹಳ ನೋವು ತಂದಿದೆ. ಇದರ ಜೊತೆಗೆ ಇದುವರೆಗೂ ಕೂಡ ನಮ್ಮ ಪ್ರಧಾನ ಮಂತ್ರಿಗಳು, ಕೇಂದ್ರದ ಗೃಹ ಸಚಿವರು ಡಬಲ್ ಇಂಜಿನ್ ಸರ್ಕಾರ ಎಂದು ಹೇಳಿದ್ದಾರೆ. ಡಬಲ್ ಇಂಜಿನ್ ಸರ್ಕಾರ ಕಳೆದ ೮ ವರ್ಷಗಳಿಂದಲೂ ಈ ರಾಜ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಇದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಇಂತಹ ಒಂದು ಅನಾಹುತ ಆಗಿರುವಾಗ ಇತ್ತೀಚೆಗೆ ಕೇಂದ್ರದ ಗೃಹ ಸಚಿವರು ಮತ್ತು ಪ್ರಧಾನ ಮಂತ್ರಿಗಳು ಬಂದು ಹೋಗಿದ್ದಾರೆ. ಅವರುಗಳು ಈ ರಾಜ್ಯದಲ್ಲಿ ಆದಂತಹ ಮಳೆಹಾನಿಗೆ ಏನಾದರೂ ವಿಶೇಷವಾಗಿ ಕೇಂದ್ರ ಸರ್ಕಾರದಿಂದ ಸಹಾಯ ಮಾಡುತ್ತೇವೆ ಎನ್ನುವುದನ್ನು ಎಲ್ಲಿಯೂ ಕೂಡ ಘೋಷಣೆ ಮಾಡಲಿಲ್ಲ ಅಥವಾ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಸಮೀಕ್ಷೆಗೆ ಬಂದಿದ್ದರೆ ಈ ಕರ್ನಾಟಕದ ಜನಜೀವನ ಅಸ್ತವ್ಯಸ್ತದ ಬಗ್ಗೆ ಚೆನ್ನಾಗಿ ಮನವರಿಕೆ ಆಗುತ್ತಿತ್ತು. ಆ ಪ್ರಯತ್ನವನ್ನು ಒಂದು ತಾಸು ಆದರೂ ಕೂಡ ಕರ್ನಾಟಕಕ್ಕೆ ಅವರು ವೈಮಾನಿಕ ಸಮೀಕ್ಷೆ ನಡೆಸಿದಿದ್ದರೆ ನಮಗೆಲ್ಲಾ ಬಹಳ ಸಂತೋಷ ಆಗುತ್ತಿತ್ತು. ಇದರಿಂದ, ಹೆಚ್ಚಿನ ವಿಶೇಷ ಪರಿಹಾರ ದೊರೆಯುತ್ತಿತ್ತು ಎನ್ನುವಂತಹ ಅಭಿಲಾಷೆ ನನಗೂ ಕೂಡ ಇತ್ತು. ಆದರೆ, ಅದನ್ನು ಮಾನ್ಯ ಪ್ರಧಾನ ಮಂತ್ರಿಗಳು ಮಾಡಲಿಲ್ಲ. ಮಾನ್ಯ ಗೃಹ ಸಚಿವರು ಮಾಡಲಿಲ್ಲ. ಇದು ಬಹಳ ಅತ್ಯಂತ ನೋವಿನ ಸಂಗತಿಯಾಗಿದೆ. ನಾನು ಏಕೆ ಈ

ಮಾತನ್ನು ಹೇಳುತ್ತೇನೆಂದರೆ, ಕರ್ನಾಟಕ ರಾಜ್ಯ ಎಂದರೆ ಭಾಷಣದಲ್ಲಿ ನಮ್ಮ ಎರಡು ಕಣ್ಣು ಇದ್ದ ಹಾಗೆ, ಅದನ್ನು ನಾವು ಸಮಗ್ರವಾಗಿ ಅಭಿವೃದ್ಧಿ ಮಾಡುತ್ತೇವೆ ಎಂದು ಎಲ್ಲರೂ ಹೇಳುತ್ತಾರೆ. ಇಂತಹ ಕೆಟ್ಟ ಸಂದರ್ಭದಲ್ಲಿಯೂ ಕೂಡ ಕರ್ನಾಟಕ ಜನತೆಯ ಬಡವರ ಆಶೋತ್ತರವಾಗಿ ಕೆಲಸ ಮಾಡುವಂತಹ ಕೇಂದ್ರ ಸರ್ಕಾರ ಒಂದು ಕಿಂಚಿತ್ತೂ ಕೂಡ ಗಮನಹರಿಸಲಿಲ್ಲ. ಈ ಮಳೆಯಿಂದ ಆದಂತಹ ಹಾನಿ ಬಗ್ಗೆ ಎನ್ನುವಂತಹದ್ದು ನನಗೆ ಬಹಳ ನೋವು ತಂದಿದೆ. ಕೇವಲ lip sympathy ಭಾವನಾತ್ಮಕವಾಗಿ ಭಾಷಣ ಮಾಡುವುದರಿಂದ, ಬಡವರ ಸಂಕಷ್ಟವನ್ನು ಪರಿಹಾರ ಮಾಡುವುದಕ್ಕೆ ಆಗುವುದಿಲ್ಲ. ಬಡವರಿಗೆ ಹೊಟ್ಟೆ ತುಂಬುವುದಿಲ್ಲ. ತಮ್ಮ ಹೃದಯದ ಅಂತರಾಳದಿಂದ ಮಾನ್ಯ ಪ್ರಧಾನ ಮಂತ್ರಿಗಳಿಗೆ ಏನಾದರೂ ಇದ್ದಿದ್ದರೆ ಖಂಡಿತವಾಗಿಯೂ ಇಲ್ಲಿ ಒಂದು ಸಮೀಕ್ಷೆ ಮಾಡಿಸುತ್ತಿದ್ದರು. ಇಷ್ಟೊತ್ತಿಗಾಗಲೇ ವಿಶೇಷವಾದಂತಹ ಪರಿಹಾರದ ಧನವನ್ನು ಘೋಷಣೆ ಮಾಡುತ್ತಿದ್ದರು. ದಯಮಾಡಿ, ತಾವು ಅದನ್ನು ಇನ್ನಾದರೂ ಕೂಡ ಮಾಡಿಸುವಂತಹ ಪ್ರಯತ್ನ ಮಾಡಬೇಕು. ಇವತ್ತು ಕೇಂದ್ರ ಸರ್ಕಾರದಲ್ಲಿ ರಾಜ್ಯದಿಂದ 5 ಮಂದಿ ಪ್ರಭಾವಿ ಕೇಂದ್ರ ಸಚಿವರುಗಳು ಇದ್ದಾರೆ. ಕೇಂದ್ರ ಸರ್ಕಾರದಲ್ಲಿ 5 ಮಂದಿ ಕರ್ನಾಟಕ ರಾಜ್ಯದ ಸಚಿವರು ಇದ್ದಾರೆ ಎನ್ನುವುದು ನನಗೆ ಬಹಳ ಸಂತೋಷವಾಗುತ್ತದೆ ಮತ್ತು ಹೆಮ್ಮೆಯಾಗುತ್ತದೆ. ಈ 5 ಮಂದಿ ಸಚಿವರನ್ನು ನೋಡಿದರೆ, ಅವರಿಗೆ ಏನು ಖಾತೆ ಕೊಟ್ಟಿದ್ದಾರೆ ಎಂಬುದು ಶಾಸಕನಾಗಿ ನನಗೆ ಗೊತ್ತಿಲ್ಲ. ಭಾರತ ದೇಶದಲ್ಲಿ ಕೇಂದ್ರ ಸಚಿವರ ಸಂಪುಟದಲ್ಲಿ ಯಾರು ಇದ್ದಾರೆ ಎಂದು ಕೇಳಿದರೆ ಸ್ಕೂಲ್ ಮಕ್ಕಳಿಗೆ ಆಗಲಿ, ನನಗೆ ಆಗಲಿ ಗೊತ್ತಿಲ್ಲ. ಮೊನ್ನೆಯ ದಿವಸ ಯಾರೋ ಒಬ್ಬರು ಮಾನವ ಸಂಪನ್ಮೂಲ ಖಾತೆ ಯಾರಿಗೆ ಇದೆ ಎಂದು ಕೇಳಿದರು. ಆಗ ನನಗೆ ಆಶ್ಚರ್ಯವಾಯಿತು. ನಾನು ತಡಬಡಾಯಿಸಿ ಬಹಳ ತಡವಾಗಿ ಹೇಳಿದೆ. ಇವತ್ತು ಏನಾಗಿದೆಯೆಂದರೆ, ಈ ದೇಶದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಇಬ್ಬರೇ ಕಾಣುತ್ತಾರೆಯೇ ವಿನಃ ಬೇರೆ ಯಾರು ಕಾಣುವುದಿಲ್ಲ. ಇದು ಡಬಲ್ ಇಂಜಿನ್. ಇದ್ದರಿಂದ, ಬೇರೆ ಯಾವ ಮಂತ್ರಿಗಳ ಕಾರ್ಯಚಟುವಟಿಕೆಗಳು ಯಾರಿಗೂ ಕೂಡ ಗೋಚರವಾಗುತ್ತಿಲ್ಲ. ಹಾಗೆಯೇ ಕಾಣುತ್ತಿಲ್ಲ. ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ವಾಧಿಕಾರಿ ಸರ್ಕಾರ, ಹಿಟ್ಲರ್ ಸರ್ಕಾರದಂತೆ, . . .

**ವೈಸ್ ಛೇರ್‌ಮನ್:-** ಮಾನ್ಯ ಮರಿತಿಬ್ಬೇಗೌಡರವರೇ, ಜಾಸ್ತಿ ಪ್ರವಾಹದ ಕಡೆಗೆ ಬಂದರೆ ಉಪಯೋಗವಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೂಡ ಪ್ರವಾಹದ ಬಗ್ಗೆಯೇ ಮಾತನಾಡುತ್ತಿರುವುದು. ನಾನು ಕೂಡ ಅಲ್ಲಿಗೆ ಬರುತ್ತಿದ್ದೇನೆ. ಆದ್ದರಿಂದ ದಯಮಾಡಿ, ನಾನು ತಮ್ಮಲ್ಲಿ ಇದೆಲ್ಲಕ್ಕಿಂತ ಮಿಗಿಲಾಗಿ ಇನ್ನೊಂದು ವಿಷಯ ಏನೇಂದರೆ, ಮಾನ್ಯ ನಿರ್ಮಲಾ ಸೀತಾರಾಮನ್ ರವರು ನಮ್ಮ ರಾಜ್ಯದಿಂದಲೇ ಕೇಂದ್ರ ಹಣಕಾಸು ಸಚಿವೆಯಾಗಿರುವಂತಹವರು ಮತ್ತು ನಮ್ಮ ರಾಜ್ಯದಿಂದ ಆರಿಸಿ ಹೋಗಿರುವಂತಹವರು. ಎರಡನೇ ಬಾರಿಗೆ ರಾಜ್ಯ ಸಭೆಗೆ ಕರ್ನಾಟಕದ ಜನ ಕಳುಹಿಸಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಹಣಕಾಸು ಖಾತೆಯ ಸಚಿವರಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಕರ್ನಾಟಕದ ಜನ ನೋವಿನಲ್ಲಿರುವಾಗ ಸಂಸತ್‌ನಲ್ಲಿ ಹಣಕಾಸು ಸಚಿವೆಯಾಗಿ ನನ್ನ ರಾಜ್ಯದಲ್ಲಿ ಸಂಕಷ್ಟದಲ್ಲಿರುವಂತಹ ಜನತೆಗೆ ವಿಶೇಷವಾದ ಪರಿಹಾರ ಕೊಡುತ್ತೇನೆ ಎಂದು ಎಲ್ಲಿಯೂ ಕೂಡ ಘೋಷಣೆ ಮಾಡಲಿಲ್ಲ. ಕರ್ನಾಟಕದ ಜನತೆ ಎಂತಹ ದುರ್ದೈವಿಗಳು ಆಗಿದ್ದಾರೆ. ಅವರನ್ನು ನಾವು ರಾಜ್ಯ ಸಭೆಗೆ ಕಳುಹಿಸಿದ್ದೇವೆ. ಅವರು ಹಣಕಾಸು ಸಚಿವೆಯಾಗಿದ್ದಾರೆ. ಅವರಿಗೂ ಕೂಡ ಈ ಕರ್ನಾಟಕ ಜನತೆಯ ಕಷ್ಟದ ಬಗ್ಗೆ ಒಂದು ಪ್ರೀತಿ, ಅನುಕಂಪ, ಕರುಣೆ ಇಲ್ಲ ಎನ್ನುವಂತಹದ್ದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ ಮತ್ತು 25 ಮಂದಿ ಲೋಕಸಭಾ ಸದಸ್ಯರು ಇದ್ದಾರೆ. ಇಂತಹ ಸಂದರ್ಭದಲ್ಲಿಯೂ ಕೂಡ 25 ಮಂದಿ ಲೋಕಸಭಾ ಸದಸ್ಯರು ಮಾನ್ಯ ಪ್ರಧಾನ ಮಂತ್ರಿಗಳನ್ನು ಮತ್ತು ಮಾನ್ಯ ಹಣಕಾಸು ಸಚಿವರನ್ನು ಕೇಂದ್ರದಲ್ಲಿ ಭೇಟಿ ಮಾಡಿ ನಮ್ಮ ರಾಜ್ಯದಲ್ಲಿ ಈ ರೀತಿಯಾಗಿದೆ. ದಯಮಾಡಿ, ವಿಶೇಷವಾದಂತಹ ಪರಿಹಾರವನ್ನು ಕೊಡಬೇಕು. ನಮ್ಮ ರಾಜ್ಯಕ್ಕೆ ಕೊಡಬೇಕಾದಂತಹ . . .

**ವೈಸ್ ಛೇರ್‌ಮನ್:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಕಂಡಂತಹ ಪರಿಸ್ಥಿತಿಯನ್ನು ಹೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಕಂಡಂತಹ ಪರಿಸ್ಥಿತಿಯನ್ನೇ ಹೇಳುತ್ತಿದ್ದೇನೆ.

**ವೈಸ್ ಛೇರ್‌ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಕಂಡಂತಹ ಪ್ರವಾಹ ಪರಿಸ್ಥಿತಿಯ ಬಗ್ಗೆ ಹೇಳಿದರೆ ಹೆಚ್ಚು ಲಾಭವಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಕೂಡ ಅದರ ಬಗ್ಗೆಯೇ ಮಾತನಾಡುತ್ತಿದ್ದೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಮರಿತಿಬ್ಬೇಗೌಡರವರೇ, ಪಾಪ, ಅವರಿಗೆ appointment ಸಿಗುವುದಿಲ್ಲವಲ್ಲವೇ? Appointment ಕೊಟ್ಟರೆ ತಾನೇ ಮಾನ್ಯ ಪ್ರಧಾನ ಮಂತ್ರಿಯವರನ್ನು ನೋಡುವುದಕ್ಕೆ ಆಗುವುದು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ನಸೀರ್ ಅಹ್ಮದ್‌ರವರೇ, ಇರಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ.

**ವೈಸ್ ಛೇರ್‌ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ಈ ಸಮಯಕ್ಕೆ ತಮಗೆ ನೆರವು ಬೇಕಾಗಿಲ್ಲ ಎಂದು ನಾನು ಅಂದುಕೊಳ್ಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಬೇರೆಯವರು ಮಾತನಾಡಿರುವುದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಮರಿತಿಬ್ಬೇಗೌಡರವರೇ, ಒಂದು ನಿಮಿಷ. ತಾವು ನನ್ನ ಸ್ನೇಹಿತರು ತಾನೇ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾನಾಯಕರೇ, ಮಾನ್ಯ ಸಭಾಪತಿಯವರು ಪೀಠದಿಂದ ಹೇಳುತ್ತಿದ್ದಾರೆ. ನಮ್ಮ ಊರಿನ ಹಳ್ಳದಲ್ಲಿ ಹೀಗಾಯಿತು. ಅದು ಕೋಡಿ ಹೊಡೆಯಿತು. ಇದು ಕೋಡಿ ಹೊಡೆಯಿತು ಎಂದು ಎಲ್ಲಾ ಮಾನ್ಯ ಶಾಸಕರು ಮಾತನಾಡಿದ್ದಾರೆ. ಅದನ್ನು ಮಾತನಾಡದೇ ಬೇರೆ ಮಾತನಾಡುತ್ತೇನೆ ಎಂದು ಹೇಳಿದ್ದೇನೆ. ಆದ್ದರಿಂದ, . . .

**ವೈಸ್ ಛೇರ್‌ಮನ್:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಏನೇ ಮಾತನಾಡಿ. ಆದರೆ, ಪ್ರವಾಹದ ಬಗ್ಗೆ ಇರಲಿ ಅಷ್ಟೇ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಕೂಡ ಪ್ರವಾಹದ ಬಗ್ಗೆಯೇ ಕೇಳುತ್ತಿದ್ದೇನೆ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರವರು ಪ್ರವಾಹವನ್ನು ದೆಹಲಿಗೆ ತಿರುಗಿಸಿಬಿಟ್ಟಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಗೃಹ ಸಚಿವರೇ, ಹೌದು. ಈಗ Federal System ನಲ್ಲಿ ನಮ್ಮ ತೆರಿಗೆ ಎಲ್ಲಾ ಅವರು ತಾನೇ ಕೊಡುವ ಹಾಗೆ ಮಾಡಿಕೊಂಡಿರುವುದು. ನಮ್ಮ ತೆರಿಗೆ ಹಣ G.S.T., ಯನ್ನು ಕೊಟ್ಟು ನಾವು ಅವರ ಹತ್ತಿರ ಬೇಡಬೇಕು. ದಯಮಾಡಿ, ಈಗ 25 ಮಂದಿ ಲೋಕಸಭಾ ಸದಸ್ಯರು ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ, ನಮ್ಮ ರಾಜ್ಯದಲ್ಲಿ ಇಂತಹ ಒಂದು ದೊಡ್ಡ ಅನಾಹುತವಾಗಿದೆ. ನಮಗೆ ಒಂದಿಷ್ಟು ಅನುದಾನವನ್ನು ಕೊಡಿ ಎಂದು ಕೇಳುವಂತಹ ಶಕ್ತಿಯೇ ಇಲ್ಲ. ಸಾಮರ್ಥ್ಯವೇ ಇಲ್ಲ. 25 ಮಂದಿ ಪಾರ್ಲಿಮೆಂಟ್ ಮೆಂಬರ್‌ಗಳನ್ನು ಎಷ್ಟು ಬಾರಿ ಈ ರಾಜ್ಯದಲ್ಲಿ ಬಿಜೆಪಿ ಸರ್ಕಾರಕ್ಕೆ ಕೊಟ್ಟರು. ದಯಮಾಡಿ, ನಾನು ಇನ್ನೆರಡು ವಿಚಾರಗಳ ಬಗ್ಗೆ ಹೇಳಬೇಕೆಂದರೆ, ಮಾನ್ಯ ಸಭಾನಾಯಕರಿಗೆ ಪಸಲು ಬೀಮಾ ಯೋಜನೆಯ ಬಗ್ಗೆ ಸಮಗ್ರವಾಗಿ ಗೊತ್ತು. ಈ ಫಸಲು ಬೀಮಾ ಯೋಜನೆಯ ಬಗ್ಗೆ ಇನ್ನು ಕೂಡ ರೈತರಿಗೆ ನಂಬಿಕೆ ಮತ್ತು ವಿಶ್ವಾಸ ಹುಟ್ಟಲಿಲ್ಲ. ಎಷ್ಟೋ ಜನ ಇದನ್ನು ಅಳವಡಿಸಿಕೊಳ್ಳುವುದಕ್ಕೆ ಬರಲಿಲ್ಲ. ಹಿಂದೆ ಒಂದು ಬಾರಿ ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರು ಬಹಳ ಚೆನ್ನಾಗಿ ಹೇಳಿದ್ದರು. ಇನ್ನು ಕೂಡ ಅಳವಡಿಸಿಕೊಂಡಿಲ್ಲ.

ಏಕೆಂದರೆ, ಈ ಯೋಜನೆಯ ಬಗ್ಗೆ ಯಾರಿಗೂ ನಂಬಿಕೆ ಇಲ್ಲ. ಒಂದು ಖಾತ್ರಿ ಇಲ್ಲ. ಈ ಯೋಜನೆಯಲ್ಲಿ ನಾವು ನೊಂದಣಿ ಮಾಡಿಕೊಂಡರೆ ನಮಗೆ ಒಂದಷ್ಟು ಹಣ ಸಿಗುತ್ತದೆ ಎನ್ನುವ ಖಾತ್ರಿ ಇಲ್ಲ. ಈ ಯೋಜನೆಯಲ್ಲಿ ಬಾರಿ ದೊಡ್ಡ ದೊಡ್ಡ ಕುಳಗಳು ಆಗುತ್ತಿದ್ದಾರೆ. ಇವತ್ತು ನಂಬರ್–1, ನಂಬರ್–2 ಎಂದು ಪತ್ರಿಕೆಯಲ್ಲಿ ಬಂದಿರುವುದನ್ನು ಓದಿ. 5 ಲಕ್ಷದ 88 ಸಾವಿರ ಕೋಟಿ ಒಡೆಯ, ಭಾರತದ ಒಡೆಯ ಎಂದು ಬಂದಿದೆ. ಕಳೆದ 10 ವರ್ಷಗಳ ಹಿಂದೆ ಅವರು ಎಷ್ಟು ಸಾವಿರ ಕೋಟಿ ಒಡೆಯ ಎನ್ನುವುದನ್ನು ನಾವು ಅರ್ಥಮಾಡಿಕೊಂಡರೆ ಇವತ್ತು . . .

**ವೈಸ್ ಛೇರ್‌ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಹಿರಿಯ ಸದಸ್ಯರು. ವಿಷಯ ಬಿಟ್ಟು ಹೋಗಬೇಡಿ. ಅವರು ಯಾರು ಈ ಸದನದಲ್ಲಿ ಇಲ್ಲ. ನಾನು ಮಧ್ಯದಲ್ಲಿ ಏನು ಹೇಳುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಇರಬೇಕೆಂದು ಏನು ಇಲ್ಲ.

**ವೈಸ್ ಛೇರ್‌ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ತಾವು ಸಂಸದರ ಬಗ್ಗೆ ಹೇಳಿದ್ದೀರಿ. ಇಲ್ಲಿ ಯಾರು defend ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಆದರೂ ಸಹ ನಾನು allow ಮಾಡಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಫಸಲ್ ಬೀಮಾ ಯೋಜನೆಯ ಬಗ್ಗೆ ಮಾತನಾಡುತ್ತಿದ್ದೇನೆ.

**ವೈಸ್ ಛೇರ್‌ಮನ್:–** ಮಾನ್ಯ ಮರಿತಿಬ್ಬೇಗೌಡರವರೇ, ಆಗಲ್ಲ. ತಾವು ಅನೇಕ ಹೆಸರುಗಳನ್ನು ಉಲ್ಲೇಖ ಮಾಡಿದ್ದೀರಿ. ಅವರು ಯಾರು ಈ ಸದನಕ್ಕೆ ಬರುವುದಕ್ಕೆ ಆಗುವುದಿಲ್ಲ. ಇದನ್ನು avoid ಮಾಡಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಯೋಜನೆಯಲ್ಲಿ ಹಣ ತುಂಬಿಸಿಕೊಂಡವರು ಇವತ್ತು ಕೋಟ್ಯಾಧಿಪತಿಯಾಗಿದ್ದಾರೆ. 10 ವರ್ಷಗಳ ಹಿಂದೆ ಇವರ ಆರ್ಥಿಕ ಪರಿಸ್ಥಿತಿ ಹೇಗಿತ್ತು? ಈ ಟಾಟಾ–ಬಿರ್ಲಾ ರವರು ಶತ–ಶತಮಾನಗಳಿಂದ ಗೆಯ್ಯುತ್ತಿದ್ದಾರೆ. Social

service ಗಾಗಿ ಎಷ್ಟೊಂದು contribution ಕೊಟ್ಟರೂ ಸಹ ಟಾಟಾ-ಬಿರ್ಲಾ ರವರು ಮೇಲಕ್ಕೆ ಬರುತ್ತಿಲ್ಲ. ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಟಾಟಾ-ಬಿರ್ಲಾ ರವರು ಕೊಟ್ಟರು.

(ಮುಂದು)

(1003)22-09-2022(05-10)bsd-gr

**ಶ್ರೀ ಮರಿತಿಬ್ಬೇಗೌಡ (ಮುಂದು)**

ಆದರೆ ಅವರು ಶ್ರೀಮಂತಿಕೆಯಲ್ಲಿ ಮೇಲೆ ಬರುತ್ತಿಲ್ಲ, ಇವರು 10 ವರ್ಷಗಳಲ್ಲಿ ವಿಶ್ವದಲ್ಲಿ ಇಷ್ಟು ಸಾವಿರ ಕೋಟಿ ಫಸಲು ಭೀಮಾ ಯೋಜನೆ ಹಣದಲ್ಲಿ..... ಎಲ್ಲಾ ದೇಶದ ವಿಮಾನಗಳೂ ಕೂಡ ಇವರದ್ದೇ ಆಗಿವೆ. ಇವತ್ತು drugs ಇದೆಲ್ಲಾ .....

**ವೈಸ್ ಚೇರ್ಮನ್:-** ಮಾನ್ಯ ಸದಸ್ಯರೇ, ದಯವಿಟ್ಟು ವಿಷಯಾಂತರ ಮಾಡಿ ಸಮಯ ಹಾಳು ಮಾಡುವುದು ಬೇಡ.

**ಶ್ರೀ ಮರಿತಿಬ್ಬೇಗೌಡ:-** ಕೋವಿಡ್ ಸಂದರ್ಭದಲ್ಲಿ ವಿಶ್ವವೇ ನಲುಗಿ ಹೋಗಿ ಬಹಳ ಜೀವ ನಷ್ಟಗಳಾಯಿತು. ಮಾನವ ಕೋಟಿ ನಲುಗಿ ಹೋಯಿತು. ವಿಜ್ಞಾನದಿಂದ ಸ್ವಲ್ಪ ಉಳಸಲಾಗಿ ನಾವೆಲ್ಲ ಜೀವರಾಶಿಗಳು ಉಳಿದುಕೊಂಡಿದ್ದೇವೆ. ಅಂತಹ ಸಂದರ್ಭದಲ್ಲಿ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಬಹಳಷ್ಟು contribution ಸರ್ಕಾರಕ್ಕೆ ಬಂತು, ಎಲ್ಲವನ್ನೂ ಮಾಡಿದರು. ಇವತ್ತಿನವರೆಗೂ ಸದನದಲ್ಲಿ ಹತ್ತಾರು ಬಾರಿ ಲೆಕ್ಕ ಕೇಳಿದರೂ ಲೆಕ್ಕವನ್ನು ಕೊಡಲಿಲ್ಲ. ಹಣ ಏನಾಯಿತು? ಎಷ್ಟು ಬಂತು? ಎಷ್ಟು ಖರ್ಚಾಯಿತು ಎಂಬ ಲೆಕ್ಕ ಕೊಡಲಿಲ್ಲ. ಪರಿಹಾರ ಕೊಡುವ ವಿಚಾರದಲ್ಲಿ "ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ" ಎನ್ನುವಂತೆ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯವರು ರೂ.830 ಕೋಟಿ ನಷ್ಟವಾಗಿದೆ ಎಂದು ವರದಿ ಕೊಟ್ಟರೆ ಅವರು ರೂ.12 ಕೋಟಿ ಪರಿಹಾರ ಕೊಡುತ್ತಾರೆ. ಇದೇರೀತಿ ಬಾಗಲಕೋಟೆ, ಬಿಜಾಪುರ, ರಾಯಚೂರು, ತುಮಕೂರು,

ಬೆಳಗಾವಿ ಜಿಲ್ಲೆಗಳಿಗೆ ಈ ರೀತಿ ಪರಿಹಾರ ಹಂಚಿಕೆ ಮಾಡಿದರೆ ನೊಂದ ಜನರಿಗೆ ಯಾವ ಪರಿಹಾರ ಸಿಕ್ಕಂತೆ ಆಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಶಾಶ್ವತ ಪರಿಹಾರ ರೂಪಿಸಲು ಜಿಲ್ಲಾಧಿಕಾರಿಯವರು ವರದಿಯನ್ನು ಕಳುಹಿಸಿಕೊಡುತ್ತಾರೆ. ಆದರೆ ತುರ್ತಾಗಿ ಬಡವರ ಮನೆಗೆ ನೀರು ನುಗ್ಗಿದರೆ, ಮನೆ ಬಿದ್ದರೆ ಮತ್ತು ಏನಾದರೂ ಅನಾಹುತಗಳಾದರೆ ಅಂತಹದ್ದನ್ನು ನಿಭಾಯಿಸಲು ಪ್ರತಿ ಜಿಲ್ಲಾಧಿಕಾರಿಯವರ ಖಾತೆಯಲ್ಲಿ ರೂ.10 ರಿಂದ 25 ಕೋಟಿಗಳವರೆಗೂ ತೆಗೆದಿಟ್ಟಿರುತ್ತಾರೆ. ತುರ್ತು ನಿರ್ವಹಣೆಗಾಗಿ ಈ ಹಣ ಇದ್ದು, ಸೇತುವೆ ಬಿದ್ದಾಗ ಅಥವಾ ಇನ್ಯಾವುದೇ ತುರ್ತು ನಿರ್ವಹಣೆ ಪರಿಹಾರದಲ್ಲಿ ಇದು ಬರುವುದಿಲ್ಲ. ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ಬಿರುಗಾಳಿ ಬಂದರೆ, ಮಳೆ ಬಂದರೆ ಅನಾಹುತಗಳಾದರೆ ಎಲ್ಲವನ್ನು ಒಟ್ಟಾಗಿ ನಿರ್ವಹಣೆ ಮಾಡಬೇಕು. ಬಿರುಗಾಳಿ ಬೀಸಿದ್ದಕ್ಕೂ ಬಿಜೆಪಿ ಸರ್ಕಾರ ಕಾರಣ ಎಂದು ಹೇಳುವುದು ಸರಿಯಲ್ಲ ಮತ್ತು ನ್ಯಾಯವಲ್ಲ. ಸಮಸ್ಯೆಗಳನ್ನು ಹೇಳಿದರೆ ಪರಿಹಾರವನ್ನು ಒಟ್ಟಾಗಿ ಮಾಡೋಣ. ಮಾನ್ಯ ಸದಸ್ಯರು ಎಷ್ಟೇ ನಮ್ಮ ಮೇಲೆ ರೇಗಿದರೂ ಅವರ ಮೇಲೆ ನಮಗೆ ಗೌರವ ಉಂಟು, ಅದರಲ್ಲಿ ಅನುಮಾನ ಬೇಡ. ಆದರೆ ಮಳೆ ಬಿದ್ದದ್ದಕ್ಕೆ, ಅನಾಹುತಗಳಾಗಿದ್ದಕ್ಕೆ ಸರ್ಕಾರಗಳು ಕಾರಣವಾಗಿರುವುದಿಲ್ಲ. ಆದರೆ ಪರಿಹಾರ ಮಾಡಬೇಕಾಗಿರುವುದು ಸರ್ಕಾರವಾಗಿದೆ.

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಕಾಲ್ಗುಣ ಸರಿಯಿಲ್ಲ ಎಂದು ಹೇಳುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಕೃತಿ ನಿಯಮಗಳಿಗೆ ಸರ್ಕಾರಗಳನ್ನು ಹೊಣೆಗಾರರನ್ನಾಗಿ ನಾನು ಮಾಡುವುದಿಲ್ಲ. ಪ್ರಕೃತಿ ವಿಕೋಪಕ್ಕೆ ಅವರನ್ನು ಮತ್ತು ಪಕ್ಷವನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ. ಅದರಲ್ಲೂ ಮಾನ್ಯ ಸಭಾನಾಯಕರ ಬಗ್ಗೆ ಬಹಳ ವಿಶ್ವಾಸ ಇದೆ.

**ವೈಸ್ ಚೇರ್ಮನ್:-** ಯಾರ ಬಗ್ಗೆ ವಿಶ್ವಾಸ ಇರುವುದಿಲ್ಲ, ಪೀಠದ ಬಗ್ಗೆ ವಿಶ್ವಾಸ ಇಟ್ಟು ಸಹಕರಿಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಪರಿಹಾರ ಕೊಡುವಾಗ ಸರ್ಕಾರಕ್ಕೆ ಒಂದು ಕಿವಿ ಮಾತು ಹೇಳುವುದೇನೆಂದರೆ, ಸರ್ಕಾರ ಯಾವುದೇ ಇದ್ದರೂ ಪ್ರತಿ ವರ್ಷ ಅತಿವೃಷ್ಠಿ-ಅನಾವೃಷ್ಠಿ ಮತ್ತು ಅನಾಹುತಗಳು ಎಲ್ಲಾ ರಾಜ್ಯಗಳಲ್ಲಿ ಇರುವಂತೆ ನಮ್ಮ ರಾಜ್ಯದಲ್ಲಿಯೂ ಇರುತ್ತದೆ. ಆ ಸಂದರ್ಭದಲ್ಲಿ ಕೊಡುವ ಪರಿಹಾರ ಏನೇನೂ ಅಲ್ಲ. ಬೆಂಗಳೂರು ನಗರವನ್ನು Silicon City ಎಂದು ಕರೆಯುತ್ತಿದ್ದು, ಈಗ ಆ ಹೆಸರು ಹೋಗಿ Garbage City ಯಾಗಿದೆ. ಈ ಸರ್ಕಾರದಲ್ಲಿ Garbage City ಯಾಗಿದ್ದು, ಹಿಂದಿನ ಸರ್ಕಾರದಲ್ಲಿ Silicon City ಆಗಿತ್ತು. ಇನ್ನು ಮುಂದೆ Drugs City ಎಂದಾಗುತ್ತದೆ. ಇನ್ನು ಮುಂದೆ ಬೆಂಗಳೂರು ನಗರದಲ್ಲಿ ಯಾವುದೇ documents ಗಳು ಸರಿಯಿಲ್ಲ ಎನ್ನುವಂತಹ City ಆಗುತ್ತದೆ. ಬೆಂಗಳೂರು ನಗರದಲ್ಲಿ ಸುರಿದ ಮಳೆಗೆ ಜನ boat ನಲ್ಲಿ ಹೋಗಬೇಕಾದ ಪರಿಸ್ಥಿತಿ ಆಯಿತು. ಎಲ್ಲಾ ಕಡೆ ರಾಜಕಾಲುವೆ ತೆರವುಗೊಳಸಬೇಕು ಎನ್ನುತ್ತಿದ್ದು, ನಾನು 22 ವರ್ಷಗಳಿಂದ ನೋಡುತ್ತಿರುವಂತೆ ರಾಜಕಾಲುವೆ ಸದ್ದು ಮಳೆ ಬಿದ್ದಾಗ ಮತ್ತು ಮಳೆ ಬಂದಾಗ ನಾಲ್ಕು ದಿನ ಮಾತ್ರ ಇರುತ್ತದೆ. ನಂತರ ಯಾವುದೋ ಒಂದು Court order ಬರುತ್ತದೆ, ಯಾರೋ ಪ್ರಭಾವಿಗಳು Court order ತಂದಿದ್ದರಿಂದ ಎಲ್ಲವೂ ಅಲ್ಲಿಗೆ ನಿಂತು ಹೋಗುತ್ತದೆ. ಇವತ್ತು ರಾಜಕಾಲುವೆ ಒತ್ತುವರಿಯಾಗಿದೆ ಎಂದರೆ ಅದಕ್ಕೆ ಯಾರು ಕಾರಣ? ರಾಜಕಾಲುವೆಗಳ ಮೇಲೆ ಮನೆಗಳನ್ನು ಕಟ್ಟಿದ್ದಾರೆ ಎಂದರೆ ಅದಕ್ಕೆ ಯಾರು ಕಾರಣ? B.B.M.P., Engineers ಏನು ಮಾಡುತ್ತಾರೆ? ಇವತ್ತು ಏನೆಲ್ಲಾ documents ಗಳನ್ನು ತೋರಿಸಿದರೂ JCB ಬಳಸಿ ಆ ಮನೆ ಒಡೆಯುವುದಲ್ಲದೇ ಎಲ್ಲವನ್ನೂ ತೆಗೆದು ಆಚೆಗೆ ಬಿಸಾಕುತ್ತಾರೆ. ಒತ್ತುವರಿ ಮಾಡಿಕೊಂಡು ಕಟ್ಟಲು ಆ document ಗಳನ್ನು ಜನರಿಗೆ ಕೊಟ್ಟವರು ಯಾರು? ಯಾರೇ ಒಬ್ಬ Engineer ಅಥವಾ ಕಂದಾಯ ಇಲಾಖೆಯ ಅಧಿಕಾರಿಗಳ ಬಗ್ಗೆ ಈ ಸರ್ಕಾರದಲ್ಲಿ ಕ್ರಮವಾಗಿದೆಯೇ? ಬೆಂಗಳೂರು ನಗರದಲ್ಲಿ ಎಷ್ಟು encroachment ಆಗಿದೆ, ಯಾವ್ಯಾವ Storm Water Drainage ಒತ್ತುವರಿಯಾಗಿವೆಯೋ, ಅವುಗಳ ಒಂದು ಪಕ್ಷಿನೋಟವನ್ನು ಬಿಡುಗಡೆ ಮಾಡಲಿ. ನಿರಂತರವಾಗಿ ಎಲ್ಲಾ ಪ್ರಕ್ರಿಯೆಗಳು ವಿರಮಿಸುವುದಿಲ್ಲ ಎಂದು ಹೇಳಿ ಮಾಡಲಿ. ಯಾವ್ಯಾವ ಅಧಿಕಾರಿಗಳು ಅನಧಿಕೃತ ಕಟ್ಟಡ ಬರಲು ಕಾರಣರಾಗಿದ್ದಾರೋ ಮತ್ತು ಯಾವ್ಯಾವ ಅಧಿಕಾರಿಗಳು ಆಯಾ ಸಮಯದಲ್ಲಿ ಕೆಲಸ

ಮಾಡಿದ್ದಾರೋ, ಅವರು ಕಂದಾಯ ಇಲಾಖಾಧಿಕಾರಿಗಳು ಅಥವಾ Engineer ಗಳಿರಬಹುದು; ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಿ, ಅವರನ್ನು ಜವಾಬ್ದಾರರನ್ನಾಗಿ ಮಾಡಲಿ. ಇನ್ನು ಮುಂದಾದರೂ B.B.M.P., ಯ ಈ ಮಹಾನಗರದಲ್ಲಿ ಇಂತಹ ಒತ್ತುವರಿಗೆ ಸಹಕಾರ ನೀಡುವ ಕಂದಾಯಾಧಿಕಾರಿಗಳು ಮತ್ತು Engineer ಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲು ಒಂದು ಕಾಯ್ದೆಯನ್ನು ತೆಗೆದುಕೊಂಡು ಬರಲಿ. ಆ ಕಾಯ್ದೆ ಇಲ್ಲದೇ ಇರುವುದರಿಂದ ಎಲ್ಲಾ Engineer ಕಾಸು ತೆಗೆದುಕೊಂಡು ಕಟ್ಟಿಕೊಳ್ಳಿ ಎನ್ನುವುದು, ಕಾಸು ತೆಗೆದುಕೊಂಡು record ಮಾಡಿಕೊಡುವುದು; ಈಗ ಆ ಬಡವರನ್ನು ಬೀದಿ ಪಾಲು ಮಾಡುವುದು. ಎಷ್ಟು ಜನ ಕಣ್ಣೀರು ಹಾಕುತ್ತಾರೆ? Plan approval ಮಾಡಿದವರ್ಯಾರು? ದಾಖಲೆಗಳನ್ನು ಕೊಟ್ಟವರ್ಯಾರು? ಯಾವ ದಾಖಲೆಗಳು ಇಲ್ಲದೇ encroach ಮಾಡಿ ಕಟ್ಟಿಕೊಂಡಿದ್ದಾರೆಂದಾಗ ಸ್ಥಳೀಯ Engineer ಆ ದಿನಗಳಲ್ಲಿ ಏನು ಮಾಡುತ್ತಿದ್ದನು? ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ. ಆದರೆ JCB ಯಲ್ಲಿ ಬಡವರ ಮನೆಗಳನ್ನು ಎತ್ತಿ ಹಾಕುತ್ತಿದ್ದಾರೆ. ಬಡವರನ್ನು ರಸ್ತೆಗೆ ಬೀಳಿಸುತ್ತಿದ್ದಾರೆ. C.A.G., ವರದಿಯಲ್ಲಿ ಏನೇನು ಬಂದಿದೆಯೋ, ಅದರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ದಿಟ್ಟವಾಗಿ ಹೇಳಲಿ. ಯಾರೋ ಪ್ರಭಾವಿಗಳ ಕಟ್ಟಡ ಒಡೆಯುವಾಗ ಒಂದು ತಡೆ ತಂದು ನಿಲ್ಲಿಸಿ, ಎಲ್ಲವನ್ನೂ ಕೈಬಿಟ್ಟು ಬಿಡುವುದು. ಮತ್ತೆ ಈ ರೀತಿ ಮಳೆ ಹಾನಿಯಾದಾಗ ಮಾಡುವುದು. ಇದು JCB ಸರ್ಕಾರವಾಗಿದೆ. ಈ ಸರ್ಕಾರ ಬಡವರನ್ನು JCB ಯಲ್ಲಿಯೇ ಎತ್ತಿ ಹಾಕುತ್ತದೆ. ಅವರ ಕಣ್ಣೀರು ನೋಡುವುದಕ್ಕೆ ಆಗುವುದಿಲ್ಲ, ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಕ್ರಮ ಇಲ್ಲ. ದಯವಿಟ್ಟು ಇನ್ನು ಮುಂದಾದರೂ ಒಂದು ಕಾಯ್ದೆ ತಂದು ಎಲ್ಲಾ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಲಿ, ಒಂದು ಬದ್ಧತೆ ಇರಲಿ. ಬೆಂಗಳೂರು ನಗರದಲ್ಲಿ 2 ವರ್ಷಗಳಿಂದ B.B.M.P., election ಇಲ್ಲ, ಈ ಸರ್ಕಾರ ಯಾವುದೋ ಕಾರಣದಿಂದ 2 ವರ್ಷಗಳಿಂದ B.B.M.P., election ಮಾಡಲಿಲ್ಲ. ಜನ ಪ್ರತಿನಿಧಿಗಳು ಇಲ್ಲ, ಅಧಿಕಾರಿಗಳದ್ದೇ ಕಾರುಬಾರಾಗಿದೆ.

**ವೈಸ್ ಚೇರ್ಮನ್:-** ಮಾನ್ಯ ಸದಸ್ಯರೇ, ಪ್ರವಾಹದ ಬಗ್ಗೆ ಮಾತನಾಡಿ, ಈ ವಿಷಯ ಮಾತನಾಡಲು ಈಗ ಸಮಯ ಇಲ್ಲ. ಸಮಯದ ಕೊರತೆ ಇದೆ. ಬೇರೆಯವರಿಗೆ ಅವಕಾಶ ಕೊಡಬೇಕು. Please conclude.

**ಶ್ರೀ ಮರಿತಿಬ್ಬೇಗೌಡ:-** ಜನ ಪ್ರತಿನಿಧಿಗಳು ಇದ್ದಿದ್ದರೆ, B.B.M.P., ಗೆ ಚುನಾವಣೆ ಆಗಿದ್ದರೆ, ಮತ ಕೊಟ್ಟ ಬಡವರು ಮತ್ತು ಸಂಕಷ್ಟದಲ್ಲಿರುವವರನ್ನು ರಾತ್ರಿ-ಹಗಲು ರಕ್ಷಣೆ ಮಾಡುತ್ತಾರೆಂಬ ಕಾಳಜಿ ಇರುತ್ತಿತ್ತು. ಆದರೆ ಚುನಾವಣೆ ಮಾಡದೇ ಇರುವುದರಿಂದ ಇಂತಹ ಸಂಕಷ್ಟದ ಪರಿಸ್ಥಿತಿ ಇದೆ. ಅಧಿಕಾರಿಗಳು ಬಡವರನ್ನು ನೋಡುತ್ತಿದ್ದಾರೆಯೇ? ರಸ್ತೆ ಗುಂಡಿಗಳ ಬಗ್ಗೆ ಹೇಳಬೇಕೆಂದರೆ ಬೆಂಗಳೂರು ಆಡಳಿತವನ್ನು ರಾಜ್ಯದ High Court ನಿರ್ವಹಣೆ ಮಾಡುತ್ತಿದೆಯೇ ಹೊರತು ಈ ಸರ್ಕಾರ ಅಲ್ಲ. ಈ ವಿಚಾರದಲ್ಲಿ ನಾನು ರಾಜ್ಯದ High Court ಅನ್ನು ಅಭಿನಂದಿಸುತ್ತೇನೆ. ಗುಂಡಿ ಮುಚ್ಚಿಸುವ ವ್ಯವಸ್ಥೆ ಸರ್ಕಾರದಿಂದ ಆಗಲಿಲ್ಲ, ರಾಜ್ಯದ High Court ನ್ಯಾಯಾಧೀಶರಿಂದ ಈ ಕೆಲಸ ಸಾಧ್ಯವಾಯಿತು. ಎಂತಹ ಪರಿಸ್ಥಿತಿ! ಮತ್ತು ಎಂತಹ ಆಡಳಿತ! ಎಂಬುದನ್ನು ನೋಡಿ.

(ಮುಂದು)

(1004) 22.09.2022 5.20 ಹೆಚ್‌ವಿ:ಎಂಡಿ

(ವೈಸ್ ಛೇರ್ಮನ್ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ(ಮುಂದು.....):-**

ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ಬಿ.ಬಿ.ಎಂ.ಪಿ.ಯವರು ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಯಾರಿಗೆ ಪರಿಹಾರವನ್ನು ಕೊಡಬೇಕು ಅವರೆಲ್ಲರಿಗೂ ಪರಿಹಾರವನ್ನು ಮುಟ್ಟಿಸುವುದರ ಜೊತೆಗೆ ಅಧಿಕಾರಿಗಳಿಗೆ ಕಡಿವಾಣ ಹಾಕುವಂತಹ ಕೆಲಸ ಮಾಡಬೇಕಾಗಿದೆ. ನಾನೊಂದು ಕಿವಿ ಮಾತು.......

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ತಮ್ಮ ಸಮಯ ಮುಗಿದಿದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, 5 ನಿಮಿಷಗಳ ಕಾಲಾವಕಾಶವನ್ನು ನೀಡಿ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಎಷ್ಟು ಹೊತ್ತಿನಿಂದ ತಾವು 5 ನಿಮಿಷವೆಂದು ಹೇಳುತ್ತಿದ್ದೀರಿ. 5 ನಿಮಿಷ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಡಾ॥ ವೈ.ಎ.ನಾರಾಯಣಸ್ವಾಮಿಯವರೇ, ತಾವು ಮಾತನಾಡಿ. ನ್ಯಾಯಾಲಯವನ್ನು ಅವಶ್ಯಕತೆಗೆ ಮೀರಿ ಇಲ್ಲಿ ತರುವುದು ಬೇಡ. ನಿರ್ದಿಷ್ಟ ಪ್ರಕರಣಗಳಲ್ಲಿ ನಿರ್ದಿಷ್ಟ ಸೂಚನೆಗಳನ್ನು ನೀಡಿರುತ್ತದೆ. ಆ ಬಗ್ಗೆ ಹಿಂದೆ ತಾವೇ ಈ ಸದನದಲ್ಲಿ ಮಾತನಾಡಿದ್ದೀರಿ.

**ಡಾ॥ ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು........

**ಶ್ರೀ ನಸೀರ್ ಅಹ್ಮದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಇನ್ನೂ 5 ನಿಮಿಷಗಳ ಕಾಲ ಮಾತನಾಡಲಿ ಬಿಡಿ.

**ವೈಸ್ ಛೇರ್ಮನ್:-** ಮಾನ್ಯ ನಸೀರ್ ಅಹ್ಮದ್‌ರವರೇ, ಅದನ್ನು ಪೀಠ ನಿರ್ಧರಿಸುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಆಗಲೇ ಪೀಠದಲ್ಲಿ ಉಪಸ್ಥಿತರಿದ್ದ ಮಾನ್ಯ ಸಭಾಪತಿಯವರು ನನಗೆ ಅರ್ಧಗಂಟೆಗಳ ಕಾಲ ಮಾತನಾಡಲು ಅವಕಾಶವನ್ನು ಕೊಟ್ಟಿದ್ದರು. ನಾನು ಮಾತನಾಡಲು ಪ್ರಾರಂಭಿಸಿ ಇನ್ನೂ 20 ನಿಮಿಷಗಳು ಕಳೆದಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ತಾವು ನನ್ನ ಹೆಸರನ್ನು ಕರೆದಿದ್ದೀರಿ, ನಾನು ಮಾತನಾಡಲೇ?

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಬೇರೆಯವರು ಮಾತನಾಡುವುದಕ್ಕೆ ಸಮಯ ಕೊಡುವುದು ಬೇಡವೇ? ತಾವು ಎಷ್ಟು ಹೊತ್ತಿಗೆ ಮಾತನಾಡಲು ಪ್ರಾರಂಭಿಸಿದ್ದೀರಿ ಎನ್ನುವುದು ನನ್ನ ಹತ್ತಿರ ಲೆಕ್ಕವಿದೆ. ತಮಗೆ ಹೇಗೆ ಗೊತ್ತಾಗುತ್ತದೆ. ತಾವು ಗಡಿಯಾರವನ್ನೇ ನೋಡಿಕೊಂಡಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, 5 ನಿಮಿಷಗಳ ಕಾಲಾವಕಾಶವನ್ನು ನೀಡಿ. ಮಾನ್ಯ ನಾರಾಯಣಸ್ವಾಮಿಯವರೇ, ಪ್ಲೀಸ್.....

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಎಷ್ಟು 5 ನಿಮಿಷಗಳು ಕಳೆದು ಹೋಗಿವೆ. ಇದು ನಾಲ್ಕನೆಯ 5 ನಿಮಿಷವಾಗಿದೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಬೇರೆ ಸದಸ್ಯರು ಮಾತನಾಡುವವರಿದ್ದಾರೆ. ದಯವಿಟ್ಟು ಅವರು ಮಾತನಾಡಿರುವುದು ಸಾಕು ಎಂದು ಹೇಳಿ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಪ್ರವಾಹದ ವಿಚಾರಕ್ಕೆ ತಾವು ಕಡಿಮೆ ಸಮಯವನ್ನು ಕೊಟ್ಟಿದ್ದೀರಿ. ಮಾನ್ಯ ನಾರಾಯಣಸ್ವಾಮಿಯವರೇ, ತಮ್ಮ ಸಮಯ ಕಳೆದು ಹೋಗುತ್ತಿದೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ.......

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೊಂದು ಕಿವಿ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾನು 5 ನಿಮಿಷಗಳ ಕಾಲಾವಕಾಶವನ್ನು ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಏನಿದು?

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅವರು ಎಷ್ಟು 5 ನಿಮಿಷಗಳನ್ನು ತೆಗೆದುಕೊಂಡಿದ್ದಾರೆ?

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಪೀಠದೊಂದಿಗೆ ಜಗಳ ಮಾಡಿದರೆ ಹೇಗೆ? ತಾವು ಬೇರೆಯವರಿಗೆ ಮಾತನಾಡಲು ಅವಕಾಶ ಕೊಡಬೇಕೋ ಬೇಡವೋ? ಎಲ್ಲರ ಅವಕಾಶವನ್ನು ತಾವೇ ತೆಗೆದುಕೊಂಡರೇ ಹೇಗೆ?

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ದೇವಾಲಯಗಳನ್ನು ಕಟ್ಟುವುದಕ್ಕೆ ಮತ್ತು ಪ್ರತಿಮೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಮಠಗಳಿಗೆ .......

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಅವರಿಗೆ ಹೇಳಬೇಕಾಗಿದೆ. ತಾವು ಪ್ರಸ್ತಾಪ ಮಾಡಿರುವ ವಿಷಯವನ್ನು ಬಿಟ್ಟು ಬೇರೆಬೇರೆ ವಿಚಾರಗಳನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಪ್ರತಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಮತ್ತು ದೇವಸ್ಥಾನಗಳನ್ನು ಕಟ್ಟುವುದಕ್ಕೆ ಸಾವಿರಾರು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಇದನ್ನು ದಯವಿಟ್ಟು ನಿಲ್ಲಿಸಿ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಈ ವಿಚಾರವನ್ನು ತಾವು ಪ್ರಸ್ತಾಪ ಮಾಡಿದರೆ, ಅವರುಗಳು ಜಗಳಕ್ಕೆ ಬೀಳುತ್ತಾರೆ. ಪುನಃ ಸಮಯ ಹಾಳಾಗುತ್ತದೆ. ತಾವು ವಿಷಯದ ಆಚೆ ಹೋಗುತ್ತಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಯಾವ ವಿಷಯದ ಆಚೆ? .... ಏನು ವಿಷಯದ ಆಚೆ?

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ತಮ್ಮ ಸಮಯ ಮುಗಿದಿದೆ. ಡಾ॥ ವೈ.ಎ.ನಾರಾಯಣಸ್ವಾಮಿಯವರು ಮಾತನಾಡಬೇಕು.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಸರ್ಕಾರಕ್ಕೆ ಸಲಹೆಗಳನ್ನು ನೀಡುತ್ತಿದ್ದೇನೆಯೇ ಹೊರತು. ವಿಷಯದಿಂದ ಆಚೆ ಹೋಗುತ್ತಿಲ್ಲ. ದಯವಿಟ್ಟು 5 ನಿಮಿಷಗಳ ಕಾಲಾವಕಾಶವನ್ನು ನೀಡಿ. ಇಲ್ಲದಿದ್ದರೆ ನಾನು ಧರಣಿಗೆ ಹೋಗಬೇಕಾಗುತ್ತದೆ.

**ವೈಸ್ ಛೇರ್ಮನ್:-** ತಾವು ಎಲ್ಲಿಗೆ ಹೋಗುತ್ತಿದ್ದೀರಿ ಎಂದು ಮೇಲೆ ಕುಳಿತಿರುವ ನಮಗೆ ಕಾಣುತ್ತಿದೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-**ಸನ್ಮಾನ್ಯ ಸಭಾಪತಿಯವರೇ, ಅವರು ಸ್ಲೋ ಆಗಿ, ಕೂಲ್ ಆಗಿ ಮಾತನಾಡಿ ಬೇಗ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಲಿ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಅವರು ಸುಮ್ಮನಿದ್ದರೆ, ನಾನು ಬೇಗ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ದೇವಸ್ಥಾನಗಳು, ಪ್ರತಿಮೆಗಳು, ಮಠಗಳು, ಜಾತಿ ಸಂಘ-ಸಂಸ್ಥೆಗಳಿಗೆ ಸಾರ್ವಜನಿಕರ ತೆರಿಗೆ ಹಣವನ್ನು ಕಡಲೇಪುರಿಯಂತೆ ಹಂಚಬಾರದು. ಆ ಹಣವನ್ನು ಇಂತಹ ಸಂತ್ರಸ್ತರಿಗೆ ನೀಡಬೇಕಾಗಿದೆ. ಈ ದಿನದ ಪ್ರಜಾವಾಣಿ ದಿನಪತ್ರಿಕೆಯಲ್ಲಿ, "ಮಠಗಳಿಗೆ 400 ಕೋಟಿ ರೂಪಾಯಿಗಳ ಹಂಚಿಕೆಯಾಗಿದೆ; ಮನೆಮನೆ ಧ್ವಜಕ್ಕೆ 3 ಕೋಟಿ ರೂಪಾಯಿಗಳು ಖರ್ಚಾಗಿದೆ; ಲಿಂಗಾಯಿತರಿಗೆ 100 ಕೋಟಿ ರೂಪಾಯಿಗಳು, ಒಕ್ಕಲಿಗರಿಗೆ 105 ಕೋಟಿ ರೂಪಾಯಿಗಳು ......" ಹೀಗೆ ಸಾರ್ವಜನಿಕರ ತೆರಿಗೆ ಹಣವನ್ನು ಹಂಚಿಕೆ ಮಾಡಲಾಗುತ್ತಿದೆ. ಜಾತ್ಯಾತೀತವಾಗಿ ಆಡಳಿತ ಮಾಡಬೇಕಾಗಿರುವ ಸರ್ಕಾರಗಳು......

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಪ್ರವಾಹಕ್ಕೆ ಪರಿಹಾರವನ್ನು ಹುಡುಕಿ ಎಂದರೆ, ಈ ರೀತಿ ಬೆಂಕಿ ಹಾಕಿದರೆ, ಬೆಂಕಿ ಆರಿಸುವುದಕ್ಕೆ ಪುನಃ ಪ್ರವಾಹ ಬರಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಯಾವುದೇ ಪಕ್ಷದ ಸರ್ಕಾರವಾಗಿರಲಿ ಜಾತ್ಯಾತೀತವಾಗಿ ಆಡಳಿತ ನಡೆಸಬೇಕಾಗಿರುವ ಸರ್ಕಾರಗಳು ಜಾತಿ ಆಧಾರಿತವಾಗಿ **"ಸರ್ವ ಜನಾಂಗದ ಸುಖ ವಿನೋತ್ತೋ"** ಎಂದು ಮಾಡಬೇಕಾಗುತ್ತದೆ. ದೇವಸ್ಥಾನಗಳು, ಪ್ರತಿಮೆಗಳು, ಮಠಗಳು ಮತ್ತು ಜಾತಿ ಸಂಘ-ಸಂಸ್ಥೆಗಳಿಗೆ ಕೊಡುವ ಹಣವನ್ನು ಇಂತಹ ಸಂದರ್ಭ ಬಂದಾಗ, ಸಂತ್ರಸ್ತರಿಗೆ ಮತ್ತು ಬಡವರಿಗೆ ಕೊಡಬೇಕಾಗಿದೆ. ಇದನ್ನು ಬಿಟ್ಟು ಈ ರೀತಿ ಹಂಚಿಕೆ ಮಾಡಿದರೆ ಈ ನಾಡಿನ ಬಡ ಜನರ ಕಣ್ಣೀರನ್ನು ಒರೆಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಏತಕ್ಕೋಸ್ಕರ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ, ಮಠಗಳು ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಅನುದಾನವನ್ನು ನೀಡಿದರೆ ನಾನು ಬೇಡವೆಂದು ಹೇಳುವುದಿಲ್ಲ. ಆದರೆ, ಮಠಗಳಿಗೆ, ಜಾತಿ ಸಂಘ-ಸಂಸ್ಥೆಗಳಿಗೆ ಅನುದಾನ ಕೊಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನ ಬಾಹಿರವಾಗಿದೆ. ಯಾವ ಜಾತಿ ಸಂಸ್ಥೆಗಾಗಲೀ, ಯಾವುದೇ ಧರ್ಮದ ಆಚರಣೆಗಾಗಲೀ ಅಥವಾ ಯಾವುದೇ ದೇವಸ್ಥಾನದ ಕಟ್ಟಡ ಕಾಮಗಾರಿಗಾಗಿ ಸರ್ಕಾರ ಸಾರ್ವಜನಿಕರ ತೆರಿಗೆ ಹಣವನ್ನು ನೀಡುವುದು ಬಹಳ ಅಕ್ಷಮ್ಯ ಅಪರಾಧವಾಗಿದೆ ಮತ್ತು ಸಂವಿಧಾನ ವಿರೋಧಿಯಾಗಿದೆ. ಸಾರ್ವಜನಿಕರ ತೆರಿಗೆ ಹಣವನ್ನು ಇಂತಹ ಸಂತ್ರಸ್ತರಿಗೆ ಪರಿಹಾರ ರೂಪದಲ್ಲಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತಂದರೆ ಜನರು ಇವರ ಸರ್ಕಾರವನ್ನು ಮೆಚ್ಚುತ್ತಾರೆ. ಸಂಘ-ಸಂಸ್ಥೆಗಳಿಗೆ ಹಣ ಕೊಟ್ಟರೆ, ಮುಂದಿನ ಚುನಾವಣೆಯಲ್ಲಿ ಜನರು ಓಟು ಹಾಕುತ್ತಾರೆಂದು ಅವರು ತಿಳಿದುಕೊಂಡಿದ್ದಾರೆ. ಮತದಾರರು ಬಹಳಷ್ಟು ಸಾರಿ ಪಟ್ಟಿ ಹೊಡೆಸಿದ್ದಾರೆ. ದಯಮಾಡಿ ಅವರು ಇಂತಹ ಕೆಲಸವನ್ನು ಮಾಡುವುದಕ್ಕೆ ಹೋಗಬಾರದು. ಇದು ಬಹಳ ನೀಚ ಕೆಲಸವಾಗಿದೆ. ಜಾತ್ಯಾತೀತ ವ್ಯವಸ್ಥೆಯಲ್ಲಿ ಮಠಗಳಿಗೆ ದುಡ್ಡು ಕೊಡುವುದು ಸಂವಿಧಾನ ವಿರೋಧಿ ಕೆಲಸವಾಗಿದೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ದಯವಿಟ್ಟು ತಾವು ತಮ್ಮ ಮಾತುಗಳನ್ನು ಮುಗಿಸಿ. ತಾವು ಮಾತನಾಡಲು ಪ್ರಾರಂಭಿಸಿ ಈಗಾಗಲೇ ಅರ್ಧ ಗಂಟೆಯಾಗಿದೆ. ದಯವಿಟ್ಟು ಬೇರೆಯವರಿಗೂ ಸಮಯ ಕೊಡಿ. ತಾವು ಸಹಕರಿಸದೇ ಇದ್ದರೆ ಹೇಗೆ? ಬೇರೆಯವರ ಹಕ್ಕನ್ನು ತಾವು ಕಸಿತುಕೊಳ್ಳಬಾರದು. ತಾವು ಹಿರಿಯ ಸದಸ್ಯರಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಬಡವರಿಗೆ ಮತ್ತು ಪ್ರವಾಹದಿಂದಾಗಿ ಸಂತ್ರಸ್ತರಾಗಿರುವವರಿಗೆ ಸರ್ಕಾರ ಆದಷ್ಟು ಬೇಗನೇ ಪರಿಹಾರವನ್ನು ತಲುಪಿಸುವಂತಾಗಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಸುತ್ತಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ ೬೮ರ ಮೇರೆಗೆ ತಂದಿರುವಂತಹ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ನಾನು ಅವರ ಪರವಾಗಿ, ಇವರ ಪರವಾಗಿ ಯಾರ ಪರವಾಗಿಯೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರುವ ವಿಚಾರಗಳ ಬಗ್ಗೆಯೂ ಮಾತನಾಡುವುದಿಲ್ಲ. ನಾನು ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನೀಡಬೇಕೆಂದು ಎದ್ದು ನಿಂತಿದ್ದೇನೆ. ನನ್ನ ಮಾತುಗಳನ್ನು ಹತ್ತು ನಿಮಿಷಗಳಲ್ಲಿ ಮುಕ್ತಾಯಗೊಳಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, Global warming is an international phenomenon. ಇವತ್ತು global warming ನಿಂದಾಗಿ ಜಾಗತಿಕ ಉಷ್ಣಾಂಶ ಹೆಚ್ಚಾಗಿ ಜಾಗತಿಕ ವೈಪರೀತ್ಯಗಳು ವಿಶೇಷವಾಗಿ ಉಂಟಾಗುತ್ತಿವೆ. ಅದರಲ್ಲೂ ವಿಶೇಷವಾಗಿ ದಕ್ಷಿಣ ಏಷಿಯಾದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಬದಲಾವಣೆಗಳಾಗುತ್ತಿವೆ. ಈ ಕಾರಣದಿಂದಾಗಿ ನಮಗೆ ನಿರಂತರವಾಗಿ dry spell and cloudburst ಆಗುತ್ತಿದೆ. Cloudburst ಆಗುತ್ತಿರುವುದರಿಂದ ಯಾವ ಕಾರಣದಿಂದಾಗಿ ಪ್ರವಾಹವುಂಟಾಗುತ್ತಿದೆ; ಯಾವ ರೀತಿ ಅದನ್ನು estimate ಮಾಡಬೇಕು; ಯಾವ ರೀತಿ ಅದನ್ನು surface area calculate ಮಾಡಬೇಕು; ಯಾವ ರೀತಿ ಅದನ್ನು mitigate ಮಾಡಬೇಕು ಎನ್ನುವುದರ ಬಗ್ಗೆ ನಮಗೆ ಟೆಕ್ನಾಲಜಿಯ ಕೊರತೆ ಇದೆ. ನಾವು ಯಾವಾಗಲೂ blame game ಆಡುತ್ತೇವೆ. ನಿಮ್ಮ ಸರ್ಕಾರ ಅಧಿಕಾರಿದಲ್ಲಿದ್ದಾಗ ಹೀಗಾಯಿತು; ನಮ್ಮ ಸರ್ಕಾರ ಅಧಿಕಾರಕ್ಕೆ ಬಂತಾದ ಹೀಗಾಯಿತು ಎಂದು ಅವರವರ ಸರ್ಕಾರಗಳ ಬೆನ್ನು ತಟ್ಟಿಕೊಂಡು ಹೋಗುತ್ತಿದ್ದೇವೆ. ನಾನು

ಈ ಸದನಕ್ಕೆ ಸದಸ್ಯನಾಗಿ ಬಂದು 17 ವರ್ಷಗಳು ಕಳೆದಿವೆ. ಈ 17 ವರ್ಷಗಳಲ್ಲಿ ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ರಾಜಕಾಲುವೆಗಳ ಒತ್ತುವರಿಯ ಬಗ್ಗೆ ಚರ್ಚೆಗಳು ನಡೆಯುತ್ತಲೇ ಇವೆ. ಮಳೆ ಬರುತ್ತಿದೆ, ಮನೆಗಳು ಮುಳುಗಿ ಹೋಗುತ್ತಿವೆ. ಬೇರೆ ಕಡೆ ಮನೆಗಳನ್ನು ಕಟ್ಟಿಕೊಟ್ಟರೂ ಜನರು ಅಲ್ಲಿಗೆ ಹೋಗುವುದಿಲ್ಲ. ಹಣ ಬಿಡುಗಡೆ ಮಾಡುತ್ತೇವೆ; ಗಲಾಟೆ ಮಾಡುತ್ತೇವೆ; ನಂತರ ಈ ವಿಚಾರವನ್ನು ಮರೆತು ಹೋಗುತ್ತೇವೆ. ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾತನಾಡುತ್ತಾ, "ಕೆರೆಗಳನ್ನು ನಾವು ನುಂಗಿಬಿಟ್ಟಿದ್ದೇವೆ ನೆರೆ ಇವತ್ತು ನಮ್ಮನ್ನು ನುಂಗಲು ಬರುತ್ತಿದೆ" ಎಂದು ಹೇಳಿದ್ದಾರೆ ಮತ್ತು ಸರ್ವಜ್ಞನ ವಚನವನ್ನು ಉಲ್ಲೇಖ ಮಾಡಿದ್ದರು.

ಸನ್ಮಾನ್ಯ ಸಭಾಪತಿಯವರೇ, "Technology-driven society". ಬಹಳ ದೊಡ್ಡ ಪ್ರಮಾಣದಲ್ಲಿ ತಂತ್ರಜ್ಞಾನ ಎನ್ನುವುದು ನಮ್ಮ ಬಳಿ ಇದೆ. ನಾವು ಚಂದ್ರಲೋಕಕ್ಕೆ ಹೋಗಿ ಬಂದಿದ್ದೇವೆ ಮತ್ತು ಮಂಗಳ ಯಾನವನ್ನು ಮಾಡಿದ್ದೇವೆ. ಎಲ್ಲ ವಿಚಾರಗಳಿಗೂ we have a technology. ಆದರೆ, ಕರ್ನಾಟಕ ರಾಜ್ಯದಲ್ಲಿ ಬರುತ್ತಿರುವ ಪ್ರವಾಹಕ್ಕೆ ಸರಿಯಾಗಿ estimate ಮಾಡಿ ವ್ಯವಸ್ಥೆ ಮಾಡಲಿಲ್ಲ. ಪ್ರವಾಹ ಯಾವಾಗ ಬರುತ್ತದೆ? ನಮ್ಮಲ್ಲಿ ISRO (Indian Space Research Organization), Tata Institute, DRDO (Defence Research and Development Organization) and IIT's (Indian Institute of Technology) ಇವೆ. ವಿಜ್ಞಾನಿಗಳು ಇದ್ದಾರೆ. ಅದಕ್ಕಿಂತ ಹೆಚ್ಚಾಗಿ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವುದಕ್ಕೆ ಅಮೆರಿಕಾದಲ್ಲಿ ನಾಸಾ ಇದೆ. ಇಷ್ಟೊಂದು ದೊಡ್ಡ ವ್ಯವಸ್ಥೆ ಇರಬೇಕಾದರೆ, ನಾವು ಯಾರೂ ಈ ನಿಟ್ಟಿನಲ್ಲಿ ಪ್ರಯತ್ನಿಸಲಿಲ್ಲವೆನ್ನುವ ನೋವು ನನಗಿದೆ. ಪ್ರವಾಹ ಬಂದಾಗ, ಕೂಗಾಡುತ್ತೇವೆ, ಹೋಗಿ ಫೋಟೋ ತೆಗೆಸಿಕೊಂಡು ಸಂತ್ರಸ್ತರಿಗೆ ಪರಿಹಾರವನ್ನು ಕೊಡುತ್ತೇವೆ. ನಂತರ ಬಂದು ಬಿಡುತ್ತೇವೆ. ಆದರೆ, ಪ್ರವಾಹ ಎನ್ನುವುದು ಹೇಗೆ ಉಂಟಾಗುತ್ತದೆ; ಯಾವಾಗ ಬರುತ್ತದೆ; ಯಾವ ಪ್ರಮಾಣದಲ್ಲಿ ಬರುತ್ತದೆ; ಬಂದಂತಹ ಪ್ರವಾಹವನ್ನು ಯಾವ ರೀತಿಯಲ್ಲಿ mitigate ಮಾಡಬೇಕೆನ್ನುವುದರ ಬಗ್ಗೆ ಯಾವ ಸರ್ಕಾರಗಳೂ ಗಂಭೀರವಾಗಿ ಗಮನಹರಿಸಲಿಲ್ಲವೆನ್ನುವುದು ನೋವಿನ ಸಂಗತಿಯಾಗಿದೆ. ನಾವೆಲ್ಲರೂ ಇದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಬಹಳ ಮುಖ್ಯವಾಗಿ forecasting technology,

ಕರ್ನಾಟಕ ರಾಜ್ಯದಲ್ಲಿ ನೀರಾವರಿ ತಜ್ಞರಿಗೆ ಬರವಿಲ್ಲ; Hydrologists, Water Resources Experts ಗೆ ಬರವಿಲ್ಲ; ಬಹಳ ಮುಖ್ಯವಾಗಿ Water Diviners ಗೆ ಬರವಿಲ್ಲ. ಇವರು ಯಾವಾಗಲಾದರೂ ಈ ರಾಜ್ಯದ ನೀರಾವರಿ ತಜ್ಞರನ್ನು ಕರೆಯಿಸಿ, ಪ್ರವಾಹ ಹೇಗೆ ಬರುತ್ತದೆ; ಅದನ್ನು ಯಾವ ರೀತಿಯಲ್ಲಿ estimate ಮಾಡುವುದಕ್ಕೆ ಸಾಧ್ಯ; ಪ್ರವಾಹದ ನೀರನ್ನು ಹೇಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವುದರ ಬಗ್ಗೆ ಇಲ್ಲಿಯವರೆಗೆ ಯಾರೂ ಚರ್ಚೆ ಮಾಡಿಲ್ಲ. ಯಾರೂ ಮಾಡುವುದಕ್ಕೆ ಸಾಧ್ಯವಿಲ್ಲ. ಕರ್ನಾಟಕ ರಾಜ್ಯದಲ್ಲಿ ಎರಡು ಭಾಗವಿದೆ.

(ಮುಂದುವರಿದಿದೆ)

(1005) 22.9.2022 5.30 ಪಿಕೆ:ಎಂಡಿ

**ಡಾ|| ವೈ.ಎ. ನಾರಾಯಣಸ್ವಾಮಿ(ಮುಂದು)**

ಒಂದನೆಯದು ಹಳೆಯ ಮೈಸೂರು ಭಾಗದ ಪ್ರದೇಶ ಬೆಟ್ಟಗಳ ಪ್ರದೇಶ. ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಸಮತಟ್ಟು ಪ್ರದೇಶಗಳು. ನಾವುಗಳು, ಬಾಯಾರಿಕೆಯಾದಾಗ ಬಾವಿ ತೋಡಬೇಕು ಎನ್ನುವ ಒಂದು ಪರಿಕಲ್ಪನೆಗೆ ಒಳಗಾಗಿದ್ದೇವೆ. ಆ ಒಂದು ವರ್ಷ ತಳ್ಳಿಬಿಟ್ಟರೆ ಸಾಕು ಮುಂದೆ ನೋಡಿಕೊಳ್ಳೋಣ ಎಂದು ಸುಮ್ಮನಾಗುತ್ತೇವೆ. ಪ್ರವಾಹ ಬರುವುದನ್ನು, ಮಳೆ ಬರುವುದನ್ನು ಒಂದು ಅವಕಾಶ ಮಾಡಿಕೊಳ್ಳಬೇಕು; ಆ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ. Convert a problem into an opportunity. ಆ ಕೆಲಸವನ್ನು ನಾವು ಮಾಡುತ್ತಿಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ನೀರು ಹರಿದು ಹೋಗುತ್ತದೆ. ಎಲ್ಲಾದರೂ ಆ ನೀರನ್ನು ಶೇಖರಣೆ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದೇವೆಯೇ? ಅದಕ್ಕೆ ಜಾಗ ಇದೆ. ಆದರೆ ಅದಕ್ಕಾಗಿ ನಾವು ಮಾನಸಿಕವಾಗಿ ಗಟ್ಟಿತನವನ್ನು ತೋರಿದರೇ ಆ ಎಲ್ಲಾ ವ್ಯವಸ್ಥೆಗಳು ಆಗುತ್ತವೆ. ಈ ರಾಜ್ಯದಲ್ಲಿ 70 ಬರಪೀಡಿತ ತಾಲ್ಲೂಕುಗಳಿವೆ. ಸುಮಾರು 13-14 ಜಿಲ್ಲೆಗಳಲ್ಲಿ ನೀರಿನ ತತ್ವಾರ ಇದೆ. ಆ ನೀರನ್ನು transport ಮಾಡಿ ಅದನ್ನು ಬಳಸಿಕೊಳ್ಳುವುದಕ್ಕೆ ಅವಕಾಶ ಇದೆ. It has been done in China. ಚೈನಾ ದೇಶದಲ್ಲಿ ಉತ್ತರ ಚೈನಾದಿಂದ ದಕ್ಷಿಣ ಚೈನಾದವರೆಗೆ 2380 ಕಿ.ಮೀ. ಉದ್ದದ

ಕಾಲುವೆ ಮಾಡಿದ್ದಾರೆ. ಎಲ್ಲಿ ಪ್ರವಾಹ ಜಾಸ್ತಿ ಬರುತ್ತದೆಯೋ ಆ ನೀರನ್ನು ಒಂದು ಕಡೆ ಶೇಖರಣೆ ಮಾಡಿ, ಬರ ಪೀಡಿತ ಪ್ರದೇಶಗಳಿಗೆ ಸರಬರಾಜು ಮಾಡುವ network ಮಾಡಿದ್ದಾರೆ. ಈ ಉದಾಹರಣೆ ನಮ್ಮ ಕಣ್ಣಿನ ಮುಂದೆ ಇದೆ.

**ವೈಸ್ ಚೇರ್ಮೆನ್:-** ದೇಶದಲ್ಲಿ ನದಿಗಳ ಜೋಡಣೆ ಮಾಡಿದರೂ ಒಳ್ಳೆಯದು.

**ಡಾ|| ವೈ.ಎ. ನಾರಾಯಣಸ್ವಾಮಿ:-** ಸರ್ಕಾರ ಯಾವುದೇ ಇರಲಿ, ಇಂಥದ್ದನ್ನು ಗಂಭಿರವಾಗಿ ಪರಿಗಣಿಸಬೇಕು. ಇಲ್ಲಿ ಎರಡು ಭಾಗಗಳಿವೆ. ನಗರ ಪ್ರದೇಶಗಳಲ್ಲಿ ಬರುವ ಪ್ರವಾಹ ಬೇರೆ, ಗ್ರಾಮೀಣ ಪ್ರದೇಶಗಳಲ್ಲಿ ಬರುವ ಪ್ರವಾಹ ಬೇರೆ. ಬೆಂಗಳೂರಿನಲ್ಲಿ ಬರುವ ಪ್ರವಾಹವನ್ನು ನಾವು ಬೇರೆ ರೀತಿಯಲ್ಲಿ ನೋಡಬೇಕು; ಹಳ್ಳಿಗಳಲ್ಲಿ ಬರುವ ಪ್ರವಾಹವನ್ನು ಬೇರೆ ರೀತಿಯಲ್ಲಿ ನೋಡಬೇಕಾಗುತ್ತದೆ. ಹಳ್ಳಿಗಳಲ್ಲಿ ಬರುವ ಪ್ರವಾಹದ ನೀರನ್ನು ಶೇಖರಣೆ ಮಾಡಿ, ಬಯಲು ಸೀಮೆ ಜಿಲ್ಲೆಗಳಿಗೆ ತೆಗೆದುಕೊಂಡು ಹೋಗುವ ಪ್ರಯತ್ನವನ್ನು ಮಾಡಬೇಕಿದೆ. ಆದರೆ ಅದನ್ನು ಮಾಡುತ್ತಿಲ್ಲ. ಬೆಂಗಳೂರಿನಲ್ಲಿ ಹೆಚ್ಚು ಮಳೆಯಾದಾಗ ರಾಜಕಾಲುವೆಯನ್ನು ಒಡೆದು ತೆಗೆಯುವುದು, ರಸ್ತೆ ಬ್ಲಾಕ್ ಮಾಡುವುದು ಇದನ್ನೇ ಮಾಡುತ್ತೇವೆ. ಪ್ರವಾಹ ಬಂದಾಗ ಒಂದು ಕಥೆ, ನಂತರ ಎಲ್ಲವನ್ನೂ ಮರೆತು ಹೋಗುತ್ತೇವೆ. Bengaluru has been built hundreds of years ago, not today. ನಾವು ಹಳೆಯ ಕಾಲದ, 150 ವರ್ಷಗಳ ಹಿಂದೆ ಇದ್ದ ನಕ್ಷೆಯನ್ನೇ ಇಟ್ಟುಕೊಂಡು ಹೋಗುತ್ತಿದ್ದೇವೆ. ಇವತ್ತು ಬೆಂಗಳೂರಿನ ಭೂಗೋಳವೇ ಬದಲಾವಣೆಯಾಗಿದೆ. We must have a different approach for Bengaluru. ಪ್ರವಾಹವನ್ನು ಯಾವರೀತಿ divert ಮಾಡಬೇಕು ಎನ್ನುವುದರ ಬಗ್ಗೆ we must have a scientific approach in Bengaluru rather than depending on 150 years old maps. ಸರ್ಕಾರದಲ್ಲಿ ನನ್ನ ಮನವಿ ಇಷ್ಟೆ.

ಕರ್ನಾಟಕದಲ್ಲಿರುವಂತಹ, ರಾಷ್ಟ್ರ ಮಟ್ಟದಲ್ಲಿರುವಂತಹ Water Experts, Hydrologists, Water Diviners, Irrigation Experts ಇವರುಗಳ ಜೊತೆ ಒಂದು ಮೀಟಿಂಗ್ ಅಥವಾ ಒಂದು conclave ಮಾಡಿ. **(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)** ಒಂದು ಸಮಾವೇಶ ಮಾಡಿ. Deliberations ಆಗಲಿ, ಚರ್ಚೆಯಾಗಲಿ. ಯಾರ ಯಾರ ತಲೆಯಲ್ಲಿ ಏನೇನಿದೆ ಅದು ಆಚೆ ಬರಲಿ. ಅದನ್ನು ಉಪಯೋಗಿಸಿಕೊಂಡು ಈ ಪ್ರವಾಹವನ್ನು, disaster ಅನ್ನು ಅವಕಾಶವಾಗಿ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಆ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದೇ ಸದನದಲ್ಲಿ *University* of Visvesvaraya College of Engineering (UVCE) *Bill pass* ಮಾಡಿದ್ದೇವೆ. ಆ ವಿಶ್ವವಿದ್ಯಾಲಯದಲ್ಲಿ there is an Institute called Water Institute. Water Institute ನಲ್ಲಿ ಅಮೆರಿಕಾ ದೇಶದಲ್ಲಿ settle ಆಗಿರುವಂತಹ, UVCE ಯಲ್ಲಿ ಓದಿರುವಂತಹ all water experts are running the Institute. That Institute even today is advising our BBMP (Bruhat Bengaluru Mahanagara Palike). ಆದರೆ ಬಿಬಿಎಂಪಿಯವರು ಅವರ ಮಾತುಗಳನ್ನು ಕೇಳುತ್ತಿಲ್ಲ. Red tapism ಇದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಆ Water Institute ಗೆ ಜವಾಬ್ದಾರಿಯನ್ನು ಕೊಡಿ, experts opinion ತೆಗೆದುಕೊಳ್ಳಿ, ಇದನ್ನು long-term and short-term ಎಂದು bifurcate ಮಾಡಿ, urban flood and rural flood bifurcate ಮಾಡಿ, ಇದಕ್ಕೆ long range solution ಕಂಡುಹಿಡಿಯಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರಗಳು blame game

ಬಿಡಬೇಕು. ಎಲ್ಲರೂ ಮುಕ್ತ ಮನಸ್ಸಿನಿಂದ ಪ್ರವಾಹವನ್ನು ಯಾವರೀತಿ ನಿಯಂತ್ರಣ ಮಾಡಬೇಕು, mitigate ಮಾಡಬೇಕು, ಅವಕಾಶವನ್ನಾಗಿ ಬಳಸಿಕೊಳ್ಳಬೇಕು ಎನ್ನುವುದರ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಯೋಗದಾನ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) :-** ಮಾನ್ಯ ಸಭಾಪತಿಯವರೇ, ಕೆಳಮನೆಯಿಂದ Finance Bill ಬರುತ್ತಿದೆ. ಆದಷ್ಟು ಬೇಗ ಪ್ರಸ್ತುತ ಚರ್ಚೆಯನ್ನು ಮುಗಿಸಿದರೆ ಒಳ್ಳೆಯದು.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಆ ವಿಧೇಯಕವನ್ನು ಇವತ್ತು ಮಂಡನೆ ಮಾಡಲಿ. ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಆಯ್ಕೆಯಾದವರು):-** ಮಾನ್ಯ ಸಭಾಪತಿಯವರೇ, ಬೆಳಗ್ಗೆಯಿಂದ ಎಲ್ಲಾ ಪಕ್ಷದ ಸದಸ್ಯರು ಬೆಂಗಳೂರಿನಲ್ಲಿ ಆದಂತಹ ಅತಿವೃಷ್ಟಿ ಬಗ್ಗೆ ಮಾತನಾಡಿದರು. ಬೆಂಗಳೂರಿನಲ್ಲಿರುವ ರಾಜಕಾಲುವೆಗಳು ಒತ್ತುವರಿಯಾಗಿವೆ, ಕೆರೆಗಳು ಒತ್ತುವರಿಯಾಗಿವೆ, ಸಾರ್ವಜನಿಕರಿಗೆ ಆಗಿರುವ ನಷ್ಟದ ಬಗ್ಗೆ ಮಾತನಾಡಿದ್ದಾರೆ. ಈ ಒಂದು ಮಳೆ ಬಂದಂಥ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವಿಶೇಷವಾಗಿ ಮಾಡುತ್ತಿರುವ ಕೆಲಸಕ್ಕೆ ಸಂಬಂಧಪಟ್ಟಂತೆ ಎರಡು ವಿಚಾರಗಳ ಬಗ್ಗೆ ಯೋಚನೆ ಮಾಡಬೇಕು. ಒಂದನೆಯದು, ಏನಿವತ್ತು ನಾವು ನಿಂತಿದ್ದೇವೆಯೋ, ಕುಳಿತುಕೊಂಡಿದ್ದೇವೆಯೋ ಈ ಶಕ್ತಿ ಸೌಧದ ಸುತ್ತ ಮಳೆ ಬಂದರೆ ಆ ನೀರು ನೇರವಾಗಿ ಕಂಠೀರವ ಕ್ರೀಡಾಂಗಣಕ್ಕೆ ಹೋಗುತ್ತದೆ. ಮೊದಲು ಅದು ಕೆರೆಯಾಗಿತ್ತು. ಆ ಕೆರೆ ತುಂಬಿದರೆ ಹೆಚ್ಚಿನ ನೀರು ಅಕ್ಕಿತಿಮ್ಮನ ಹಳ್ಳಿ ಅಂದರೆ ಇವತ್ತೇನು ಹಾಕಿ ಕ್ರೀಡಾಂಗಣ ಇದೆಯೋ ಅಲ್ಲಿಗೆ ಹೋಗುತ್ತಿತ್ತು. ಅಲ್ಲೂ ನೀರು ತುಂಬಿಕೊಂಡ ಮೇಲೆ ನೀರು, ಇವತ್ತೇನು Koramangala National Games Village ಎಂದು ಹೇಳುತ್ತೇವೆಯೋ, ಹಿಂದೆ ಅದು ಕೆರೆಯಾಗಿದ್ದಾಗ ಅಲ್ಲಿಗೆ ಹರಿದು ಹೋಗುತ್ತಿತ್ತು. ಅಲ್ಲಿ ಈಗ ಸಾವಿರಾರು ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದ್ದಾರೆ. ಇವತ್ತಿನ

ಪರಿಸ್ಥಿತಿಯನ್ನು ಗಮನಿಸಿದರೆ, ಮಾನ್ಯ ವೆಂಕಟೇಶ್‌ರವರು ಹೇಳಿದ ಹಾಗೆ, ಹಳೆಯ ಬೆಂಗಳೂರಿನಲ್ಲಿ ಯಾವುದೇ ರೀತಿಯಲ್ಲಿ ತೊಂದರೆಯಾಗಿಲ್ಲ; ಹೊರಭಾಗದಲ್ಲಿ ತೊಂದರೆ ಆಗಿದೆ. ಅಂದರೆ, ಈ ಮೂರು ಕೆರೆಗಳ ಜಾಗಗಳಲ್ಲಿ ಕ್ರೀಡಾಂಗಣವನ್ನು ಮಾಡಿದ್ದಾರೆ, ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿದ್ದಾರೆ. ಸುಮಾರು 388 ಎಕರೆಯಷ್ಟು ಕೆರೆ ಪ್ರದೇಶದಲ್ಲಿ, ಬಿಡಿಎ ಇರಬಹುದು ಅಥವಾ ಇನ್ನೊಂದು ಇರಬಹುದು, ಆ ಜಾಗವನ್ನು ನಿವೇಶನಗಳನ್ನಾಗಿ ಮಾಡಿ, ಡಾಲರ್ಸ್ ಲೆಕ್ಕದಲ್ಲಿ ಮಾರಾಟ ಮಾಡಿದ್ದಾರೆ. ಇದು 1963ರಿಂದ ಪ್ರಾರಂಭವಾಗಿ ಇಲ್ಲಿಯವರೆಗೆ ಈ ಜಾಗವನ್ನು ಮಟ್ಟ ಮಾಡಿ ಲೇಔಟ್‌ಗಳನ್ನಾಗಿ ಪರಿವರ್ತನೆ ಮಾಡಿದ್ದೇವೆ. ಇದಕ್ಕೆ ಸುಮಾರು 11 ಸಾವಿರ ಕೋಟಿ ರೂ.ಗಳಾಗಿವೆ. 1977 ರಲ್ಲಿ ದೊಮ್ಮಲೂರು ಕೆರೆ, ಸರ್ವೆ ನಂಬರ್ 9ರಲ್ಲಿ 35 ಗುಂಟೆ ಇದ್ದ ಜಮೀನಿನಲ್ಲಿ ರಚನೆಯಾದ ನಿವೇಶನಗಳ ಸಂಖ್ಯೆ: 10. ಆಗ ಕಾಂಗ್ರೆಸ್ ಸರ್ಕಾರ ಇತ್ತು. ಶಿನಿವಾಗಲು tank bed ನಲ್ಲೇನು ಸುಮಾರು 14 ಎಕರೆ ಇದ್ದ ಪ್ರದೇಶದಲ್ಲಿ 1965ರಲ್ಲಿ 493 ನಿವೇಶನಗಳನ್ನು ನಿರ್ಮಾಣ ಮಾಡುತ್ತಾರೆ. ಆಗಲೂ ಕಾಂಗ್ರೆಸ್ ಸರ್ಕಾರ ಇತ್ತು. 1978ರಲ್ಲಿ ಹೆಚ್‌ಎಎಲ್‌ನ ತಿಪ್ಪಸಂದ್ರ ಕೆರೆಯಲ್ಲಿ 137 ನಿವೇಶನಗಳನ್ನು ನಿರ್ಮಾಣ ಮಾಡುತ್ತಾರೆ. ಹೆಚ್‌ಎಸ್‌ಆರ್ ಲೇಔಟ್ ಇರಬಹುದು, ಕೋರಮಂಗಲ ಇರಬಹುದು, ನಾಗರಬಾವಿ ಇರಬಹುದು, ಕೇತಮಾರನ ಹಳ್ಳಿಯಲ್ಲಿರಬಹುದು, ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ ಇರಬಹುದು, ಮಂಗನ ಹಳ್ಳಿ ಇರಬಹುದು ಇಲ್ಲೆಲ್ಲಾ ನಿವೇಶನಗಳನ್ನು ನಿರ್ಮಿಸಲಾಗಿದೆ. ಆರ್‌ಎಂವಿ ಎಕ್ಸ್‌ಟೆನ್‌ಷನ್-ಗೆದ್ದಲಹಳ್ಳಿ ಎಂದೇನಿದೆ ಅಲ್ಲಿ ಸುಮಾರು 124 ನಿವೇಶಗಳ ನಿರ್ಮಾಣ ಮಾಡಿದ್ದಾರೆ. ಇವು ಯಾವುದೂ ಕೂಡ ಭಾರತೀಯ ಜನತಾ ಪಕ್ಷದ ಸರ್ಕಾರ ಇದ್ದಾಗ ಆಗಿರುವಂಥದ್ದಲ್ಲ. ಇವು ಕಾಂಗ್ರೆಸ್ ಮತ್ತು ಜನತಾ ಪಕ್ಷದ ಸರ್ಕಾರಗಳು ಇದ್ದ ಸಂದರ್ಭದಲ್ಲಿ ಮಾಡಿರುವಂಥದ್ದಾಗಿದೆ. ಈ ಕೆರೆ ಜಾಗಗಳನ್ನು ಅಭಿವೃದ್ಧಿಪಡಿಸಿದಂತಹ ಸಂದರ್ಭದಲ್ಲಿ ಯಾವುದೇ ರೀತಿಯ notification ಮಾಡಿಲ್ಲ; ಯಾವುದೇ ರೀತಿಯ ಹಣವನ್ನು ಕಟ್ಟದೇ ನಿವೇಶನಗಳನ್ನು ಮಾರಾಟ ಮಾಡಲಾಗಿದೆ. ಈ ನಿವೇಶನಗಳನ್ನು ಬಡವರಿಗೆ ಮಾರಾಟ ಮಾಡಿಲ್ಲ. 50X80, 80X120 ವಿಸ್ತೀರ್ಣಗಳ ನಿವೇಶನಗಳನ್ನು ದೊಡ್ಡ ದೊಡ್ಡ ಶ್ರೀಮಂತ ಕುಳಗಳಿಗೆ ಕೊಟ್ಟಿರುವುದಾಗಿದೆ. ಕೋಟ್ಯಾಧಿಪತಿಗಳು ಉಳಿದುಕೊಳ್ಳುವ ಸಲುವಾಗಿ ಇಂತಹ ದೊಡ್ಡ ವಿಸ್ತೀರ್ಣದ

ನಿವೇಶನಗಳನ್ನು ಮಾಡಿ ಕೊಟ್ಟಿದ್ದಾರೆ. ಇವತ್ತೇನು ಡಾಲರ್ಸ್ ಕಾಲೋನಿ ಎಂದಿದೆಯೋ ಅಲ್ಲಿ ವಹಿವಾಟು ನಡೆದಿರುವುದು ಡಾಲರ್ಸ್‌ಗಳ ಮುಖಾಂತರ. ಇವೆಲ್ಲವೂ ಭಾರತೀಯ ಜನತಾ ಪಕ್ಷದ ಸರ್ಕಾರ ಇದ್ದ ಅವಧಿಯಲ್ಲಿ ಆಗಿರುವಂಥದ್ದಲ್ಲ. ನಮ್ಮ ಮಿತ್ರ ಸದಸ್ಯರು ಇವತ್ತು, ಹೀಗಾಗಿದೆ; ಹಾಗಾಗಿದೆ ಎಂದು ಮಾತಾಡುತ್ತಿದ್ದಾರೆ. ಆದರೆ ಇಂತಹ ಅಂಶಗಳ ಬಗ್ಗೆಯೂ ಯೋಚನೆ ಮಾಡಬೇಕಾಗುತ್ತದೆ. ಯಾರ ಕಾಲಘಟ್ಟದಲ್ಲಿ ಆಗಿದೆ? ಕೆರೆಯನ್ನು ನುಂಗಿದವರು ಯಾರು? ಕೆರೆಯ ಹಣವನ್ನು ಹೊಡೆದವರು ಯಾರು? ಇದರ ಬಗ್ಗೆಯೂ ಯೋಚನೆ ಮಾಡಬೇಕಿದೆ. ಇದನ್ನು ಬಿಟ್ಟು, ನಾವು ಮಾಡಿದ್ದೇವೆಯೇ, ಅವರು ಮಾಡಿದ್ದಾರೆಯೇ, ಸರಿ ಮಾಡಿ, ಬದಲಾವಣೆ ಮಾಡಿ ಎಂದು ಹೇಳುತ್ತಿದ್ದೇವೆ. ರಾಜಕಾಲುವೆಗಳ ಮೇಲೆ ಯಾರು ಸಣ್ಣ-ಪುಟ್ಟ ಮನೆಗಳನ್ನು ಕಟ್ಟಿದ್ದಾರೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಕೆಲಸ ಮಾಡುತ್ತಿದ್ದೇವೆ.

(ಮುಂದು . . .)

(1006) 22-09-2022 5.40 ಡಿಎಸ್-ಎಕೆ

**ಶ್ರೀ ಮುನಿರಾಜು ಗೌಡ ಪಿ.ಎಂ.(ಮುಂದು):-**

ಅದರ ಹಿಂದೆ ಇರುವಂತಹ ಕಾಣದ ಕೈಗಳು ಯಾವುದು? ಆ ಕಾಣದ ಕೈಗಳನ್ನು ನಾವು ಹುಡುಕಬೇಕಾಗಿದೆ. ಯಾವ ಸರ್ಕಾರದ ಕಾಲಘಟ್ಟದಲ್ಲಿ ಆಗಿದೆ ಅದರ ಬಗ್ಗೆ ಮಾತನಾಡಬೇಕಾಗಿದೆ. ಈ ಕೆರೆ ನುಂಗಿರುವವರು ಯಾರು ಎಂಬುದನ್ನು ನಮ್ಮ ಮಿತ್ರರು ಬಹಳಷ್ಟು ಮಾತನಾಡಿದ್ದಾರೆ, ಅದನ್ನು ಅವರು ತಿಳಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಪ್ರತಾಪ ಸಿಂಹ ನಾಯಕ್‌ರವರೇ, ತಾವು ಎರಡು ನಿಮಿಷ ಮಾತನಾಡಿ. ಇನ್ನು ಧನವಿನಿಯೋಗ ವಿಧೇಯಕ ಬಂದಿದೆ. ವಿಧೇಯಕಗಳಿಗೆ ಆದ್ಯತೆಯನ್ನು ಕೊಡಬೇಕಾಗಿದೆ. ನಿಯಮ 68 ರಡಿಯಲ್ಲಿ ಚರ್ಚೆ ಬಾಕಿ ಇದೆ. ಮುಂದಿನ ವಿಷಯಗಳಲ್ಲಿ ಯಾರಿಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿಲ್ಲವೋ ಮೊದಲು ಅವರಿಗೆ ಅವಕಾಶ ಕೊಡುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮುಂದಿನ ಅವಕಾಶಗಳಲ್ಲಿ ನನ್ನ ಎರಡು ನಿಮಿಷವನ್ನು ಇಪ್ಪತ್ತು ನಿಮಿಷ ಮಾಡಬೇಕೆಂದು ವಿನಂತಿಸುತ್ತೇನೆ. ಈಗಲೇ ನಾನು ಮುಂಗಡವಾಗಿ ಬುಕಿಂಗ್ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಆಯಿತು.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಕರಾವಳಿಯೂ ಕರ್ನಾಟಕದ ಒಂದು ಭಾಗ. ಇಷ್ಟೆಲ್ಲಾ ಮಾತನಾಡಿದ್ದಾರೆ, ಆದರೆ ಕರಾವಳಿಯನ್ನು ಪ್ರತಿನಿಧಿಸುವಂತಹ ಸದಸ್ಯರುಗಳಿಗೆ ಪ್ರತಿ ಬಾರಿಯೂ ಅವಕಾಶದ ಕೊರತೆ ಇದೆ ಎನ್ನುವಂಥದ್ದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾನಾಯಕರ ಗಮನಕ್ಕೂ ತನ್ನಿ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಅವರು ಮಾತನಾಡುವ ಹಾಗೆ ಇಲ್ಲವಲ್ಲಾ, ನಾವು ಮಾತನಾಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರವರೇ, ಅವರು ಹೊಸ ಸದಸ್ಯರು. ಅವರಿಗೆ ಮಾತನಾಡವುದಕ್ಕೆ ಅವಕಾಶ ಕೊಡಿ. ನೀವು ಅವರಿಗೆ ಡಿಸ್ಟರ್ಬ್ ಮಾಡಿದರೆ ಅವರು ಹೇಗೆ ಮಾನತಾಡುತ್ತಾರೆ? ಪ್ರತಾಪ್ ಸಿಂಹ ನಾಯಕರೇ, ತಾವು ಮಾತನಾಡಿ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ನಾವು ಕರಾವಳಿಯ ಪಶ್ಚಿಮ ಘಟ್ಟದ ಬುಡದಲ್ಲಿರತಕ್ಕಂಥವರು. ಕಳೆದ ಮೂರು ವರ್ಷಗಳಿಂದ ಈ ಮಳೆಯ ಪ್ರವಾಹದ ಅನಾಹುತವನ್ನು ಅನುಭವಿಸಿರುವಂಥವರು. ಸರ್ಕಾರದ ಮುಂದೆ ನನ್ನ ಊರಿನ ಯಶೋಗಾಥೆಯನ್ನು ಮಾತ್ರ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸಹ ಸದಸ್ಯರಾದಂತಹ ಮಾನ್ಯ ಹರೀಶ್ ಕುಮಾರ್‌ರವರು ನಮ್ಮ ಊರಿನವರಾಗಿದ್ದಾರೆ. ಮೂರು ವರ್ಷಗಳ ಹಿಂದೆ ಬಹಳ ಪ್ರವಾಹ ಆದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳಾಗಿ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಅಧಿಕಾರ ಸ್ವೀಕಾರ

ಮಾಡಿದಷ್ಟೆ, ಸಚಿವ ಸಂಪುಟ ಕೂಡ ವಿಸ್ತರಣೆಗೊಳ್ಳದೆ, ಒಬ್ಬರೇ ಇದ್ದಂತಹ ಸಂದರ್ಭದಲ್ಲಿ ಅಲ್ಲಿಯ ಅನಾಹುತವನ್ನು ನೋಡಿ ಗುಡ್ಡ ಕುಸಿದು ಬೆಳ್ತಂಗಡಿ ಒಂದೇ ವಿಧಾನಸಭಾ ಕ್ಷೇತ್ರದಲ್ಲಿ 210 ಮನೆಗಳು ಕೊಚ್ಚಿ ಹೋಗಿವೆ. ಎಲ್ಲಾ ಕೃಷಿ ಮುಳುಗಿ ಹಾಳಾಗಿದೆ, ಎಲ್ಲಾ ಕೃಷಿ ಪ್ರದೇಶದಲ್ಲಿ ಮರಳು ತುಂಬಿ ಮನುಷ್ಯ ತಾನು ಹೇಗೆ ಇನ್ನು ಮುಂದೆ ಬದುಕುವುದು ಎಂದು ಭವಿಷ್ಯದ ಬಗ್ಗೆ ಚಿಂತಕ್ರಾಂತವಾಗಿದ್ದಂತಹ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದ ತಕ್ಷಣವೇ ನೇರವಾಗಿ ಆ ಸ್ಥಳಕ್ಕೆ ಬಂದು ನಮಗೆಲ್ಲಾ ವಿಶ್ವಾಸವನ್ನು ತುಂಬಿಸಿ ಒಂದು ಲಕ್ಷ ರೂಪಾಯಿ ಇದ್ದಂತಹ ಪರಿಹಾರವನ್ನು ಐದು ಲಕ್ಷ ರೂಪಾಯಿಗಳಿಗೆ ಅದನ್ನು ವಿಸ್ತರಣೆ ಮಾಡಿ ಇಡೀ ಕರ್ನಾಟಕದಲ್ಲಿ ಮೊದಲ ಬಾರಿಗೆ S.D.R.F., N.D.R.F. norms ಎಂದು ಏನು ಹೇಳುತ್ತೇವೆ ಆಗ ಐದು ಲಕ್ಷ ರೂಪಾಯಿ ಮಾಡಿರುವಂಥದ್ದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಮನೆಗಳನ್ನು ಕಟ್ಟಿರುವುದನ್ನು ಹೇಳಬೇಕಾಗುತ್ತದೆ. ಮೊಟ್ಟ ಮೊದಲು ಎಂದು ಅವರು ಹೇಳಿದ್ದಾರಲ್ಲಾ, ಮೊಟ್ಟ ಮೊದಲು ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರದಲ್ಲಿ ಆ ಮನೆಗಳನ್ನು ಕಟ್ಟಿ ಉದ್ಘಾಟನೆ ಮಾಡಿದಂತಹ ಮಂತ್ರಿಗಳು ಇಲ್ಲಿ ಇದ್ದಾರೆ. ನಾವು 1800 ಮನೆಗಳನ್ನು ಕಟ್ಟಿದ್ದೇವೆ. ಒಂದು ಮನೆಗೆ 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅವರು ನಮ್ಮ ಬಗ್ಗೆಯೂ ಸ್ವಲ್ಪ ಹೇಳಬೇಕು. ಮೊಟ್ಟ ಮೊದಲು ಎಂದು ಹೇಳಿದ್ದಕ್ಕೆ ಬೇಜಾರಾಯಿತು. ಬೇರೆನೂ ಇಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ನನ್ನ ಪೂರ್ತಿ ಕಥೆಯನ್ನು ಅವರು ಕೇಳಲಿಲ್ಲ. ನನ್ನ ಅರಿಕೆ ಏನೆಂದರೆ, ಪ್ರಜಾಪ್ರಭುತ್ವ ಎಂದು ಹೇಳಿದ ತಕ್ಷಣ ಎಲ್ಲವನ್ನು ಸರ್ಕಾರದ ಕಡೆಗೆ ಬೆರಳು ತೋರಿಸುವುದರಿಂದ ಮಾತ್ರ ಆಗುವುದಿಲ್ಲ. ನನ್ನ ಊರಿನಲ್ಲಿ ಆದಂತಹ ಕಥೆಯನ್ನು ಹೇಳುವುದಕ್ಕೆ ನಾನು ತಮ್ಮ ಮುಂದೆ ನಿಂತಿದ್ದೇನೆ. ನಾನು ಬಹಳ ಜನರು ಮಾತನಾಡುವುದನ್ನು ಕೇಳಿದ್ದೇನೆ. ಮಾತನಾಡಿದವರು ಮಾತನಾಡಿದ ಮೇಲೆ ಹೋಗುತ್ತಾರೆ. ಮಾನ್ಯ ಭೋಜೇಗೌಡರು ಸುಮ್ಮನೆ ನನ್ನ ಹೆಸರನ್ನು 2-3 ಸಲ ಹೇಳುತ್ತಿರುತ್ತಾರೆ. ನಾನು ಮಾತನಾಡುವಾಗಲೆಲ್ಲಾ ನನ್ನ ಹತ್ತಿರದವರಾಗಿದ್ದರೂ ಕೂಡ ನನಗೆ ಆಗಾಗ್ಗೆ ತೊಂದರೆಯನ್ನು ಕೊಡುತ್ತಿರುತ್ತಾರೆ. ಆದರೂ ನನಗೆ

ನೆನಪಾಗಿರುವುದು ಹೇಗೆಂದರೆ, ಒಬ್ಬರು ಪ್ರಬಂಧ ಬರೆಯುವುದಕ್ಕೆ ತಯಾರಾಗಿ ಬಂದಿದ್ದರಂತೆ, ಅವನು ಪೂರ್ತಿ ಓದಿದ್ದು ದನದ ಬಗ್ಗೆ. ಆದರೆ ಪರೀಕ್ಷೆಯಲ್ಲಿ ಬಂದದ್ದು ತೆಂಗಿನ ಮರದ ಬಗ್ಗೆ, ಅವನಿಗೆ ತೆಂಗಿನ ಮರದ ಬಗ್ಗೆ ಏನು ಬರೆಯುವುದಕ್ಕೆ ಬರುವುದಿಲ್ಲ. ಆದರೆ ಪ್ರಬಂಧ ಬರೆಯಬೇಕಲ್ಲಾ? ಅದಕ್ಕೆ ಏನು ಮಾಡಿದ ಎಂದರೆ, ದನ ಬಹಳ ಸಾಧು ಪ್ರಾಣಿ, ಈ ದನವನ್ನು ಕೊಂಡೋಗಿ ತೆಂಗಿನ ಮರಕ್ಕೆ ಕಟ್ಟುತ್ತಾರೆಂದು ತೆಂಗಿನ ಮರದ ಒಂದು ಶಬ್ಧ ಮಾತ್ರ ಹೇಳಿ, ಉಳಿದಿರುವುದನ್ನೆಲ್ಲಾ ದನದ ಬಗ್ಗೆ ಬರೆದು ಬಂದರಂತೆ. ಇಲ್ಲಿ ಹೇಗಾಗುತ್ತಿದೆ ಎಂದರೆ, ನಿಯಮ 68 ರಡಿಯಲ್ಲಿ ಮಾತನಾಡಬೇಕಾಗಿರುವಂಥದ್ದು, ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗಿ ಹಾನಿ ಆಗಿರುವ ಬಗ್ಗೆ ಮಾತನಾಡಬೇಕಾಗಿದೆ. ಆದರೆ ಅದೊಂದನ್ನು ನೆಪವಾಗಿಟ್ಟುಕೊಂಡು ಬಿಜೆಪಿ ಮತ್ತು ಸರ್ಕಾರಕ್ಕೆ ಏನೆಲ್ಲಾ ಮಾತನಾಡಬೇಕೋ ಅದೆಲ್ಲವನ್ನು ಮಾತನಾಡುವುದನ್ನೇ ಪ್ರಮುಖ ವಿಷಯವಾಗಿಟ್ಟುಕೊಂಡು ಮಾತನಾಡಿದ್ದಾರೆ. ಅವರು ಒಂದು ಮಾತನ್ನು ಮಾತ್ರ ಹೇಳಲಿಲ್ಲ, ಅದು ಯಾವುದು ಎಂದರೆ, ಮಳೆಯನ್ನೇ ತಂದದ್ದು ಬಿಜೆಪಿ ಎಂದು ಹೇಳುವಂತಹ ಮಾತನ್ನು ಬಿಟ್ಟು ಉಳಿದೆಲ್ಲವನ್ನು ಮಾತನಾಡಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಜೆಡಿಎಸ್ ಪಕ್ಷದ ವತಿಯಿಂದ ಜಲಧಾರೆ ಕಾರ್ಯಕ್ರಮವನ್ನು ಮಾಡಿದ್ದೇವೆ. ಅದು ಅವರಿಗೆ ಗೊತ್ತಿದೆಯೇ? ಇಡೀ ರಾಜ್ಯದಲ್ಲಿ ಜಲಧಾರೆ ಮಾಡಿದ ಮೇಲೆ ಇಲ್ಲಿ ಜಲ ಉಕ್ಕಿ ಹರಿಯುತ್ತಿದೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಭಗವದ್ಗೀತೆಯ ಮೊದಲ ವಾಕ್ಯವೇ ಧರ್ಮ ಕ್ಷೇತ್ರೇ ಕುರು ಕ್ಷೇತ್ರೇ, ಧರ್ಮ ಕ್ಷೇತ್ರೇ ಎಂದು ಹೇಳಿದ ತಕ್ಷಣ ಧರ್ಮ ಎಂದರೆ, ಅದು ಬರೀ ಪೂಜೆ ಮಾಡುವ ವಿಧಾನದ ಬಗ್ಗೆ ಹೇಳಿದಲ್ಲ. ಧರ್ಮ ಮತ್ತು ಮತಕ್ಕೆ ವ್ಯತ್ಯಾಸ ಇದೆ. ಧರ್ಮ ಎಂದರೆ, ನಿಯಮ. ನಾವು ಇಲ್ಲಿ ನಿಯಮಗಳನ್ನು ರಚಿಸಿಕೊಂಡಿದ್ದೇವೆ. ಆ ನಿಯಮಗಳಲ್ಲಿ ಏನು ಕೊರತೆಯಿಲ್ಲ. ಆದರೆ, ಆ ನಿಯಮವನ್ನು ಪಾಲಿಸಿದರೆ ಸಭೆಯಲ್ಲಿ ಏನೆಲ್ಲಾ ವ್ಯವಸ್ಥಿತವಾಗಿ ನಡೆಯಬೇಕು, ಅದೆಲ್ಲವೂ ನಡೆಯುತ್ತದೆ. ಅದು ಪ್ರಕೃತಿಗೂ ಅನ್ವಯವಾಗುತ್ತದೆ. ಪ್ರಕೃತಿಗೆ ನಾವು ಕಲಿಸಿಕೊಡಬೇಕಾದಂತಹ ಅಗತ್ಯ ಇಲ್ಲ. ಪ್ರಕೃತಿಗೆ ಪ್ರಕೃತಿಯದ್ದೇ ಆದಂತಹ ನಿಯಮಗಳಿವೆ. ಆದರೆ,

ನಾವು ನಮ್ಮ ಸ್ವಾರ್ಥಕ್ಕೆ ಆ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಬೆಂಗಳೂರು ನಗರದಲ್ಲಿ ಮಾಸ್ಟರ್ ಪ್ಲಾನ್ ಆಗಲಿಲ್ಲವೇ, ಬೇರೆ ಬೇರೆ ರೀತಿಯ ಕಾನೂನುಗಳು ಅಥವಾ ಕಾಯ್ದೆಗಳು ಆಗಲಿಲ್ಲವೇ? ಆದರೆ ಕಾಯ್ದೆ ಮತ್ತು ಮಾಸ್ಟರ್ ಪ್ಲಾನ್ ರೀತಿಯಲ್ಲಿ ನಾವು ನಗರವನ್ನು ಆ ರೀತಿಯಲ್ಲಿಟ್ಟುಕೊಂಡಿದ್ದೇವೆಯೇ ಎಂದು ನಾವು ಪ್ರಮುಖವಾಗಿ ಯೋಚನೆ ಮಾಡಬೇಕಾಗಿದೆ. ಪ್ರತಿಯೊಬ್ಬರೂ ಕೂಡ ನನ್ನದೊಂದು ಎಂದು ಹೇಳುವಂತಹ ರೀತಿಯಲ್ಲಿ ಮಾಡಿದರ ಪರಿಣಾಮವಾಗಿ ಸುಮಾರು 65-75 ವರ್ಷಗಳಿಂದ ಏನೆಲ್ಲಾ ಸಣ್ಣ ಸಣ್ಣ ತಪ್ಪುಗಳನ್ನು ಮಾಡಿ ಬಂದಿದ್ದೇವೆ, ಅದಕ್ಕೆ ಪ್ರಕೃತಿ ಕೊಡುವಂತಹ ಉತ್ತರ ಇದು. ಮೊನ್ನೆ ಕೋವಿಡ್-19 ಬಂದಾಗಲೂ ಅದೇ ಸಂದೇಶವನ್ನು ಕೊಟ್ಟಿದೆ. ಈ ಮಳೆ ಬಂದಾಗಲೂ ಅದೇ ಸಂದೇಶವನ್ನು ಕೊಡುತ್ತಿದೆ ಎಂದು ಹೇಳುವಂಥದ್ದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಪುನಃ ಒಂದು ಸಣ್ಣ ಕಥೆ ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಬಯಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರೇ, ಸಮಯ ಪಾಲನೆ ನೀವೊಬ್ಬರಾದರೂ ಮಾಡುತ್ತೀರಿ ಎಂದು ನಾನು ಬಹಳ ಅಚಲವಾಗಿ ನಂಬಿಕೊಂಡಿದ್ದೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ನಾನು ಸಮಯ ಪಾಲನೆ ಮಾಡುತ್ತೇನೆ. ನನಗೆ ಈಗೀಗಾ ಹೇಗೆ ಕಾಣುತ್ತಿದೆ ಎಂದರೆ, ನಿಯಮವನ್ನು ಮುರಿದರೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಸಿಗುತ್ತದೆ ಎನ್ನುವ ಭಾವನೆ ಗಟ್ಟಿಯಾಗುತ್ತಿದೆ. ಒಂದು ಊರಿಗೆ ಬರ ಬಂದಾಗ ಅಲ್ಲಿಯ ರಾಜ ಮಳೆ ಬರಿಸುವುದು ಹೇಗೆ ಎಂದು ಜ್ಯೋತಿಷಿ ಹತ್ತಿರ ಕೇಳಿದರಂತೆ. ಇದು ಪ್ರವಾಹಕ್ಕೆ ವಿರುದ್ಧವಾಗಿರುವಂತಹ ಕಥೆ. ಆಗ ಜ್ಯೋತಿಷಿಯವರು ಹೇಳಿದರಂತೆ, ಈ ಊರಿನವರೆಲ್ಲರೂ ಒಟ್ಟಿಗೆ ಸೇರಿ ಒಂದು ಲೋಟ ಹಾಲನ್ನು ಊರಿನ ದೇವರಿಗೆ ಅಭಿಷೇಕ ಮಾಡಿದರೆ ಮಳೆ ಬರುತ್ತದೆ ಎಂದು ಹೇಳಿದರಂತೆ. ಹಾಗೆ ಇಡೀ ಊರಿಗೆ ಡಂಗೂರ ಸಾರಿ ಮರದ ಕೆಳಗೆ ಒಂದು ದೊಡ್ಡ ಪಾತ್ರಯನ್ನಿಟ್ಟು ಎಲ್ಲರಿಗೂ ಒಂದೊಂದು ಲೋಟ ಹಾಲನ್ನು ಅಭಿಷೇಕ ಮಾಡುವುದಕ್ಕೆ ತಂದು ಹಾಕಬೇಕೆಂದು ಹೇಳಿದರಂತೆ. ಎಲ್ಲರೂ ಸಾಲಿನಲ್ಲಿ ನಿಂತಿದ್ದಾರೆ. ಒಬ್ಬ ನಿಂತು ಆಲೋಚನೆ ಮಾಡಿದನಂತೆ. ಎಲ್ಲರೂ ಹೇಗೋ ಹಾಲು ಹಾಕುತ್ತಾರೆ, ನಾನೊಬ್ಬ ನೀರು ಹಾಕಿದರೆ ಏನಾಗುತ್ತದೆ

ಎನ್ನುವ ನೆಪದಲ್ಲಿ ಆ ಕಡೆ ಈ ಕಡೆ ನೋಡಿ ಯಾರು ನೋಡುವುದಿಲ್ಲವೆಂದು ಆ ಲೋಟದಲ್ಲಿರುವ ನೀರನ್ನು ದೊಡ್ಡ ಪಾತ್ರೆಗೆ ಹಾಕಿದನು.

(ಮುಂದು)

**(1007) 5:50 22/09/2022 ಎಸ್‌ಪಿಆರ್/ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಪ್ರತಾಪ ಸಿಂಹ ನಾಯಕ್ (ಮುಂದು):-**

ರಾಜ ಬಂದು ಆ ಪಾತ್ರೆಯನ್ನು ನೋಡಿದಾಗ, ಆ ಪಾತ್ರೆಯಲ್ಲಿ ಎಲ್ಲವೂ ನೀರೇ ಆಗಿತ್ತು. ಈ ಬಗ್ಗೆ ರಾಜನು ಏಕೆ ಎಂದು ಪ್ರಶ್ನಿಸಿದನು. ಅದೇ ರೀತಿಯಾಗಿ ಇಲ್ಲಿಯೂ ಸಹ ನಾನೊಂದು ಮನೆಯನ್ನು ಕಟ್ಟುವಾಗ, ನನಗಿದ್ದ ಜಾಗವನ್ನು ಸ್ವಲ್ಪ ವಿಸ್ತಾರ ಮಾಡುತ್ತೇನೆ; ಮಹಾನಗರ ಪಾಲಿಕೆಯ ನಿಯಮದಲ್ಲಿ ನನ್ನ ಮಟ್ಟಿಗೆ ಸ್ವಲ್ಪ ರಿಯಾಯಿತಿ ದೊರೆಯಲಿ ಎಂದು ಹೇಳಿ, ಪ್ರತಿಯೊಬ್ಬರೂ ಸಹ ಅಧಿಕಾರಿಗಳಿಗೆ ಹಣ ನೀಡಿ, ಮತ್ತೇನೋ ಮಾಡಿ ನನ್ನ ಸ್ವಾರ್ಥಕ್ಕೋಸ್ಕರ ನಾನು ಮನೆ ನಿರ್ಮಿಸಿದ ಪರಿಣಾಮವಾಗಿ ಇವತ್ತಿನ ದಿವಸ ಒಮ್ಮೆಲೆ ದೊಡ್ಡ ರೀತಿಯಲ್ಲಿ ಮಳೆ ಬಂದಾಗ, ಅದು ನಮ್ಮ ಊರಿಗೂ ಲಗಾವು ಹಾಕುತ್ತದೆ. ಪಶ್ಚಿಮ ಘಟ್ಟದ ಮೇಲಿರುವ ಎಲ್ಲರೂ ಕೂಡ ಜೆ.ಸಿ.ಬಿ.ಗಳನ್ನು ತೆಗೆದುಕೊಂಡು ಹೋಗಿ ಭೂಮಿಯನ್ನು ಅದರುವ ರೀತಿಯಲ್ಲಿ ಮಾಡಿದ್ದರಿಂದಾಗ, ಆ ರೀತಿಯ ಗುಡ್ಡ ಕುಸಿತವಾಗಿ ಒಮ್ಮೆಲೆ ನೀರು ಬಂದಿದೆ. ಬೆಳ್ತಂಗಡಿಯ ಚಾರ್ಮಾಡಿ ಗ್ರಾಮದ ಕೋಲಂಬೆ ಎಂಬಲ್ಲಿ ಒಂದೇ ಕಡೆಯಲ್ಲಿ ನಾನು ಹೇಳಿದ 75 ಮನೆಗಳು ನಾಶಗೊಂಡಿದ್ದವು. ಆ ದಿನ "ವರಮಹಾಲಕ್ಷ್ಮೀ ವ್ರತ" ಹಬ್ಬದ ದಿನವಾಗಿತ್ತು. ಆ ಕಾರಣಕ್ಕಾಗಿ ಅಲ್ಲಿನವರೆಲ್ಲರೂ ದೇವಸ್ಥಾನದಲ್ಲಿ ಇದ್ದುದರಿಂದಾಗಿ ಉಳಿದುಕೊಂಡರು. ಇಲ್ಲವಾದಲ್ಲಿ ತುಂಬಾ ಜನರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು. ಈ ಸದನದ ಸದಸ್ಯರೆಲ್ಲರೂ ಒಮ್ಮೆ ಚಾರ್ಮಾಡಿಗೆ ಬಂದು ಕೋಲಂಬೆ ಎಂಬ ಪ್ರದೇಶವನ್ನು ನೋಡಲಿ ಎಂದು ನಾನು ಇವತ್ತಿನ ದಿವಸ ಕೇಳಿಕೊಳ್ಳುತ್ತೇನೆ. ಸದರಿ ಗ್ರಾಮಕ್ಕೆ ಸರ್ಕಾರವು ಐದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ನೀಡಿತ್ತು. ಅಲ್ಲಿನ ಸಾರ್ವಜನಿಕರೆಲ್ಲರೂ ಒಟ್ಟಾಗೆ ಸೇರಿಕೊಂಡು "ಕಾಳಜಿಯ ಪರಿಹಾರ ನಿಧಿ" ಎಂಬುದಾಗಿ ಮಾಡಿಕೊಂಡರು. ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಮತ್ತಿತರೆ ಸಂಘ ಸಂಸ್ಥೆಗಳು

ಸೇರಿಕೊಂಡು ಸುಮಾರು 2 ಕೋಟಿ ರೂಪಾಯಿಗಳಷ್ಟು ಪರಿಹಾರ ಧನವನ್ನು ನೀಡಿದವು. ಅಲ್ಲಿನ 250 ಮನೆಗಳಿಗೆ ಸರ್ಕಾರವು 5 ಲಕ್ಷ ರೂಪಾಯಿಗಳಷ್ಟು ಪರಿಹಾರ ಧನವನ್ನು ನೀಡಿತ್ತು. ಸರ್ಕಾರವು ನೀಡಿದ ಪರಿಹಾರ ಧನವನ್ನಷ್ಟೇ ಅಲ್ಲದೇ, ಅಲ್ಲಿನ ಜನರಿಗೆ "ಬದುಕನ್ನು ಕಟ್ಟೋಣ ಬನ್ನಿ" ಎಂದು ಹೇಳುವ ಒಂದು ಸಂಘಟನೆಯ ಕಾರ್ಯವಾಯಿತು. ಅಲ್ಲಿನ ಸುಮಾರು 200 – 300 ಯುವಕರು ಒಟ್ಟಿಗೆ ಸೇರಿ, ಕೃಷಿ ಪ್ರದೇಶದಲ್ಲಿದ್ದ ಎಲ್ಲಾ ಕೊಳಚೆಗಳನ್ನು ತೆಗೆದು ಪುನಃ ಆ ಜನರಿಗೆ ಅಡಿಕೆ ಗಿಡಗಳನ್ನು ನಾಟಿ ಮಾಡಿಕೊಟ್ಟಿರುತ್ತಾರೆ. ಕೇವಲ ಇಷ್ಟು ಮಾತ್ರವಲ್ಲದೇ, ಒಂದೊಂದು ಮನೆಯು ಅತ್ಯಂತ ಸುವ್ಯವಸ್ಥಿತವಾಗಿರುವಂತೆ ನಿರ್ಮಿಸಿಕೊಟ್ಟಿರುತ್ತಾರೆ. ಇತ್ತೀಚೆಗೆ ಆ ಮನೆಗಳ ಉದ್ಘಾಟನೆಯಾಯಿತು. ಈಗ್ಗೆ ಮೂರು ವರ್ಷಗಳ ಹಿಂದೆ "ತಮಗೆ ಬದುಕೇ ಇಲ್ಲ" ಎಂದು ಹೇಳುವ ಸಂದರ್ಭದಲ್ಲಿ ಸರ್ಕಾರದ ಸಹಾಯವನ್ನು ತೆಗೆದುಕೊಳ್ಳುತ್ತಾ, ಅಲ್ಲಿನ ಊರಿನ ಜನರೆಲ್ಲರೂ ಒಟ್ಟಾಗಿ ಕೆಲಸ ನಿರ್ವಹಿಸಿದ್ದಾರೆ. ಇದು ಪ್ರಜಾಪ್ರಭುತ್ವ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಪ್ರಜಾಪ್ರಭುತ್ವ ಎಂದು ಹೇಳಿದರೆ, ಕೇವಲ ಒಂದು ಮತ ನೀಡಿದ ತಕ್ಷಣ ಪ್ರಜೆಗಳ ಜವಾಬ್ದಾರಿ ಮುಗಿಯುವುದಿಲ್ಲ. ಅದು ಪ್ರತಿಪಕ್ಷ ಅಥವಾ ಆಡಳಿತ ಪಕ್ಷವಿರಬಹುದು. ಎಲ್ಲರೂ ಒಟ್ಟಿಗೆ ಸೇರಿ ಕೆಲಸ ನಿರ್ವಹಿಸಬೇಕು. ಇದರ ಜೊತೆಗೆ, ಪ್ರಜೆಗಳು ಯಾವ ರೀತಿಯಾಗಿ ಭಾಗಿಯಾಗುತ್ತಾರೆ ಎಂಬುದಾಗಿ ಹೇಳುವುದೂ ಸಹ ಅಗತ್ಯವಾದುದು. ಇದೊಂದು ವಿಶೇಷ ಸಂದರ್ಭವಾಗಿದ್ದು, ಇದನ್ನು "ತುರ್ತು ಪರಿಸ್ಥಿತಿ" 'Act of God' ಎಂಬುದಾಗಿ ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಬೇಕು. ಪರಿಸ್ಥಿತಿಗಳು ನಮ್ಮ ನಿಯಂತ್ರಣದಲ್ಲಿ ಇಲ್ಲದ ಸಂದರ್ಭದಲ್ಲಿ ಎಲ್ಲರೂ ಒಟ್ಟಿಗೆ ಸೇರಿ, ಸಮಸ್ಯೆಗೆ ಪರಿಹಾರವನ್ನು ಹುಡುಕುವ ದೃಷ್ಟಿಯಲ್ಲಿ ಯೋಚನೆ ಮಾಡಬೇಕೇ ವಿನಹ ವಿರೋಧ ಪಕ್ಷದವರು ಆಡಳಿತ ಪಕ್ಷವನ್ನು ಹಾಗೂ ಆಡಳಿತ ಪಕ್ಷವು ವಿರೋಧ ಪಕ್ಷವನ್ನು ದೂರುವುದರ ಮೂಲಕ ಸಾರ್ವಜನಿಕರ ಎದುರು ಬೆತ್ತಲಾಗಿ ನಿಲ್ಲುವುದಲ್ಲ. ಅವರು ಮಾಡಲಿಲ್ಲ; ಇವರು ಮಾಡಲಿಲ್ಲ ಎಂದು ದೂಷಿಸುವುದು ಸರಿಯಲ್ಲ. 65 ವರ್ಷದಿಂದ ವಿರೋಧ ಪಕ್ಷದವರು ಮಾಡಲಿಲ್ಲ; ಕಳೆದ 7 ವರ್ಷ ಮತ್ತು 3 ವರ್ಷಗಳಿಂದ ನಾವು ಮಾಡಲಿಲ್ಲವೆಂದು ಹೇಳುವುದರಲ್ಲಿ ಯಾವುದೇ ರೀತಿಯ ಅರ್ಥ ಬರುವುದಿಲ್ಲ. ಇಷ್ಟು ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

**14. ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ**

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು)(ಅಧ್ಯಕ್ಷರು, ವಿಶೇಷ ಸದನ ಸಮಿತಿ):-** ಮಾನ್ಯ ಸಭಾಪತಿಯವರೇ, "**ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ, ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಧಿಯನ್ನು ಇನ್ನೂ 06 ತಿಂಗಳ ಕಾಲ ವಿಸ್ತರಿಸುವುದಕ್ಕೆ** ಸದನದ ಒಪ್ಪಿಗೆ ಪಡೆಯುವ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ."

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ; "ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ, ವರದಿ ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯ ಕಾಲಾವಧಿಯನ್ನು 06 ತಿಂಗಳ ಕಾಲ ವಿಸ್ತರಿಸುವುದಕ್ಕೆ ಸದನದ ಒಪ್ಪಿಗೆ ಪಡೆಯುವುದು".

**ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ವಿಶೇಷ ಸದನ ಸಮಿತಿಯು**
**ತನ್ನ ವರದಿಯನ್ನು ಸಲ್ಲಿಸಲು ದಿನಾಂಕ 21/09/2022 ರಿಂದ 06 ತಿಂಗಳುಗಳ**
**ಅವಧಿಯನ್ನು ವಿಸ್ತರಿಸಲು ಸದನ ಅನುಮೋದನೆ ನೀಡಿತು.**

**ಸಭಾಪತಿಯವರು:-** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ – 68 ರಡಿ ಚರ್ಚಿಸಲಾದ ವಿಷಯಕ್ಕೆ ಸಂಬಂಧಪಟ್ಟಂತೆ, ಇಲ್ಲಿಯವರೆಗೆ ಕಾಂಗ್ರೆಸ್ ಪಕ್ಷದಿಂದ 7 ಶಾಸಕರು, ಜಾತ್ಯಾತೀತ ಜನತಾದಳದ ಪಕ್ಷದಿಂದ 4 ಶಾಸಕರು ಮತ್ತು ಭಾರತೀಯ ಜನತಾ ಪಕ್ಷದಿಂದ 7 ಶಾಸಕರು ಅಂದರೆ ಒಟ್ಟಾರೆಯಾಗಿ 18 ಶಾಸಕರು ಚರ್ಚೆಯಲ್ಲಿ

ಭಾಗವಹಿಸಿದ್ದಾರೆ. ಒಟ್ಟು 6 ಗಂಟೆ 10 ನಿಮಿಷಗಳ ಕಾಲ ಚರ್ಚೆಯು ನಡೆದಿದ್ದು, ಈ ವಿಷಯದ ಬಗ್ಗೆ ಸಚಿವರು ಉತ್ತರಿಸಬೇಕೆಂದು ವಿನಂತಿಸುತ್ತೇನೆ.

**15. ನಿಯಮ – 68 ರಡಿ ಸಾರ್ವಜನಿಕ ಮಹತ್ವದ ವಿಷಯದ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ**

**ವಿಷಯ:– ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು, ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು**

*   *   *

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್, ಜನತಾ ದಳ ಮತ್ತು ಭಾರತೀಯ ಜನತಾ ಪಕ್ಷಗಳ ಸದಸ್ಯರು ಹಾಗೂ ನನ್ನ ಸ್ನೇಹಿತರುಗಳೆಲ್ಲರೂ ಪ್ರವಾಹದ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಅವರುಗಳೆಲ್ಲರೂ ತಮ್ಮ ಭಾಗಗಳಲ್ಲಾದ ಪ್ರವಾಹದ ಬಗ್ಗೆ ತಿಳಿಸಿದ್ದಾರೆ. ರಾಜ್ಯದ ಮಲೆನಾಡು, ಬೆಂಗಳೂರು ಮತ್ತು ಉತ್ತರ ಕರ್ನಾಟಕ ಮತ್ತಿತರೆ ಭಾಗಗಳಲ್ಲಿ ಉಂಟಾದ ಪ್ರವಾಹದ ಬಗ್ಗೆ ಸದಸ್ಯರುಗಳು ಸರ್ಕಾರದ ಗಮನ ಸೆಳೆದಿದ್ದಾರೆ. ಈ ಹಿಂದೆ ಮಳೆ ಬಂದಾಗ ಯಾವುದೋ ಒಂದು ಕಡೆ ಅಂದರೆ ಕೊಡಗು, ಮಂಗಳೂರು ಭಾಗಗಳಲ್ಲಿ ಪ್ರವಾಹವುಂಟಾಗುತ್ತಿತ್ತು. ಮತ್ತೊಂದು ಬಾರಿ, ಉತ್ತರ ಕರ್ನಾಟಕ ಭಾಗದಲ್ಲಿ ಸಂಪೂರ್ಣವಾಗಿ ಪ್ರವಾಹವುಂಟಾಗಿತ್ತು. ಆದರೆ, ಈ ಬಾರಿ ಆ ರೀತಿಯಾಗಿ ಆಗಲಿಲ್ಲ. ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಸಹ ಹೆಚ್ಚು ಕಡಿಮೆ ಪ್ರವಾಹವುಂಟಾಯಿತು. ಈ ಬಾರಿ ಒಳ್ಳೆಯ ಮಳೆಯಾಗಿರುವುದನ್ನು ನಾವು ನೋಡುತ್ತಿದ್ದೇವೆ. ಈಗ ಬಂದ ಮಳೆಯನ್ನು ಸರ್ಕಾರವು ಒಟ್ಟು 4

ಹಂತಗಳ ಅವಧಿಗಳಲ್ಲಿ ವಿಂಗಡಿಸಿದೆ. ಒಂದನೇ ಹಂತದ ಅವಧಿ:04 ರಿಂದ 18 ನೇ ಜುಲೈ; ಎರಡನೇ ಹಂತದ ಅವಧಿ: 2 ರಿಂದ 9ನೇ ಆಗಸ್ಟ್; ಮೂರನೇ ಹಂತದ ಅವಧಿ: 26 ರಿಂದ 31 ನೇ ಆಗಸ್ಟ್ ಹಾಗೂ ನಾಲ್ಕನೇ ಹಂತದ ಅವಧಿ: 1 ರಿಂದ 8 ನೇ ಸೆಪ್ಟಂಬರ್ ಎಂಬುದಾಗಿರುತ್ತದೆ. ಮೊದಲನೇ ಅವಧಿಯಲ್ಲಿ ಸುಮಾರು 131 ಮಿಲಿಮೀಟರ್‌ನಷ್ಟು ವಾಡಿಕೆ ಮಳೆ ಇತ್ತು. ಕಳೆದ 50 ವರ್ಷಗಳನ್ನು ಗಮನಿಸಿದಾಗ, ವಾಡಿಕೆ ಮಳೆಯು ಉತ್ತರ ಒಳನಾಡಿನಲ್ಲಿ 39 ಮಿ.ಮಿ. ಆಗಬೇಕಾಗಿತ್ತು; ಆದರೆ, 63 ಮಿ.ಮಿ.ನಷ್ಟು ಮಳೆಯಾಗಿದೆ. ದಕ್ಷಿಣ ಒಳನಾಡಿನಲ್ಲಿ 55 ಮಿ.ಮಿ. ಮಳೆಯಾಗಬೇಕಾಗಿತ್ತು; ಆದರೆ, 107 ಮಿ.ಮಿ.ನಷ್ಟು ಮಳೆಯಾಗಿದೆ. ಮಲೆನಾಡು ಪ್ರದೇಶದಲ್ಲಿ 289 ಮಿ.ಮಿ. ಮಳೆಯಾಗಬೇಕಾಗಿತ್ತು; ಆದರೆ, 642 ಮಿ.ಮಿ.ನಷ್ಟು ಮಳೆಯಾಗಿದೆ. ಕರಾವಳಿ ಭಾಗದಲ್ಲಿ 550 ಮಿ.ಮಿ. ಮಳೆಯಾಗಬೇಕಾಗಿತ್ತು; ಆದರೆ, 1,156 ಮಿ.ಮಿ.ನಷ್ಟು ಮಳೆಯಾಗಿದೆ. ಮೊದಲನೇ ಹಂತದಲ್ಲಿ ಒಟ್ಟು 227 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ಇದು ಕಳೆದ 50 ವರ್ಷಗಳಲ್ಲಿಯೇ ಅತ್ಯಂತ ಅಧಿಕ ಮಳೆಯಾಗಿದೆ. ಇಲ್ಲಿನ ವಿಚಿತ್ರವೇನೆಂದರೆ, ಮೇಘ ಸ್ಫೋಟ ಎಂದು ಹೇಳುತ್ತಾರಲ್ಲಾ, ಆ ರೀತಿಯ ಮಳೆಯಾಗಿದೆ. ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ತಗರಸಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಜುಲೈ 10 ನೇ ತಾರೀಖಿನಂದು, 24 ಗಂಟೆಗಳ ಅವಧಿಯಲ್ಲಿ 406 ಮಿ.ಮಿ.ಗಳಷ್ಟು ಮಳೆಯಾಗಿದೆ. ನಾನು ಮತ್ತು ಮುಖ್ಯಮಂತ್ರಿಗಳು ಆ ಸ್ಥಳಕ್ಕೆ ಭೇಟಿ ನೀಡಿದ್ದೆವು. ಅಲ್ಲಿನ ಮನೆಗಳ ಗೋಡೆಗಳು ಕುಸಿದಿದ್ದು, ಇಡೀ ಕುಟುಂಬದವರೆಲ್ಲರೂ ತೀರಿ ಹೋಗಿದ್ದರು. ಒಂದೇ ಗ್ರಾಮದಲ್ಲಿ ಆ ರೀತಿಯ ಅಪಾರ ಪ್ರಮಾಣದ ಮಳೆಯಾಗಿತ್ತು. ಸದರಿ ಗ್ರಾಮದ ಪಕ್ಕದ ಗ್ರಾಮದಲ್ಲಿ ಮಳೆಯೇ ಇರಲಿಲ್ಲ. ಕೇವಲ ಆ ಗ್ರಾಮದಲ್ಲಿಯೇ ಇಷ್ಟೊಂದು ಪ್ರಮಾಣದ ಮಳೆಯಾಗಿ, ದೊಡ್ಡ ಅನಾಹುತಗಳಾಗಿ, ಜೀವಹಾನಿಗಳುಂಟಾಗಿವೆ.

ಎರಡನೇ ಅವಧಿಯಲ್ಲಿಯೂ ಸಹ 99 ಮಿ.ಮಿ. ಮಳೆಯಾಗಬೇಕಾಗಿತ್ತು, ಆದರೆ, ವಾಸ್ತವಿಕವಾಗಿ 145 ಮಿ.ಮಿ.ನಷ್ಟು ಮಳೆಯಾಗಿದೆ. ಅದೇ ರೀತಿಯಾಗಿ ಮಲೆನಾಡು ಪ್ರದೇಶದಲ್ಲಿಯೂ ಸಹ ಅಧಿಕ ಪ್ರಮಾಣದ ಮಳೆಯಾಗಿದೆ. ಸಾಮಾನ್ಯವಾಗಿ 139 ಮಿ.ಮಿ. ಮಳೆಯಾಗಬೇಕಾಗಿತ್ತು;

ಆದರೆ, ವಾಸ್ತವಿಕವಾಗಿ 288 ಮಿ.ಮಿ.ನಷ್ಟು ಮಳೆಯಾಗಿದೆ. ರಾಜ್ಯದ ಕರಾವಳಿ ಭಾಗದಲ್ಲಿ 259 ಮಿ.ಮಿ. ಮಳೆಯಾಗಬೇಕಾಗಿತ್ತು; ಆದರೆ, 363 ಮಿ.ಮಿ.ನಷ್ಟು ಮಳೆಯಾಗಿದೆ. ಎರಡನೇ ಹಂತದ ಅವಧಿಯಲ್ಲಿಯೂ ಸಹ 227 ತಾಲ್ಲೂಕುಗಳ ಪೈಕಿ ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲಿ ಅಂದರೆ, 220 ತಾಲ್ಲೂಕುಗಳಲ್ಲಿ ಅಧಿಕ ಪ್ರಮಾಣದಲ್ಲಿ ಮಳೆ ಬಿದ್ದು, ಪ್ರವಾಹವುಂಟಾಗಿದೆ. ನಾವು ನಿಗದಿಪಡಿಸಿದ ಎರಡನೇ ಹಂತದ ಅವಧಿಯಲ್ಲಿ, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಂದೇ ಒಂದು ಗ್ರಾಮದಲ್ಲಿ 550 ಮಿ.ಮಿ.ನಷ್ಟು ಮಳೆಯಾಗಿದೆ. ಮೂರನೇ ಹಂತದ ಅವಧಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಮಳೆಯಾಗಬೇಕಾಗಿತ್ತು. ವಾಡಿಕೆಯಂತೆ 31 ಮಿ.ಮಿ.ನಷ್ಟು ಮಳೆಯಾಗಬೇಕಾಗಿತ್ತು. ಆದರೆ, ಅಲ್ಲಿ 76 ಮಿ.ಮಿ.ನಷ್ಟು ಮಳೆಯಾಯಿತು. ಉತ್ತರ ಒಳನಾಡು ಪ್ರದೇಶದಲ್ಲಿಯೂ ಸಹ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದೆ. ವಾಡಿಕೆಯಂತೆ ಅಲ್ಲಿ 18 ಮಿ.ಮಿ.ನಷ್ಟು ಮಳೆಯಾಗಬೇಕಾಗಿತ್ತು; ಆದರೆ, 117 ಮಿ.ಮಿ.ನಷ್ಟು ಮಳೆಯಾಗಿದೆ. ಅದೇ ರೀತಿಯಾಗಿ ದಕ್ಷಿಣ ಒಳನಾಡು ಭಾಗದಲ್ಲಿ 21 ಮಿ.ಮಿ.ನಷ್ಟು ಮಳೆಯಾಗಬೇಕಾಗಿತ್ತು; ಆದರೆ, 54 ಮಿ.ಮಿ.ನಷ್ಟು ಮಳೆಯಾಗಿದೆ. ಶಹಪುರ ತಾಲ್ಲೂಕು ಬಿದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಒಂದೇ ಹಳ್ಳಿಯಲ್ಲಿ 224 ಮಿ.ಮಿ.ನಷ್ಟು ಮಳೆಯಾಗಿದೆ. ನಾಲ್ಕನೇ ಹಂತದ ಅವಧಿಯಲ್ಲಿ 38 ಮಿ.ಮಿ.ನಷ್ಟು ಮಳೆಯಾಗಬೇಕಾಗಿತ್ತು. ಆದರೆ, 97 ಮಿ.ಮಿ.ನಷ್ಟು ಮಳೆಯಾಗಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಟಿ.ಕೆ.ಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 118 ಮಿ.ಮಿ.ನಷ್ಟು ಮಳೆಯಾಗಿದೆ.

(ಮುಂದು)

1008/22-09-2022/6-00/bkp-vk

**ಶ್ರೀ ಆರ್. ಅಶೋಕ(ಮುಂದು)**

ಇಲ್ಲಿಯೂ ಕೂಡ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಬಿ.ಜೆ ಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 188 ಮಿ.ಮೀ. ಮಳೆಯಾಗಿದೆ. ಅಂದರೆ TK Halli ಪಂಪಿಂಗ್ ಸ್ಟೇಷನ್‌ನಿಂದ

ಬೆಂಗಳೂರಿಗೆ ಏನು ಕುಡಿಯುವ ನೀರು ಬರುತ್ತಿತ್ತು, ಆ ಸ್ಟೇಷನ್ ಪೂರ್ಣ ಮುಚ್ಚಿ ಹೋಗಿತ್ತು. ನಾವು ಮತ್ತು ಮಾನ್ಯ ಮುಂತ್ರಿಗಳು ಅಲ್ಲಿಗೆ ಹೋಗಿದ್ದೆವು. ಅಂದರೆ, ಅಷ್ಟು ದೊಡ್ಡ ರೀತಿಯಾದಂತಹ ಮಳೆ ಈ ಅವಧಿಯಲ್ಲಿ ಬಂದಿರುವುದನ್ನು ನಾವು ನೋಡಿದ್ದೇವೆ. ಇನ್ನು ನಮ್ಮೆಲ್ಲಾ ಡ್ಯಾಮ್‌ಗಳು 50 ವರ್ಷಗಳ ಇತಿಹಾಸದಲ್ಲಿಯೇ ಇಷ್ಟೊಂದು, ಅಂದರೆ ಗರಿಷ್ಠ ನೀರು ಬಂದಿರುವುದಿಲ್ಲ. ನಮ್ಮ ಲಿಂಗನಮಕ್ಕಿ ಡ್ಯಾಮ್ ಸಂಗ್ರಹಣಾ ಸಾಮರ್ಥ್ಯ ಗರಿಷ್ಠ ಮಟ್ಟ ಇರುವುದು 151 ಟಿಎಂಸಿ ಇದ್ದು, ಈಗ 143 ಟಿಎಂಸಿ. ನೀರು ಇದೆ. ಸೂಪಾದಲ್ಲಿ 145 ಟಿಎಂಸಿ. ಸಂಗ್ರಹಣಾ ಸಾಮರ್ಥ್ಯ ಇದ್ದು, ಪ್ರಸ್ತುತ 103 ಟಿಎಂಸಿ. ನೀರು ಇದೆ. ವರಾಹಿಯಲ್ಲಿ ಸಂಗ್ರಹಣಾ ಸಾಮರ್ಥ್ಯ 31 ಟಿಎಂಸಿ ಇದ್ದು , 23 ಟಿಎಂಸಿ. ನೀರು ಸಂಗ್ರಹವಾಗಿದೆ. ಹಾರಂಗಿಯಲ್ಲಿ, 8.5 ಸಂಗ್ರಹಣಾ ಸಾಮರ್ಥ್ಯ ಇದ್ದು, ಈಗಾಗಲೇ 8.16 ಟಿಎಂಸಿ. ನೀರು ಸಂಗ್ರಹವಾಗಿದೆ. ಹೇಮಾವತಿಯಲ್ಲಿ ಸಂಗ್ರಹಣಾ ಸಾಮರ್ಥ್ಯ 37.10 ಟಿಎಂಸಿ ನೀರು ಇದ್ದು, ಈಗಾಗಲೇ 37.6 ಟಿಎಂಸಿ ನೀರು ಅಲ್ಲಿ ಇದೆ. ಇದೆ. ಕೃಷ್ಣರಾಜ ಸಾಗರದ ಸಂಗ್ರಹಣಾ ಸಾಮರ್ಥ್ಯ 49.45 ಟಿಎಂಸಿ ನೀರು ಇದ್ದು, ಈಗಾಗಲೇ ಅಲ್ಲಿ 48.73 ಟಿ.ಎಂ.ಸಿ. ನೀರು ಸಂಗ್ರಹವಾಗಿದೆ. ಕಬಿನಿ ಜಲಾಶಯದ ಸಂಗ್ರಹಣಾ ಸಾಮರ್ಥ್ಯ 19.52 ಟಿಎಂಸಿ ಆಗಿದ್ದು, ಈಗಾಗಲೇ ಅಲ್ಲಿ 18.87 ಟಿಎಂಸಿ ನೀರು ಸಂಗ್ರಹವಾಗಿದೆ. ಇದೇ ರೀತಿಯಲ್ಲಿ ಭದ್ರಾ, ತುಂಗಾ ಭದ್ರಾ. ಘಟಪ್ರಭಾ, ಮಲಪ್ರಭಾ,ಆಲಮಟ್ಟಿ, ನಾರಾಯಣಪುರ ಡ್ಯಾಮ್ ಗಳಲ್ಲಿ ಅತಿ ಹೆಚ್ಚು ನೀರು ಸಂಗ್ರಹವಾಗಿರುವುದನ್ನು ನಾವು ನೋಡುತ್ತಿದ್ದೇವೆ. ಬಹುತೇಕ ಎಲ್ಲಾ ಕಡೆ ಪೂರ್ಣ ನೀರು ತುಂಬಿರುವುದನ್ನು ಕಾಣಬಹುದಾಗಿದೆ.

**ಶ್ರೀ ಎಸ್‌ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಬಿ.ಜೆ.ಪಿ. ಸರ್ಕಾರ ಇರುವಾಗ ಮಳೆ ಬರುತ್ತಿದೆ ಎಂದು ಹೇಳುತ್ತೀರಾ?

**ಶ್ರೀ ಆರ್. ಅಶೋಕ:–** ಇದನ್ನು ನೀವು ಹೇಳಿದರೆ ಸರಿ ಹೋಗುತ್ತದೆ, ನಾನು ಹೇಳಿದರೆ ಮತ್ತೆ ಕಾಮೆಂಟ್ ಶುರು ಆಗುತ್ತದೆ. ಮಾನ್ಯ ಯಡಿಯೂರಪ್ಪನವರು ಬಂದಾಗಲೂ ಮಳೆ ಜಾಸ್ತಿ, ಮಾನ್ಯ ಬಸವರಾಜ ಬೊಮ್ಮಾಯಿಯವರು ಬಂದಾಗಲೂ ಮಳೆ ಜಾಸ್ತಿ ಆಗುತ್ತಿದೆ. ಬಿ.ಜೆ.ಪಿ.ಸರ್ಕಾರ ಬಂದಾಗ ಮಳೆ ಜಾಸ್ತಿ ಬಂದು, ಎಲ್ಲಾ ಕೆರೆ ಕಟ್ಟೆಗಳು ತುಂಬಿ ಹೋಗುತ್ತದೆ.

**ಶ್ರೀ ಎನ್. ರವಿಕುಮಾರ್(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅವರ (ವಿರೋಧ ಪಕ್ಷದ) ಸರ್ಕಾರ ಇದ್ದಾಗ ಏನಾಗುತ್ತದೆ ಎನ್ನುವುದನ್ನು ಹೇಳಬೇಕು.

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಸುಮ್ಮನೆ ಕುಳಿತಿದ್ದಾರೆ. ಅವರ ಸರ್ಕಾರದ ಬಗ್ಗೆ ಹೇಳಿದರೆ ಮತ್ತೆ ಎದ್ದು ನಿಲ್ಲುತ್ತಾರೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಐದು ವರ್ಷ ಬರಗಾಲ ಇತ್ತು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೆ, ಈ ಸರ್ಕಾರದಲ್ಲಿ ಆಗಿರುವ ಡ್ಯಾಮೇಜ್‌ಗಳ ಬಗ್ಗೆ ಮಾತನಾಡಬೇಕೆಂದರೆ, ಒಂದು ವಾರ ಹೇಳಬೇಕಾಗುತ್ತದೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೆ, ಏನೇನು ಡ್ಯಾಮೇಜ್ ಅಗಿದೆ, ಅದನ್ನೂ ಸಹ ನಾನು ಹೇಳುತ್ತೇನೆ. ಇಲ್ಲಿ ಕಾವೇರಿ ಬೆಲ್ಟ್‌ನವರು ಬಹಳ ಜನರಿದ್ದೀರಿ. ನೀರಿನ ವಿಚಾರದಲ್ಲಿ ತಮಿಳುನಾಡಿನವರಿಗೂ ಮತ್ತು ನಮಗೂ ಯಾವಾಗಲೂ ಗಲಾಟೆ. ಪ್ರತಿ ಸಂದರ್ಭದಲ್ಲಿಯೂ ಗಲಾಟೆಯಾಗುತ್ತಿತ್ತು. ಈಗ ಗಲಾಟೆಯ ವಿಷಯವೇ ಇಲ್ಲ. ಬಿಳಿಗೊಂಡ್ಲು ನಮ್ಮ ಪಾಯಿಂಟ್. ನೀರು ಹರಿದು ಹೋಗುವಂತಹ ಕೊನೆ ಎಂಡ್ ಪಾಯಿಂಟ್. ಮೆಜರ್‌ಮೆಂಟ್ ಪಾಯಿಂಟ್. 1ನೇ ಆಗಸ್ಟ್, 2022 ರಲ್ಲಿಯೇ ಬಿಳಿಗೊಂಡ್ಲು ನಮ್ಮ ಪಾಯಿಂಟ್‌ನಿಂದ 224 ಟಿಎಂಸಿ. ನೀರು ಹರಿದು ಹೋಗಿದೆ. ಇದು 1974 ರಿಂದ ಮೆಜರ್‌ಮೆಂಟ್ ಮಾಡುತ್ತಿದ್ದೀರಿ, ಅದು ಹೈಯೆಸ್ಟ್ ನೀರು ಹರಿದು ಹೋಗಿದೆ. 2ನೆಯದು, ಜೂನ್ ನಿಂದ 15ನೇ ಸೆಪ್ಟೆಂಬರ್‌ವರೆಗೂ ಅದೇ ಬಿಳಿಗೊಂಡ್ಲುನಲ್ಲಿ 425 ಟಿಎಂಸಿ ನೀರು ಹರಿದು ಹೋಗಿದೆ. ತಮಿಳುನಾಡಿನವರು ಯಾವಾಗಲೂ ನೀರು, ನೀರು, ತಣ್ಣಿ-ತಣ್ಣಿ ಎಂದು ಹೇಳುತ್ತಿದ್ದರು. ಈಗ ಅವರು ನೀರನ್ನು ಏನೂ ಕೇಳುವಂತಿಲ್ಲ. 2015ರಲ್ಲಿ 89 ಟಿಎಮ್‌ಸಿ ನೀರು, 2016 ರಲ್ಲಿ 53 ಟಿಎಂಸಿ ನೀರು ಹೋಗಿದೆ ಅಂದರೆ, ಆ ಸಮಯದಲ್ಲಿ ಜಾಸ್ತಿ ನೀರು ಹೋಗಿದೆ.

**ಡಾ|| ಕೆ. ಗೋವಿಂದರಾಜ್:-** ಮಾನ್ಯ ಸಚಿವರು ಬಹಳ ಚೆನ್ನಾಗಿ ಉತ್ತರ ಕೊಡುತ್ತಿದ್ದಾರೆ. ಇಲ್ಲಿ ಫ್ಲಡ್ಸ್ ಬಗ್ಗೆ ಹೇಳಲಿಕ್ಕೆ ಹೋಗಿ ಜಲಾಶಯದ ನೀರಿನ ಮಟ್ಟವನ್ನೂ ಸಹ ತಿಳಿಸುತ್ತಿದ್ದಾರೆ..

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೆ, ನೀರು ಜಾಸ್ತಿ ಹೋಗಿದೆ ಎಂದರೆ ದೇವರ ದಯೆ ಇದೆ ಎಂದರ್ಥ.

**(ಗೊಂದಲ)**

ಶ್ರೀ **ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಇದನ್ನು ಮುಗಿಸುವುದನ್ನು ನೋಡಿದರೆ, ಬೆಂಗಳೂರು ಬಗ್ಗೆ ಸಿಐಜಿ ವರದಿಯನ್ನು ಕೊಟ್ಟಿರುವ ವಿಚಾರದಲ್ಲಿ ತಾವು ಬಹಳ ಸ್ಪಷ್ಟ ಅಭಿಪ್ರಾಯವನ್ನು ಕೊಡಬೇಕು.

**ಶ್ರೀ ಮರಿತಿಬ್ಬೇಗೌಡ:–** ದಯವಿಟ್ಟು ಆ ಮೇಕೆದಾಟು ಡ್ಯಾಮ್ ಅನ್ನು ಕಟ್ಟುತ್ತೇವೆಂದು ಹೇಳಿ.

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೆ, ಅದನ್ನು ಕಟ್ಟಿಯೇ ಕಟ್ಟುತ್ತೇವೆ. ನಾವು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಕೇಂದ್ರ ಸರ್ಕಾರದಿಂದ ಇನ್ನು ಇದಕ್ಕೆ ಅನುಮತಿ ಸಿಕ್ಕಿರುವುದಿಲ್ಲ.

**ಶ್ರೀ ಆರ್. ಅಶೋಕ:–**ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಈ ಕೆಲಸವನ್ನು ಮಾಡುತ್ತೇವೆ. ಈ ವಿಚಾರದಲ್ಲಿ ನೀವು ಹೇಳುತ್ತೀರಾ, ನಾವು ಕೆಲಸ ಮಾಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಗಮನಿಸಬೇಕು, 2022 ರಲ್ಲಿ 2835 ಕೆರೆಗಳು ಬಹುತೇಕ ತುಂಬಿವೆ. ಅಂದರೆ 77% ಕೆರೆಗಳು ತುಂಬಿವೆ. 2016 ರಲ್ಲಿ 413 ಕೆರೆಗಳು ತುಂಬಿದ್ದವು, ಈಗ 2835 ಕೆರೆಗಳು ತುಂಬಿವೆ. ಅದಕ್ಕೆ ನಾನು ಹೇಳಿದೆ. ಅದಕ್ಕೆ ಶ್ರೀಯುತ ರವಿಕುಮಾರ್‌ರವರು ನಾವು ಇದ್ದಾಗ ಮಳೆಗಾಲ, ನೀವು ಇದ್ದಾಗ ಬರಗಾಲ ಎಂದು ಹೇಳಿದರು. ಈಗ ಸುಮಾರು 77% ನೀರು ಶೇಖರಣೆಯಾಗಿದೆ. ಮಾನ್ಯ ಸದಸ್ಯರಾದ ಶ್ರೀಯುತ ಎಸ್.ಎಲ್. ಭೋಜೇಗೌಡರವರಿಗೆ ಅಷ್ಟಾಗಿ ನೀರಿನ ಬೆಲೆ ಗೊತ್ತಿಲ್ಲ. ಕೋಲಾರದವರನ್ನು

ಕೇಳಿ, 1200-1400 ಅಡಿ ಬೋರ್‌ವೆಲ್ ಕೊರೆದರೂ ಸಹ ನೀರು ಸಿಗುವುದಿಲ್ಲ. ನಿಮ್ಮಲ್ಲಿ ನೀರು ಹರಿದುಕೊಂಡು ಹೋಗುತ್ತಲೇ ಇರುತ್ತದೆ. ಕೋಲಾರದಲ್ಲಿ ಅರ್ಧ ಇಂಚು ನೀರು ಬಂದರೆ, ಅವರು 3 ಬೆಳೆಯನ್ನು ಬೆಳೆಯುತ್ತಾರೆ. ಅದಕ್ಕೆ 1400 ಅಡಿ ಕೊರೆಯಬೇಕು. ಈಗ ಎಲ್ಲಾ ಕೆರೆಗಳು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ 40 ವರ್ಷಗಳಾದ ಮೇಲೆ ತುಂಬಿ ಹೋಗಿವೆ. ನಮ್ಮ 3673 ಸಣ್ಣ ನೀರಾವರಿ ಕೆರೆಗಳು ತುಂಬಿವೆ. ಇಷ್ಟು ಕೆರೆಗಳ ಒಟ್ಟು ಸಾಮರ್ಥ್ಯ 109 ಟಿಎಂಸಿ. ಇಷ್ಟು ನೀರನ್ನು ಹಿಡಿದಿಟ್ಟುಕೊಳ್ಳುವಂತಹ ಶಕ್ತಿಯನ್ನು ಹೊಂದಿರುವಂತಹ ಕೆರೆಗಳಾಗಿವೆ. ಒಟ್ಟು ಈ ಕೆರೆಗಳಿಗೆ ಸಂಬಂಧಪಟ್ಟಂತೆ ಅಚ್ಚುಕಟ್ಟು 4,37497 ಹೆಕ್ಟೇರ್ ಜಮೀನು ನೀರಾವರಿಯಾಗುವುದನ್ನು ನಾವು ನೋಡಿದ್ದೇವೆ. 1780 ಕೆರೆಗಳಲ್ಲಿ 100ಕ್ಕೆ 100ರಷ್ಟು ಅಂದರೆ ಸಂಪೂರ್ಣವಾಗಿ ನೀರು ತುಂಬಿದೆ

**ಡಾ|| ಕೆ. ಗೋವಿಂದ ರಾಜ್:-** ಮಾನ್ಯ ಸಚಿವರು ಹಾನಿಯಾಗಿರುವುದನ್ನು ಹೇಳುತ್ತಿದ್ದಾರೋ ತುಂಬಿರುವುದನ್ನು ಹೇಳುತ್ತಿದ್ದಾರೋ ಗೊತ್ತಾಗುತ್ತಿಲ್ಲ.

**ಶ್ರೀ ಆರ್. ಅಶೋಕ:-**ಮಾನ್ಯ ಸಭಾಪತಿಯವರೆ, ತುಂಬಿರುವುದನ್ನು ಮೊದಲು ಹೇಳಿ ನಂತರ ಹಾನಿಯಾಗಿರುವುದರ ಬಗ್ಗೆ ಹೇಳಬೇಕಾಗುತ್ತದೆ.

**ಡಾ|| ಕೆ. ಗೋವಿಂದ ರಾಜ್:-** ಹಾಗೆ ಹೇಳಿ,ಹಾನಿಯಾಗಿರುವುದನ್ನು ಕೊನೆಗೆ ಹೇಳುತ್ತೀರಾ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:**-ಬೆಂಗಳೂರಿನಲ್ಲಿ 39 ಟಿಎಂಸಿ. ನೀರನ್ನು ತುಂಬಿ ಇಡುವಂತಹ ಶಕ್ತಿ ಇದ್ದುದ್ದನ್ನು ನಾವು ಸಂಪೂರ್ಣವಾಗಿ ಕಳೆದುಕೊಂಡಿದ್ದೇವೆ. ಕೆಆರ್‌ಎಸ್ 49 ಟಿಎಂಸಿ. ಆ 49 ಟಿಎಂಸಿ ನೀರು ಹಿಡಿದಿಟ್ಟುಕೊಂಡಿದ್ದರೆ ಇಂತಹ 4 ಬೆಂಗಳೂರು ಕಟ್ಟಿದ್ದರೂ ನೀರು ಸಾಕಾಗುತ್ತಿತ್ತು. ಅದರ ಬಗ್ಗೆ ಏನು ಹೇಳುತ್ತೀರಿ, ಎನ್ನುವುದನ್ನು ಹೇಳಿ.

ಶ್ರೀ ಆರ್. ಅಶೋಕ್:- ಒಟ್ಟಿನಲ್ಲಿ ನಮಗೂ ಮತ್ತು ಮಾನ್ಯ ಹರಿಪ್ರಸಾದ್‌ರವರಿಗೆ ಬೆಂಕಿ ಹಚ್ಚಲಿಕ್ಕೆ ಸಿದ್ಧರಿದ್ದಾರೆ, ಮಾನ್ಯ ಭೋಜೇಗೌಡರವರು.

ಶ್ರೀ ಎಸ್.ಎಲ್. ಭೋಜೇಗೌಡ:- ಅದು ನನ್ನ ಕೆಲಸವಲ್ಲ.

**ಶ್ರೀ ಆರ್.** ಅಶೋಕ್:- ಈಗಾಗಲೇ ಮುನಿರಾಜುರವರು ಮಾತನಾಡಿದರು. ನಾನು ಮಾತನಾಡಿದರೆ ಬೆಂಕಿ ಹತ್ತಿಕೊಳ್ಳುತ್ತದೆ. ಅದಕ್ಕೆ ಸುಮ್ಮನಿದ್ಧೇನೆ. ಅಂತರ್ಜಜಲದ ಮಟ್ಟ ಏನಿದೆ, 4 ಮೀಟರ್ ಅಂತರ್ಜಲ ಇಡೀ ರಾಜ್ಯದಲ್ಲಿದೆ. ಯಾವತ್ತು ಆಗಿಲ್ಲ. ಇಡೀ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ 4 ಮೀಟರ್ ಅಂತರ್ಜಲದ ಮಟ್ಟ ಆಗಿದೆ. ಸುಮಾರು 194 ತಾಲ್ಲೂಕುಗಳಲ್ಲಿ 84ರಷ್ಟು ಆಗಿದೆ. ಉಳಿದ ತಾಲ್ಲೂಕುಗಳಲ್ಲಿ ಕಡಿಮೆ ಆಗಿದೆ. ಇಷ್ಟೂ ಕೂಡ ರಾಜ್ಯದಲ್ಲಿ ಮಳೆ ಬಿದ್ದಿದ್ದರಿಂದ benefits ಆಗಿದೆ. ನಮ್ಮ ಕೆರೆ-ಕಟ್ಟೆಗಳು ತುಂಬಿವೆ, ಎಲ್ಲಾ ಡ್ಯಾಮ್‌ಗಳು ನಮ್ಮಲ್ಲಿ ತುಂಬಿವೆ. ಅಂತರ್ಜಲದ ಮಟ್ಟ ಜಾಸ್ತಿಯಾಗಿದೆ. ಇಡಿ ರಾಜ್ಯದಲ್ಲಿ ಎಲ್ಲಿಯೂ ಸಹ ಬರಗಾಲದ ಪರಿಸ್ಥಿತಿ ಇಲ್ಲ. ಬೋರ್‌ವೆಲ್ ಬೇಕೆಂದು ಕೇಳಿದವರಿಲ್ಲ. ಬತ್ತಿ ಹೋಗಿದ್ದ ಬೋರ್‌ವೆಲ್‌ಗಳು ಎಲ್ಲಾ ಕಡೆ ರೀಚಾರ್ಜ್ ಅಗಿವೆ. ಅನಾಹುತದ ಬಗ್ಗೆ ನಾಯಕ್‌ರವರು

ಹೇಳಿದರು. ಅವರು ಕಥೆ ಹೇಳುವ ರೀತಿಯಲ್ಲಿ ಹೇಳಿದರು. ಇದು Man Made Mistakes ಅಷ್ಟೆ. ಬೆಂಗಳೂರಿನಲ್ಲಿ ಈ ರೀತಿಯಲ್ಲಿ flood ಆಗಿದೆ ಎಂದು ಹೇಳಿದರೆ. ಮೊದಲು ಬೆಂಗಳೂರು ಬಹಳ ಚಿಕ್ಕದು ಇತ್ತು. ನಾವು ಮತ್ತು ಶ್ರೀ ಹರಿಪ್ರಸಾದ್ ರವರು ಇಲ್ಲಿಯೇ ಹುಟ್ಟಿ ಬೆಳೆದವರು. ಹೋಗುವವರು ಸಹ ಇಲ್ಲಿಯೇ. ಹೌದು ಅಲ್ಲವೇ? ನಾವು ತಲೆಮಾರುಗಳಿಂದ ಅಂದರೆ ನಮ್ಮ ತಾತ, ಮುತ್ತಾತರ ಕಾಲದಿಂದಲೂ ಇಲ್ಲಿಯೇ ಇದ್ದೇವೆ. ಆಗ ಜನ ಸಂಖ್ಯೆ ಸುಮಾರು 8-10 ಲಕ್ಷ ಮಾತ್ರ ಇತ್ತು.

**ಶ್ರೀ ಎಸ್.ಎಲ್.ಬೋಜೇಗೌಡ:-** ನಾವು ಚಿಕ್ಕಮಗಳೂರಿನಿಂದ ಇಲ್ಲಿಗೆ ಬಂದಿದ್ದು, ಇಲ್ಲಿಯೇ ಹೋದರೆ,

**ಶ್ರೀ ಆರ್. ಅಶೋಕ:-** ನೀವು ಚಿಕ್ಕಮಗಳೂರಿಗೆ ಹೋಗುವುದು ಗ್ಯಾರಂಟಿ.

**ಶ್ರೀ ಪುಟ್ಟಣ್ಣ:-** ನೀವು ಹೇಳಿದರೆ, ನಾವೇ ನಿಮ್ಮನ್ನು ಅಲ್ಲಿಗೆಯೇ ತೆಗೆದುಕೊಂಡು ಹೋಗುತ್ತೇವಂತಹ ವ್ಯವಸ್ಥೆ ಮಾಡುತ್ತೇವೆ.

**ಶ್ರೀ ಆರ್. ಅಶೋಕ್:** ನೀವು ಬಸ್ಸಿನಲ್ಲಿಯೋ ಅಥವಾ ಮೆರವಣಿಗೆಯಲ್ಲಿ ವ್ಯವಸ್ಥೆ ಮಾಡುತ್ತಾರಾ?

**ಶ್ರೀ ಪುಟ್ಟಣ್ಣ:-** ಮೆರವಣಿಗೆ ಮೂಲಕ.

**ಶ್ರೀ ಆರ್. ಅಶೋಕ:** ನೋಡಿ, ಎಷ್ಟು ಜನ ಕಾಯುತ್ತಿದ್ದಾರೆ.

**(1009) 22.09.2022 06.10 ಎಸ್‌ವಿ-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಅಶೋಕ್ (ಮುಂದು):-**

ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಳವಾಗಿದ್ದು, ಬಡಾವಣೆಗಳು ಜಾಸ್ತಿಯಾಗಿವೆ. ಬೇರೆ ಜಿಲ್ಲೆಗಳಿಂದ, ಬೇರೆ ರಾಜ್ಯಗಳಿಂದ ಬೆಂಗಳೂರಿಗೆ ಜನರು ಬಂದಿದ್ದಾರೆ. ಬೇರೆ ಬೇರೆ ದೇಶದವರೂ ಕೂಡ ಬಂದಿದ್ದಾರೆ. ನಮ್ಮಲ್ಲಿ ಬೇರೆ ರಾಜ್ಯದಿಂದ ಬಂದಂತಹ ಐ.ಎ.ಎಸ್./ಐ.ಪಿ.ಎಸ್. ಅಧಿಕಾರಿಗಳು ಇದ್ದಾರೆ. ಅವರಲ್ಲಿ ಕೆಲವು ಅಧಿಕಾರಿಗಳನ್ನು ಲೋಕಾಭಿರಾಮವಾಗಿ ಮಾತನಾಡುತ್ತಾ ಒಮ್ಮೆ ನಾನು ಕೇಳಿದೆನು. ಇನ್ನೂ ಎಷ್ಟು ಸೇವಾ ಅವಧಿ ಇದೆ ಎಂದು ಕೇಳಿದೆ. ಅದಕ್ಕೆ ಅವರು ಒಂದು ವರ್ಷ ಇದೆ ಎಂದರು. ಹಾಗಾದರೆ ಒಂದು ವರ್ಷ ಕಳೆದ ನಂತರ ಬಿಹಾರಕ್ಕೆ ಹಿಂತಿರುಗುತ್ತೀರಾ ಎಂದು ಕೇಳಿದೆ. ಬಿಹಾರ, ಉತ್ತರ ಪ್ರದೇಶ, ಆಂಧ್ರಪ್ರದೇಶ, ತಮಿಳುನಾಡು ಆ ಭಾಗಗಳ ಅಧಿಕಾರಿಗಳು ಸಾಕಷ್ಟು ಜನರು ಇದ್ದಾರೆ. ಅದಕ್ಕೆ ಅವರು "ಇಲ್ಲ ಸರ್, ನನ್ನ ಮಗನಿಗೆ ಇಲ್ಲಿಯೇ ಕೆಲಸ ಆಗಿದೆ. ಮದುವೆಯೂ ಆಗಿದೆ. ಮೊಮ್ಮಗ ಇಲ್ಲಿಯೇ ಶಾಲೆಗೆ ಹೋಗುತ್ತಿರುವುದರಿಂದ ನಾವು ಹೋಗುವುದಿಲ್ಲ. ಇಲ್ಲಿಯೇ ಇರುತ್ತೇವೆ." ಎಂದು ಹೇಳಿದರು. ನಾನು ಕೇಳಿರುವ ಶೇ.100 ಜನರಲ್ಲಿ ಶೇ.99.9ರಷ್ಟು ಜನರು ಯಾರೂ ಬೆಂಗಳೂರು ಬಿಟ್ಟು ಹೋಗುವುದಿಲ್ಲ ಎಂದು ಹೇಳಿದ್ದಾರೆ.

**ಡಾ:ಕೆ.ಗೋವಿಂದರಾಜ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಚಿವರೇ, ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರುವುದಲ್ಲ. ಬೆಂಗಳೂರಿನಲ್ಲಿ ಮಸಾಲೆ ದೋಸೆ ತಿಂದು ಬ್ರಿಗೇಡ್ ರೋಡ್ ನೋಡಿದವರು ಯಾರೂ ವಾಪಸ್ ಹೋಗುವುದಿಲ್ಲ ಎನ್ನುವ ಒಂದು ಗಾದೆ ಇದೆ.

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಚಿವರೇ, ಇಲ್ಲಿ ಕೆಲಸಕ್ಕೆ ಸೇರುವುದಷ್ಟೇ ಅಲ್ಲ. ಅವರೇ ಇಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದಾರೆ. ಅಧಿಕಾರಿಗಳು ಕಾರ್ಖಾನೆಗಳನ್ನು ಮಾಡಿ, ಫಾರ್ಮ್ ಹೌಸ್‌ಗಳನ್ನು ಮಾಡಿಕೊಂಡು full settle ಆಗಿಬಿಟ್ಟಿದ್ದಾರೆ.

**ಡಾ: ತೇಜಸ್ವಿನಿ ಗೌಡ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಹವಾಗುಣ ಬಹಳ ಚೆನ್ನಾಗಿದೆ.

**ಶ್ರೀ ಆರ್.ಅಶೋಕ್:-** ಆದರೆ ನಮ್ಮ ರಾಜ್ಯದ ಅಧಿಕಾರಿಗಳು ಸಾಕಷ್ಟು ಜನ ಬೇರೆ ರಾಜ್ಯಗಳಿಗೆ ಹೋಗಿದ್ದಾರೆ. ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಾಗಿ ಆಯ್ಕೆಯಾದಾಗ ಆಯಾ ರಾಜ್ಯದ ಕೇಡರ್‌ಗಳಲ್ಲಿಯೇ ಇರಬೇಕು. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರಾದ ಶ್ರೀ ಮಂಜುನಾಥ ಪ್ರಸಾದ್ ಅವರು ಪಶ್ಚಿಮ ಬಂಗಾಳ ಕೇಡರ್‌ಗೆ ಸೇರಿದವರು. ಮಮತಾ ಬ್ಯಾನರ್ಜಿ ಅವರ ಕಾರ್ಯದರ್ಶಿಗಳಾಗಿದ್ದರು. ಆದರೆ ಅಲ್ಲಿಯೇ ಇರಲಿಲ್ಲ, ವಾಪಸ್ ಬಂದುಬಿಟ್ಟಿದ್ದಾರೆ. ಯಾರೂ ಇರುವುದಿಲ್ಲ. ಇನ್ನೂ ಆರು ತಿಂಗಳು ಇದ್ದಂತೆಯೇ ರಜೆ ಹಾಕಿಕೊಂಡು ಎಲ್ಲರೂ ವಾಪಸ್ ಬಂದು ಬಿಡುತ್ತಾರೆ. ಬೆಂಗಳೂರು ಎಂದು ಹೇಳಿದರೆ ಆ ರೀತಿಯ ಒಂದು ವಾತಾವರಣವಿದೆ. ಇಲ್ಲಿ education and knowledge ಇದೆ. ಬೆಂಗಳೂರನ್ನು ಜನರು ಇಷ್ಟ ಪಡುತ್ತಾರೆ. ಇಲ್ಲಿರುವ ಜನರನ್ನೂ ಇಷ್ಟ ಪಡುತ್ತಾರೆ. ಬೆಂಗಳೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ industries ಬರುತ್ತಿವೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಚಿವರೇ, ನೀವು ಇನ್ನೊಂದು ಅಂಶವನ್ನು ಹೇಳಲು ಮರೆತಿದ್ದೀರಿ. ಅವರಿಗೆ ಇಲ್ಲಿ ಸಿಗುವಷ್ಟು ದುಡ್ಡು ಬೇರೆ ಎಲ್ಲಿಯೂ ಸಿಗುವುದಿಲ್ಲ. ಅದನ್ನು ನೀವು ಹೇಳಲಿಲ್ಲ.

**(ಸದನವು ನಗೆಗಡಲಿನಲ್ಲಿ ತೇಲಿತು)**

**ಶ್ರೀ ಆರ್.ಅಶೋಕ್:-** ಮಾನ್ಯ ಮರಿತಿಬ್ಬೇಗೌಡರೇ, ಅದನ್ನು ನೀವು ಕೊಟ್ಟು ಅಭ್ಯಾಸ ಮಾಡಿರುತ್ತೀರಿ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇದು derogatory. ಈ ರೀತಿಯ derogatory ಶಬ್ದ ಈ ಸದನಕ್ಕೆ ಒಳ್ಳೆಯದಲ್ಲ. ಬಂದಿರುವ ಅಧಿಕಾರಿಗಳೆಲ್ಲಾ ದುಡ್ಡಿಗೋಸ್ಕರ ಇದ್ದಾರೆ ಎಂದು ಸಾರಾಸಗಟಾಗಿ ಹೇಳುವುದು ಸರಿಯಲ್ಲ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ವಿಷಯಕ್ಕೆ ಬಂದು ಬಿಡುತ್ತೇನೆ. ಇಲ್ಲದಿದ್ದರೆ ಮಾತು ಎಲ್ಲೆಲ್ಲೋ ಹೋಗುತ್ತದೆ.

ಈಗ ಕೊಡಗಿನಲ್ಲಿಯೂ ಭೂ ಕುಸಿತ ಉಂಟಾಗುತ್ತಿದೆ. ಪ್ರವಾಹ ಬರುತ್ತಿದೆ.

**(ಈ ಹಂತದಲ್ಲಿ ಮಾನ್ಯ ಭೋಜೇಗೌಡರು ಮಾತನಾಡುತ್ತಲೇ ಇದ್ದರು)**

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಸ್ವಲ್ಪ ಸುಮ್ಮನಿರಿ. ಹತ್ತು ನಿಮಿಷ ಸುಮ್ಮನೆ ಕುಳಿತುಕೊಳ್ಳಿ. ಈಗ ನೀವು ಶಾಸಕಾಂಗ ಪಕ್ಷದ ನಾಯಕರಾಗಿದ್ದೀರಿ. ಸ್ವಲ್ಪ ಸುಮ್ಮನೆ ಕುಳಿತುಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಿ. ಗಂಭೀರವಾಗಿರಿ.

**ಶ್ರೀ ಆರ್.ಅಶೋಕ್:-** ಕೊಡಗು, ಚಿಕ್ಕಮಗಳೂರು ಈ ಭಾಗಗಳಲ್ಲಿ ಭೂಕುಸಿತ ಏಕೆ ಉಂಟಾಗುತ್ತಿದೆ ಎಂದರೆ ಅದು ಕಮರ್ಷಿಯಲ್ ಹಬ್ ಆಗುತ್ತಿದೆ. ಕೊಡಗಿನಲ್ಲಿ ಸುಮಾರು ೩೦೦೦ಕ್ಕಿಂತಲೂ ಹೆಚ್ಚು ಹೋಮ್ ಸ್ಟೇಗಳಿವೆ ಎಂದು ನಾನು ಕೇಳಿದ್ದೇನೆ. ರೆಸಾರ್ಟ್‌ಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. Road cuttings ಮಾಡುತ್ತಿದ್ದಾರೆ. ರಸ್ತೆಗಳನ್ನು ಕಟ್ ಮಾಡುವುದರಿಂದ ಸುಲಭವಾಗಿ ಭೂಕುಸಿತ ಉಂಟಾಗುತ್ತದೆ. ನಾನು ಹೋದಾಗಲೇ ರಸ್ತೆಗಳು ಬಿರುಕು ಬಿಟ್ಟಿವೆ. ಅದು ಯಾವಾಗ ಭೂಕಂಪವಾಗುತ್ತದೆಯೋ?

**ಡಾ:ಕೆ.ಗೋವಿಂದರಾಜ್:-** ಮಾನ್ಯ ಸಚಿವರೇ, ಅದಕ್ಕೆ ಏನಾದರೂ ಸರ್ಕಾರ ಕಡಿವಾಣ ಹಾಕಬಹುದೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, bad message ಹೋಗಬಾರದು. ಕಳೆದ ಏಳೆಂಟು ವರ್ಷಗಳಿಂದ ಸಂಪೂರ್ಣವಾಗಿ ಕಾಫಿ ಪ್ಲಾಂಟೇಷನ್ ಹಾಳಾಗಿ ಹೋಗಿದೆ. ಇದು commercial crop ಆಗಿದೆ. ಕೊಡಗಿನವರಾದ ಮಾನ್ಯ ಸುಜಾ ಕುಶಾಲಪ್ಪ ಅವರು ಇಲ್ಲಿಯೇ ಕುಳಿತಿದ್ದಾರೆ. ಅಲ್ಲಿನ ಜನರು ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ತೋಟವಿರುವುದರಿಂದ ಹೋಮ್ ಸ್ಟೇಗಳನ್ನು ಮಾಡಿ ಬದುಕುತ್ತಿದ್ದಾರೆ. ಸಾವಿರಾರು ಜನ ಒಳ್ಳೊಳ್ಳೆಯ

ಕಾಫಿ ಪ್ಲಾಂಟರ್‌ಗಳು ಸಾವಿರ ಎಕರೆ ಜಮೀನು ಇಟ್ಟವರು, ೫೦೦ ಎಕರೆ ಜಮೀನು ಇಟ್ಟವರು ಇಂದು ಹೋಮ್‌ಸ್ಟೇಗಳನ್ನು ನಡೆಸಿ ಜೀವನ ಮಾಡುವಂತಹ ಪರಿಸ್ಥಿತಿ ಬಂದಿದೆ.

ನಾವು ಯಾರೂ ಗುಡ್ಡ ಅಗೆದಿಲ್ಲ. ಗುಡ್ಡವನ್ನು ಯಾವ ಪ್ಲಾಂಟರ್ ಅಗೆದಿಲ್ಲ. ದಯಮಾಡಿ ತಪ್ಪು ಸಂದೇಶ ಹೋಗಬಾರದು.

**ಶ್ರೀ ಆರ್. ಅಶೋಕ್:-** ಗುಡ್ಡ ಅಗೆದಿರುವುದಲ್ಲ, ರಸ್ತೆಗಳನ್ನು ಮಾಡಲು ಕಟ್ ಮಾಡಿರುವುದು. ನಿಮಗೆ ನಾವೇನು ಹೇಳಬೇಕಾಗಿಲ್ಲ. ಈ ಎಲ್ಲಾ ಕಾರಣಗಳಿಂದ ಇಂದು ಭೂಕುಸಿತ ಉಂಟಾಗುತ್ತಿದೆ. ಕಳೆದ ಬಾರಿ ಪ್ರವಾಹ ಉಂಟಾದಾಗ ಮನೆಗಳನ್ನು ಕಟ್ಟಿಕೊಡಲಾಗಿದ್ದು, ಈಗ ಪುನಃ ಏಕೆ ಭೂಕುಸಿತ ಉಂಟಾಗುತ್ತಿದೆ ಎಂದು ನಾವು ವರದಿಯನ್ನು ಕೇಳಿದ್ದೇವು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ಗುಡ್ಡಗಳಲ್ಲಿ ಅಕೇಷಿಯಾ, ನೀಲಗಿರಿ ಮರಗಳನ್ನು ಬೆಳೆದರಲ್ಲ...

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡಬೇಕೆ, ಬೇಡವೇ? ಯಾವಾಗಲೋ ಒಂದು ಸಾರಿ ಮಧ್ಯೆ ಮಾತನಾಡಿದರೆ ಸರಿ ಎನ್ನೋಣ. ಪ್ರತಿಯೊಂದು ವಾಕ್ಯದಲ್ಲಿಯೂ ಈ ರೀತಿ ಮಧ್ಯೆ ಮಾತನಾಡಿದರೆ ಹೇಗೆ? Please, let him complete.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಗುಡ್ಡಗಳಲ್ಲಿ ಅಕೇಷಿಯಾ ಮರಗಳನ್ನು ಬೆಳೆದಿದ್ದು, ಅದರ ಬೇರುಗಳಿಗೆ ಮಣ್ಣನ್ನು ಹಿಡಿದಿಡುವ ಶಕ್ತಿ ಇಲ್ಲ. ಮೇಲೆ ಮಳೆ ಬಂದ ತಕ್ಷಣ ಕುಸಿದು ಎಲ್ಲಾ ಕೆಸರಾಗಿ ಕೆಳಗೆ ಬಂದಿದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಸಚಿವರ ಉತ್ತರ ಮುಗಿಯಲಿ. ಮುಂದೆ ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ಹೇಳಿ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಇಷ್ಟು ಹೊತ್ತು ಪ್ರವಾಹದ ಸಾಂದ್ರತೆಯ ಬಗ್ಗೆ ಹೇಳಿದ್ದೇನೆ. ಈಗ ಪ್ರವಾಹದಿಂದ ಏನು ಹಾನಿಯಾಗಿದೆ ಎಂಬುದನ್ನು ಹೇಳುತ್ತೇನೆ. ಕೃಷಿ ಭೂಮಿಯು ಸಾಕಷ್ಟು ತೇವಾಂಶವಾಗಿದ್ದು, ಬೆಳೆ ನಷ್ಟವಾಗಿದೆ. ಕಾವೇರಿ, ಕೃಷ್ಣಾ ಹಾಗೂ ಉಪ ನದಿಗಳ ಪ್ರವಾಹ ಪರಿಸ್ಥಿತಿಯೂ ಸಾಕಷ್ಟು ಉಲ್ಬಣವಾಗಿದೆ. ಘಟ್ಟ ಪ್ರದೇಶಗಳಲ್ಲಿ ಸಾಕಷ್ಟು ಭೂಕುಸಿತ ಉಂಟಾಗಿದೆ. ಕೆಲವು ಮನೆಗಳಿಗೆ ಪೂರ್ತಿಯಾಗಿ ಹಾನಿಯಾಗಿರುವುದು, ಕೆಲವು ಮನೆಗಳು ಭಾಗಶಃ ಹಾನಿಗೊಳಗಾಗಿರುವುದು, ಜಾನುವಾರುಗಳು ಸತ್ತಿರುವುದು, ಸಾಕಷ್ಟು ಜನ ಮನುಷ್ಯರು ಸತ್ತಿರುವ ದಾರುಣ ದೃಶ್ಯವನ್ನು ನಾವು ನೋಡಿದ್ದೇವೆ. 22ನೇ ಜುಲೈ 2022ರಿಂದ 12ನೇ ಸೆಪ್ಟೆಂಬರ್ 2022ರವರೆಗೆ ಈ ಭೂಕುಸಿತ ಮತ್ತು ಪ್ರವಾಹದಿಂದಾಗಿ ಒಟ್ಟು ಕರ್ನಾಟಕದಲ್ಲಿ 127 ಜನ ಅಮಾಯಕರು, ಬಡವರು ಜೀವವನ್ನು ಕಳೆದುಕೊಂಡಿದ್ದಾರೆ. 1280 ಜಾನುವಾರುಗಳು ಅಂದರೆ ಹಸು, ಕರು, ಮೇಕೆ ಮುಂತಾದವು ಸಾವಿಗೀಡಾಗಿವೆ. ಕೋಳಿಗಳ ಸಾವು ಹೆಚ್ಚಾಗಿದೆ. 1,53,413 ಕೋಳಿಗಳು ಸತ್ತಿದ್ದು, ಇಡೀ ಕೋಳಿ ಫಾರಂಗೆ ನೀರು ನುಗ್ಗಿ ಹಾನಿಯಾಗಿದೆ. ಸುಮಾರು 45,465 ಮನೆಗಳು ಹಾನಿಗೀಡಾಗಿದೆ. ಈ ಪೈಕಿ ಸುಮಾರು 2,438 ಮನೆಗಳು ಸಂಪೂರ್ಣ ಹಾನಿಯಾಗಿದೆ. 14,475 ಮನೆ ತೀವ್ರ ಹಾನಿಯಾಗಿದೆ. 28,051 ಮನೆ ಭಾಗಶಃ ಹಾನಿಯಾಗಿದೆ. ಇಷ್ಟು ಮನೆ ಹಾನಿಯಾಗಿರುವಂಥದ್ದು.

ವಾರಗಟ್ಟಲೆ ನೀರು ನಿಂತಿರುವುದರಿಂದ ಕೃಷಿ ಭೂಮಿ ತೇವಾಂಶದಿಂದಾಗಿ ಬೆಳೆಯೇ ನಾಶಗೊಂಡಿದೆ. ನಾನೇ ಸ್ವತಃ ಹೋಗಿ ನೋಡಿದ್ದೇನೆ. ಜೋಳ ಬೆಳೆಯದೆ ಕೇವಲ ಎಲೆ ಮಾತ್ರ ಇರುವುದರಿಂದ ಮೇವಿಗೆ ಬಳಸಿಕೊಳ್ಳಲು ಹೇಳಿದೆ. ಅದನ್ನೇನಾದರೂ ತಿಂದರೆ ಹಸುಗಳಿಗೆ ಗಂಟಲು ರೋಗ ಬರುತ್ತದೆ. ಆದ್ದರಿಂದ ಅದನ್ನು ಹಸುಗಳಿಗೂ ಹಾಕಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು. ಒಟ್ಟಾರೆ 8,91,187 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾನಿಯಾಗಿದೆ. ಸುಮಾರು 1,03.254 ಹೆಕ್ಟೇರ್ ಪ್ರದೇಶದ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಅದೇ ರೀತಿ 12,000 ಹೆಕ್ಟೇರ್ ಪ್ರದೇಶದಲ್ಲಿ ಬಹುವಾರ್ಷಿಕ ಬೆಳೆಗಳು ಹಾನಿಯಾಗಿದೆ. ಒಟ್ಟು 10,06,461 ಹೆಕ್ಟೇರ್ ಪ್ರದೇಶದಲ್ಲಿ

ಹಾನಿಯಾಗಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ವಿಶೇಷವಾಗಿ ಹೆಸರು, ಉದ್ದು, ತೊಗರಿ, ಜೋಳ, ಕಾಫಿ, ಅಡಿಕೆ ಎಲ್ಲವೂ ಹಾನಿಯಾಗಿದೆ.

ಈಗ ಮೂಲಭೂತ ಸೌಕರ್ಯಗಳು ಹಾನಿಯಾಗಿರುವುದು ಒಟ್ಟು 27,648 ಕಿ.ಮೀ. ಉದ್ದದ ರಸ್ತೆ ಹಾಳಾಗಿದೆ. ಸೇತುವೆ ಮತ್ತು ಕಾಲುವೆಗಳು 2,325. 8627 ಶಾಲಾ ಕೊಠಡಿಗಳು ಹಾಳಾಗಿವೆ. 269 ಪ್ರಾಥಮಿಕ ಆರೋಗ್ಯ ಕೇಂದ್ರಗಳವೆ. ಅಂಗನವಾಡಿ ಮತ್ತು ಗ್ರಾಮಪಂಚಾಯಿತಿ ಆಸ್ತಿಗಳು 5194 ಹಾನಿಯಾಗಿವೆ.

**(...ಮುಂದು)**

**(1010) 22-09-2022 (6.20) ಕೆಜಿ-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಅಶೋಕ್ (ಮುಂದು.,):-**

774 ಸಣ್ಣ ನೀರಾವರಿ ಕೆರೆಗಳ ಕಟ್ಟೆ ಒಡೆದು ಹೋಗಿವೆ. ವಿದ್ಯುತ್ ಸಂಪರ್ಕದಲ್ಲಿ ಬಾರಿ ವ್ಯತ್ಯಾಸವಾಗಿದೆ. ಸುಮಾರು 33,475 ವಿದ್ಯುತ್ ಕಂಬಗಳು, 3.508 transformer ಗಳು, 4,136 ಕೀಲೋಮೀಟರ್ ಉದ್ದದ ವಿದ್ಯುತ್ ಸಂಪರ್ಕ ಹಾಳಾಗಿದೆ. ಜಿಲ್ಲಾವಾರು ಮಾಹಿತಿ ಇದೆ. ಅದನ್ನು ಹೇಳುತ್ತಾ ಹೋದರೆ, ಮಾಹಿತಿ ಬಹಳ ದೊಡ್ಡದಾಗುತ್ತಾ ಹೋಗುತ್ತದೆ. ಈಗಾಗಲೇ ನಾನು, ಮಾನ್ಯ ಮುಖ್ಯಮಂತ್ರಿಯವರು ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಗೆ ಪ್ರವಾಸ ಮಾಡಿ ಅಲ್ಲಿ ವೀಕ್ಷಣೆ ಮಾಡಿ ಪರಿಹಾರ ಕೊಡುವುದಕ್ಕೆ ಮತ್ತು ಅಲ್ಲಿನ ಅಧಿಕಾರಿಗಳಗೆ ಚುರುಕು ಮುಟ್ಟಿಸುವಂತಹ ಕೆಲಸವನ್ನು ಮಾಡಿದ್ದೇವೆ. ಅದೇರೀತಿ, ಭಟ್ಕಳ ತಾಲ್ಲೂಕು ಮತ್ತು ಉತ್ತರ ಕನ್ನಡಕ್ಕೂ ನಾನು ಮತ್ತು ಮುಖ್ಯ ಮಂತ್ರಿಯವರು ಒಟ್ಟಿಗೆ ಹೋಗಿದ್ದೆವು. ಇದನ್ನು ಬಿಟ್ಟು ನಾನು ಕಂದಾಯ ಸಚಿವನಾಗಿ ಹಾಸನ, ಮಂಡ್ಯ, ತುಮಕೂರು, ರಾಮನಗರ, ಚಾಮರಾಜ ನಗರ, ಮೈಸೂರು, ಚಿತ್ರದುರ್ಗ ಮತ್ತು ದಾವಣೆಗೆರೆ ಜಿಲ್ಲೆಗಳಗೆ ಪ್ರವಾಸ ಮಾಡಿ ಅಲ್ಲಿರುವಂತಹ ಜನರಿಗೆ ಸಾಂತ್ವನ ಇರಬಹುದು, ಪರಿಹಾರ ಇರಬಹುದು ಹಾಗೂ ಅಧಿಕಾರಿಗಳಗೆ ಚುರುಕು ಮುಟ್ಟಿಸುವಂತಹ ಕೆಲಸವನ್ನು ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, ಅದೇರೀತಿ ಮಾನ್ಯ ಮುಖ್ಯಮಂತ್ರಿಯವರು ಮುಂಜಾಗ್ರತಾ ಕ್ರಮವಾಗಿ floods ಬರುವುದಕ್ಕೂ ಮೊದಲೇ, ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಯವರ ಜೊತೆಗೆ video conference ಮೂಲಕ ದಿನಾಂಕ 08-05-2022 ರಂದು ಸಭೆಯನ್ನು ಮಾಡಿದ್ದೇವೆ. ನಾನು, ಮಾನ್ಯ ಮುಖ್ಯಮಂತ್ರಿಯವರು ಹಾಗೂ ಗೃಹ ಸಚಿವರು ಭಾಗಿಯಾಗಿ ಜಿಲ್ಲಾಧಿಕಾರಿಗಳಿಗೆ alert ಮಾಡಿದ್ದೇವೆ. ಈ ರೀತಿ ದೇಶದಲ್ಲಿಯೇ ಮೊದಲನೇ ಬಾರಿಗೆ ವಿಪತ್ತು ನಿರ್ವಹಣಾ ಸ್ಥಳೀಯ ಸಮುದಾಯ ಭಾಗಿತ್ವದ **“ಗ್ರಾಮ ಪಂಚಾಯಿತಿ ಮಟ್ಟದ ವಿಪತ್ತು ನಿರ್ವಹಣಾ ಯೋಜನೆ”** ಯನ್ನು ಮಾಡಿದ್ದೇವೆ. ಈ ಯೋಜನೆಯನ್ನು 2,187 ಗ್ರಾಮ ಪಂಚಾಯಿತಿಗಳಲ್ಲಿ ಮಾಡಿದ್ದೇವೆ. ಈ ಗ್ರಾಮ ಪಂಚಾಯಿತಿಗಳಲ್ಲಿ ಮಳೆ ಬಂದಾಗ, cyclone ಬಂದಂತಹ ಸಂದರ್ಭದಲ್ಲಿ ಜನರಿಗೆ ಕಷ್ಟಗಳು ಬಂದಾಗ ಅದನ್ನು ಯಾವ ರೀತಿಯಲ್ಲಿ rescue ಮಾಡಬೇಕು ಎನ್ನುವ ಬಗ್ಗೆ training ಅನ್ನು ಕೊಡುತ್ತೇವೆ. ಅಲ್ಲದೇ, ಅವರಿಗೆ ಬೇಕಾದಂತಹ equipment ಗಳನ್ನು ಕೊಡುತ್ತೇವೆ. ಅವರಿಗೆ ಜಾಕೆಟ್ ಇರಬಹುದು, mask ಇರಬಹುದು, ಹಾರೆ, ಈ ರೀತಿಯದು ಏನೇನು ಬೇಕಾಗಿದೆ ಅವುಗಳನ್ನು ಕೊಡುತ್ತೇವೆ. Immediate relief ಕೊಡುವುದಕ್ಕೆ ನಾವು ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಇದನ್ನು ನೋಡಿದ ಮೇಲೆ, ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಒಂದು team ಅನ್ನು ಕಳುಹಿಸಿತ್ತು. ಅವರು Hotel Ashoka ಗೆ ಬಂದಿದ್ದರು. ಬೇರೆ ಬೇರೆ ರಾಜ್ಯದ ಒಂದು team ಸಹ ಬಂದು ಇಲ್ಲಿ seminar ಮಾಡಿದ್ದರು. ಈ ಪದ್ಧತಿಯನ್ನು ಇಡೀ ದೇಶದ ವ್ಯಾಪ್ತಿಯಲ್ಲಿಯೇ ಮಾಡಬೇಕು. ಏಕೆಂದರೆ, ಅಧಿಕಾರಿಗಳು ಬರುವಷ್ಟರಲ್ಲಿ 1 to 3 hours ಆಗುತ್ತದೆ. ಆದ್ದರಿಂದ, ಅವರಿಗೆ ಸ್ಥಳೀಯವಾಗಿ training ನೀಡಿದರೆ ಒಳ್ಳೆಯದು. ಇದಕ್ಕೆ ಹಣವನ್ನು ಸಹ ಕೊಡುತ್ತೇವೆ. Equipment ಗೆ ಮತ್ತು meeting ಗಳಿಗೆ ಅವರಿಗೆ ರಾಜ್ಯ ಸರ್ಕಾರದಿಂದ ಹಣವನ್ನು ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಅದೇರೀತಿ ಒಂದು dam, ಒಂದು dam ಮಧ್ಯೆಯೂ ಸಹ ನಿರ್ವಹಣೆ ಮಾಡುವಂಥದ್ದಕ್ಕೆ, ಏಕೆಂದರೆ ಮಹಾರಾಷ್ಟ್ರದಿಂದ ನೀರು ಬಂದಾಗ, ಅವರು ಕೆಲವು ಸಾರಿ ನೀರನ್ನು ಹಾಗೆಯೇ ಬಿಟ್ಟುಬಿಟ್ಟಿದ್ದರು. ಆಗ ನಮ್ಮಲ್ಲಿ ದೊಡ್ಡ floods ಆಗಿತ್ತು. ಅದಕ್ಕೆ ಅಲ್ಲಿನ D.C. ಮತ್ತು ನಮ್ಮ D.C. ನಿರಂತರವಾಗಿ minute to minute, ನೀರು ಬಿಡಬೇಕಾದರೆ ನಮಗೆ ಮುಂಚಿತವಾಗಿ ಹೇಳಬೇಕು. ನಾವು ಆ ತರಹದ ವ್ಯವಸ್ಥೆಯುಳ್ಳ WhatsApp group ಅನ್ನು ಮಾಡಿದ್ದೇವೆ. ಅದೇರೀತಿ 4 ರಾಷ್ಟ್ರೀಯ ವಿಪತ್ತು NDRF ತಂಡ ಸಹ ನಮ್ಮ ರಾಜ್ಯದಲ್ಲಿ ಇದೆ. ಈ ತಂಡ ಕೊಡಗು, ಬೆಳಗಾವಿ, ದಕ್ಷಿಣ ಕನ್ನಡ ಮತ್ತು ರಾಯಚೂರು

ಜಿಲ್ಲೆಗಳಲ್ಲಿದೆ. ಅದೇರೀತಿ ನಮ್ಮ SDRF 6 ತಂಡ ಇದೆ. ಅದನ್ನು ಸಹ ಎಲ್ಲಾ ಕಡೆಯೂ ನಿಯೋಜಿಸಿದ್ದೇವೆ. ಪೋಲೀಸ್ ಇಲಾಖೆ, ಗೃಹ ರಕ್ಷಕ ದಳ, ಕಂದಾಯ ಇಲಾಖೆ ಹಾಗೂ ನಮ್ಮ ಇಲಾಖೆಗಳು ಸೇರಿದಂತೆ ಅವರಿಗೆ ತಕ್ಷಣ ಏನೇನು ಪರಿಹಾರ ಕೊಡಬೇಕೋ ಅದನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಮಳೆಹಾನಿಯ ಬಗ್ಗೆ ಕೇಂದ್ರ ಸರ್ಕಾರದವರು 95 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ನಾವು 5 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅದೇರೀತಿ ತೀವ್ರ ಮನೆ ಹಾನಿಯಾದವರಿಗೆ ಕೇಂದ್ರ ಸರ್ಕಾರ 95 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ನಾವು ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಭಾಗಶಃ ಮನೆ ಹಾನಿಯಾಗಿದ್ದರೆ, NDRF ನಲ್ಲಿ ಪರಿಹಾರವಾಗಿ ರೂ.5,200 ಇದೆ. ನಾವು 50 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈಗ ಹೊಸದಾಗಿ ಮಳೆ ಆಶ್ರಿತಕ್ಕೆ ರೂ.6,800/-ಇದೆ. ನಾವು 13 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ನೀರಾವರಿಯದ್ದು 13,500 ರೂಪಾಯಿಗಳು ಇದೆ. ನಾವು 25 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಬಹು ವಾರ್ಷಿಕ ಬೆಳೆಗೆ 18 ಸಾವಿರ ರೂಪಾಯಿ ಇದೆ. ನಾವು 28 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ರಾಜಸ್ಥಾನ, ತಮಿಳುನಾಡು ಮತ್ತು ಆಂಧ್ರ ಪ್ರದೇಶಕ್ಕೆ ಪೋನ್ ಮಾಡಿ ಯಾವ ರೀತಿ ಕೊಡುತ್ತಿದ್ದಾರೆಂದು ನಮ್ಮ ಅಧಿಕಾರಿಗಳು ವಿಚಾರಣೆ ಮಾಡಿದ್ದಾರೆ. ಆದರೆ, ಹೆಚ್ಚುವರಿಯಾಗಿ ಎಲ್ಲೂ ಕೊಡುತ್ತಿಲ್ಲ. ನಾವು ಹೆಚ್ಚುವರಿಯಾಗಿ ಬೆಳೆ ಹಾನಿಯಾದಂತಹ ರೈತರಿಗೆ ಈ ತರಹದ ಒಂದು ಪರಿಹಾರ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ಮೊದಲು ಗಂಜಿ ಕೇಂದ್ರ ಇತ್ತು. ಈ ಗಂಜಿ ಕೇಂದ್ರದಲ್ಲಿ ಅನ್ನ-ಸಾಂಬರ್ ಅಥವಾ ಗಂಜಿ ಕೊಡುತ್ತಿದ್ದರು. ಈಗ ನಾನು ಸರ್ಕಾರದ ಆದೇಶ ಮಾಡಿದ್ದೇನೆ. ಬೆಳಗ್ಗೆ ಉಪಹಾರಕ್ಕೆ ಉಪ್ಪಿಟ್ಟು, ಚಿತ್ರಾನ್ನ, ಇಡ್ಲಿ, ದೋಸೆ ಕೊಡಬೇಕು. ಮಧ್ಯಾಹ್ನ ಊಟಕ್ಕೆ ಜೋಳದ ರೊಟ್ಟಿ, ಚಪಾತಿ, ಮೊಟ್ಟೆ, ಬಾಳೆಹಣ್ಣು ಕೊಡಬೇಕು. ಅದೇರೀತಿ ರಾತ್ರಿ ಊಟಕ್ಕೂ ಸಹ ಕೊಡಬೇಕು. ಅಂದರೆ, ದಿವಸಕ್ಕೆ ನಾಲ್ಕು ಬಾರಿ ಊಟವನ್ನು ಕೊಡಬೇಕು. ಅಷ್ಟಕ್ಕೂ ಸರ್ಕಾರವೇ ಹಣವನ್ನು ಕೊಡುತ್ತದೆ. ಅವರು ಗಂಜಿ ಕೇಂದ್ರಕ್ಕೆ ಬಂದು ವಾಪಸ್ ಹೋಗುವಂತಹ ಸಂದರ್ಭದಲ್ಲಿ ಬರಿ ಕೈಯಲ್ಲಿ ಹೋಗುತ್ತಾರೆಂದು ಅವರಿಗೆ dry kit ಅನ್ನು ಕೊಡತ್ತಿದ್ದೇವೆ. ಜೊತೆಗೆ ಅದರಲ್ಲಿ 10 ಕೆಜಿ ಅಕ್ಕಿ, 1 ಕೆಜಿ ತೊಗರಿ ಬೇಳೆ, ಸಕ್ಕರೆ, ಉಪ್ಪು, sunflower oil, ಖಾರದ ಪುಡಿ ಒಳಗೊಂಡಂತೆ ಈ ರೀತಿಯ item ಗಳ ಒಂದು kit ಅನ್ನು ಕೊಡುತ್ತಿದ್ದೇವೆ.

ಒಂದು ವೇಳೆ, ಅವರು ಕಾಳಜಿ ಕೇಂದ್ರಕ್ಕೆ ಬರುವುದಿಲ್ಲ, friend ಮನೆಗೆ ಹೋಗುತ್ತೇನೆಂದರೆ, ಅಂತಹವರಿಗೂ ಸಹ ಇಂತಹ ಒಂದು kit ಅನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಈ ಹಿಂದೆ ವಿಪತ್ತು ನಿರ್ವಹಣಾ ಯೋಜನೆಯಿಂದ ಬೆಳೆ ಹಾನಿ ಪರಿಹಾರವನ್ನು ಕೊಡಬೇಕಾದರೆ, ಸುಮಾರು 6 ರಿಂದ 8 ತಿಂಗಳ ಕಾಲ ತಡ ಆಗುತ್ತಿತ್ತು. ಆದರೆ, ಈಗ ಅದನ್ನು ಸುಮಾರು ಒಂದೂವರೆ ತಿಂಗಳಲ್ಲಿ ಕೊಡುತ್ತಿದ್ದೇವೆ. ಇತ್ತೀಚೆಗೆ ಆದಂತಹ ಬೆಳೆ ಹಾನಿಗೆ ಸುಮಾರು 618 ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಪರಿಹಾರವನ್ನು ಕಳೆದ ಒಂದೂವರೆ ತಿಂಗಳಲ್ಲಿ ಕೊಟ್ಟಿದ್ದೇವೆ. ಒಟ್ಟು ಇದುವರೆಗೂ 659.78 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಪರಿಹಾರವನ್ನು ನೇರವಾಗಿ ರೈತರ bank ಖಾತೆಗಳಿಗೆ ಹಾಕಿದ್ದೇವೆ. ಸುಮಾರು 10,06,000 ರೈತರಿಗೆ ಪರಿಹಾರವನ್ನು ಕೊಟ್ಟಿದ್ದೇವೆ. ಕಳೆದ 4 ವರ್ಷಗಳಿಂದ ಒಟ್ಟು 38,31,749 ರೈತರಿಗೆ 4,736.37 ಕೋಟಿ ರೂಪಾಯಿಗಳ input subsidy ಹಣವನ್ನು ಕೊಟ್ಟಿದ್ದೇವೆ. ಹಾಗಾಗಿ, ಸರ್ಕಾರ ಯಾವುದೇ ರೀತಿಯಿಂದ ರೈತರಿಗೆ ಅನ್ಯಾಯ ಮಾಡಿಲ್ಲ. ಎಷ್ಟು ಪರಿಹಾರ ಕೊಡಬೇಕಾಗಿತ್ತೋ, ಅದಕ್ಕಿಂತ ಹೆಚ್ಚಿನ ಪರಿಹಾರವನ್ನು ಕೊಟ್ಟಿದ್ದೇವೆ. ಕೊನೆಯದಾಗಿ, ಬೆಂಗಳೂರು ಮಹಾನಗರ ಪಾಲಿಕೆಗೂ ಕೂಡ storm water ....

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಷ್ಟನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ದಕ್ಷಿಣ ಕನ್ನಡಕ್ಕೆ ಹೋಗಿದ್ದೇವೆಂದು ಹೇಳಿದ್ದಾರೆ. ಕಳೆದ ಎರಡು ವರ್ಷಗಳ ಹಿಂದೆ ಅಲ್ಲಿ ಇದೇ ರೀತಿಯ ಅನಾಹುತಗಳು ಆದಂತಹ ಸಂದರ್ಭದಲ್ಲಿ 200 ಕೋಟಿ ರೂಪಾಯಿಗಳನ್ನು declare ಮಾಡಿದ್ದರು. ಆದರೆ, ಅಲ್ಲಿಗೆ ಎಷ್ಟು ಹಣವನ್ನು release ಮಾಡಿದ್ದಾರೆ? ಅಲ್ಲಿನ ಮನ್ನೂರು ಎಂಬ ಬೆಟ್ಟದ ಮೇಲೆ ಸುಮಾರು 200 ಮನೆಗಳು ಬಿದ್ದಿದ್ದವು. ಆದರೆ, ಇವತ್ತಿಗೂ ಸಹ ಒಂದು ಮನೆಯನ್ನು ಅಲ್ಲಿ ಕಟ್ಟಿಲ್ಲ. ಅಲ್ಲಿ ಇಬ್ಬರು ಸತ್ತು ಹೋಗಿದ್ದರು ಅವರಿಗೆ ತಲಾ 5 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದೀರಿ. ಆದ್ದರಿಂದ, ಹಣ ಕೊಟ್ಟಿದ್ದೀರಿ, ಹಣ ಇದೆ, ಅದು ಬೇರೆ ಪ್ರಶ್ನೆ. ಅಲ್ಲಿ ಇನ್ನೂ 20 ಮನೆಗಳಿಗೆ ಪರಿಹಾರ ಹೋಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತಹ ಜಿಲ್ಲೆ, ನಮ್ಮ ಜಿಲ್ಲೆಯಾಗಿದೆ. ಅಲ್ಲಿ ಅನಾಹುತಗಳು

ಆದಂತಹ ಸಂದರ್ಭದಲ್ಲಿ ಸರ್ಕಾರದಿಂದ 5 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದೆ. ಆದರೆ, ಅಲ್ಲಿನ ಭೂಮಿ ಸಮಸ್ಯೆ ಏನಾಗಿದೆ ಎಂದರೆ, ಅವರು ಇರುವಂತಹ ಸ್ಥಳದಲ್ಲಿ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಭೌಗೋಳಿಕವಾದ ಪರಿಸ್ಥಿತಿ ಮತ್ತು ವೈಜ್ಞಾನಿಕವಾದ ವರದಿಯು ಒಪ್ಪುವುದಿಲ್ಲ. ಅವರಿಗೆ ಹೊರಗಡೆ ಭೂಮಿ ಕೊಟ್ಟರೆ, ಅವರು ಹೋಗುತ್ತಿಲ್ಲ. ಹಾಗಾಗಿ, ಅದು ಜಿಜ್ಞಾಸೆಯಲ್ಲಿದೆ. ಅದನ್ನು ಯಾವುದಾದರೊಂದು ಹಂತಕ್ಕೆ ತರುತ್ತಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, 2 ವರ್ಷಗಳು ಆದವು. ಅದಕ್ಕಾಗಿ ಕೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಅವರ ಕಾಳಜಿ ಸರಿ ಇದೆ. ಒಂದೊಂದು ಸಾರಿ ಅನಿವಾರ್ಯವಾಗಿ ಜನರ ಮನವೊಲಿಸಲೇ ಬೇಕಾಗುತ್ತದೆ, ಹಾಗಾಗಿ, ವಿಳಂಬವಾಗಿದೆ ಅಷ್ಟೇ.

**ಸಭಾಪತಿಯವರು:-** ಮಾನ್ಯ ಕಂದಾಯ ಸಚಿವರು ತಾವು ತಮ್ಮ ಉತ್ತರವನ್ನು ನೀಡುವುದನ್ನು ಮುಂದುವರಿಸಿ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರ ಪಾಲಿಕೆಗೆ storm water drain ಗೆ ಸಂಬಂಧಪಟ್ಟಂತೆ, 300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಮೊದಲು 1600 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈಗ ಅದರ tender ಆಗಿದೆ. ರಸ್ತೆಗಳಿಗಾಗಿ 300 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಹಿಂದೆ 6,800 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದು ಸಹ ಟೆಂಡರ್ ಆಗಿದೆ. ಮಳೆ ಬಂದಿದ್ದರಿಂದ ಮಾಡುವುದಕ್ಕೆ ಅವಕಾಶ ಆಗಲಿಲ್ಲ. PWD ಗೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. RDPR ಇಲಾಖೆಯ ರಸ್ತೆಗೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. M.I. (Minor Irrigation) ಮತ್ತು RDPR ಇಲಾಖೆಗಳ ಕೆರೆಗಳಿಗೆ 200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇಷ್ಟು ಹಣ ಸರ್ಕಾರದ ವತಿಯಿಂದ ಪರಿಹಾರ ಕೊಡುವಂಥದ್ದು ಆಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ವಿಷಯಕ್ಕೆ ಬಂದರೆ ಹೆಚ್ಚಿಗೆ ಮಾತನಾಡುವುದು ಬೇಕಾಗಿಲ್ಲ. ಮೊದಲು ಉತ್ತರಹಳ್ಳಿ

ಕ್ಷೇತ್ರ ಮಾನ್ಯ ಸಚಿವರದ್ದು, ಈಗ ಅದು ಒಟ್ಟು 10 ಕ್ಷೇತ್ರಗಳು ಆಗಿವೆ. ವರ್ತೂರು ಮತ್ತು ಮಹಾದೇವಪುರವನ್ನು ಬಿಟ್ಟರೆ, ಬೊಮ್ಮನಹಳ್ಳಿ, ಆರ್.ಆರ್.ನಗರ ಎಲ್ಲವೂ ಮಾನ್ಯ ಸಚಿವರ ಕ್ಷೇತ್ರಕ್ಕೆ ಸೇರಿದೆ. ಅಲ್ಲಿ ಇಷ್ಟೊಂದು ಅನಾಹುತಗಳು ಆಗಿವೆ. ಇದಕ್ಕೆ ಏನು ಮಾಡುತ್ತಾರೆ ಎನ್ನುವುದನ್ನು ಹೇಳಬೇಕು? ಮಾನ್ಯ ಸಚಿವರು ಅಲ್ಲಿ ಮುನಿರಾಜು ಎಂಬುವವರ ಹೆಸರನ್ನು ಹೇಳಿದರು. ಒತ್ತುವರಿ ಬಗ್ಗೆ ಎಲ್ಲಾ, ಅಲ್ಲಿ ಪೂರ್ತಿ ಸಾಮ್ರಾಜ್ಯ ಮಾನ್ಯ ಸಚಿವರದ್ದು ಇತ್ತು. ಈಗಲೂ ಮಾನ್ಯ ಸಚಿವರು ನಡೆಸುತ್ತಿದ್ದಾರೆ. ಪದ್ಮನಾಭನಗರ, ಆರ್.ಆರ್.ನಗರ ಅಂತ ಎಲ್ಲಾ, ಇಲ್ಲಿ ಆಗುವಂತಹ ಅನಾಹುತಗಳನ್ನು ತಡೆಯುವುದಕ್ಕೆ ಏನು ಮಾಡುತ್ತಿದ್ದಾರೆಂದು ಹೇಳಬೇಕು? ಏಕೆಂದರೆ, ಮಾನ್ಯ ಸಚಿವರು ರಾಜ್ಯದಲ್ಲಿ ಏನೇನೂ ಆಗಿದೆ ಎಂದು ಹೇಳಿದ್ದಾರೆ. ಅದರಂತೆ, ನಾನೂ ಸಹ, ಎಷ್ಟು ಕಿಲೋಮೀಟರ್ ಹೋಗಿದೆ, ಎಷ್ಟು ವಿದ್ಯುತ್ ಕಂಬ ಹೋಗಿದೆ, ಎಷ್ಟು ಸೇತುವೆಗಳು ಹೋಗಿವೆ ಎಂಬುದನ್ನು ಹೇಳಿದ್ದೇನೆ. ಮೊದಲು ಮತ್ತು ಈಗಲೂ ಸಹ ಬೆಂಗಳೂರು ನಗರದಲ್ಲಿ ಕ್ಷೇತ್ರ ಮಾನ್ಯ ಸಚಿವರದ್ದು ಆಗಿರುವುದರಿಂದ, ಅದಕ್ಕೆ ಯಾವ ರೀತಿ ಪರಿಹಾರ ಎಂಬುದನ್ನು ಹೇಳಬೇಕು? ಪರಿಹಾರವನ್ನು ಕೊಟ್ಟಿದ್ದಾರೆ, ಆದರೆ, ಕೆಲವು ಪರಿಹಾರಗಳನ್ನು ಹೊಸದಾಗಿ ಕೊಡಬೇಕಾಗುತ್ತದೆ. ಪಾತ್ರೆ, refrigerator, scooter, ಇವುಗಳನ್ನೆಲ್ಲಾ ಮಳೆಯಲ್ಲಿ ಹೊಡೆದುಕೊಂಡು ಹೋಗಿದೆ. ಹಾಗಾಗಿ, ಇದಕ್ಕೆ ಏನು ಪರಿಹಾರ ಕೊಡುತ್ತಾರೆ ಎಂಬುದನ್ನು ಹೇಳಬೇಕು?

**(ಮುಂದು.,)**

**(1011) 22-09-2022 (6.30) ಎಂ.ವಿ-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು...):-**

ಏಕೆಂದರೆ, ಬೇರೆ ಯಾವ ಕ್ಷೇತ್ರದಲ್ಲೂ ಸಹ ಈ ರೀತಿ ಬರುವುದಿಲ್ಲ. ಗುಡಿಸಲು ಪ್ರದೇಶಗಳನ್ನು ಬಿಟ್ಟರೆ, ಬೇರೆ ಕಡೆ ಪ್ರವಾಹದಿಂದ ಈ ರೀತಿಯ effect ಆಗುವುದಿಲ್ಲ. ಆ ಭಾಗದಲ್ಲಿ ಈ ರೀತಿಯಾಗುವುದಕ್ಕೆ ಕಾರಣವೇನು ಎಂಬುದನ್ನು ಸ್ವಲ್ಪ ದಯವಿಟ್ಟು ಹೇಳಬೇಕು.

**ಶ್ರೀ ಆರ್. ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ತಿಳಿಸಿದ್ದಾರೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡುತ್ತಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ನಾನು ಸ್ವಲ್ಪ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಎಸ್.ರವಿಯವರೆ, ಮಾನ್ಯ ಸಚಿವರು ತಮ್ಮ ಉತ್ತರವನ್ನು ಪೂರ್ತಿ ಮುಗಿಸಿದ ಮೇಲೆ ಏನಾದರೂ ತಮ್ಮ ಆಕ್ಷೇಪಣೆಗಳು ಇದ್ದರೆ, ದಯವಿಟ್ಟು ಕೇಳಿ. ಈ ರೀತಿ ಮಧ್ಯೆ ಮಧ್ಯೆ ಎದ್ದು ಮಾತನಾಡುವುದರಿಂದ ತುಂಬಾ ತೊಂದರೆಯಾಗುತ್ತದೆ. Let him complete.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಏಕೆಂದರೆ, ಈಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏನೇನು ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಆದರೆ, ಏನೇನು ಸಮಸ್ಯೆಗಳಿವೆ ಎಂಬುದಕ್ಕೆ ಉತ್ತರ ಹೇಳಿಲ್ಲ. ಅದಕ್ಕೆ ಅವರು ಮುಂದೆ ಹೇಳುವಂತಹ ಉತ್ತರದಲ್ಲಿ ಅದನ್ನು ತಿಳಿಸಲಿ ಎಂದು ಹೇಳುತ್ತಿದ್ದೇವೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈಗ ಪ್ರವಾಹದಿಂದ ನೆರೆಹಾನಿಯಾಗಿರುವುದರ ಬಗ್ಗೆ ಮಾತನಾಡುತ್ತಿದ್ದಾರೆ. ರಾಮನಗರ ಜಿಲ್ಲೆಯಲ್ಲಿ ಎಂದೂ ಕಂಡು ಕೇಳರಿಯದಂತಹ ರೀತಿಯಲ್ಲಿ ಮಳೆ ಬಿತ್ತು. ಆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಸ್ಪಂದಿಸಿದರು, ರಾಮನಗರ ಪಟ್ಟಣದಲ್ಲಿ ನೆರೆಯಿಂದ ನೀರು ನುಗ್ಗಿತು. ಆಗ ಮಾನ್ಯ ಮುಖ್ಯಮಂತ್ರಿಗಳು ಸ್ಥಳಕ್ಕೆ ಆಗಮಿಸಿ, ಸ್ಥಳ ಪರಿಶೀಲನೆ ಮಾಡಿದರು. ಈಗ ಅಲ್ಲಿನ ಮನೆಗಳಿಗೆ ಹತ್ತು ಸಾವಿರ ರೂಪಾಯಿಗಳನ್ನು ನೀಡಿದ್ದಾರೆ. ಅವರಿಗೆ ಇನ್ನು ಏನೇನು ಸೌಲಭ್ಯ ನೀಡಿದ್ದಾರೆ? ಮತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ?

Filatures ಎಲ್ಲಾ ಮುಳುಗಡೆಯಾಗಿಬಿಟ್ಟಿದೆ. ಅವರಿಗೆ ಏನು ವ್ಯವಸ್ಥೆ ಮಾಡಿದ್ದಾರೆ ಮತ್ತು ಏನು ಮಾಡುತ್ತಾರೆ? ಇಲ್ಲಿಯವರೆಗೆ ಕೇವಲ ಹತ್ತು ಸಾವಿರ ರೂಪಾಯಿಗಳನ್ನು ಮಾತ್ರ ನೀಡಲಾಗಿದೆ. ಮಾನ್ಯ ಮುಖ್ಯಮಂತ್ರಿಗಳೆ ಖುದ್ದಾಗಿ ಎರಡು-ಮೂರು ಗಂಟೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಅದನ್ನು ನೋಡಿಕೊಂಡು ಹೋಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದು ಹೋಗಿರುವುದರಿಂದ ಜನರು ತಮಗೆ ಎಲ್ಲೋ ಒಂದು ಕಡೆ ನ್ಯಾಯ ಮತ್ತು ಪರಿಹಾರ ಸಿಗುತ್ತದೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಜನರ ಆ ನಿರೀಕ್ಷೆ ಸುಳ್ಳಾಗಬಾರದು ಅಲ್ಲವೇ? ಆದುದರಿಂದ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುವುದರಿಂದ, ದಯಮಾಡಿ ಮಾನ್ಯ ಕಂದಾಯ ಸಚಿವರು ಸಮಸ್ಯೆಗೆ ಏನು ಮಾಡುತ್ತಾರೆ ಮತ್ತು ಏನು ಪರಿಹಾರ ನೀಡುತ್ತಾರೆಂದು ಒಂದು ಸ್ಪಷ್ಟವಾದ ಉತ್ತರ ನೀಡಲಿ. ಅದೇ ರೀತಿ ಏನನ್ನು ಕೊಡುತ್ತಾರೆಂದು ದಯಮಾಡಿ ಹೇಳಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ಬೆಂಗಳೂರಿನ ಮಹದೇವಪುರ ಮತ್ತು ಬೊಮ್ಮನಹಳ್ಳಿಯ ಭಾಗದಲ್ಲಿ ಅತೀ ಹೆಚ್ಚು ಮಳೆ ಬಂದಿದೆ, ವಿಶೇಷವಾಗಿ ಇದೇ ಬೇರೆ ರೀತಿಯಲ್ಲಿದ್ದು, ಅಲ್ಲಿ ಏನು ಮಾಡುತ್ತಾರೆ? ಅದು ಏಕೆ ಆಯಿತು? ಮತ್ತು ಅದಕ್ಕೆ ಏನು ಶಾಶ್ವತವಾದ ಪರಿಹಾರ ಮಾಡಬಹುದು ಎಂದು ಕೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ರಾಮನಗರ ಜಿಲ್ಲೆಯ ಬಗ್ಗೆ ಕೇಳಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ರಾಮನಗರ ಜಿಲ್ಲೆಯ ಬಗ್ಗೆ ಹೇಳಲೇಬೇಕಾಗುತ್ತದೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಅದರ ತೀವ್ರತೆ ಮತ್ತು ಮನೆಗಳಗೆ ಆಗಿರುವಂತಹ ಹಾನಿಯನ್ನು ತಮ್ಮ ಕಣ್ಣಿನಿಂದ ನೋಡಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಹೌದು ನಾನು ನೋಡಿದ್ದೇನೆ. ಈಗ ರಾಮನಗರ ಜಿಲ್ಲೆ ಎಂದರೆ ಆಕರ್ಷಕವಾಗಿರುವಂತಹ ಒಂದು ಸ್ಥಳ. ಮಾನ್ಯ ಮರಿತಿಬ್ಬೇಗೌಡರೆ, ಪ್ರಥಮ ಬಾರಿಗೆ ರಾಮನಗರ ಜಿಲ್ಲೆಗೆ ಜಿದ್ದಾಜಿದ್ದಿ ಪ್ರಾರಂಭವಾಗಿದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ರಾಮನಗರ ಜಿಲ್ಲೆಯಿಂದ ದಿವಂಗತ ಕೆಂಗಲ್ ಹನುಮಂತಯ್ಯನವರು, ಭಾರತದ ಮಾನ್ಯ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ.ದೇವೇಗೌಡರು ಮತ್ತು ಮಾನ್ಯ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಮೂರು ಜನರು ಮುಖ್ಯಮಂತ್ರಿಗಳಾಗಿದ್ದಾರೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ದಿವಂಗತ ರಾಮಕೃಷ್ಣ ಹೆಗ್ಗಡೆಯವರನ್ನು ಸಹ ಸೇರಿಸಿಕೊಂಡರೆ ನಾಲ್ಕು ಜನ ಮುಖ್ಯಮಂತ್ರಿಗಳಾಗುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅವರದು ಕನಕಪುರ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೆ, ಆದರೆ ಅದು ರಾಮನಗರ ಜಿಲ್ಲೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಜಿಲ್ಲಾ ರಾಜಕಾರಣವೆಂದರೆ ಮತ್ತೆ ಬೇರೆ ಬರುತ್ತದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಆಗ ಘಟಾನುಘಟಿಗಳೇ ಬರುತ್ತಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಯಾಗಬೇಕು ಎನ್ನುವವರೆಲ್ಲರೂ ಸಹ ಮುಂದಿನ ಚುನಾವಣೆಯಲ್ಲಿ ರಾಮನಗರ ಜಿಲ್ಲೆಯಲ್ಲಿಯೇ ಚುನಾವಣೆಗೆ ನಿಂತುಕೊಳ್ಳಲಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಒಂದು ಬಾರಿ ಪ್ರಯತ್ನಿಸಲಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಮಸ್ಕಾರ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ರಾಮನಗರ ಜಿಲ್ಲೆ ಎಲ್ಲರನ್ನು ಅಷ್ಟು ಸುಲಭವಾಗಿ ಸ್ವೀಕಾರ ಮಾಡುವುದಿಲ್ಲ. ಕೆಲವರನ್ನು ಮಾತ್ರ ಸ್ವೀಕಾರ ಮಾಡುತ್ತದೆ. ಅಲ್ಲಿ ಕೆಲವರಿಗೆ ಮಾತ್ರ entry ಇದೆ. ಮಾನ್ಯ ಮರಿತಿಬ್ಬೇಗೌಡರೆ ತಾವು ಪ್ರಯತ್ನಿಸುವುದು ಬೇಡ ಮತ್ತೆ ಇಲ್ಲಿ ಯಾರು ಪ್ರಯತ್ನಿಸುವುದು ಬೇಡ. ಅಲ್ಲಿ ಚುನಾವಣೆಗೆ ನಿಂತವರೆಲ್ಲರೂ ಮುಖ್ಯಮಂತ್ರಿಯಾಗುತ್ತಾರೆಂದು ತಿಳಿದುಕೊಂಡು, ಎಂ.ಎಲ್.ಎ. ಆಗದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗುವುದು ಬೇಡ. ಮಹದೇವಪುರ ಮತ್ತು ಬೊಮ್ಮನಹಳ್ಳಿಯ ಬಗ್ಗೆ ವಿಧಾನ ಸಭೆಯಲ್ಲಿ ಬಹಳ ವಿವರವಾಗಿ ತಿಳಿಸಿದ್ದೇನೆ. ಬೆಂಗಳೂರು ನಗರದ ಒಟ್ಟು drainage system ಅನ್ನು ತೆಗೆದುಕೊಂಡಾಗ, ಬಹಳ ಹಿಂದೆ ಮಾಡಿರುವಂತಹ ರಾಜಕಾಲುವೆಗಳು. ಮತ್ತೆ ಬೆಂಗಳೂರು ನಗರ ಬೇರೆ ನಗರ ಪ್ರದೇಶದಂತೆ ವಿಭಿನ್ನವಾಗಿದ್ದು, ಬೆಂಗಳೂರು ನಗರ ಕೆರೆ ಆಧಾರಿತವಾದ ನೀರಿನ ವ್ಯವಸ್ಥೆ ಇರುವಂಥದ್ದು. ವೃಷಭಾವತಿ ಕಣಿವೆ ಮತ್ತು ಅರ್ಕಾವತಿ ಕಣಿವೆ ಹಾಗೂ ಚಲ್ಲಘಟ್ಟ ಕೆರೆ ಮತ್ತು ಹೆಬ್ಬಾಳ ಕೆರೆ. ಇದಕ್ಕೆ ಸಂಬಂಧಪಟ್ಟಂತೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಬಿ.ಕೆ.ಹರಿಪ್ರಸಾದ್‌ರವರು ನಗುತ್ತಿದ್ದಾರೆ; ಈಗ ಬೆಂಗಳೂರು ನಗರ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಹೀಗಾಗಿ, ಮೊದಲಿನ ರಾಜಕಾಲುವೆಗಳ ಸ್ವರೂಪ ಮತ್ತು ಅದರ ಉದ್ದೇಶಗಳು ಸಂಪೂರ್ಣವಾಗಿ ಬದಲಾಗಿವೆ. ಈಗ ರಾಜಕಾಲುವೆಯ carrying capacity ಏನಿದೆ, ಇವತ್ತು ಅದರ ಮೇಲೆ ಬರುವಂತಹ water carrying load ಏನಿದೆ, ಅದು ಜಾಸ್ತಿಯಾಗಿದೆ. ಇದಕ್ಕೆ ಕಾರಣ ಕೇವಲ ಮಳೆ ಎಂದು ಹೇಳುವುದಿಲ್ಲ. ಹಿಂದಿನ ಐವತ್ತು ವರ್ಷದಲ್ಲಿ ಅತೀ ಹೆಚ್ಚು ಮಳೆ ಬಿದ್ದಿದೆ. ಅಲ್ಪಾವಧಿಯಲ್ಲಿ ಇಷ್ಟು ದೊಡ್ಡ ಪ್ರಮಾಣದ ಮಳೆಗೆ, ಎರಡು ನೂರು ಮತ್ತು ಮೂರು ನೂರು ವರ್ಷಗಳ ಹಿಂದೆ ಆ canal ಗಳನ್ನು ಯಾರು design ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನು ಎರಡು ನೂರು ವರ್ಷದ ಮುಂದೆ ಏನಾಗುತ್ತದೆಂದು ಯಾರು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನೆಯದಾಗಿ ಈ ರಾಜಕಾಲುವೆಯಲ್ಲಿ drainage water ಮತ್ತು ನಾವು use ಮಾಡಿದಂತಹ ನೀರು ಹೋಗುತ್ತದೆ. ಈಗ ಮಳೆಗಾಲ ಇಲ್ಲದಿರುವಂತಹ ಕಾಲದಲ್ಲೂ ಸಹ ರಾಜಕಾಲುವೆಯಲ್ಲಿ ನಿರಂತರವಾಗಿ ನೀರು ಹರಿಯುತ್ತದೆ. ಈ ಬಾರಿ ವಿಶೇಷವಾಗಿ

ಏನಾಗಿದೆ ಎಂದರೆ, ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಮಳೆಯಾಗಿರುವುದರಿಂದ underground water ಸಂಪೂರ್ಣ charge ಆಗಿದೆ. ಮತ್ತೆ ಕೆರೆಗಳೆಲ್ಲಾ ತುಂಬಿವೆ. ಅದೇ ರೀತಿ ರಾಜ್ಯದಲ್ಲಿ ಶೇಕಡಾ ೮೦ರಷ್ಟು ಕೆರೆಗಳು ತುಂಬಿವೆ. ಬೆಂಗಳೂರು ನಗರದಲ್ಲಿ ನಿರಂತರವಾಗಿ ಮಳೆಯಾಗಿರುವುದರಿಂದ ಎಲ್ಲಾ ಕೆರೆಗಳು ಸಂಪೂರ್ಣ ತುಂಬಿ ಹರಿಯುತ್ತಿವೆ. ಬೆಂಗಳೂರು ನಗರದ ಕೆರೆಗಳಲ್ಲಿ 3-4 ಕೆರೆಗಳನ್ನು ಬಿಟ್ಟರೆ, sluice gate ಇಲ್ಲ. ಈಗ ನಮ್ಮ ಸ್ಯಾಂಕಿ ಟ್ಯಾಂಕ್ ಮತ್ತು ಹಲಸೂರು ಟ್ಯಾಂಕ್‌ಗಳಿವೆ. ಅಲ್ಲೂ ಸಹ ಮಳೆಯಾಗುತ್ತದೆ. ಆದರೂ ಸಹ ಅಲ್ಲಿ ಏಕೆ ಪ್ರವಾಹವಾಗುವುದಿಲ್ಲ. ಆದರೆ, ಅಲ್ಲಿ ಸಿಸ್ಟಮ್ಸ್ ಇದೆ. ಅಲ್ಲಿ sluice gate ಇದೆ. ಅಲ್ಲಿ ಕೆಳಗಡೆ ಹೋಗುವುದಕ್ಕೆ canal ಗಳಿವೆ. ಅಲ್ಲೂ ಸಹ ಸುಮಾರು ತಗ್ಗು ಪ್ರದೇಶವಿದೆ. ಆದರೂ ಕೂಡ ಆ ಸಿಸ್ಟಮ್ಸ್ ವರ್ಕ್ ಆಗುತ್ತಿದೆ. ಬೆಂಗಳೂರು ಮಹಾನಗರ ಪಾಲಿಕೆ ಈಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿದೆ. ಮೊದಲು ಬೆಂಗಳೂರಿಗೆ ಏಳು ಸಿ.ಎಂ.ಸಿ.ಗಳನ್ನು ಸೇರಿಸಿಕೊಂಡರು. ಅಲ್ಲಿನ drainage ವ್ಯವಸ್ಥೆಗಳು ಇತ್ತೀಚೆಗೆ ಕೆಲವು ಆಗುತ್ತಿವೆ. ಅದರಲ್ಲಿ ಇನ್ನು ಕೆಲವು ಕಡೆಗಳಲ್ಲಿ ಆಗಬೇಕು. ಆ ನಂತರ ಬೆಂಗಳೂರಿಗೆ 110 ಹಳ್ಳಿಗಳನ್ನು ಸೇರ್ಪಡೆ ಮಾಡಿಕೊಂಡರು. ಆ 110 ಹಳ್ಳಿಗಳನ್ನು ಸೇರ್ಪಡೆ ಮಾಡಿಕೊಂಡ ಮೇಲೆ ಹಳ್ಳಿಗಳ ಹಳೆಯ ಟ್ಯಾಂಕ್‌ಗಳೆಲ್ಲಾ ಇದರಲ್ಲಿ ಸೇರಿಕೊಂಡಿದೆ. ಉದಾಹರಣೆಗೆ; ಮಹಾದೇವಪುರ ಒಂದರಲ್ಲೇ ಸುಮಾರು ೬೯ ಟ್ಯಾಂಕ್‌ಗಳಿವೆ. ಆ ಎಲ್ಲವೂ ಸಹ ತುಂಬಿ ಹರಿಯುತ್ತವೆ. ಮತ್ತೆ ಅವುಗಳೆಲ್ಲಾ interconnect ಇರುವುದರಿಂದ, ಅವುಗಳು ತುಂಬಿ ಹರಿದು, ಆ ನೀರು ಇನ್ನೊಂದು ಟ್ಯಾಂಕ್‌ಗೆ ಹೋಗುತ್ತದೆ. ಅದು ತುಂಬಿ ಹರಿದು ಮತ್ತೊಂದು ಟ್ಯಾಂಕ್‌ಗೆ ಹೋಗುತ್ತದೆ. ಕೊನೆಗೆ ಅದು ದಕ್ಷಿಣ ಪಿನಾಕಿನಿಯನ್ನು ಸೇರುತ್ತದೆ. ಈಗ ವರ್ತೂರು ಕೆರೆ ಮತ್ತು ಬೆಳ್ಳಂದೂರು ಕೆರೆ ಮೇಜರ್ ಆಗಿವೆ. ಮೊದಲು ಹಳ್ಳಿಗಳು ಇದ್ದಾಗ, ಅಲ್ಲಿ ವ್ಯವಸಾಯ ಮಾಡುತ್ತಿದ್ದರು. ಹೀಗಾಗಿ ಅವುಗಳೆಲ್ಲಾ agricultural canal ನಲ್ಲಿ ಹೋಗುತ್ತಿತ್ತು. ಆಗ natural drainage ಇತ್ತು. ಈಗ ಅಲ್ಲೆಲ್ಲಾ ಮನೆಗಳು ಮತ್ತು ಫ್ಲಾಟ್‌ಗಳು ನಿರ್ಮಾಣವಾಗಿವೆ. ಆದುದರಿಂದ ಅಲ್ಲಿ ನೀರು ಹೋಗುವುದಕ್ಕೆ ಜಾಗವಿಲ್ಲ. ಆದುದರಿಂದ ನೀರು ಆ ಕಡೆಯಿಂದಲೇ ಬರಬೇಕಾಗುತ್ತದೆ. ಇದು ಒಂದು ಕಾರಣವಾದರೆ, ಅದರ ಕಣಿವೆ ಪ್ರದೇಶ ಹೇಗಿದೆ ಎಂದರೆ, ಈಗ ಶಿವಾಜಿನಗರ ಮತ್ತು

ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಮಳೆಯಾದರೆ ಮಳೆಯ ನೀರು ಅಲ್ಲಿಯವರೆಗೂ ಸಹ ಹೋಗುತ್ತದೆ. ಇದು ಮುಖ್ಯವಾಗಿ ಇರುವಂಥದ್ದು. ಈಗ ಬೆಂಗಳೂರು ನಗರ ಬಹಳ ಬೆಳೆದುಬಿಟ್ಟಿದೆ. ಇದಕ್ಕೆ ಪರಿಹಾರವೇನು ಎಂದರೆ, natural drainage ಏನಿದೆ ಮತ್ತು ರಾಜಕಾಲುವೆಗಳು ಏನಿವೆ ಮತ್ತು ನಾವು ಏನು primary drain ಎಂದು ಕರೆಯುತ್ತೇವೆ, ಅವುಗಳನ್ನು ಮೂಲಸ್ವರೂಪಕ್ಕೆ ವಾಪಸ್ಸು ತರಬೇಕು. ಅದು ಅತಿಕ್ರಮಣವಾಗಿರಲಿ, ಮತ್ತೊಂದಾಗಿರಲಿ, ಅದೆಲ್ಲವನ್ನು ಸಹ ತೆಗೆದು ಕನಿಷ್ಟಪಕ್ಷ ಅಷ್ಟನ್ನಾದರೂ ಸಹ ಅಲ್ಲಿ ಮಾಡಲೇಬೇಕು. ಇಷ್ಟು ದೊಡ್ಡ ಪ್ರಮಾಣದ ಮಳೆ ಬಂದಾಗ ಮತ್ತು ಸಾಧಾರಣ ಮಳೆ ಬಂದಾಗ ನೀರು ಹೊರಗೆ ಹೋಗಬೇಕು. ಸಾಧಾರಣ ಮಳೆಗೆ ಪ್ರವಾಹವಾಗಬಾರದು. ನಾವು ಆ ರೀತಿ ಮಾಡಿಸುವುದಕ್ಕೆ ತೀರ್ಮಾನ ಮಾಡಿದ್ದೇವೆ. ಮತ್ತೆ ಎಲ್ಲಾ ಕೆರೆಗಳಿಗೂ sluice gate ಗಳನ್ನು ಹಾಕುವುದಕ್ಕೆ ತೀರ್ಮಾನ ಮಾಡಿದ್ದೇವೆ. ಈ sluice gate ಗಳನ್ನು ಹಾಕಿದರೆ ಏನಾಗುತ್ತದೆ ಎಂದರೆ, ಈಗ ಬೇಸಿಗೆ ಕಾಲದಲ್ಲಿ ನೀರನ್ನು ಹಿಡಿದಿಟ್ಟುಕೊಂಡು, ಬೇಸಿಗೆಯ ಕೊನೆಯಲ್ಲಿ ನೀರನ್ನು ಬಿಟ್ಟು, ಕೆರೆಯನ್ನು ಅರ್ಧದಷ್ಟು ಬರಿದು ಮಾಡಿದರೆ, ಮಳೆಗಾಲ ಬಂದಾಗ ಅಷ್ಟು ಸಾಮರ್ಥ್ಯದ ನೀರನ್ನು ಪುನಃ ಸಂಗ್ರಹಿಸಬಹುದು. ಇಲ್ಲದಿದ್ದರೆ, ಈಗಾಗಲೇ ತುಂಬಿರುವಂತಹ ಕೆರೆಗೆ ಮತ್ತೆ ಮಳೆ ಬಿದ್ದರೆ, ತಕ್ಷಣ ನೀರು ಹೊರಗೆ ಬರುತ್ತದೆ. Tanks are flood carriers ಎಂದು internationally approach ಇರುವುದು. But, they are not carrying flood instead they are creating flood. ಆದುದರಿಂದ ಟ್ಯಾಂಕ್‌ನ holding ಸಾಮರ್ಥ್ಯವನ್ನು ಹೆಚ್ಚಿಗೆ ಮಾಡಬೇಕು ಮತ್ತು sluice gate ಹಾಕಬೇಕು. ಮಳೆಗಾಲ ಪ್ರಾರಂಭವಾಗುವುದಕ್ಕಿಂತ ಮುಂಚೆ ಸ್ವಲ್ಪ ನೀರನ್ನು ಹೊರಗೆ ಬಿಟ್ಟು, ಅದರ ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡಿ, ನೀರನ್ನು ಸಂಗ್ರಹ ಮಾಡುವಂತಹ ಪ್ರಯತ್ನ ಮಾಡಬೇಕು. ನೀರು ಅಲ್ಲಿಂದ ಹೊರಗೆ ಬರುವಷ್ಟರಲ್ಲಿ ರಾಜಕಾಲುವೆಗಳನ್ನು ಸಂಪೂರ್ಣ ರೆಡಿ ಮಾಡಿರಬೇಕು. ಅದು ಅಲ್ಲದೆ ಹೊಸ ಕಾಲುವೆಗಳನ್ನು ಮಾಡುವಂತಹ ಅವಶ್ಯಕತೆಯೂ ಇದೆ.

( ಮುಂದು...)

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1012) 22.09.2022 06.40 LL-KS **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು...):-**

ಬೆಂಗಳೂರಿನಲ್ಲಿ ರಾಜಕಾಲುವೆ ಇರುವಂಥದ್ದು, ಈಗ ಬಿ.ಬಿ.ಎಂ.ಪಿ. ಹೆಚ್ಚು ಕಡಿಮೆ ಆ ಬಾರ್ಡರ್‌ನಲ್ಲಿರುತ್ತದೆ. ಮುಂದೆ ಬಿ.ಡಿ.ಎ., ಬಿ.ಎಂ.ಆರ್.ಡಿ.ಎ. ಹಾಗೂ ಆ ನಂತರ ಗ್ರಾಮ ಪಂಚಾಯಿತಿಗಳು ಬರುತ್ತವೆ. ಕೊನೆಗೆ, ನಾವು ಅದನ್ನು ದಕ್ಷಿಣ ಪಿನಾಕಿನಿ ನದಿಗೆ ಬಿಟ್ಟು, ಅಲ್ಲಿಂದ ಕಾವೇರಿ ನದಿಗೆ ಹೋಗುವಂತಹ ವ್ಯವಸ್ಥೆ ಮಾಡಬೇಕು. ಹೀಗಾಗಿ, ನಗರ ಪ್ರದೇಶದ ನೀರು ಹಳ್ಳಿಗಳಿಗೆ ಹೋಗುವವರೆಗೂ ಕಂಪ್ಲೀಟ್ ಆಗಿ ಒಳಚರಂಡಿ ವ್ಯವಸ್ಥೆ ಮಾಡಬೇಕು. ಅದಕ್ಕೆ ವೆಚ್ಚ ಕೂಡ ಜಾಸ್ತಿಯಾಗುತ್ತದೆ ಮತ್ತು ಅದಕ್ಕೆ ಹೆಚ್ಚು ಸಮಯ ಕೂಡ ಬೇಕಾಗುತ್ತದೆ. ಆದರೆ, ಸದ್ಯಕ್ಕೆ ನಗರ ಪ್ರದೇಶದ ಜನರಿಗೆ ತೊಂದರೆಯಾಗಬಾರದೆಂಬ ಕಾರಣದಿಂದ ಒತ್ತುವರಿಯಾದಂತಹ ರಾಜಕಾಲುವೆಯನ್ನು ಅಭಿವೃದ್ಧಿಪಡಿಸುವುದಕ್ಕೆ ನಾವು ಈಗಾಗಲೇ ರೂ.1,617.00 ಕೋಟಿ ರೂಪಾಯಿ ಕೊಟ್ಟಿರುತ್ತೇವೆ. ಈಗಾಗಲೇ ಕೆಲವು ರಾಜಕಾಲುವೆಗಳನ್ನು ಅಲ್ಲಿ ತೆಗೆದುಕೊಂಡಿರುತ್ತೇವೆ. ಮೊನ್ನೆಯ ದಿವಸ ನಾನು 300 ಕೋಟಿ ರೂಪಾಯಿ ಅನುದಾನವನ್ನು ಬಿಡುಗಡೆ ಮಾಡಿರುತ್ತೇನೆ. ಬೊಮ್ಮನಹಳ್ಳಿ, ಮಹದೇವಪುರ ಮತ್ತು ಬೇರೆ ಬೇರೆ ಕಡೆಗಳಲ್ಲಿ ಅಂದರೆ, ತಕ್ಷಣ ಎಲ್ಲೆಲ್ಲಿ ರಾಜಕಾಲುವೆ ಅವಶ್ಯಕತೆ ಇದೆ, ಹೆಚ್ಚಿನ ಆದ್ಯತೆಯ ಮೇರೆಗೆ ಅದನ್ನು ತೆಗೆದುಕೊಳ್ಳುವುದಕ್ಕೆ 130 ಕಿಲೋಮೀಟರ್‌ಗಿಂತಲೂ ಹೆಚ್ಚು ರಾಜಕಾಲುವೆಯನ್ನು ಮಾಡುತ್ತಿದ್ದೇವೆ. ಹಾಗಾಗಿ, ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಅಲ್ಲಿ ಕೊಟ್ಟು, ಆ ರಾಜಕಾಲುವೆಗಳನ್ನು ಮಾಡುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ರಾಜಕಾಲುವೆ ವಿಚಾರವಾಗಿ ಮಾತನಾಡುತ್ತಾ, ಎಲ್ಲಾ ಕೆರೆಗಳು ಓವರ್ ಫ್ಲೋ ಆಗಿದೆ. ಇನ್ನು ಕೆಲವು ಕೆರೆಗಳಿಗೆ sewage ಇದೆಯೆಂದು ಹೇಳಿ, ಸ್ಯಾಂಕಿ ಕೆರೆ ಮತ್ತು ಹಲಸೂರು ಕೆರೆಯನ್ನು ಕೋಟ್ ಮಾಡಿದರು. ಈಗ ಇರುವಂತಹ ಬಸ್ ನಿಲ್ದಾಣ, ಅದು ಕೂಡ ಈ ಮೊದಲು

ಸಂಪಂಗಿ ಕೆರೆಯಾಗಿತ್ತು. ಕೆಂಪಾಬುದಿ ಕೆರೆ ಸಹ ಮೊದಲು ಕೆರೆಯಾಗಿತ್ತು. ಈ ಬಗ್ಗೆ ಮಾನ್ಯ ಮುನಿರಾಜುರವರು ಮಾತನಾಡುತ್ತಾ, ಈಗ ಅಲ್ಲಿ ಸ್ಟೇಡಿಯಂ ಬಂದಿದೆ ಎಂದು ಹೇಳಿದರು.

**ಶ್ರೀ ಕೇಶವ ಪ್ರಸಾದ್ .ಎಸ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ,...

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನಾನು ಮುಗಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದು ಕೆಂಪಾಬುದಿ ಕೆರೆ ಅಲ್ಲ. ಧರ್ಮಾಂಬುದಿ ಕೆರೆ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆಯಿತು. ಅದು ಧರ್ಮಾಂಬುದಿ ಕೆರೆ. ಅಲ್ಲಿ ಆ ಕೆರೆ ಇರುವುದಿಲ್ಲ. ಆದರೆ, ಆ ಕೆರೆಗೆ ನೀರು ಬರತಕ್ಕಂಥದ್ದು, ಎಲ್ಲಿಯಾದರೂ ಫ್ಲಡ್ ಆಗಬೇಕಲ್ಲವೇ? ಅದು ಏತಕ್ಕೆ ಆಗುವುದಿಲ್ಲವೆಂದರೆ, as there are primary drains and secondary drains. ಆ ಸಿಸ್ಟಮ್ ಇರುವುದರಿಂದ ಅಲ್ಲಿ ಯಾವುದೇ ತಾಪತ್ರಯ ಆಗುತ್ತಿಲ್ಲ. ಟ್ಯಾಂಕ್ ಇದ್ದು, ಫ್ಲಡ್ ಆಗುತ್ತದೆ ಎಂದೇನು ಇಲ್ಲ. ನಿನ್ನೆಯ ದಿವಸ ಮಾನ್ಯ ರಮೇಶ್‌ರವರು ಮಾತನಾಡುತ್ತಾ ಈ ಬಗ್ಗೆ ಒಂದು ಮಾತನ್ನು ಹೇಳಿದರು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಸಹ ಅದನ್ನೇ ಹೇಳುತ್ತೇನೆ. ಅದೇನೆಂದರೆ, ಸದರಿ ಕೆರೆಗಳ ಕೆಳಗಡೆ ಒಳಚರಂಡಿ ವ್ಯವಸ್ಥೆ ಇದೆಯೆಂದು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, 12 ವಿಧಾನಸಭಾ ಕ್ಷೇತ್ರ ಏನಿದೆ, ಅಲ್ಲಿ primary and secondary drains ಇರುವುದರಿಂದ developed constituencies ಗಳಲ್ಲಿ ತಾಪತ್ರಯ ಆಗುತ್ತಿಲ್ಲ. ಆದರೆ, ಮಾನ್ಯ ಅಶೋಕ್‌ರವರ ಸಾಮ್ರಾಜ್ಯದಲ್ಲಿ ಅಂದರೆ, ಉತ್ತರಹಳ್ಳಿಯಲ್ಲಿ

primary and secondary drains ಈ ರೀತಿ ಒಳಚರಂಡಿ ವ್ಯವಸ್ಥೆಗಳು ಇಲ್ಲದೇ ಇರುವುದರಿಂದ ತಾಪತ್ರಯ ಆಗಿರುತ್ತದೆ. ಜೊತೆಗೆ, ರಾಜಕಾಲುವೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದರು. ಬೈಲಾ ಪ್ರಕಾರ ಸುಮಾರು 10 ಅಡಿ ಜಾಗ ಬಿಟ್ಟು ಕಟ್ಟಡಗಳನ್ನು ಕಟ್ಟಬೇಕು. ಉದಾಹರಣೆಗೆ, ಜೆ.ಸಿ. ರೋಡ್‌ನಲ್ಲಿ ಹೋಗಿ ನೋಡಿದರೆ, ಅಲ್ಲಿ ಒಂದು ರಾಜಕಾಲುವೆ ಹೋಗುತ್ತದೆ. ಅದರ ಮೇಲೆ ಸ್ಲಾಬ್ ಹಾಕಿ, ಕ್ಲೀನ್ ಆಗಿ ಕಮರ್ಷಿಯಲ್ ಬಿಲ್ಡಿಂಗ್ ಬಂದಿರುತ್ತದೆ. ಈ ಹಿಂದೆ ಎನ್.ಡಿ.ಟಿ.ವಿ. ನಲ್ಲಿ ಆ ಬಗ್ಗೆ ವರದಿ ಪ್ರಸಾರವಾಗಿರುತ್ತದೆ. ಆ ಸಂದರ್ಭದಲ್ಲಿ ಸದರಿ ಸಂಸ್ಥೆಯ ಒಬ್ಬ ಸಿ.ಇ.ಓ. ಬಂದು, "ನಮ್ಮ ಕಟ್ಟಡದ ಕೆಳಗಡೆ ರಾಜಕಾಲುವೆ ಇದೆ. Storm Water Drain (SWD) ಇದೆ, ಸ್ಲಾಬ್ ಹಾಕಿ ಅದರ ಮೇಲೆ ಬಿಲ್ಡಿಂಗ್ ಕಟ್ಟಿದ್ದೇವೆ" ಎಂದು ಹೇಳಿಕೆ ನೀಡಿರುತ್ತಾನೆ. ಇದು ಸಂಪೂರ್ಣವಾಗಿ ಆಗಿರತಕ್ಕಂತಹ ತೊಂದರೆಯಾಗಿರುತ್ತದೆ. ಅದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯಬೇಕೇ ವಿನಃ ಟ್ಯಾಂಕ್ ಇಲ್ಲ ಅಥವಾ ಇರುವುದರಿಂದ ಫ್ಲಡ್ ಆಗುತ್ತಿದೆ ಎಂದು ಹೇಳುವುದು ಸರಿಯಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಟ್ಯಾಂಕ್ ಓವರ್ ಫ್ಲೋ ಆಗಿದ್ದರಿಂದ ಹ್ಯೂಜ್ ಫ್ಲಡ್ ಆಗಿರುತ್ತದೆ. Tanks are flood carriers, instead they are creating flood. ಏಕೆಂದರೆ, already there was….. ಒಂದು ಆ ಕೆರೆಗೆ ಹೂಳು ಬಂದಿರುತ್ತದೆ. ಎರಡನೆಯದಾಗಿ, ಆ ಕೆರೆಗಳ ಕೆಪಾಸಿಟಿ ಕಡಿಮೆ ಆಗಿರುತ್ತದೆ. ಮೂರನೆಯದಾಗಿ, ಆ ಕೆರೆಗಳು ಈಗಾಗಲೇ ತುಂಬಿರುತ್ತವೆ. ನಾನು ಕೂಡ ಈಗಾಗಲೇ ಅದೇ ವಿಷಯವನ್ನು ಹೇಳಿರುತ್ತೇನೆ. ಸ್ಯಾಂಕಿ ಕೆರೆಯಲ್ಲಿ ಏತಕ್ಕೆ ಫ್ಲಡ್ ಆಗುವುದಿಲ್ಲವೆಂದರೆ, ಅಲ್ಲಿ ಕೆಳಗಡೆ ಒಳಚರಂಡಿ ವ್ಯವಸ್ಥೆ ಇದೆ. ಅಷ್ಟೆ ಅಲ್ಲ, even tertiary drains also are important.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸ್ಯಾಂಕಿ ಕೆರೆಯಿಂದ ಕೆಂಗೇರಿಯವರೆಗೆ Storm Water Drain ಇರುತ್ತದೆ. ಅದನ್ನು ವೃಷಭಾವತಿ ಎಂದು ಹೇಳುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೆಂಗಳೂರಿನವರು. ಹಾಗಾಗಿ, ಅವರಿಗೆ ನನಗಿಂತಲೂ ಚೆನ್ನಾಗಿ ಗೊತ್ತಿರುತ್ತದೆ. ಆದುದರಿಂದ, ಏನಾದರೂ ಸಲಹೆಗಳಿದ್ದರೆ ಖಂಡಿತವಾಗಿ ಅವರಿಂದ ನಾನು ತೆಗೆದುಕೊಳ್ಳುತ್ತೇನೆ. Even tertiary drains also are important. ಈಗ ಏನಾಗಿದೆಯೆಂದರೆ, ಬಹಳಷ್ಟು ಕಡೆ ಜನ tertiary drains ಗೆ rainwater harvesting ನಲ್ಲಿ ಸಂಗ್ರಹವಾದ ನೀರನ್ನು ಬಿಟ್ಟುಬಿಡುತ್ತಾರೆ. ಅದು ತುಂಬಿದಾಗ ಅದನ್ನು ಕಟ್ ಮಾಡಿ ಯು.ಜಿ.ಡಿ. ಲೈನ್‌ಗೆ ಬಿಡುತ್ತಾರೆ. ಅದರಿಂದಾಗಿ, ಮನೆಗಳಿಗೆ ನೀರು ನುಗ್ಗುತ್ತದೆ. ಈ ರೀತಿ ಎಲ್ಲಾ ಅವ್ಯವಸ್ಥೆಗಳು ಇವೆ. ಇವುಗಳನ್ನು ಸರಿಪಡಿಸುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. We have identified the problems and we have also assigned the tasks. ಈಗಾಗಲೇ ನಾನು ಹೇಳಿದಂತೆ, ಒಳಚರಂಡಿ ನೀರು ನದಿಯವರೆಗೂ ಹೋಗುವುದಕ್ಕೆ ಮಾಸ್ಟರ್ ಪ್ಲಾನ್ ಮಾಡಿ, ಒಂದು ಟಾಸ್ಕ್‌ಫೋರ್ಸ್ ಮಾಡುತ್ತಿದ್ದೇವೆ. ಏಕೆಂದರೆ, ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಯಾವ ಡ್ರೈನ್ ಅನ್ನು ಝೋನಲ್ ಇಂಜಿನಿಯರ್ ಮಾಡಬೇಕು. ಯಾವ ಡ್ರೈನ್ ಅನ್ನು ಸ್ಟ್ರಾಮ್ ವಾಟರ್ ಇಂಜಿನಿಯರ್ ಮಾಡಬೇಕು ಎನ್ನುವಂತಹ ಜಿಜ್ಞಾಸೆಯಲ್ಲಿಯೇ ಸುಮಾರು 6 ತಿಂಗಳು ಸಮಯ ಕಳೆಯುತ್ತಾರೆ. ಅದಕ್ಕಾಗಿ, ಪ್ರೈಮರಿ ಡ್ರೈನ್ ನ್ನು ಸ್ಟ್ರಾಮ್ ವಾಟರ್‌ನವರು ಮಾಡಲಿ. ಅದೇ ರೀತಿ, ಸೆಕೆಂಡರಿ ಮತ್ತು tertiary ಡ್ರೈನ್ ಅನ್ನು ಝೋನಲ್ ಇಂಜಿನಿಯರ್‌ರವರು ಮಾಡಲಿ ಎಂಬ ತೀರ್ಮಾನ ಮಾಡಿರುತ್ತೇವೆ. ಏಕೆಂದರೆ, ಅವರಿಗೆ ಲೋಕಲ್ ಆಗಿ ಚೆನ್ನಾಗಿ ಗೊತ್ತಿರುತ್ತದೆ.

ವಿಶೇಷವಾಗಿ ವ್ಯಾಲಿಗಳು ಎಲ್ಲಿ ಕೊನೆಗೊಳ್ಳುತ್ತವೆ, ಅಲ್ಲಿ ಏನು ಫ್ಲಡ್ ಆಗುತ್ತಿದೆ, ಅದಕ್ಕೆ ವಿಶೇಷವಾಗಿರುವಂತಹ ಗಮನವನ್ನು ಕೊಡುತ್ತಿದ್ದೇವೆ. We have the report of Indian Institute of Science (IISc) and STUP Consultants Pvt. Ltd. Detailed Project Report. ಇನ್ನೊಂದು ಕಂಪನಿಯ ವರದಿ ಸೇರಿದಂತೆ, ಒಟ್ಟು ಮೂರು ವರದಿಗಳು ನಮ್ಮ ಬಳಿ ಇರುತ್ತವೆ. ಅವುಗಳೆಲ್ಲವನ್ನೂ ನಾವು ಅಧ್ಯಯನ ಮಾಡಿ, ಇವೊತ್ತಿನ ಕಂಡೀಷನ್‌ಗೆ, ಜನಸಂಖ್ಯೆಗೆ ತಕ್ಕಂತೆ ರಾಜಕಾಲುವೆ ಮಾಡಬೇಕೆಂದು ಹೇಳಿ, ರಾಜಕಾಲುವೆ ಒತ್ತುವರಿ ಮಾಡಿಕೊಂಡಿರುವಂತಹ

ಒಂದು ಸಾಫ್ಟ್‌ವೇರ್ ಕಂಪನಿಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುತ್ತಾರೆ. ಸದರಿ ಸಾಫ್ಟ್‌ವೇರ್ ಕಂಪನಿಯ ಮುಂದೆ ಸ್ವತಃ ನಾನೇ ಹೋಗಿರುತ್ತೇನೆ. ಅಲ್ಲಿ ರಸ್ತೆಯಲ್ಲಿ ನೀರು ನಿಂತಿರುತ್ತದೆ. ಅದಕ್ಕೆ ನಾನು "ಏತಕ್ಕೆ ನೀರು ಹೋಗುತ್ತಿಲ್ಲ" ಎಂದು ಕೇಳಿದೆನು. ಅದಕ್ಕೆ ನಮ್ಮ ಅಧಿಕಾರಿಗಳು, "ರಾಜಕಾಲುವೆಯ ಮೇಲೆ ಕಟ್ಟಡ ಕಟ್ಟಿದ್ದಾರೆ" ಎಂದು ಹೇಳಿದರು. ಆಗ ನಾವು ಸದರಿ ಕಟ್ಟಡವಿರುವ ಕಾಂಪೌಂಡ್ ಒಳಗಡೆ ಹೋಗಿ ನೋಡಿದರೆ, ಅಲ್ಲಿ ಬಹಳ ದೊಡ್ಡ ಕಟ್ಟಡ ಇದ್ದು, ಅದರ ಕೆಳಗಡೆ ರಾಜಕಾಲುವೆ ಹೋಗಬೇಕಾಗಿರುತ್ತದೆ. ಆದರೆ, ಅದು ಅಲ್ಲಿ ಇರುವುದಿಲ್ಲ. ಆದಾಗ್ಯೂ, ಸದರಿ ಸಾಫ್ಟ್‌ವೇರ್ ಕಂಪನಿಯವರು ಈ ಹಿಂದೆ ಬೇರೆ ಕಡೆ ಒಂದು ಡ್ರೈನ್ ಮಾಡಿ, ನಂತರ ಅದನ್ನು ಸಹ ಮುಚ್ಚಿ ಹಾಕಿರುತ್ತಾರೆ. ಈ ರೀತಿ ಯಾವುದನ್ನು ಮಾಡಬಾರದಿತ್ತು, ಅದನ್ನು ಬಹಳಷ್ಟು ಮಾಡಿದ್ದಕ್ಕೆ ಈ ರೀತಿ ಆಗಿರುತ್ತದೆ. ಅವುಗಳನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಬೇಕಾಗಿರುತ್ತದೆ. Let, the water find its own way and also find its own level. ಹಾಗಾಗಿ, ರಾಜಕಾಲುವೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿಪಡಿಸುತ್ತೇವೆ. ಮುಂದಿನ ೩-4 ವರ್ಷ ಬಜೆಟ್‌ನಲ್ಲಿ ಇದಕ್ಕೋಸ್ಕರ ವಿಶೇಷ ಅನುದಾನವನ್ನು ಇಡಬೇಕೆಂದು ನಾನು ಯೋಚನೆ ಮಾಡಿರುತ್ತೇನೆ. ಏಕೆಂದರೆ, ಸುಮ್ಮನೆ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ. ಬದಲಾಗಿ, ಅದಕ್ಕೋಸ್ಕರ ಅನುದಾನವನ್ನು ಮೀಸಲಿಟ್ಟು, ಕೆಲಸಗಳನ್ನು ಮಾಡಿದಾಗ ಮಾತ್ರ ಅದು ಆಗುತ್ತದೆ. ಆ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಆರ್. ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ರಾಮನಗರ ಜಿಲ್ಲೆಗೆ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಭೇಟಿ ನೀಡಿ ಪರಿಶೀಲಿಸಿರುತ್ತೇವೆ. ಆಗ ಕಾಂಗ್ರೆಸ್ ಪಕ್ಷದ ನಾಯಕರು ಮತ್ತು ಜನತಾದಳ(ಜಾತ್ಯಾತೀತ) ಪಕ್ಷದ ನಾಯಕರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಸಹ ಭೇಟಿ ನೀಡಿದ್ದರು. ರಾಮನಗರ ಜಿಲ್ಲೆಯಲ್ಲಿ ಒಟ್ಟು 36 ಮನೆಗಳು ಪೂರ್ತಿಯಾಗಿ ಬಿದ್ದಿರುತ್ತವೆ. ಅದಕ್ಕೆ ರೂ.34.23 ಲಕ್ಷ ಪರಿಹಾರ ಕೊಟ್ಟಿರುತ್ತೇವೆ. 'ಬಿ' ಕೆಟಗರಿಯಲ್ಲಿ 121 ಮನೆಗಳಿದ್ದು, ಅದಕ್ಕೆ ರೂ.115.00 ಲಕ್ಷ ಪರಿಹಾರ ಕೊಟ್ಟಿರುತ್ತೇವೆ. 'ಸಿ' ಕೆಟಗರಿಯಲ್ಲಿ 621 ಮನೆಗಳಿದ್ದು, ಅದಕ್ಕೆ ರೂ.300.00 ಲಕ್ಷ ಪರಿಹಾರ ಕೊಟ್ಟಿರುತ್ತೇವೆ. ಒಟ್ಟಾರೆಯಾಗಿ, ರೂ.4.59 ಕೋಟಿ ಪರಿಹಾರವನ್ನು ಈಗಾಗಲೇ ಕೊಟ್ಟಿರುತ್ತೇವೆ. ರೇಷ್ಮೆ ನೂಲಿನ ಬಗ್ಗೆ ಮಾನ್ಯ ಸದಸ್ಯರು

ಈಗಾಗಲೇ ಗಮನ ಸೆಳೆದಿರುತ್ತಾರೆ. ಎನ್.ಡಿ.ಆರ್.ಎಫ್. ಅಥವಾ ಎಸ್.ಡಿ.ಆರ್.ಎಫ್. ನಾರ್ಮ್ಸ್‌ನಲ್ಲಿ ಅದಕ್ಕೆ ಪರಿಹಾರ ಕೊಡುವುದಕ್ಕೆ ಬರುವುದಿಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಒಂದು ವಿಶೇಷವಾದಂತಹ ಪ್ಯಾಕೇಜ್ ಮಾಡಿ ಪರಿಹಾರ ಕೊಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ಬಗ್ಗೆ ಹೇಳಿರುತ್ತೇನೆ. ರಾಮನಗರ ಜಿಲ್ಲೆಯಷ್ಟೇ ಅಲ್ಲದೇ, ಕೆಲವು ಕಡೆ ಉದಾಹರಣೆಗೆ, ಇತ್ತೀಚೆಗೆ ನಾವು ಭಟ್ಕಳಕ್ಕೆ ಭೇಟಿ ನೀಡಿರುತ್ತೇವೆ. ಅಲ್ಲಿಯೂ ಸಹ commercial establishments ಗೆ ನೀರು ನುಗ್ಗಿ ಹಾನಿಯಾಗಿರುತ್ತದೆ. ಅದು ಸಹ ಎನ್.ಡಿ.ಆರ್.ಎಫ್. ನಾರ್ಮ್ಸ್‌ನಲ್ಲಿ ಇರುವುದಿಲ್ಲ. ಆದಾಗ್ಯೂ, ನಾವು ಎನ್.ಡಿ.ಆರ್.ಎಫ್. ನಾರ್ಮ್ಸ್‌ಗೆ ಪತ್ರ ಬರೆದಿದ್ದೇವೆ. ಅದು ಬೇರೆ ವಿಚಾರ. ಆದರೆ, ಈ ರೀತಿ ಮಳೆ ಹಾನಿಗೊಳಗಾದವರಿಗೆ ರಾಜ್ಯ ಸರ್ಕಾರದಿಂದಲೇ ಪರಿಹಾರ ಕೊಡುವ ತೀರ್ಮಾನ ಮಾಡಿದ್ದೇವೆ. ಅದರಂತೆ, ಆದಷ್ಟು ಬೇಗನೆ ಪರಿಹಾರ ಕೊಡುತ್ತೇವೆ.

**ಶ್ರೀ ಅರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ, ಬೆಂಗಳೂರಿನಲ್ಲಿ 2622 ಅತಿಕ್ರಮಣ...

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ,...

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ,...

(**ಗೊಂದಲ**)

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಹಾಗಾಗಿ, ಈ ವಿಷಯವನ್ನು ಮುಕ್ತಾಯಗೊಳಿಸೋಣ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, 2018 ರಿಂದ 1502 ಅತಿಕ್ರಮಣ...

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ಸ್ಪಷ್ಟೀಕರಣ ಕೇಳುವುದಿದೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಮಾನ್ಯ ಮರಿತಿಬ್ಬೇಗೌಡರವರೇ, ದಯಮಾಡಿ ಕುಳಿತುಕೊಳ್ಳಿ. ಇನ್ನು ವಿಧೇಯಕದ ಮೇಲಿನ ಚರ್ಚೆ ಬಾಕಿ ಇದೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಏನಾಗಿದೆಯೆಂದರೆ, ಯಾವುದೋ ಮಳೆ ಬಂದಾಗ ಅತಿಕ್ರಮಣ/ಒತ್ತುವರಿಯನ್ನು ತೆರವುಗೊಳಿಸುವಂಥದ್ದು, ಅಲ್ಲಿಗೆ ಮೀಡಿಯಾ ಪೂರ್ತಿಯಾಗಿ ಹೋಗುವಂಥದ್ದು ಅಥವಾ ರಾಜಕಾರಣಿಗಳು ಶಿಫಾರಸ್ಸು ಮಾಡುವುದು ಇದೆಲ್ಲಾ ಸರ್ವೆ ಸಾಮಾನ್ಯವಾಗಿ ಆಗುತ್ತದೆ. ಅದಾದ ನಂತರ, ಒಂದೊಂದಾಗಿ ಸಮಸ್ಯೆ ಶುರುವಾಗುತ್ತದೆ. ಅದೇನೆಂದರೆ, ಕೋರ್ಟ್ ಆರ್ಡರ್‌ಗಳು, ಸ್ಟೇ ಗಳು, ಒತ್ತಡಗಳು, ಬಡವರು, ಸಾಹುಕಾರರು, ಮಧ್ಯಮ ವರ್ಗದವರು ಈ ರೀತಿ ಎಲ್ಲಾ ಗೊಂದಲಗಳು ಆಗುತ್ತವೆ. ಆ ಸಂದರ್ಭದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ. ಅದು ಕಾಂಗ್ರೆಸ್ ಸರ್ಕಾರ ಇದ್ದರೂ ಅದೇ ಪರಿಸ್ಥಿತಿ ಅಥವಾ ಜನತಾದಳ(ಜಾತ್ಯಾತೀತ) ಸರ್ಕಾರ ಇದ್ದರೂ ಸಹ ಅದೇ ಪರಿಸ್ಥಿತಿ ಇರುತ್ತದೆ. ಇಂತಹ ವಿಷಯಗಳಲ್ಲಿ ಒತ್ತಡಗಳು ಬಂದು ಕೊನೆಗೆ ಎಲ್ಲಿಯೋ ಒಂದು ಕಡೆ ಅದು ಹಾಗೆಯೇ ನಿಂತುಬಿಡುತ್ತದೆ. ಇದು ಆಗಬಾರದು ಎಂಬುದು ನಮ್ಮ ಸರ್ಕಾರದ ಉದ್ದೇಶ ಮತ್ತು ಮಾನ್ಯ ಮುಖ್ಯಮಂತ್ರಿಗಳು ಸಹ ಅದನ್ನೇ ಹೇಳಿದ್ದಾರೆ. ಜೊತೆಗೆ, ನಮ್ಮ ಇಲಾಖೆಯ ಆಯುಕ್ತರಿಗೂ ಸಹ ನಾನು ಅದನ್ನೇ ಹೇಳಿರುತ್ತೇವೆ. ಅದೇನೆಂದರೆ, ಅತಿಕ್ರಮಣ/ಒತ್ತುವರಿಯನ್ನು ವರ್ಷದ ೩೬೫ ದಿನ ಒಡೆಯಬೇಕು. ಇಲ್ಲವಾದರೆ, ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಏಕೆಂದರೆ, ಬೆಂಗಳೂರಿನಲ್ಲಿ ಒಂದಲ್ಲಾ ಒಂದು ಕಡೆ ಮನೆ/ಕಟ್ಟಡಗಳನ್ನು ಕಟ್ಟುತ್ತಲೇ ಇರುತ್ತಾರೆ. ಸುಮಾರು ೮೬೦ ಚದರ ಕಿಲೋ ಮೀಟರ್ ವ್ಯಾಪ್ತಿ ಇರುವಂತಹ ದೊಡ್ಡ ನಗರ ನಮ್ಮ ಬೆಂಗಳೂರು ನಗರ. ಅದಕ್ಕೆ ನಿರಂತರವಾಗಿ ಈ ಕೆಲಸವನ್ನು ಮಾಡಿದರೆ, ಬೆಂಗಳೂರನ್ನು ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಶರವಣ ಟಿ.ಎ.(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕಟ್ಟಡಗಳನ್ನು ಕಟ್ಟುವಂತಹ ಸಂದರ್ಭದಲ್ಲಿ ಅಥವಾ ಕಟ್ಟಡದ ನಕ್ಷೆಗೆ ಮಂಜೂರಾತಿ ಮಾಡುವಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಬೇಕು. ಹಾಗಾಗಿ, ಅವರು ಕಟ್ಟುನಿಟ್ಟಿನ ಕ್ರಮ

ತೆಗೆದುಕೊಳ್ಳುವುದಕ್ಕೆ ಹೇಳಬೇಕು. ಬದಲಾಗಿ, ಕಟ್ಟಡ/ಮನೆ ಕಟ್ಟಿದ ನಂತರ ಒಡೆದು ಹಾಕುವುದಕ್ಕಿಂತ, ಅದನ್ನು ಕಟ್ಟುವುದಕ್ಕೆ ಮೊದಲೇ ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ ನಾನು ಸ್ಪಷ್ಟೀಕರಣ ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರು ಇಬ್ಬರೂ ಸಹ ಸವಿಸ್ತಾರವಾದಂತಹ ಉತ್ತರ ನೀಡಿದ್ದಾರೆ. ಪುನಃ ಇನ್ನೂ ಏನು ಬೇಕು?

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಪ್ರವಾಹ ಬಂದಂತಹ ಸಂದರ್ಭದಲ್ಲಿ ಜನರ ಜೊತೆ ನಿಂತಿದೆ ಹಾಗೂ ಪರಿಹಾರವನ್ನು ಸಹ ಕೊಟ್ಟಿರುತ್ತದೆ ಮತ್ತು ಎಲ್ಲಾ ಅಗತ್ಯ ಕ್ರಮಗಳನ್ನು ಸಹ ತೆಗೆದುಕೊಂಡಿರುತ್ತದೆ.

**ಸಭಾಪತಿಯವರು:–** ಈಗ ಸಭೆಯ ಮುಂದಿಡಲಾದ ಕಾಗದ ಪತ್ರಗಳು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು ಯಾವುದೇ ಪ್ರಶ್ನೆಯನ್ನು ಕೇಳಿರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಾಜರಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬಹಳ ವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಈ ವರ್ಷ ಮಳೆ ಚೆನ್ನಾಗಿ ಆಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ, ಆ ಮಳೆಯಿಂದ ಏನು ಹಾನಿಯಾಗಿದೆ ಎನ್ನುವುದಕ್ಕೆ ಹಾಗೂ ಹಾನಿಗೊಳಗಾದವರಿಗೆ

ಏನು ಪರಿಹಾರ ಕೊಟ್ಟಿದ್ದಾರೆ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ಬಂದಿರುವುದಿಲ್ಲ. ಬೆಂಗಳೂರು ನಗರ ಒಂದರಲ್ಲಿಯೇ ಸುಮಾರು ೮೦ ವ್ಯಾಪಾರಗಳು ಸಂಪೂರ್ಣವಾಗಿ ನಷ್ಟವಾಗಿವೆ. ಅದರ ಬಗ್ಗೆ ಎಲ್ಲಿಯೂ ಮಾನ್ಯ ಕಂದಾಯ ಸಚಿವರು ಯಾವುದೇ ಉಲ್ಲೇಖ ಮಾಡಿರುವುದಿಲ್ಲ. ರಾಜಕಾಲುವೆಗಳ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಂದಾಯ ಸಚಿವರು ಮಾತನಾಡುತ್ತಾ, ಕೋರ್ಟ್ ಸ್ಟೇ ಬಗ್ಗೆ ಸಾಕಷ್ಟು ಹೇಳಿರುತ್ತಾರೆ. ಆದರೆ, ಕೋರ್ಟ್ ಸ್ಟೇ ಇದ್ದರೂ ಸಹ, ತೊಂದರೆ ಆಗುವುದು ಬಡವರಿಗೆ ವಿನಃ ದೊಡ್ಡ ದೊಡ್ಡವರಿಗೆ ಯಾರಿಗೂ ಆಗುತ್ತಿಲ್ಲ. ಆದಾಗ್ಯೂ, ನಮ್ಮ ಕಾಂಗ್ರೆಸ್ ಪಕ್ಷದ ಶಾಸಕರಿಗೆ ಸಂಬಂಧಪಟ್ಟ ಒಂದು ದೊಡ್ಡ ಕಟ್ಟಡವನ್ನು ಮಾತ್ರ ಒಡೆದು ಸಮಾಧಾನಪಟ್ಟುಕೊಂಡಿರುತ್ತಾರಷ್ಟೇ ವಿನಃ ಬೇರೆ ಪಕ್ಷದ ಅಥವಾ ಅವರದ್ದೇ ಪಕ್ಷದವರ ಯಾವುದೇ ಕಟ್ಟಡವನ್ನು ಒಡೆದು ಹಾಕಲಿಲ್ಲ. ಇಷ್ಟೆಲ್ಲಾ ಆದ ನಂತರ, ಮಳೆ ಹಾನಿಗೊಳಗಾದವರಿಗೆ ಕೇಂದ್ರ ಸರ್ಕಾರದಿಂದ ಎಷ್ಟು ಪರಿಹಾರ ಹಣ ಬಂದಿದೆ? ಮಳೆಯಿಂದ ಇಷ್ಟು ಅನಾಹುತ ಆಗಿರುವುದಕ್ಕೆ ಕೇಂದ್ರ ಸರ್ಕಾರದವರು ಏನಾದರೂ ಪರಿಹಾರ ಕೊಟ್ಟಿದ್ದಾರೆಯೇ? ರಾಜ್ಯ ಸರ್ಕಾರದವರು ಎಷ್ಟು ಹಣ ಕೊಟ್ಟಿದ್ದಾರೆ? ಅಂದಾಜು ಎಷ್ಟು ನಷ್ಟವಾಗಿದೆ ಎನ್ನುವ ಮಾಹಿತಿಯನ್ನು ಸಹ ಹೇಳಿರುವಂಥದ್ದು ಸಹ ಕಾಣುತ್ತಿಲ್ಲ. ರಸ್ತೆ ವಿಷಯದ ಬಗ್ಗೆ ನಾವು ಯಾವಾಗಲೂ ಹೇಳುತ್ತಲೇ ಇರುತ್ತೇವೆ. ಅದು ಮಳೆ ಬಂದು ಆ ರೀತಿ ಹಾಳಾಗಿರುತ್ತದೆಯೆಂದು ಎಂದೇನೂ ಇಲ್ಲ. ಈ ಬಗ್ಗೆ ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಮಾತನಾಡುತ್ತಾ, ಮಾನ್ಯ ಪ್ರಧಾನ ಮಂತ್ರಿಗಳು ಬಂದು ಹೋದ ಕೇವಲ ಎರಡು ದಿವಸಗಳಲ್ಲಿ ರಸ್ತೆ ಹಾಳಾಗಿರುತ್ತದೆಯೆಂದು ಹೇಳಿದರು. ಇದೆಲ್ಲದಕ್ಕೂ ಕಾರಣ ಏನು ಎಂಬುದನ್ನು ಸಹ ಹೇಳಲಿಲ್ಲ. ಮಳೆ ಬಂದಿದೆ, ನೀರು ಬಂದಿದೆ, ಕೆರೆ ತುಂಬಿದೆ ಎಲ್ಲಾ ಸರಿ. ಆದರೆ, ಅನಾಹುತಕ್ಕೆ ರಾಜ್ಯ ಸರ್ಕಾರ ರೂ.೨೦೦.೦೦ ಅಥವಾ ರೂ.,.೩೦೦.೦೦ ಪರಿಹಾರ ಕೊಟ್ಟಿದ್ದೇವೆ, ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ಮಾಡಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ, ಕೇಂದ್ರ ಸರ್ಕಾರದಲ್ಲಿ ಮಳೆ ಹಾನಿಗೊಳಗಾದವರಿಗೆ ಪರಿಹಾರಕ್ಕಾಗಿ ಒಂದು ಮನವಿ ಮಾಡಿದ್ದು, ಅದರಂತೆ, ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿರುತ್ತದೆ ಎಂಬುದನ್ನು ದಯಮಾಡಿ ಹೇಳಿ.

(ಮುಂದು...)

(1013) 22.09.2022 6.50 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕಂದಾಯ ಸಚಿವರು ಮಾತನಾಡಿದ್ದು, ಎನ್.ಡಿ.ಆರ್.ಎಫ್. ನಾರ್ಮ್ಸ್ ಅನ್ನು ಪರಿಷ್ಕರಣೆ ಮಾಡಬೇಕೆಂದು ಬಹಳ ದಿವಸಗಳಿಂದ ಒತ್ತಾಯ ಇದೆ. 2015 ರಿಂದ 2020 ರವರೆಗೆ ಮಾಡಬೇಕಾಗಿದ್ದು, ಈಗಾಗಲೇ 2022ನೇ ಸಾಲಿನಲ್ಲಿ ನಾವು ಇದ್ದೇವೆ, ಕೇಂದ್ರ ಸರ್ಕಾರದಲ್ಲಿ ಎನ್.ಡಿ.ಆರ್.ಎಫ್. ನಾರ್ಮ್ಸ್ ಅನ್ನು ಪರಿಷ್ಕರಣೆ ಮಾಡಬೇಕೆಂದು ಇದೆ. ಜೊತೆಗೆ ಹವಾಮಾನ ಬದಲಾವಣೆಯಾಗಿರುವುದಕ್ಕೆ ಸಾಕಷ್ಟು ವರದಿಗಳು ಸರ್ಕಾರದಲ್ಲಿದ್ದು, ಅದರ ಬಗ್ಗೆ ಉಲ್ಲೇಖ ಸಹ ಮಾಡಿ ತಿಳಿಸಿದ್ದೇನೆ. ವೈಜ್ಞಾನಿಕವಾಗಿ ಆಗುವಂಥ ಅನಾಹುತಗಳಿಗೆ ಸಂಬಂಧಿಸಿದಂತೆ ಬಂದಿರುವಂಥ 03 ವರದಿಗಳೇನಿವೆ, ಅದಕ್ಕೆ ಸಂಬಂಧಿಸಿದಂತೆ ಸ್ವಲ್ಪ ಮಾಹಿತಿಯನ್ನು ನೀಡಿದರೆ ಅನುಕೂಲವಾಗುತ್ತದೆ. ಕಳೆದ ವರ್ಷ ಅಟಾನಮಸ್ ಸಂಸ್ಥೆಯಾದ "Environmental Management and Policy Research Institute"ಕಡೆಯಿಂದ ಹಾಗೂ "Karnataka State Action Plan on Climate Change" ಬಗ್ಗೆ ಸಹ ವರದಿ ಬಂದಿದೆ. ಈ ವರದಿಯಲ್ಲಿ "ನಮ್ಮ ರಾಜ್ಯದಲ್ಲಿ ಹವಾಮಾನ ಬದಲಾವಣೆಯಾಗಿ ಬಿತ್ತನೆ ಆಗುವಂಥ ರಾಶಿಗಳೇನಿವೆ, ಅದರಲ್ಲಿ ಸಾಕಷ್ಟು ಬದಲಾವಣೆಯಾಗುತ್ತದೆ" ಎಂದು ತಿಳಿಸಲಾಗಿದೆ. ಹಾಗಾಗಿ ನಾನು ಮತ್ತೆ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಕಡೆಗಳಲ್ಲಿ ಯಾವ ಬೆಳೆಗಳು ಜಾಸ್ತಿಯಾಗುತ್ತದೆ ಮತ್ತು ಕಡಿಮೆಯಾಗುತ್ತದೆ ಎಂಬುದನ್ನು ಸಹ ಹೇಳಿದ್ದೇನೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಏನು ಹೇಳಿಲ್ಲ. ಹವಾಮಾನ ವರದಿ ಬಗ್ಗೆ, ಎನ್.ಡಿ.ಆರ್.ಎಫ್. ಬಗ್ಗೆ ಸರ್ಕಾರ ತಿಳಿಸಬೇಕಾಗಿದ್ದು, ಆ ಕುರಿತು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಮಾತನಾಡಿದ್ದಾರೆ. ಶ್ರೀ ಎ.ಟಿ.ರಾಮಸ್ವಾಮಿ ವರದಿ ಆಧಾರದ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ಹೇಳಬೇಕು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 7 ಲಕ್ಷ ಎಕರೆ ಜಾಗವನ್ನು ಬಿಡುಗಡೆ ಮಾಡಿದ್ದೇವೆ, ಅವರ ಸರ್ಕಾರ ಏನು ಮಾಡಿದೆ?

**ಸಭಾಪತಿಯವರು:-** ಮಾನ್ಯ ಸದಸ್ಯರೆ, ತಾವು ಮಾತನಾಡಿದ್ದು ಸಾಕು ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ನೀಡಿಲ್ಲ.

**ಸಭಾಪತಿಯವರು:-** ಈಗಾಗಲೇ ಮಾನ್ಯ ಸಚಿವರು ಒಂದು ಗಂಟೆಗಳಿಂದ ಎಲ್ಲಾ ಸದಸ್ಯರಿಗೂ ಉತ್ತರವನ್ನು ನೀಡಿದ್ದಾರೆ. ಹಾಗಾಗಿ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಇಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರು ಇಬ್ಬರೂ ಇದ್ದಾರೆ. ವಿಶೇಷವಾಗಿ ಬೆಂಗಳೂರಿನಲ್ಲಿ ಪ್ರಭಾವಿಗಳಿಗೆ ಮಾತ್ರ ರಕ್ಷಣೆ ಸಿಗುತ್ತಿದೆ. ಜೊತೆಗೆ ಈಗಾಗಲೇ ನಮ್ಮ ಅಧಿಕಾರಿಗಳು CAG ವರದಿಯಲ್ಲಿ ತೋರಿಸಿರುವಂತೆ ಸುಮಾರು ಎರಡು ಸಾವಿರದ ಆರುನೂರ ಇಪ್ಪತ್ತೆರಡು ಒತ್ತುವರಿ ಜಾಗಗಳನ್ನು ಗುರುತು ಮಾಡಲಾಗಿದ್ದು, ಆ ಜಾಗವು ಒತ್ತುವರಿಯಾಗಿದೆ ಎನ್ನುವಂಥ ವಿಚಾರ ಅಧಿಕಾರಿಗಳಿಗೆ ಗೊತ್ತಾದ ಮೇಲೆ ಪದೇ ಪದೇ ಅಧಿಕಾರಿಗಳು ಏತಕ್ಕೆ ಅಲ್ಲಿರುವವರಿಗೆ ನೋಟಿಸ್ ನೀಡಬೇಕು. ಈ ರೀತಿ ನೋಟಿಸ್ ನೀಡುವುದರಿಂದ ಒಂದು ಕಡೆ ತಾವು ಜಾಗವನ್ನು ಖಾಲಿ ಮಾಡಿಸುತ್ತಿದ್ದು, ಮತ್ತೊಂದು ಕಡೆ ಅವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುತ್ತಾರೆ. ಇದರ ಮಧ್ಯೆ ಕೆಲಸ ನಿಲ್ಲುತ್ತದೆ. ಈ JCB ಮತ್ತು Hitachi ಗರ್ಜನೆ ನಿರಂತರವಾಗಿ ಮುಗಿಯುವರೆಗೂ ಇರಬೇಕೆನ್ನುವುದು ನನ್ನ ಪ್ರಶ್ನೆಯಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರು ಉತ್ತರ ನೀಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೆ ತಮಗೆ ಮಾತನಾಡಲು ಅವಕಾಶ ನೀಡಲು ಆಗುವುದಿಲ್ಲ. ಈಗಾಗಲೇ ತಮ್ಮ ನಾಯಕರು ತಮ್ಮ ಪರವಾಗಿ ಮಾತನಾಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ ಮಾತನಾಡಲು ಅವಕಾಶ ನೀಡಿ. ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಒಂದು

ಮನವಿಯೇನೆಂದರೆ, ದಯವಿಟ್ಟು ಮಳೆ ಹಾನಿಯಿಂದ ಇಡೀ ರಾಜ್ಯದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಶಾಲಾ ಕೊಠಡಿಗಳು ಹಾಳಾಗಿವೆ, ಇದರ ಬಗ್ಗೆ ಅವರಿಂದ ಮಾಹಿತಿ ಬಂದಿರುವುದಿಲ್ಲ. ಹಾಗಾಗಿ ನಾನು ವಿನಂತಿಸುವುದೇನೆಂದರೆ, ಕಳೆದ ತಿಂಗಳು ಶಿಕ್ಷಣ ಇಲಾಖೆಯ ವತಿಯಿಂದ ಸುಮಾರು 8 ಸಾವಿರ ಕೊಠಡಿಗಳನ್ನು ಏಕಕಾಲದಲ್ಲಿಯೇ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಹಂಚಿಕೆ ಮಾಡಲಾಗಿದ್ದು, ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆದರೆ, ದಯವಿಟ್ಟು ಆ 8 ಸಾವಿರ ಕೊಠಡಿಗಳನ್ನು ಹಂಚಿಕೆ ಮಾಡಿರುವುದರಲ್ಲಿ ಸ್ವಲ್ಪ ಬದಲಾವಣೆ ತಂದು, ಪ್ರವಾಹ ಬಂದು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿರುವಂಥ ಶಾಲೆಗಳಿಗೆ ಆದ್ಯತೆ ಮೇಲೆ ಅವಕಾಶ ಕಲ್ಪಿಸಬೇಕೆಂದು ಕೇಳುತ್ತೇನೆ ಮತ್ತು ಮಂಡ್ಯ ಜಿಲ್ಲೆಯಲ್ಲಿ ಪ್ರವಾಹ ಬಂದು ಹಾಳಾಗಿರುವಂಥ ಶಾಲೆಗಳಿಗೆ ದುರಸ್ತಿಗೊಳಿಸಲು ಜಿಲ್ಲಾಧಿಕಾರಿಗಳು ಕೇವಲ ರೂ.2,000 ನೀಡುತ್ತಿದ್ದಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ರೂ.2.00 ಲಕ್ಷ ನೀಡಲಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಆ ಎರಡು ಸಾವಿರ ರೂಪಾಯಿಯಲ್ಲಿ ಆ ಶಾಲೆಗೆ ಸುಣ್ಣ ಬಳಿಯಲು ಆಗುವುದಿಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ಪರಿಷ್ಕರಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಎಸ್.ಎಲ್.ಭೋಜೇಗೌಡರವರು "ರಾಜಕಾಲುವೆ ಜಾಗವನ್ನು ಹೊಡೆಯುವಾಗ ಸಾಹುಕಾರರು, ಬಡವರು ಎಂದು ತಾರತಮ್ಯ ಮಾಡಲಾಗುತ್ತಿದೆ" ಎನ್ನುವಂಥ ಮಾತನ್ನು ಹೇಳಿದ್ದರು. ನಮ್ಮ ಸರ್ಕಾರವು ಈಗಾಗಲೇ ಹೇಳಿದಂತೆ ಸಾಹುಕಾರರು, ಬಡವರು, ಮಧ್ಯಮ ವರ್ಗದವರು ಎಂಬ ಭೇದ ಭಾವ ನಮ್ಮಲ್ಲಿ ಇರುವುದಿಲ್ಲ. ರಾಜಕಾಲುವೆ ಜಾಗವನ್ನು ಯಾರು ಒತ್ತುವರಿ ಮಾಡಿಕೊಂಡಿದ್ದಾರೆ, ಅವರೆಲ್ಲರ ಜಾಗವನ್ನು ಕ್ಲೀಯರ್ ಮಾಡಲಾಗುತ್ತದೆ. ಹಾಗೆಯೇ ಮಾನ್ಯ ಎಸ್.ಎಲ್.ಭೋಜೇಗೌಡರು ನೋಟಿಸ್ ಅನ್ನು ಅವರಿಗೆ ನೀಡಬಾರದು ಎನ್ನುವಂಥ ಮಾತನ್ನು ಹೇಳಿದ್ದು, ನಾವು ಸಹ ನೋಟಿಸ್ ನೀಡದೇ ಅವರ ಮನೆಗಳನ್ನು ಹೊಡೆದಿದ್ದೇವೆ. ಹಾಗಾಗಿ ಅವರುಗಳು ನ್ಯಾಯಾಲಯ ಮೊರೆ ಹೋಗಿ

"ನಮಗೆ ನೋಟಿಸ್ ನೀಡದೇ ಜಾಗವನ್ನು ನೆಲಸಮಗೊಳಿಸುತ್ತಿದ್ದಾರೆ" ಎಂದು ನಮ್ಮ ಮೇಲೆ ತಡೆಯಾಜ್ಞೆ ತಂದಿದ್ದಾರೆ. ಜೊತೆಗೆ ನೋಟಿಸ್ ಏತಕ್ಕೆ ಕೊಟ್ಟಿಲ್ಲ ಎಂದು ಸಹ ಕೇಳುತ್ತಿದ್ದು, ಅವೆರಡೂ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಯಾರೇ ಒಬ್ಬರನ್ನು ಬಿಟ್ಟರೂ ಸಾವಿರಾರು ಜನರಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಯಾವುದೇ ತಾರತಮ್ಯ ಮಾಡದೇ ಎಲ್ಲರ ಜಾಗವನ್ನು ತೆರವುಗೊಳಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಖಾಸಗಿ ಕ್ಷೇತ್ರದಲ್ಲಿ ಒತ್ತುವರಿ ಮಾಡಿಕೊಂಡಿರುವಂಥ ಎಲ್ಲಾ ಜಾಗವನ್ನು ತೆರವುಗೊಳಿಸುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದರು. ಅತೀ ಹೆಚ್ಚಾಗಿ ಬಿ.ಡಿ.ಎ. ಮತ್ತು ಬಿ.ಬಿ.ಎಂ.ಪಿ. ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ. ಅವರ ಸಾಮ್ರಾಜ್ಯ ಇರುವಂಥ ಮಹದೇವಪುರ, ಬೊಮ್ಮನಹಳ್ಳಿ, ಟಿ.ದಾಸರಹಳ್ಳಿ ಜಾಗವೇ ಅತೀ ಹೆಚ್ಚು ಒತ್ತವರಿಯಾಗಿರುವಂಥದ್ದಾಗಿದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದಂತೆ ಆಗಿದ್ದು ಆಗಿ ಹೋಗಿತ್ತು. ಇನ್ನು ಮುಂದೆ ಬಿ.ಡಿ.ಎ. ರವರೆ ತಪ್ಪು ಮಾಡಲಿ ಅವರಿಗೂ ಸಹ ಶಿಕ್ಷೆ ವಿಧಿಸಲಾಗುತ್ತದೆ. ಜೆ.ಸಿ. ರಸ್ತೆ ಕುರಿತು ಏನು ಮಾನ್ಯ ಸದಸ್ಯರು ಹೇಳಿದ್ದಾರೆ, ಆ ರಸ್ತೆಯನ್ನು ನಾನು ಸಹ ನೋಡಿದ್ದೇನೆ. Storm Water Drain ಮೇಲೆ ಕಾರ್ಪೋರೇಷನ್‌ರವರೆ ಕಟ್ಟಡವನ್ನು ನಿರ್ಮಿಸಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಅದು ನಿರ್ಮಾಣಗೊಂಡು ಸುಮಾರು ೫೦ ವರ್ಷಗಳು ಕಳೆದಿವೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಹೌದು. ಆ ಕಟ್ಟಡವನ್ನು ಎಲ್ಲಾ ಸರ್ಕಾರವು ನೋಡಿಕೊಂಡು ಬಂದಿದೆ. ಅದಕ್ಕಾಗಿ ಈ ರೀತಿ ಇರುವಂಥ ಕಾರ್ಪೋರೇಷನ್‌ರವರು model ಆಗಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಬಿ.ಡಿ.ಎ.,...

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, please... Let him conclude.

**ಶ್ರೀ ಆರ್.ಅಶೋಕ್:-** ಅದಕ್ಕಾಗಿ ಕಾರ್ಪೋರೇಷನ್‌ರವರಾಗಲಿ, ಬಿ.ಡಿ.ಎ. ರವರಾಗಲಿ ರಾಜಕಾಲುವೆ ಜಾಗವನ್ನು ಒತ್ತುವರಿ ಮಾಡಿಕೊಂಡು ಕಟ್ಟಡವನ್ನು ನಿರ್ಮಿಸಿದರೆ, ಅದನ್ನು ತೆರವುಗೊಳಸಲು ಕ್ರಮವನ್ನು ಕೈಗೊಳ್ಳಲಾಗುತ್ತದೆ. ಹಾಗೆಯೇ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಈಗಾಗಲೇ ಹವಾಮಾನ ಬದಲಾವಣೆ ಬಗ್ಗೆ ತಿಳಿಸಿದ್ದು, ಹವಾಮಾನ ಬದಲಾವಣೆ ಬಗ್ಗೆ ಕೇಂದ್ರ ಸರ್ಕಾರವು ನಮಗೆ ಮಾಹಿತಿಯನ್ನು ಕೇಳಿತ್ತು. ಅದರಂತೆ ನಮ್ಮ ಸರ್ಕಾರ ಮತ್ತು ಇನ್ನೆರಡು ರಾಜ್ಯಗಳು ಮಾತ್ರ ವರದಿಯನ್ನು ಸಲ್ಲಿಸಿದ್ದು, ಎಲ್ಲಾ ರಾಜ್ಯಗಳು ವರದಿಯನ್ನು ಸಲ್ಲಿಸಿರುವುದಿಲ್ಲ. ಆ ವಿಚಾರವಾಗಿ ನಾವು ಕೇಂದ್ರ ಸರ್ಕಾರವನ್ನು ಕೇಳಿದಾಗ ಒಂದೆರಡು-ಮೂರು ರಾಜ್ಯ ಹೊರತುಪಡಿಸಿ, ಉಳಿದಂತೆ ಯಾವ ರಾಜ್ಯಗಳು ವರದಿಯನ್ನು ಸಲ್ಲಿಸಿಲ್ಲ. ಹಾಗಾಗಿ ಉಳಿದ ರಾಜ್ಯಗಳವರನ್ನು ವರದಿಯನ್ನು ಕೇಳುತ್ತಿದ್ದು, ಎಲ್ಲಾ ರಾಜ್ಯಗಳ ವರದಿಯನ್ನು ತೆಗೆದುಕೊಂಡು, ಮುಂದಿನ ಹವಾಮಾನ ಬದಲಾವಣೆ ಸಂದರ್ಭದಲ್ಲಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೆಂಬುದರ ಕುರಿತು ಕೇಂದ್ರ ಸರ್ಕಾರ ಜೊತೆಗೂಡುತ್ತದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು "ಕೇಂದ್ರ ಸರ್ಕಾರದಿಂದ ಎಷ್ಟು ಪರಿಹಾರ ಬಂದಿದೆ" ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದರು. ಇವತ್ತು ನಮ್ಮ ರಾಜ್ಯದಲ್ಲಿ ಒಟ್ಟು ರೂ.12,319 ಕೋಟಿಗಳಷ್ಟು ಹಾನಿಯಾಗಿದೆ. ಎಸ್.ಡಿ.ಆರ್.ಎಫ್. ನಾರ್ಮ್ಸ್ ಪ್ರಕಾರ ನಮಗೆ ಬರಬೇಕಾಗಿರುವಂಥ ಮೊತ್ತ ರೂ.1,646 ಕೋಟಿ. ಈ ಸಂಬಂಧ ಅದರ ತಂಡವು ನಮ್ಮ ರಾಜ್ಯಕ್ಕೆ ಬಂದು ಹೋಗಿದ್ದು, ತಮಗೂ ತಿಳಿದಿರುವಂತೆ ಆ ತಂಡದವರು ರಾಜ್ಯಕ್ಕೆ ಬಂದು ಹೋದ ಮೇಲೆಯೇ ಕೇಂದ್ರ ಸರ್ಕಾರದಿಂದ ಹಣವನ್ನು ಬಿಡುಗಡೆ ಮಾಡಲಾಗುತ್ತದೆ. ಆದರೆ, ಆ ಹಣ ಬರುತ್ತದೆ ಎಂದು ನಾವು ಕಾಯ್ದುಕೊಂಡು ಕುಳಿತುಕೊಳ್ಳುವುದಿಲ್ಲ. ಈಗಾಗಲೇ ರಾಜ್ಯ ಸರ್ಕಾರದಿಂದ ಸುಮಾರು ರೂ.೮೦೦.೦೦ ಕೋಟಿಗಳಿಗೂ ಹೆಚ್ಚು ಹಣವನ್ನು ಎಲ್ಲಾ ಜಿಲ್ಲಾಧಿಕಾರಿಗಳ ಖಾತೆಗೆ ಕಳುಹಿಸಲಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ ಎಷ್ಟೆಷ್ಟು ಮೊತ್ತವನ್ನು ಬಿಡುಗಡೆ ಮಾಡಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಸಭಾಪತಿಯವರು:-** ಈಗಾಗಲೇ ರೂ.೮೦೦.೦೦ ಕೋಟಿ ನೀಡಲಾಗಿದೆ ಎಂದು ಹೇಳಿದ್ದಾರೆ ಅಲ್ಲವೇ?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಮೊದಲ ಹಂತದಲ್ಲಿ ಒಂದು ಲಕ್ಷದ ನಾಲ್ಕು ಸಾವಿರ ರೈತರಿಗೆ ರೂ.116.೦೦ ಕೋಟಿ ನೀಡಿದ್ದೇವೆ. ಎರಡನೇಯ ಹಂತದಲ್ಲಿ ಎರಡು ಲಕ್ಷದ ಇಪ್ಪತ್ನಾಲ್ಕು ಸಾವಿರ ರೈತರಿಗೆ ರೂ.261.೦೦ ಕೋಟಿ ನೀಡಿದ್ದೇವೆ. ಮೂರನೆಯ ಹಂತದಲ್ಲಿ ಎರಡು ಲಕ್ಷದ ಐವತ್ನಾಲ್ಕು ಸಾವಿರ ರೈತರಿಗೆ ರೂ.2೮೯.೦೦ ಕೋಟಿ ನೀಡಿದ್ದೇವೆ. ಒಟ್ಟು ಐದು ಲಕ್ಷದ ಎಂಬತ್ಮೂರು ಸಾವಿರ ರೈತರಿಗೆ ರೂ.6೮೯.5 ಕೋಟಿ ಹಣವನ್ನು ಅವರ ಖಾತೆಗೆ ಈಗಾಗಲೇ ಜಮಾ ಮಾಡಿದ್ದು, ಬೇಕಾದರೆ ಮಾನ್ಯ ಸದಸ್ಯರು ಪರಿಶೀಲನೆ ಮಾಡಿಕೊಳ್ಳಬಹುದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಲವಾರು ಮಾನ್ಯ ಸದಸ್ಯರು ಮಾತನಾಡಿದ ಪ್ರಶ್ನೆಗಳಿಗೆ ಮಾನ್ಯ ಸಚಿವರಿಂದ ಸರಿಯಾದ ಉತ್ತರ ಬಂದಿಲ್ಲ. ಕೇಂದ್ರ ಸರ್ಕಾರದಿಂದ ರೂ.12,೦೦೦ ನೀಡಲಾಗಿದೆ ಎಂದು ಹೇಳಿದ್ದು, ಇಲ್ಲಿ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ಬಡವರ, ರೈತರ ಹಾಗೂ ಬೆಂಗಳೂರು ನಗರದ ಬಗ್ಗೆ ಯಾವುದೇ ರೀತಿಯ ಕಾಳಜಿ ಇಲ್ಲ, ಅವರು ನೀಡಿರುವಂಥ ಉತ್ತರವನ್ನು ನಾವು ಒಪ್ಪುವುದಿಲ್ಲ. ಹಾಗಾಗಿ ಇದನ್ನು ತಿರಸ್ಕರಿಸಿ, ನಾವು walkout ಮಾಡುತ್ತಿದ್ದೇವೆ.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿ, ಸದನದಿಂದ ಹೊರ ನಡೆದರು)**

(ಮುಂದು)

(1014) 22.09.2022/7.00/ಎಸ್‌ಕೆ-ಜಿಆರ್

(ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನಕ್ಕೆ ಆಗಮಿಸಿದರು)**

**16. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿ:-** ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಸಭೆಯಲ್ಲಿ ಮಂಡಿಸುತ್ತಿದ್ದೇನೆ.

**(ಗೊಂದಲ)**

**17. ಶಾಸನ ರಚನೆ**

**ವಿಧೇಯಕವನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು**

**(ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2022**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಸವರಾಜ್ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2022ನೇ ಸಾಲಿನ "ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ"ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಸವರಾಜ್ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, 2022-23ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಮಂಡಿಸುತ್ತಿದ್ದೇನೆ. ಸಂವಿಧಾನದ ಅನುಚ್ಛೇದ 2005 (1) ಎ ರನ್ವಯ ಒಟ್ಟು ರೂ.14,762.20 ಕೋಟಿಗಳ ಪೂರಕ ಅಂದಾಜುಗಳು ಮೊದಲನೇ ಕಂತನ್ನು ಅನುಮೋದನೆಗಾಗಿ ರಾಜ್ಯದ ವಿಧಾನ ಮಂಡಲದಲ್ಲಿ ಮಂಡಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ರೂ.14,762.20 ಕೋಟಿಗಳಲ್ಲಿ ರಾಜಸ್ವ ಖಾತೆಯಲ್ಲಿ ರೂ.10,846.42 ಕೋಟಿಗಳು ಮತ್ತು ಬಂಡಾವಳ ಖಾತೆಗೆ ರೂ. 3,915.78 ಕೋಟಿಗಳು ವಿನಿಯೋಗವಾಗುತ್ತಿದೆ. ಅಂದರೆ Revenue Account ಗೆ 10,846 ಕೋಟಿಗಳು Capital Account ಗೆ ರೂ. 3,915 ಕೋಟಿಯನ್ನು ವಿನಿಯೋಗ ಮಾಡಬೇಕು ಎನ್ನುವ ಉದ್ದೇಶವಾಗಿದೆ. 2022-23ನೇ ಸಾಲಿನ ಅಯವ್ಯಯ ಗಾತ್ರ ರೂ.2,71,542 ಲಕ್ಷಗಳು ಅದರಲ್ಲಿ 14,762 ಎಂದು ಹೇಳಿದರೆ, 5.43% of the Budget ಈ ಪೂರಕ ಅಂದಾಜು ಇದೆ ಎಂದು ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆ ಕಂತಿನಲ್ಲಿ ಇವತ್ತು ರೂ. 14,762 ಕೋಟಿಗಳಿದ್ದರೂ ಕೂಡ the net cash outflow is Rs.10,118.69 crores. ಇನ್ನುಳಿದ ರೂ. 2,038 ಕೋಟಿಗಳು Reserve Fund ಠೇವಣಿಗಳಿಂದ ರೂ. 525 ಕೋಟಿಗಳು ಕೇಂದ್ರ ಸಹಾಯಧನಕ್ಕೆ ಸಂಬಂಧಿಸಿದಂತೆ ಇದು ಬರುತ್ತದೆ. ರೂ.1,728 ಕೋಟಿಗಳು account adjustment ಮಾಡುವಂತಹದ್ದಕ್ಕೆ ಇದೆ. ಹೀಗಾಗಿ ರೂ. 10,118 ಮಾತ್ರ cash outflow ಆಗುತ್ತದೆ.

ಮಾನ್ಯ ಸಭಾಪತಿಯವರೇ, ಈ ಒಂದು ಬಾಬ್ತನ್ನು ಭರಿಸುವುದಕ್ಕೆ ರಾಜಸ್ವೀಕೃತ ಹೆಚ್ಚುವರಿ ಕ್ರೋಢೀಕರಣವಾಗುತ್ತದೆ. ಕಳೆದ ವರ್ಷವೂ ಕೂಡ ನಾವು ನಮ್ಮ ಗುರಿ ಮೀರಿ ಆರು ತಿಂಗಳು ಕೋವಿಡ್-19 ಇದ್ದರೂ ಕೂಡ recover ಆಗಿ ರಾಜಸ್ವವನ್ನು ಪಡೆದುಕೊಂಡಿದ್ದೇವೆ. ಈ ವರ್ಷವೂ ಕೂಡ ಅದೇ trend ಮುಂದುವರೆದಿದೆ. ಕಳೆದ ವರ್ಷ ಮೋಟಾರ್ ಟ್ಯಾಕ್ಸ್‌ನಲ್ಲಿ ನಮಗೆ ಸ್ವಲ್ಪ ಕೊರತೆಯಾಗಿತ್ತು. ಏಕೆಂದರೆ, semi conductor chip ಕೊಡುತ್ತೇವೆಂದು, production ಕೂಡ ಕಡಿಮೆಯಾಗಿತ್ತು. ಈಗ ಆ ಸಮಸ್ಯೆಯೂ ಕೂಡ ಪರಿಹಾರವಾಗಿದೆ. ರಾಜಸ್ವ ಹೆಚ್ಚಾಗುವಂತಹ

ಎಲ್ಲಾ ಲಕ್ಷಗಳು ಇವತ್ತು ಇವೆ. ಭಾರತ ಸರ್ಕಾರ ಸ್ವೀಕೃತಗಳು ಹೆಚ್ಚಾಗಿದ್ದರಿಂದ, ಅದರಲ್ಲಿ ಕೂಡ ನಮ್ಮ ರಾಜ್ಯಕ್ಕೆ ಒಟ್ಟು ಪಾಲು ಹೆಚ್ಚಾಗುತ್ತದೆ ಎಂಬ ನಿರೀಕ್ಷೆ ಕೂಡ ಇದೆ.

ಮಾನ್ಯ ಸಭಾಪತಿಯವರೇ, ನಮ್ಮ ಬಜೆಟ್‌ನಲ್ಲಿ ಈ ವರ್ಷ ಜಿ.ಎಸ್.ಟಿ., ಪರಿಹಾರವನ್ನು ಅಂದಾಜು ಮಾಡಿದ್ದೇವೆ. ಈ ಜೂನ್ ತಿಂಗಳಿಗೆ compensation ಹೆಚ್ಚಿಗೆ ಬರುವುದಿಲ್ಲವೆಂದು ನಾವು ಮೊದಲೇ precaution ತೆಗೆದುಕೊಂಡು ರೂ.5,000 ಕೋಟಿಗೆ ಮಾತ್ರ provision ಮಾಡಿದ್ದೇವೆ. ಆದರೆ ಈ ಆರು ತಿಂಗಳಿನಲ್ಲಿ ರೂ.8,633 ಕೋಟಿಗಳು ಪರಿಹಾರ ಈಗಾಗಲೇ ಬಂದಿದೆ. ಆದಾಗ್ಯೂ ಕೂಡ ಇನ್ನು ರೂ.14,000 ಕೋಟಿ ಪರಿಹಾರ ರಾಜ್ಯಕ್ಕೆ ಬರುವಂತಹದ್ದು ಬಾಕಿ ಇದೆ. ಅದು ಈ ವರ್ಷ ಮತ್ತು ಮುಂದಿನ ವರ್ಷ ಪರಿಹಾರ ಬರುವುದಕ್ಕೆ ಈಗಾಗಲೇ ಜಿ.ಎಸ್.ಟಿ., ಕೌನ್ಸಿಲ್‌ನಲ್ಲಿ ನಿರ್ಣಯವಾಗಿದೆ. ಈ ವರ್ಷ ಇನ್ನೊಂದು ನಾಲ್ಕರಿಂದ ಐದು ಸಾವಿರ ಕೋಟಿ ರೂಪಾಯಿಗಳು ಈ ಎಂಟು ಸಾವಿರ ಕೋಟಿಗೆ ಸೇರಬಹುದು ಎಂದು ನಮ್ಮ ಅಂದಾಜು.

ಮಾನ್ಯ ಸಭಾಪತಿಯವರೇ, ಇವುಗಳಲ್ಲಿ ಪ್ರಮುಖವಾಗಿ ಖರ್ಚು ಮಾಡಿರುವಂತಹದ್ದು, "ಗ್ರಾಮೀಣ ಸುಮಾರ್ಗ" ಅಂದರೆ ನಮ್ಮ ಗ್ರಾಮ ನಮ್ಮ ರಸ್ತೆ ಈಗಾಗಲೇ ಕಾರ್ಯಕ್ರಮ ಜಾರಿಯಾಗಿದೆ. ಅದಕ್ಕೆ ರೂ.1,497 ಕೋಟಿ ಹಣವನ್ನು ಹೆಚ್ಚುವರಿಯಾಗಿ ಒದಗಿಸಬೇಕಾಗಿದೆ. ಸಾರಿಗೆ ಮತ್ತು ಪೊಲೀಸ್ ಇಲಾಖೆ ಸುಖಕರ ರಸ್ತೆ ಸುರಕ್ಷಾ Cess ಮತ್ತು ರಸ್ತೆ ಸುರಕ್ಷತಾ ನಿಧಿಗೆ ವರ್ಗಾವಣೆ ಮಾಡಬೇಕಾಗಿದೆ. ಅದರಿಂದ ಮಹಾಲೇಖಪಾಲಕರ ಸಲಹೆಯಂತೆ 2017-18 ರಿಂದ 2022-23ರಲ್ಲಿ ಸಂಗ್ರಹವಾದ ಸುಖಕರ ರಸ್ತೆ ಸುರಕ್ಷಾ ನಿಧಿಗೆ ವರ್ಗಾವಣೆ ರೂ.1,174 ಕೋಟಿ ಹಣವನ್ನು ಹೆಚ್ಚುವರಿಯಾಗಿ ಒದಗಿಸಿದ್ದೇವೆ.

ಮಾನ್ಯ ಸಭಾಪತಿಯವರೇ, Road Safety Fund ಎಂಬುದು ಇರುತ್ತದೆ. ಇದೆಲ್ಲಾ ನಮ್ಮ ಎಲ್ಲಾ fines ಗಳಿಂದ collect ಮಾಡುತ್ತೇವೆ. Consolidated Fund ನಿಂದ ರಸ್ತೆ ನಿಧಿಗೆ ವಾಪಸ್ಸು ಕಳುಹಿಸಬೇಕು. ಇದು ಹತ್ತಾರು ವರ್ಷಗಳಿಂದಾಗಿಲ್ಲ. Especially, ಎರಡ್ಮೂರು ವರ್ಷಗಳಿಂದ ಕೋವಿಡ್-19 ಬಂದಿದ್ದರೂ ಕೂಡ ಆಗಿಲ್ಲ. C.A.G., - ಅನ್ನು Road Safety

Fund ಗೆ ಉಪಯೋಗ ಮಾಡಬೇಕೆಂದು ನಮಗೆ ಹೇಳಿದ್ದಾರೆ. So, we have to transfer. ಇದುವರೆಗೂ ಮಾಡಿರಲಿಲ್ಲ. ಆ ಫಂಡ್‌ನ್ನು 2017-18 ರಿಂದ 2022-23 ರ ಒಟ್ಟಿಗೆ ವರ್ಗಾವಣೆ ಮಾಡಬೇಕಾಗಿದೆ. ಹೀಗಾಗಿ, ನಮ್ಮ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡಿರಲಿಲ್ಲ. ಈಗ ಅದನ್ನು ರೂ.1,174 ಕೋಟಿಯನ್ನು ಪ್ರಾವಿಷನ್ ಮಾಡಿಕೊಂಡಿದ್ದೇವೆ. ತಮ್ಮೆಗೆಲ್ಲರಿಗೂ ಗೊತ್ತಿರುವಂತೆ, ಈ ಕೋವಿಡ್-19 ಸಾಂಕ್ರಾಮಿಕ ಕಾಯಿಲೆ ಬಂದ ಮೇಲೆ K.S.R.T.C., N.W.K.R.T.C., N.E.K.R.T.C., ಇವೆಲ್ಲವೂ ಕೂಡ ನಷ್ಟದಲ್ಲಿತ್ತು. ಅವುಗಳ ಡೀಸೆಲ್ ವೆಚ್ಚದಿಂದ ಹಿಡಿದು salary, ಪಿ.ಎಫ್., ಮತ್ತು ಇ.ಎಸ್.ಐ., statutory payments ಕೊಡುವ ಬಾಕಿ ಇತ್ತು. ಅದಕ್ಕಾಗಿ ರೂ. 1,200 ಕೋಟಿ ಹಣವನ್ನು ನಾವು ಕೊಟ್ಟಿದ್ದೇವೆ. ಈ ಎಲ್ಲಾ ನಿಗಮಗಳ Motor Vehicle Tax ಸುಮಾರು ರೂ.989 ಕೋಟಿ ಹಣ ಸರ್ಕಾರಕ್ಕೆ due ಇತ್ತು. ಅವರ Balance Sheet ಸ್ವಲ್ಪ ಸರಿಯಾಗತ್ತದೆ ಎನ್ನುವಂತಹದ್ದನ್ನು ನಾವು ಷೇರು ಬಂಡವಾಳಕ್ಕೆ ಪರಿವರ್ತನೆ ಮಾಡಿದ್ದೇವೆ. ನಾನು Budget statement ನಲ್ಲಿ ಕೆಲವೊಂದು ಪ್ರಾವಿಷನ್‌ಗಳನ್ನು ಮಾಡಿದ್ದೇವೆ. ಆ schedule ನಲ್ಲಿ ಅದಕ್ಕೆ ತಕ್ಕ ಹಾಗೇ ಹಣವನ್ನು ಒಟ್ಟಾರೆ ಬಜೆಟ್‌ನ ಗಾತ್ರದ ಅಡಿಯಲ್ಲಿ ಇಡುವುದಕ್ಕೆ ಸಾಧ್ಯವಾಗಿರಲಿಲ್ಲ. ನಾನು ಉತ್ತರ ಕೊಡುವ ಸಂದರ್ಭದಲ್ಲಿ ಪೂರಕ ಬಜೆಟ್‌ನಲ್ಲಿ ಇದಕ್ಕೆ ಕೊಡುತ್ತೇವೆಂದು ಹೇಳಿದ್ದೆ. ವಿವಿಧ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಸುಮಾರು ರೂ. 857 ಕೋಟಿ ಅನುದಾನವನ್ನು ಪೂರಕ ಅಂದಾಜು ಮೊದಲನೆ ಕಂತಿನಲ್ಲಿ ಒದಗಿಸುತ್ತಿದ್ದೇನೆ. So, that ಈ ಬಜೆಟ್‌ನಲ್ಲಿ ಹಿಂದುಳಿದವರಿಗೆ ಅನುದಾನ ಸಿಗಲಿ ಎಂದು ಏನೆಲ್ಲಾ ಕಾರ್ಯಕ್ರಮವನ್ನು ಹಾಕಿದ್ದೇವೆ. ರೈತ ವಿದ್ಯಾ ನಿಧಿ ಮತ್ತು ಕೃಷಿ ಕಾರ್ಮಿಕರಿಗೆ ಸುಮಾರು ರೂ.810 ಕೋಟಿ ಅನುದಾನವನ್ನು ಪ್ರಾವಿಷನ್ ಮಾಡಿದ್ದೇವೆ. ಮೀನುಗಾರರು, ಆಟೋ ಚಾಲಕರು, ರೈತ ವಿದ್ಯಾ ನಿಧಿ ಇದ್ದಂತಹ ಅವರ ಮಕ್ಕಳಿಗೂ ಕೂಡ ರೈತ ವಿದ್ಯಾ ನಿಧಿ ಕೊಡಬೇಕೆಂದು ಹೇಳಿ ಅವರಿಗೂ ಕೂಡ ಇದರಲ್ಲಿ ಪ್ರಾವಿಷನ್ ಮಾಡಿದ್ದೇವೆ.

ಮಾನ್ಯ ಸಭಪತಿಯವರೇ, 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ, ಕೇಂದ್ರ ಸರ್ಕಾರ ಮಾರ್ಚ್ ತಿಂಗಳ ಕೊನೆಯಲ್ಲಿ ಬಿಡುಗಡೆ ಮಾಡಿರುವ ಪಂಚಾಯತ್‌ರಾಜ್ ಸಂಸ್ಥೆಗಳ ನಿರ್ಬಂಧಿತ ಅನುದಾನ ಸುಮಾರು ರೂ. 6,006 ಕೋಟಿ ಅಭಿಯಾಚ್ ಅಡಿಯಲ್ಲಿ ಹೆಚ್ಚುವರಿಯಾಗಿ

ಅನುದಾನವನ್ನು ಒದಗಿಸಲಾಗುತ್ತದೆ. ಅದನ್ನು ಮಾರ್ಚ್ ತಿಂಗಳ ಕೊನೆಗೆ ಮಾಡಬೇಕಾಗಿತ್ತು. ಅದು ಕೊನೆಗೆ ಬಂದಿದ್ದರಿಂದ, ಕಳೆದ ವರ್ಷ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಈ ವರ್ಷ ಅದನ್ನು ತೆಗೆದುಕೊಳ್ಳುತ್ತಿದ್ದೇವೆ. ಅತಿವೃಷ್ಟಿಯಿಂದಾಗಿ ಬೆಳೆ ನಾಶ ಮತ್ತು ಜನ ವಸತಿ ತೊಂದರೆಯಾಗಿರುವ ಕಾರಣ, ಅದಕ್ಕೆ ಹೆಚ್ಚುವರಿಯಾಗಿ ಸುಮಾರು ರೂ. 392 ಕೋಟಿ ಅನುದಾನವನ್ನು ಒದಗಿಸುತ್ತಿದ್ದೇವೆ. ಅಲ್ಲದೇ ಪ್ರಧಾನಿ ಮಂತ್ರಿ ಅವಾಸ್ ಯೋಜನೆಗೆ ಡಾ॥ ಬಿ.ಆರ್ ಅಂಬೇಡ್ಕರ್ ವಸತಿ ಯೋಜನೆಗೆ ಸುಮಾರು ರೂ. 250 ಕೋಟಿ ಅನುದಾನವನ್ನು ಹೆಚ್ಚುವರಿಯಾಗಿ ಒದಗಿಸಲಾಗುವುದು. ಸ್ಮಾರ್ಟ್ ಸಿಟಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಸ್ವೀಕೃತವಾಗಿರುವ ಸುಮಾರು ರೂ. 245 ಕೋಟಿ ಸಹಾಯಧನವನ್ನು ಬಿಡುಗಡೆ ಮಾಡಲು ಪೂರಕ ಅಂದಾಜನ್ನು ಒದಗಿಸುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಅನುದಾನ ಬಂದಿದೆ. (ಮುಂದು)

**(1015) 22-09-2022, 7.10, ಟಿಸಿಹೆಚ್-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

ಆದರೆ ನಮ್ಮಲ್ಲಿ ಪ್ರಾವಿಷನ್ ಇರಲಿಲ್ಲ, ಈಗ ಅದಕ್ಕೆ ಪ್ರಾವಿಷನ್ ಮಾಡಿಕೊಳ್ಳುತ್ತಿದ್ದೇವೆ. ಕೃಷಿ ಸಿಂಚಾಯಿ ಯೋಜನೆ, ಜಲಾನಯನ ಅಭಿವೃದ್ಧಿ ಯೋಜನೆಗೆ ಒಟ್ಟು ರೂ.123 ಕೋಟಿಗಳ ಅನುದಾನವನ್ನು ನೀಡಲಾಗುತ್ತದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ರೂ.60 ಕೋಟಿಗಳು, ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ರೂ.54 ಕೋಟಿಗಳನ್ನು ನೀಡಲಾಗುತ್ತಿದೆ. ನಾನು ಆಗಲೇ ಹೇಳಿದಂತೆ ಆಟೋ ಚಾಲಕರಿಗೆ ಸುಮಾರು ರೂ.50 ಕೋಟಿಗಳು, ಟ್ಯಾಕ್ಸಿ ಚಾಲಕರಿಗೆ ರೂ.40 ಕೋಟಿಗಳನ್ನು ಇದರಲ್ಲಿ ಒದಗಿಸಿದ್ದೇವೆ. ಮಾನ್ಯ ಸಭಾಪತಿಯವರೇ, ರಾಜ್ಯದ ಆರ್ಥಿಕ ಪ್ರಗತಿಗೆ ಸಂಪನ್ಮೂಲಗಳನ್ನು ಸಂಯೋಜನೆ ಮಾಡಲು ಅನುಕೂಲವಾಗುವಂತೆ ಈ ಪೂರಕ ಅಂದಾಜುಗಳಲ್ಲಿ ಬಂಡವಾಳ ವೆಚ್ಚಕ್ಕೆ ಆದ್ಯತೆ ನೀಡಿದ್ದೇನೆ. ಒಂದನೇ ಪೂರಕ ಅಂದಾಜಿನಲ್ಲಿ Capital Expenditure ರಿಂದ asset creation ಗೆ ರೂ.3,916 ಕೋಟಿಗಳನ್ನು ನಾವು ಒದಗಿಸಿದ್ದೇವೆ.

ಭಾರತ ಸಂವಿಧಾನದ 205(1) (ಎ) ಅನುಚ್ಛೇದ ಉಪಬಂಧಗಳಗನುಸಾರವಾಗಿ ಈ ಪೂರಕ ಅಂದಾಜು ಗೌರವಾನ್ವಿತ ರಾಜ್ಯಪಾಲರ ಅನುಮೋದನೆ ಪಡೆದು ವಿಧಾನ ಪರಿಷತ್ತಿನ ಮುಂದೆ ಮಂಡಿಸುತ್ತಿದ್ದೇನೆ. ಇದರನ್ವಯ 2022-23ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಈಗ ವಿಧಾನ ಪರಿಷತ್ತಿನ ಮುಂದೆ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. 2022-23ನೇ ಸಾಲಿನ ರೂ. 14,76,220.60 ಕೋಟಿಗಳ ಹೆಚ್ಚುವರಿ ವೆಚ್ಚವನ್ನು ಭರಿಸಲಿಕ್ಕೆ ಮೊದಲನೇ ಕಂತನ್ನು ತಂದಿದ್ದೀರಿ. ಇದರಲ್ಲಿ ರಿಸರ್ವ್ ಫಂಡ್‌ನಲ್ಲಿ ದೊರೆಯತಕ್ಕಂಥದ್ದು ರೂ.2,389.22 ಕೋಟಿಗಳು ಎಂದು ಹೇಳಿದ್ದೀರಿ. ಈ ರಿಸರ್ವ್ ಫಂಡ್ ಏನಾದರೂ ನ್ಯಾಷನಲ್ ಸೇವಿಂಗ್ಸ್ ಫಂಡ್ ಅಥವಾ Disaster Relief Fund ನಿಂದ ಬಂದಂತಹ ಹಣವೇ ಎಂದು ತಾವು ದಯಮಾಡಿ ಕ್ಲಾರಿಫೈ ಮಾಡಬೇಕು. ಇನ್ನು ಎರಡನೆಯದಾಗಿ, ತಾವು ಸಂಚಿತ ನಿಧಿಯಿಂದ ರೂ.12,372.98 ಕೋಟಿಗಳನ್ನು ಹೊರಗೆ ತೆಗೆಯುತ್ತಿದ್ದೀರಿ. ಅದರಲ್ಲಿ ತಾವು ಇದನ್ನು ಹೇಗೆ ಸರಿದೂಗಿಸುತ್ತೀರೆಂದರೆ, ಸೆಂಟ್ರಲ್ ಸೆಕ್ಟಾರ್ ಸ್ಕೀಂನಿಂದ ಸುಮಾರು ರೂ.525.86 ಕೋಟಿಗಳು ಬರುತ್ತದೆ. ಅಂದರೆ ಇದು ಕೂಡ ಸೆಂಟ್ರಲ್ ಸೆಕ್ಟಾರ್ ಸ್ಕೀಂನಿಂದ ಬರತಕ್ಕಂಥದ್ದೇ. ಅಂದರೆ ಇದು ಸಹ ಕೇಂದ್ರ ಸರ್ಕಾರ ನೀಡುವ ಸಹಾಯವೇ ಎಂಬುದನ್ನು ದಯವಿಟ್ಟು ಕ್ಲಾರಿಫೈ ಮಾಡಬೇಕು. ದಿನಾಂಕ 15.09.2022 ರಂದು ನಾನು ಕೇಳಿದಂತಹ ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 419ಕ್ಕೆ ಕೊಟ್ಟಿರತಕ್ಕಂಥ ಉತ್ತರದಲ್ಲಿ "ಜಿ.ಎಸ್.ಟಿ., ಪರಿಹಾರದ ಬಗ್ಗೆ ಕೇಂದ್ರ ಸರ್ಕಾರದಿಂದ ವಿಸ್ತರಣೆ ಮಾಡುವುದರ ಬಗ್ಗೆ ಯಾವುದೇ ರೀತಿಯಾದಂತಹ ಒಂದು ಭರವಸೆ ಬಂದಿಲ್ಲ" ಎಂದು ತಾವು ಹೇಳಿದ್ದೀರಿ. ಹಾಗಾದರೆ, ಯಾವ ರೀತಿಯಾಗಿ ಹೆಚ್ಚುವರಿ ಈ ವೆಚ್ಚವನ್ನು ಸರಿದೂಗಿಸಲಾಗುತ್ತದೆ ಎಂದು ನಾನು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ.

**ಶ್ರೀ ನಸೀರ್ ಅಹಮದ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ಧನ ವಿನಿಯೋಗ ವಿಧೇಯಕ 2022-23ನೇ ಸಾಲಿನ ಒಂದನೇ ಕಂತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದ್ದಾರೆ, ನಿಜ. ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ

ವಿಸ್ತಾರವಾಗಿ ಕೆಲವು ವಿಷಯಗಳ ಬಗ್ಗೆ ಕೂಡ ಪ್ರಸ್ತಾಪವನ್ನು ಮಾಡಿದ್ದಾರೆ. ಪ್ರತಿಯೊಬ್ಬರಿಗೂ ಗೊತ್ತಿರುವಂತೆ ಪ್ರತಿ ತಿಂಗಳು ಜಿ.ಎಸ್.ಟಿ., ಆದಾಯ beyond expectation ಅಂದರೆ, ಸುಮಾರು ರೂ.1,45,000- ರೂ.1,60,000 ಕೋಟಿಗಳ ವರೆಗೆ ಹೋಗುತ್ತಿದೆ. Every month it is increasing. May be ಅದು business ಇರಬಹುದು, ಇಲ್ಲವೇ turnover ಇರಬಹುದು, ಇಲ್ಲವೇ ಎಕಾನಮಿ ಇರಬಹುದು, buying power ಜಾಸ್ತಿಯಾಗಿರಬಹುದು, ಅದಕ್ಕಾಗಿ revenue is also coming in a big way. ಅದರಲ್ಲಿ contribution of Karnataka ವನ್ನು ನೋಡಿದಾಗ, ಒಂದು ವರ್ಷಕ್ಕೆ ಸುಮಾರು ಒಂದು ಲಕ್ಷ ಕೋಟಿ ಜಿ.ಎಸ್.ಟಿ., ಯನ್ನು ನಮ್ಮ ಕರ್ನಾಟಕದಿಂದಲೇ contribute ಮಾಡುತ್ತಿದ್ದೇವೆ. ಅದರ ಜೊತೆಗೆ ಸುಮಾರು ರೂ. 1.5 ಲಕ್ಷ ಕೋಟಿಗಳು ಇನ್‌ಕಂ ಟ್ಯಾಕ್ಸ್ ಮತ್ತು ಕಾರ್ಪೋರೇಟ್ ಟ್ಯಾಕ್ಸ್ ಮುಖಾಂತರ ಕೂಡ ಹೋಗುತ್ತಿದೆ. ಡೀಸೆಲ್ ಮತ್ತು ಪೆಟ್ರೋಲ್‌ನಿಂದಲೂ ಕೂಡ ಸುಮಾರು ರೂ.35,000-40,000 ಕೋಟಿಗಳು ಹೋಗುತ್ತಿದೆ. Customs Duty ಯಿಂದ ಸುಮಾರು ರೂ.30,000 ಕೋಟಿಗಳು ಹೋಗುತ್ತಿದೆ. ಸೆಸ್ ರೂ.10,000 ಕೋಟಿಗಳು ಹೋಗುತ್ತಿದೆ. ಒಟ್ಟು ನಮ್ಮ ರಾಜ್ಯದಿಂದ the total contribution itself must be nearly Rs.3.3 lakh crores. ರೂ.3.3 ಲಕ್ಷ ಕೋಟಿಗಳು ಪ್ರತಿ ವರ್ಷ ನಮ್ಮ ರಾಜ್ಯದಿಂದ ಹೋಗುತ್ತದೆ. What is that we are getting from the Central Government? ಅದರ ಬಗ್ಗೆಯೂ ಕೂಡ ಸ್ವಲ್ಪ ಹೇಳಬೇಕು. I know that you are the better person and you know how to manage things. ನಮ್ಮ ಕರ್ನಾಟಕದಲ್ಲಿರತಕ್ಕಂಥ I.T., industries are also contributing Rs.48 lakh crores. ಅದು ಐ.ಟಿ., ಇಂಡಸ್ಟ್ರೀಸ್ ಆಗಿರಬಹುದು ಮತ್ತು ಬಯೋ ಟೆಕ್ನಾಲಜಿ ಆಗಿರಬಹುದು, it is going from all the industries. ಈ ರೀತಿ ಇದ್ದಾಗ why not we are getting some special consideration, why not we try for that, why not we ask for it ಎಂಬ ಒಂದು ಪ್ರಶ್ನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಕಾರಣ . . .

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರೇ, ತಾವು ಮಾತನಾಡಿ.

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಸುಮಾರು ರೂ 5,40,000 ಕೋಟಿಗಳಷ್ಟು ಸಾಲ ಇದೆ. ಪ್ರತಿ ವರ್ಷಕ್ಕೆ ಸುಮಾರು ರೂ.45,000 ಕೋಟಿಗಳನ್ನು ನಾವು ಇಂಟ್ರೆಸ್ಟ್ ಮತ್ತು ಪ್ರಿನ್ಸಿಪಲ್ ಅಮೌಂಟ್ ಕಟ್ಟುತ್ತಿದ್ದೇವೆ. ಇದರ ಜೊತೆಗೆ ಒಂದುಕಡೆ health of the State finance ಬಾರಿ ಚೆನ್ನಾಗಿದೆ, ಇಂಪ್ರೂವ್ ಆಗುತ್ತಿದೆ ಎಂದು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ. ಅವರ ಪಕ್ಕದಲ್ಲೇ ಸಮಾಜ ಕಲ್ಯಾಣ ಸಚಿವರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಕೂಡ ಕುಳಿತುಕೊಂಡಿದ್ದಾರೆ. ಹಾಸ್ಟೆಲ್‌ಗಳಲ್ಲಿನ ವಿದ್ಯಾರ್ಥಿಗಳಿಗೆ ಕಿಟ್ ಕೊಡುವ ಕಾರ್ಯಕ್ರಮ ಇದುವರೆಗೂ ಆಗಿಲ್ಲ. ಕಿಟ್ ಕೊಡುತ್ತಾರೆ, ಅವರಿಗೆ ತರಗತಿಗಳೆಲ್ಲಾ ಪ್ರಾರಂಭವಾಗಿ ಸುಮಾರು 6 ತಿಂಗಳಾಗಿದೆ. ಆದರೆ ಇವತ್ತಿನವರೆಗೂ ಆ ಕಿಟ್ ಮಕ್ಕಳಿಗೆ ಇನ್ನೂ ಸಿಕ್ಕಿಲ್ಲ. ಆ ರೀತಿ. . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಇದಕ್ಕೆ ಮಾತ್ರ ಸೀಮಿತವಾಗಿ ಮಾತನಾಡುತ್ತೇನೆ. ಮಾನ್ಯ ನಸೀರ್ ಅಹಮದ್ ರವರೇ, ಅದು ಹಾಗಲ್ಲ, ಕೇಳಿ. . .

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಸಚಿವರೇ, ತಾವು ಹಾಸ್ಟೆಲ್‌ನಲ್ಲಿರತಕ್ಕಂಥ ವಿದ್ಯಾರ್ಥಿಗಳಿಗೆ ಯೂನಿಫಾರ್ಮ್, ಶೂ, ಅವರು ಮಲಗಿಕೊಳ್ಳಲು ಬೆಡ್‌ಶೀಟ್, ಕಂಬಳಿಯನ್ನು ಕೊಟ್ಟಿದ್ದೀರಾ?

**ಸಭಾಪತಿಯವರು:–** ಮಾನ್ಯ ನಸೀರ್ ಅಹ್ಮದ್ ರವರೇ, ಮಾನ್ಯ ಸಚಿವರು ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಹೇಳುತ್ತಿದ್ದೇನೆಂದು ಹೇಳುತ್ತಿದ್ದಾರೆ, ತಾವು ಅವರು ಹೇಳುವುದನ್ನೂ ಸ್ವಲ್ಪ ಕೇಳಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಧ್ಯೆ ನಿಲ್ಲಿಸುತ್ತಿದ್ದಾರೆ, ಮಾನ್ಯ ನಸೀರ್ ಅಹ್ಮದ್ ರವರು ಪೂರ್ತಿ ಹೇಳುವುದನ್ನು ಕೇಳಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅವರು ಕೇಳಿದ್ದಕ್ಕೆ ಹೇಳುತ್ತಿದ್ದೇನೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಹೀಗೆ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನಾವು ಮಾಡುವುದಲ್ಲಾ ಮಾನ್ಯ ನಸೀರ್ ಅಹ್ಮದ್ ರವರು ಹೇಳುವುದನ್ನು ಪೂರ್ತಿ ಕೇಳಿ. ಆಮೇಲೆ ನೀವು ಹೇಳಿ. ಅರ್ಧದಲ್ಲೇ ಏಕೆ ತಾವು ಮೇಲೆ ಏಳುತ್ತಿದ್ದೀರಿ. **(ಗೊಂದಲ)** ಆಮೇಲೆ ಉತ್ತರ ಕೊಡಿ, ನಾವು ಕೇಳುತ್ತೇವೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾನಾಯಕರೇ, ನಾನು ಇನ್ನೂ ಕಂಪ್ಲೀಟ್ ಮಾಡಿಲ್ಲ. ಮಾನ್ಯ ಅನಿಲ್ ಕುಮಾರ್ ರವರು ಪ್ರಶ್ನೋತ್ತರ ಅವಧಿಯಲ್ಲೂ ಕೂಡ ಇದನ್ನು ತಂದಿದ್ದರು. ಆ ವಿಷಯ ಅರ್ಧಗಂಟೆ ಕಾಲ ಚರ್ಚೆಗೆ ಬಂದಿತ್ತು. ಆ ಚರ್ಚೆಯಲ್ಲಿ ನಾವು ಇದನ್ನು ತರಬೇಕಾಗಿತ್ತು. ನಾನು ನಿಜವಾಗಿ ಮಾತನಾಡುತ್ತಿದ್ದೇನೆ. I am not talking in the air. ನಾನು ಹವಾದಲಿ ಮಾತು ಆಡುತ್ತಿಲ್ಲ. It is a fact. ಬೇಕಾದರೆ ನೀವು ಹಾಸ್ಟೆಲ್‌ಗಳಿಗೆ ಹೋಗಿ ನೋಡಿ, ತಮಗೆ ಗೊತ್ತಾಗುತ್ತದೆ. ಇದರ ಜೊತೆಗೆ ಇವತ್ತಿನ ದಿವಸ ಶಿಕ್ಷಕರ ಸಂಬಳವನ್ನು ಕೊಡುವುದು ವಿಳಂಬವಾಗುತ್ತಿದೆ. ಕಂಟ್ರಾಕ್ಟರ್ಸ್‌ಗೆ ಬಿಲ್‌ಗಳು ಕಳೆದ ಎರಡು ವರ್ಷಗಳಿಂದ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಇಂತಹ ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಒಂದು ಕಡೆ ತಾವು 'we have a healthy financial situation' ಎಂದು ಹೇಳುತ್ತೀರಿ. ಈಗಾಗಲೇ I am very happy when our Hon'ble Chief Minister said, ರೂ. 5,000

ಕೋಟಿಗಳು ಬರುತ್ತಿರುವುದು ರೂ.8,000 ಕೋಟಿಗಳು ಬರುತ್ತಿದೆಯೆಂದು ಹೇಳಿದರು. ಸುಮಾರು ರೂ.16,000 ಕೋಟಿಗಳು ಏನು ಬರಬೇಕಿದೆಯೋ ಅದು ಕೂಡ ಬರಲು ಅವಕಾಶವಿದೆಯೆಂದು ಹೇಳುತ್ತಿದ್ದರು. We are very happy. At the same time, ಇವತ್ತಿನ ದಿವಸ ಇಲ್ಲಿರತಕ್ಕಂಥ ಸಮಸ್ಯೆಗಳು: Particularly, Bengalure city ಯಲ್ಲಿ ಈ ಅನಾಹುತಗಳೆಲ್ಲಾ ಆಗಿದೆ. Why don't you ask for a special grant? You know this city is an international city. ಅದಕ್ಕಾಗಿ ಇವತ್ತಿನ ದಿವಸ ಆಗಿರತಕ್ಕಂಥದ್ದಕ್ಕೆ you can ask for a special grant ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ರಿಕ್ವೆಸ್ಟ್ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ತಾವು ದಯವಿಟ್ಟು ಮುಗಿಸಿ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾನಾಯಕರೇ, ಇದರ ಜೊತೆಗೆ can I just take one minute of House's time on humanitarian condition? ನಾವು ನಿನ್ನೆ ದಿವಸ ನಿಮ್ಮ ಛೇಂಬರ್‌ಗೂ ಕೂಡ ಬಂದಿದ್ದೆವು. ಮಾನ್ಯ ಶಿವರಾಮ್ ಹೆಬ್ಬಾರ್, ಆಯನೂರು ಮಂಜುನಾಥ್ ರವರು ಕೂಡ ಜೊತೆಯಲ್ಲಿದ್ದರು. ನಾವು ತಮ್ಮ ಬಳಿ ಬಂದು ರಿಕ್ವೆಸ್ಟ್ ಮಾಡಿಕೊಂಡೆವು. ನಾನು ಇವತ್ತು ಬೆಳಗ್ಗೆ ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳನ್ನೂ ಕೂಡ ಭೇಟಿ ಮಾಡಿ ರಿಕ್ವೆಸ್ಟ್ ಮಾಡಿದೆನು. ಅರಣ್ಯ ಇಲಾಖೆಯಲ್ಲಿ ಅರಣ್ಯ ರಕ್ಷಕರು, ವಾಚರ್ಸ್, ಫಾರೆಸ್ಟರ್ ಇವರ ಒಂದು ಟ್ರಾನ್ಸ್‌ಫರ್ ಪಾಲಿಸಿ ಕೌನ್ಸಿಲಿಂಗ್‌ದು ಬಂದಿದೆ. ಅದು 2017ರಲ್ಲಿ ಆಗಿರತಕ್ಕಂಥ ಪಾಲಿಸಿ. ಅದನ್ನು ಇಂಪ್ಲಿಮೆಂಟ್ ಮಾಡಬೇಕಾಗಿರತಕ್ಕಂಥದ್ದು first of March ನಿಂದ first of ಮೇ ವರೆಗೆ ಮಾಡಬೇಕೆಂದು the Act itself says. ಈಗ ಇಲಾಖೆಯವರು ಮಧ್ಯೆ software ರೆಡಿಯಾಗಿಲ್ಲವೆಂದು ಹೇಳಿದ್ದರು. ಈಗ ಆ ಸಾಫ್ಟ್‌ವೇರ್ ರೆಡಿಯಾಗಿದೆಯೆಂದು they want to introduce it now. ಈಗ ಅವರ ಮಕ್ಕಳೆಲ್ಲಾ ಪಿ.ಯು.ಸಿ., ಮತ್ತು ಎಸ್.ಎಸ್.ಎಲ್.ಸಿ.,ಯಲ್ಲಿ ಓದುತ್ತಿದ್ದಾರೆ. ಈಗ ಆ ಮಕ್ಕಳ ಭವಿಷ್ಯ ಏನಾಗಬೇಕು? ಅದಕ್ಕಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ರಿಕ್ವೆಸ್ಟ್ ಮಾಡುವುದೇನೆಂದರೆ, ಅದನ್ನು ಮುಂದಿನ ಮಾರ್ಚ್‌ನಲ್ಲಿ . . .

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್ ರವರೇ, ಇದು ಫೈನಾನ್ಸ್ ಬಿಲ್‌ಗೆ concerned ಇಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ,. . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ಹಾಸ್ಟೆಲ್‌ಗೆ ಸೀಮಿತವಾಗಿ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈಗ ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಮುಗಿಸಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ಈಗ ಮಾನ್ಯ ನಸೀರ್ ಅಹ್ಮದ್‌ರವರು ವಸತಿ ಶಾಲೆಗಳಿಗೆ ಸಂಬಂಧಿಸಿದಂತೆ ಮಕ್ಕಳಿಗೆ ಬೂಟ್ಸ್ ಕೊಟ್ಟಿಲ್ಲ, ಸಮವಸ್ತ್ರ ಕೊಟ್ಟಿಲ್ಲ ಮತ್ತು ಶುಚಿ ಸಂಭ್ರಮ ಕಿಟ್ ಕೊಟ್ಟಿಲ್ಲವೆಂದು ಆರೋಪ ಮಾಡಿದರು. ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸ್ಪಷ್ಟಪಡಿಸುವುದೇನೆಂದರೆ, ಕೋವಿಡ್-19 ಸಂದರ್ಭದಲ್ಲಿ ಸುಮಾರು ಒಂದೂವರೆ ವರ್ಷದ ಹಿಂದೆ ಅದನ್ನು ನಿಲ್ಲಿಸಿರುವುದು ಸತ್ಯ. ಆದರೆ ಈ ವರ್ಷ ಎಲ್ಲಾ ಮಕ್ಕಳಿಗೂ ಕೊಡಬೇಕಾದ ಎಲ್ಲಾ ಸೌಲತ್ತುಗಳನ್ನೂ ಕೊಡಲಾಗಿದೆ. ಈ ಮಧ್ಯೆ ನಮ್ಮ ಹಾಸ್ಟೆಲ್‌ಗೆ ಮತ್ತೆ ಸಮವಸ್ತ್ರವನ್ನು ಕೊಡಬೇಕೆಂಬ ಪ್ರಸ್ತಾಪ ಇತ್ತು.

**(ಮುಂದು.. .)**

(1016)22.9.2022/7.20/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಆದರೆ ನಮ್ಮ ಹಾಸ್ಟೆಲ್‌ನಿಂದ ಶಾಲೆಗೆ ಹೋಗುವಂತಹ ಮಕ್ಕಳಿಗೆ ಶಿಕ್ಷಣ ಇಲಾಖೆಯವರೇ ಎರಡು ಜೊತೆ ಕೊಡುವುದರಿಂದ ಮತ್ತೆ ಎರಡು ಜೊತೆ ಕೊಡಲು ಏನು ಮಾಡಬೇಕೆಂಬ ಚರ್ಚೆ ಬಂದ ಹಿನ್ನೆಲೆಯಲ್ಲಿ ಅವರಿಗೆ ಬೇರೆ ಸಮವಸ್ತ್ರಗಳನ್ನು ಅಂದರೆ night dress ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರು ಸಂಬಳದ ಬಗ್ಗೆ ಹೇಳಿದ್ದಾರೆ. ಸಂಬಳ ಕೊಡುವುದು ಒಂದು ತಿಂಗಳು ತಡವಾಗಿದೆ. ನಂತರ ಎಲ್ಲಾ ಸಂಬಳಗಳನ್ನೂ ಚುಕ್ತ ಮಾಡಲಾಗಿದೆ. ಇನ್ನು ಕಟ್ಟಡಗಳಿಗೆ ಹಣ ಕೊಟ್ಟಿಲ್ಲ ಎಂದು ಕಂಟ್ರ್ಯಾಕ್ಟರುಗಳು ಗಲಾಟೆ ಮಾಡುತ್ತಾರೆ ಎಂದು ಹೇಳಿದ್ದಾರೆ. 1100 ಕೋಟಿ ರೂಪಾಯಿಗಳನ್ನು ನಾವು ಕಟ್ಟಡಗಳಿಗೆ ಕೊಡಬೇಕಾಗಿತ್ತು. 2022-23ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು 700 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಸಮಾನವಾದ 4 ಕಂತುಗಳಲ್ಲಿ 320 ಕೋಟಿ ರೂಪಾಯಿಗಳು ಈಗಾಗಲೇ ಬಿಡುಗಡೆಯಾಗಿದೆ. ಯಾರು ಕಾಮಗಾರಿ ಮಾಡಿ ನಮಗೆ ಬಿಲ್ ಕೊಟ್ಟಿದ್ದಾರೆ ಜೇಷ್ಠತೆ ಆಧಾರದ ಮೇಲೆ ನೇರವಾಗಿ ಅವರ ಖಾತೆಗೆ ಹಾಕುವ ಕ್ರಮವನ್ನು ಕೈಗೊಂಡಿದ್ದೇವೆ. ನಮ್ಮ ಇಲಾಖೆಯು ಸಂಪೂರ್ಣ ಪಾರದರ್ಶಕವಾಗಿ ಕೆಲಸ ಮಾಡುತ್ತಿದೆ. ಮಾನ್ಯ ಸದಸ್ಯರಿಗೆ ಮತ್ತೇನಾದರೂ ಅನುಮಾನಗಳಿದ್ದರೆ ಅದನ್ನೂ ಸಹ ನಾನು ಪರಿಹಾರ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಏನು ಪೂರಕ ಅಂದಾಜಿನ ವಿಧೇಯಕವನ್ನು ಮಂಡಿಸಿದ್ದಾರೆ ಆ ಹಿನ್ನೆಲೆಯಲ್ಲಿ ಸರ್ಕಾರವನ್ನು ಕೇಳುವುದೇನೆಂದರೆ, ಜಿ.ಎಸ್.ಟಿ.,ಯಲ್ಲಿ ನಮಗೆ ಕೇಂದ್ರ ಸರ್ಕಾರದಿಂದ ರೂ. 14,100 ಕೋಟಿ ಹಣ ಬರಬೇಕಾಗಿದೆ. ಅದನ್ನು ತರುವುದಕ್ಕೆ ಎಲ್ಲೋ ಒಂದು ಕಡೆ ಸರ್ಕಾರ ವಿಫಲವಾಗಿದೆಯೆಂಬುದು ನಮ್ಮ ಭಾವನೆಯಾಗಿದೆ. ಅದು ಯಾವಾಗ ಬರುತ್ತದೆ, ಅದರಿಂದ ನಮಗೆ ಏನು ಅನುಕೂಲವಾಗುತ್ತದೆ ಎಂದು ಕೇಳಬಯಸುತ್ತೇನೆ. ಹಾಗೂ ನಾವು ಕೇಂದ್ರ

ಸರ್ಕಾರಕ್ಕೆ ಕೊಡುವ ತೆರಿಗೆಗಳಲ್ಲಿ ವಿಶೇಷವಾಗಿ ಶೇ.50ರಷ್ಟು ತೆರಿಗೆಗಳು ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮತ್ತು ಕರ್ನಾಟಕ ಈ ನಾಲ್ಕು ರಾಜ್ಯಗಳಿಂದ ಹೋಗುತ್ತದೆ. ಅದರಲ್ಲಿ ನಾವು ಪ್ರತಿ ನಾಗರಿಕರಿಗೆ ಮಹಾರಾಷ್ಟ್ರದಲ್ಲಿ ರೂ. 32,000/- ಪಾವತಿಸುತ್ತಾರೆ, ಕರ್ನಾಟಕದಲ್ಲಿ ರೂ. 20,000/- ಪಾವತಿಸುತ್ತಾರೆ. ಮಧ್ಯಪ್ರದೇಶ, ಬಿಹಾರ ಮತ್ತು ಉತ್ತರಪ್ರದೇಶದಲ್ಲಿ ಅವರು ಕೇವಲ ರೂ. 6,000/- ಹಣವನ್ನು ಪಾವತಿಸುತ್ತಾರೆ. ಆದರೆ ಕೇಂದ್ರ ಸರ್ಕಾರವು ನಮಗೆ ವಾಪಸ್ ಕೊಡಬೇಕಾದರೆ ಮಹಾರಾಷ್ಟ್ರಕ್ಕೆ ರೂ. 15 ಅನ್ನು ವಾಪಸ್ ಕೊಡುತ್ತಾರೆ, ಕರ್ನಾಟಕಕ್ಕೆ 20-25 ರೂಪಾಯಿ ಮತ್ತು ತಮಿಳುನಾಡಿಗೆ 34 ರೂಪಾಯಿಗಳನ್ನು ವಾಪಸ್ ಕೊಡುತ್ತಾರೆ. ಅದರೆ ಉತ್ತರ ಪ್ರದೇಶಕ್ಕೆ ಸುಮಾರು 200 ರೂಪಾಯಿಗಳನ್ನು, ಬಿಹಾರಕ್ಕೆ 300 ರೂಪಾಯಿಗಳು ಹೀಗೆ ಹೆಚ್ಚು ಹಣವನ್ನು ವಾಪಸ್ ಕೊಡುತ್ತಿದ್ದಾರೆ. ಎಲ್ಲೋ ಒಂದು ಕಡೆ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ತಾರತಮ್ಯ ಆಗುತ್ತಿದೆ ಎಂದು ಅನಿಸುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇನ್ನೊಂದು ಅತಿವೃಷ್ಟಿ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಇದಕ್ಕೆ ಏನಾದರೂ ಒಂದು ವಿಶೇಷ ಪ್ಯಾಕೇಜನ್ನು ತಾವು ಕೊಡುತ್ತೀರಿ ಎಂದು ಭಾವಿಸಿದ್ದೇವೆ. ಆದರೆ ಯಾವುದೇ ರೀತಿಯ ವಿಶೇಷವಾದ ಪ್ಯಾಕೇಜನ್ನು ಕೊಡಲಿಲ್ಲ. ಎಷ್ಟು ಹಾನಿಯಾಗಿದೆ ಎಂಬುದರ ಬಗ್ಗೆ ನಮಗೆ ಮಾಹಿತಿ ಬೇಕಾಗಿದೆ. ಕ್ರೀಡೆಗೆ ಸಂಬಂಧಿಸಿದಂತೆ ನಮಗೆ ಜಾಸ್ತಿ ಅನುದಾನವನ್ನು ಕೊಡಬೇಕೆಂದು ಭಾವಿಸಿದ್ದೇವೆ. ಸದ್ಯ ನೀವು ಕೊಟ್ಟಿರುವುದು ಸುಮಾರು 250 ಕೋಟಿ ರೂಪಾಯಿಗಳು. ಈಗಾಗಲೇ ಕ್ರೀಡೆಗೆ ಪ್ರೋತ್ಸಾಹ ಕೊಡುವುದಕ್ಕೆ ಜಾಸ್ತಿ ಹಣವನ್ನು ಬಿಡುಗಡೆ ಮಾಡಬೇಕು. ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಪದಕಗಳನ್ನು ಪಡೆದಿರುವ ಕ್ರೀಡಾಪಟುಗಳಿಗೆ ನಾವೆಲ್ಲರೂ ಸದನದಲ್ಲಿ ಒಂದು ವಿಶೇಷವಾದ ನಿರ್ಣಯವನ್ನು ಮಾಡಿದ್ದೇವೆ. ಇದಕ್ಕೆ ಜಾಸ್ತಿ ಹಣವನ್ನು ಬಿಡುಗಡೆ ಮಾಡಬೇಕು ಮತ್ತು ಪದಕವಿಜೇತರಿಗೆ announce ಮಾಡಿರುವುದನ್ನು ಸ್ವಲ್ಪ ಜಾಸ್ತಿ ಮಾಡಬೇಕು ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಂ. ನಾಗರಾಜು(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮೊದಲು ಅಭಿನಂದಿಸಬೇಕು. ನಾನು

ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದಾಗ ನಾಲ್ಕು ಸಾರಿಗೆ ನಿಗಮಗಳಿಗೆ ಸಂಬಳ ಕೊಡುವುದಕ್ಕೆ ಸಹಾಯ ಮಾಡಿದ್ದಾರೆ. ಕೋವಿಡ್ ಸಂದರ್ಭಗಳಿಂದ ಇವತ್ತಿನವರೆಗೂ ಸಹಾಯ ಮಾಡಿದ್ದಕ್ಕೆ ಮೊದಲು ಮುಖ್ಯಮಂತ್ರಿಗಳಿಗೆ, ವಿತ್ತ ಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆ ಸಂಸ್ಥೆಗಳು ನಷ್ಟದಲ್ಲಿ ನಡೆಯುತ್ತಿದ್ದ ವಿಚಾರವನ್ನು ಹೇಳಿ 1200 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದರು. ಅದು ಏತಕ್ಕೆ ನಷ್ಟದಲ್ಲಿ ನಡೆಯುತ್ತಿದೆ ಎಂಬುದನ್ನು ಯೋಚನೆ ಮಾಡಿದಾಗ ಪ್ರತಿ ದಿನ ರೂ. 15 ಕೋಟಿ ಮೌಲ್ಯದ ಡೀಸೆಲ್ ಅನ್ನು ಖರೀದಿ ಮಾಡುತ್ತಿರುವ ಮಾಹಿತಿಯನ್ನು ಸಾರಿಗೆ ಮಂತ್ರಿಗಳು ಹೇಳಿದರು. ನಾನು ಕೇಳುತ್ತಿರುವುದೇನೆಂದರೆ, ರಾಜ್ಯ ಸರ್ಕಾರ ಚಾರ್ಜ್ ಮಾಡಿದ ವ್ಯಾಟ್ ಅನ್ನು ಏತಕ್ಕೆ exemption ಕೊಡಬಾರದು ಆ ಸಂಸ್ಥೆಗಳು self-sustain ಆಗುವುದಕ್ಕೆ ಮತ್ತು ಬಸ್ಸುಗಳಿಗೆ motor vehicle tax ಅನ್ನು ಸರ್ಕಾರಕ್ಕೆ ಚಾರ್ಜ್ ಮಾಡುತ್ತಾರೆಯೋ? ಸರ್ಕಾರಿ ಬಸ್ಸುಗಳಿಗೆ ಯಾವ ಕಾರಣಕ್ಕೆ ಚಾರ್ಜ್ ಮಾಡುತ್ತಿದ್ದಾರೆ? ಏರ್‌ಪೋರ್ಟ್‌ಗೆ ಹೋಗುವ ಬಸ್ಸುಗಳಿಗೆ ಟೋಲ್ ಏತಕ್ಕೆ ಸಂಗ್ರಹ ಮಾಡುತ್ತಿದ್ದಾರೆ? ಇವೆಲ್ಲವುಗಳು ಕೂಡ ಸಂಸ್ಥೆಯಿಂದ ಏನನ್ನು ತೆಗೆದುಕೊಳ್ಳುತ್ತಿದ್ದಾರೆ ವಾಪಸ್ ಅದಕ್ಕೆ exemption ಕೊಟ್ಟಿದ್ದೇ ಆದರೆ they can sustain by themself. ಹಾಗಾಗಿ ನಾನು ಮನವಿ ಮಾಡುತ್ತಿರುವುದೇನೆಂದರೆ, ಒಂದು ಕಡೆ ಅವರಿಂದ ತೆಗೆದುಕೊಂಡು ಅವರ ಹಣವನ್ನೇ ಅವರಿಗೆ ವಾಪಸ್ ಕೊಡುವುದರಲ್ಲಿ ಅರ್ಥವಿರುವುದಿಲ್ಲ. ದಯವಿಟ್ಟು ಅವರಿಗೆ exemption ಕೊಡಿ ಮತ್ತು ಡಿಪೋಗಳಲ್ಲಿ ನೌಕರರು ಕುಡಿಯುವ ನೀರಿಗೆ ಕೂಡ commercial rate ಹಾಕುತ್ತಾರೆ. ಅವರು ತುಂಬಾ ಕಷ್ಟದಲ್ಲಿರುವಂತಹವರು. Electric bills ಗೂ ಸಹ commercial rate ಹಾಕುತ್ತಾರೆ. ಅದೊಂದು essential service ಆದುದರಿಂದ ರಾಜ್ಯ ಸರ್ಕಾರ ತೆಗೆದುಕೊಳ್ಳುವ ಎಲ್ಲಾ ತೆರಿಗೆಗಳನ್ನು exemption ಮಾಡಿ ಆ ಸಂಸ್ಥೆಗಳನ್ನು ಉಳಿಸುವ ಕೆಲಸ ಮಾಡಬೇಕು. ವಿಶೇಷವಾಗಿ ಬಿ.ಎಂ.ಟಿ.ಸಿ ಗೆ ಒಂದು ವಿಶೇಷವಾದ ಪ್ಯಾಕೇಜನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಅತಿ ವೇಗವಾಗಿ ಬೆಳೆಯುತ್ತಿರುವ ಈ ನಗರಕ್ಕೆ public transport priority sector ಮಾಡಿ ಪ್ರತ್ಯೇಕವಾದ ಬಜೆಟನ್ನು ಘೋಷಣೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಮಠಗಳಿಗೆ ಮತ್ತು ಮೀನುಗಾರರಿಗೆ ಕೆಲವು ಸಹಾಯಧನವನ್ನು ಮಾಡಿದ್ದೇವೆ ಎಂದು ಹೇಳಿದರು. ಕಾಯಕ ಸಮಾಜದವರು 365 ದಿವಸ ದುಡಿದು ನಿಮ್ಮ ಖಜಾನೆಯನ್ನು ಮತ್ತು ದೆಹಲಿ ಖಜಾನೆಯನ್ನು ತುಂಬುತ್ತಿದ್ದಾರೆ. ಅವರಿಗೆ ಎಷ್ಟು ಹಣ ಕೊಟ್ಟರೂ ಸಹಾಯಧನ ಕೊಟ್ಟರೂ ನಮ್ಮದೇನೂ ಅಭ್ಯಂತರವಿಲ್ಲ, ಕೊಡಿ. ಮಠಗಳಿಗೆ ಕೊಡುವಾಗ ಅವರೇನಾದರೂ ಶಾಲಾ ಕಾಲೇಜುಗಳನ್ನು ನಡೆಸುತ್ತಿದ್ದರೆ ಅದಕ್ಕೆ ಎಷ್ಟಾದರೂ ಕೊಡಿ. ಮಾನ್ಯ ಮರಿತಿಬ್ಬೇಗೌಡರು ಬೆಳಗ್ಗೆ ಅದನ್ನೆ ಹೇಳಿದರು. ನಾನು ಕಳೆದ ಬಜೆಟ್‌ನಲ್ಲೂ ಕೂಡ ಮನವಿ ಮಾಡಿಕೊಂಡೆನು. ಅಲ್ಪಸಂಖ್ಯಾತರ ಹೆಣ್ಣುಮಕ್ಕಳಿಗೆ ಎರಡು ವರ್ಷ scholarship ಕೊಟ್ಟಿದ್ದು ಮೊದಲನೆ ವರ್ಷದ scholarship ಕೊಡುತ್ತಿಲ್ಲ. ನಾನು ಪ್ರತಿ ಸಲ ಕೂಡ ಕಾರ್ಯದರ್ಶಿಯವರ ಜೊತೆ ಮಾತನಾಡಿದೆ. ಪಾಪ ಅವರು ದಿನವೂ ಕಣ್ಣೀರು ಹಾಕುತ್ತಾ ಬರುತ್ತಾರೆ ಅವರಿಗೇನೂ ಪರಿಹಾರ ಸಿಗುತ್ತಿಲ್ಲ. ಮಾನ್ಯ ಸದಸ್ಯರಾದ ನಸೀರ್ ಅಹಮದ್‌ರವರು ಮತ್ತು ನಾವೆಲ್ಲಾ ಕಳೆದ ಸಲ ನಿಯೋಗದೊಂದಿಗೆ ಹೋಗಿ ನಿಮ್ಮ ಕಾರ್ಯದರ್ಶಿಯವರನ್ನು ಕೂಡ ಭೇಟಿ ಮಾಡಿದ್ದೆವು.

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು):-** ಕಳೆದ ಸಲ ಕೊಟ್ಟಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** 2-3ನೇ ವರ್ಷದ್ದು ಕೊಟ್ಟಿದ್ದಾರೆ ಮೊದಲನೆ ವರ್ಷದ ಸ್ಕಾಲರ್‌ಶಿಪ್ ಕೊಟ್ಟಿಲ್ಲ. ಮಠಕ್ಕೆ ಏತಕ್ಕೆ ಬೇಕು? ಭಕ್ತಾದಿಗಳು ಕೊಡುತ್ತಾರೆ. ಪಾಪ ಮಕ್ಕಳಿಗೆ, why are you denying them? ಸ್ವಲ್ಪ ದೊಡ್ಡ ಮನಸ್ಸು ಮಾಡಿ. ಅದೇನು 100 ಕೋಟಿ 200 ಕೋಟಿ ರೂಪಾಯಿಗಳಲ್ಲ. ರೂ. 05 ಕೋಟಿಯೊಳಗೆ ಎಲ್ಲವೂ ಮುಗಿಯುತ್ತದೆ. ನೀವು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಮತ್ತು ಕಾಯಕ ಸಮಾಜದವರಿಗೆ ಕೊಡುವುದಕ್ಕಾಗುವುದಿಲ್ಲ ಎಂದರೆ ಮಠ ಮಾನ್ಯಗಳಿಗೆ ಕೊಡುತ್ತೇವೆ ಎಂದರೆ ಭಾರಿ ಸಂತೋಷ. Most productive agencies ಅದು, ಮಾಡಿ, ಬಹಳ ಸಂತೋಷ, ಅದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಮ್ಮ ಹರಿಪ್ರಸಾದ್‌ರವರು political angle ನ್ನು economics ನಲ್ಲಿ ಹೇಗೆ ತರಬೇಕು ಎಂಬ ಬಗ್ಗೆ ಬಹಳ ಬುದ್ಧಿವಂತರಿದ್ದಾರೆ. Socio-economic ಕೇಳಿದ್ದೇನೆ ಆದರೆ ಇದು politico-economic. ಇವತ್ತು ಬಜೆಟ್‌ನಲ್ಲಿ ಮತ್ತು ಬಜೆಟ್ ನಂತರ ಯಾರ್ಯಾರು ಕಾಯಕ ಮಾಡುತ್ತಿದ್ದಾರೆ, ಶ್ರಮ ವಹಿಸುತ್ತಿದ್ದಾರೆ, ದುಡಿಮೆ ವರ್ಗ ಇದೆ ಅವರಿಗೆ ನಾವು ಹೆಚ್ಚಿನ ಮಹತ್ವ ಕೊಟ್ಟಿದ್ದೇವೆ. ಕಳೆದ ವರ್ಷ 'ರೈತರ ವಿದ್ಯಾನಿಧಿ'ಯನ್ನು ಮಾಡಿದೆವು. ಈ ವರ್ಷ ಅಷ್ಟೇ ಪ್ರಮಾಣದಲ್ಲಿರುವಂತಹ ಕೃಷಿ ಕಾರ್ಮಿಕರಿಗೂ ರೈತ ವಿದ್ಯಾನಿಧಿಯನ್ನು ವಿಸ್ತರಿಸಿದ್ದೇವೆ. ಮೀನುಗಾರರಿಗೂ ಮತ್ತು ನೇಕಾರರಿಗೂ ಮಾಡಿದ್ದೇವೆ. ಅದರ ಜೊತೆಗೆ taxi drivers and auto drivers ಗೂ ಮಾಡಿದ್ದೇವೆ, ಇದೆಲ್ಲಾ ಕಾಯಕ ಸಮಾಜ. ನಾವು ಯಾವುದನ್ನೂ neglect ಮಾಡಿಲ್ಲ. ಇವತ್ತು ಹಳ್ಳಿಗಳಲ್ಲಿರುವ ಬಡಿಗೇರರು, ಕುಂಬಾರರು, ಕುರುಬರು, ಮೇದಾರರು ಮತ್ತು ವಿಶ್ವಕರ್ಮರು ಇವೆಲ್ಲಾ ಕಾಯಕ ವರ್ಗಗಳಿಗೆ ಸುಮಾರು 22 ಕಾಯಕಗಳಿಗೆ ವಿಶೇಷವಾದ ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಅವರ ವೃತ್ತಿಯನ್ನು ಅಭಿವೃದ್ಧಿ ಮಾಡುವುದಕ್ಕೆ each individual ಎಲ್ಲರಿಗೂ ಕೂಡ ರೂ. 50,000/- ಸೌಲಭ್ಯ ಕೊಡುತ್ತೇವೆ. ಅದರಲ್ಲಿ ನಮ್ಮ ರಾಜ್ಯದ ಪಾಲು ಮತ್ತು ಬ್ಯಾಂಕ್ ಸಾಲ ಸೌಲಭ್ಯಗಳಿಗೆ ನಮ್ಮ ಗ್ಯಾರಂಟಿಯನ್ನು ಕೊಟ್ಟು ಸಾಲ ಕೊಡುವುದನ್ನು ಮಾಡಿದ್ದೇವೆ. It's first time in Karnataka. ಇಷ್ಟು ವ್ಯವಸ್ಥಿತವಾಗಿ ಮಾಡಿದ್ದೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮೇಜು ತಟ್ಟಿ ಹರ್ಷಿಸಿದರು)**

ನಾವು ಅದನ್ನು neglect ಮಾಡಿಲ್ಲ. ಇದು ಮೊದಲನೆಯದು. ಎರಡನೆಯದಾಗಿ ಮೈನಾರಿಟಿ ಮಕ್ಕಳಿಗೂ ಕಳೆದ ಸಲ ಅವರು ಪ್ರಶ್ನೆ ಕೇಳಿದ್ದರು. ಕಳೆದ ಸಲದ ಬಜೆಟ್‌ಗಿಂತ ಹೆಚ್ಚು ಅನುದಾನವನ್ನು ಕೊಟ್ಟು ಬಾಕಿ ಇರುವುದೆಲ್ಲವನ್ನೂ ಕ್ಲಿಯರ್ ಮಾಡಿದ್ದೇವೆ. ಮೊದಲ ವರ್ಷದ್ದು ಆಗಿಲ್ಲ ಎಂದು ಹೇಳಿದ್ದಾರೆ. ವಿದೇಶಕ್ಕೆ ಕಳುಹಿಸುವುದನ್ನು ನಾನು promise ಮಾಡಿದ್ದೆ. ವಿದೇಶಕ್ಕೆ ಹೋಗುವುದನ್ನು ನಾನು ಮಾಡಿದ್ದೇನೆ. ಅವಕಾಶ ಇರಲಿಲ್ಲ ಆದರೂ ಮತ್ತೇನೋ provision ಮಾಡಿ ಮಾಡಿದ್ದೇನೆ. ಮೊದಲನೆ ವರ್ಷದ scholarship ಏನಿದೆ ಖಂಡಿತವಾಗಿಯೂ ಅದನ್ನು ಪರಿಶೀಲಿಸಿ ಆ ಮಕ್ಕಳಿಗೆ

ಏನು ಸಹಾಯ ಮಾಡಬೇಕೋ ಅದನ್ನು ಮಾಡುತ್ತೇನೆ. ಯಾವುದೇ ಬಡಕುಟುಂಬದ ಜಾತಿ, ಮತ, ಪಂಗಡಕ್ಕಿಂತ ಬಡ ಕುಟುಂಬಗಳಿಗೆ ಮುಖ್ಯವಾಗಿ ಬೇಕಾಗಿರುವುದು ವಿದ್ಯಾಭ್ಯಾಸ so that, ಅವರು ತಮ್ಮ ಕಾಲ ಮೇಲೆ ತಾವು ನಿಲ್ಲುತ್ತಾರೆ. ಆ ವಿಷಯದಲ್ಲಿ ನಾನು ಅತ್ಯಂತ ಆಸಕ್ತಿ ವಹಿಸಿದ್ದೇನೆ. ಎಲ್ಲಾದರೂ, ಏನಾದರೂ ಅಕಸ್ಮಾತ್ ಕೊರತೆ ಇದ್ದರೆ ಅದನ್ನು ಕೂಡಲೇ ತುಂಬಿಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಮಠ-ಮಾನ್ಯಗಳ ಬಗ್ಗೆ ಅವರು ಹೇಳಿದರು. ಕೆಲವು ಮಠ-ಮಾನ್ಯಗಳು ಸರ್ಕಾರ ಮಾಡುವಂತಹ ಕೆಲಸಗಳನ್ನು ಮಾಡುತ್ತವೆ. ಶಿಕ್ಷಣ, ಅನ್ನದಾನ ಮತ್ತು ವಸತಿ ಶಾಲೆಗಳನ್ನು ಅವರೇ ಮಾಡಿದ್ದಾರೆ.

(ಮುಂದು)

(1017) 22-09-2022 7-30 KH-MD

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು):-**

ಅಂತಹವುಗಳನ್ನು ನೋಡಿಕೊಂಡು ಅವರ boarding ಗೆ ಮತ್ತು ಅವರ ಶಾಲೆಗೆ ನಾನು ಸಹಾಯವನ್ನು ಮಾಡಿದ್ದೇನೆ. ಅಲ್ಲಿ ಇಲ್ಲಿ ಒಬ್ಬಿಬ್ಬರು ಅದನ್ನು ಉಪಯೋಗ ಮಾಡದೇ ಇರಬಹುದು. ಆದರೆ, ನನ್ನ ಉದ್ದೇಶ ಇರುವುದೇನೆಂದರೆ, ಮಠ-ಮಾನ್ಯಗಳನ್ನು ನಡೆಸುವಂತಹ ಶಿಕ್ಷಣ ಸಂಸ್ಥೆಗಳಿಗೆ, ಹಾಸ್ಟೆಲ್‌ಗಳಿಗೆ ವಿಶೇಷವಾದಂತಹ ಸಹಾಯ ಮಾಡಬೇಕು. ಏಕೆಂದರೆ, ಅಲ್ಲಿ ಮಕ್ಕಳು ಇದ್ದಾರೆ. ನಮ್ಮ ಕೊಪ್ಪಳದ ಗವಿ ಸಿದ್ದೇಶ್ವರ ಮಠದಲ್ಲಿ 3 ಸಾವಿರ ಮಕ್ಕಳು ಶಿಕ್ಷಣ ಮತ್ತು ವಸತಿಯನ್ನು ಪಡೆಯುತ್ತಾರೆ. ಇದಕ್ಕೆ ಗುರುಗಳು ನಯಾ ಪೈಸೆ ಚಾರ್ಜ್ ಮಾಡುವುದಿಲ್ಲ. ಈ ಕೋವಿಡ್ ಇರುವ ಕಾರಣದಿಂದ ಬಹಳ ಜನ ಮಕ್ಕಳು ಪಾಸ್ ಆಗಿಬಿಟ್ಟರು. ಈಗ 5 ಸಾವಿರ ಜನ ಮಕ್ಕಳು ಆಗಿಬಿಟ್ಟಿದ್ದಾರೆ. ಅಲ್ಲಿರುವಂತಹ 5 ಸಾವಿರ ಮಕ್ಕಳಿಗೆಲ್ಲಾ ಆಹಾರವನ್ನು ಭಕ್ತರೇ ಕೊಡುತ್ತಾರೆ. ಇದುವರೆಗೂ ಸರ್ಕಾರದ ಹತ್ತಿರ ಒಂದು ನಯಾ ಪೈಸೆ ಕೂಡ ಕೇಳಿಲ್ಲ. ಈ ಬಾರಿಯೂ ಕೂಡ ಕೇಳಲಿಲ್ಲ. ಆದರೆ, ಅವರಿಗೆ ವಸತಿಗೆ ಸ್ವಲ್ಪ ಕಷ್ಟವಾಗಿದೆ. ಅವರು ಒಂದು ಸಭೆಯಲ್ಲಿ ಕಣ್ಣೀರು ಹಾಕಿಬಿಟ್ಟರು. ನಾನು 2-3 ಬಾರಿ

ಅವರ ಕಡೆಗೆ ಹೋದಾಗ, ಹಾಗೆಯೇ, ಈ ಹಿಂದೆ ನೀರಾವರಿ ಸಚಿವನಾಗಿ ಅಲ್ಲಿಗೆ ಹೋದಾಗಲೂ ಕೂಡ ಅವರು ಯಾವತ್ತೂ ಕೂಡ ಸರ್ಕಾರದಿಂದ ಏನು ತೆಗೆದುಕೊಂಡಿರುವಂತಹದ್ದು ಇಲ್ಲ. ಅಂತಹ ದೊಡ್ಡ ಮಠ. ಅಂತಹ ಸಣ್ಣ ವಯಸ್ಸಿನಲ್ಲಿ ಉದಾತ್ತವಾಗಿರುವಂತಹ ಸಮಿತಿ ಅದು. ಅವರು ಎಂದೂ ಕೂಡ ಕೇಳಲಿಲ್ಲ. ಈ ಬಾರಿ ಕೂಡ ಕೇಳಲಿಲ್ಲ. ಆದರೆ, ಆ ಭಾಗದ ಜನ ಈ ರೀತಿಯಾಗಿದೆ ಎಂದು ಹೇಳಿದಾಗ ನಾನೇ ಅವರಿಗೆ ದುಡ್ಡು ಕೊಟ್ಟಿದ್ದೇನೆ. ಹೀಗೆ ಹಲವಾರು ಉತ್ತಮವಾದ ಉದಾಹರಣೆಗಳು ಇವೆ. ಸಮಾಜ ಹೇಗೆ ಇರುತ್ತದೆಯೋ, ಹಾಗೇ ಇರುತ್ತದೆ. ಅದಕ್ಕೆ ನಾವು ನೋಡಿಕೊಂಡು ಸಹಾಯ ಮಾಡುತ್ತೇವೆ. ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು 2,389 ಕೋಟಿ ರೂಪಾಯಿಗಳು ಯಾವುದು ದುಡ್ಡು ಎಂದು ಪ್ರಶ್ನೆಯನ್ನು ಕೇಳಿದರು. ಇದು ಠೇವಣಿ ಹಣ ಎನ್ನುವಂತಹದ್ದು ಆಗಿದೆ. ಇದು ನಮ್ಮ ರಾಜ್ಯದಲ್ಲಿ ಕೆಲವು ಬಾಬತ್ತು ನಿಂದ ಬರುವಂತಹ ದುಡ್ಡು. ವಿಶೇಷವಾಗಿ forest development fund, infrastructure fund, road safety fund ಇವೆಲ್ಲಾ ನಮ್ಮ ಅಕೌಂಟ್‌ನಲ್ಲಿ ಇರುತ್ತದೆ. It should be used for specific purposes. ಆ ಫಂಡ್ ಇದ್ದರೂ ಕೂಡ ಅದನ್ನು ಉಪಯೋಗ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿ ಮಾಡಬೇಕು. ಮುಖ್ಯ ಬಜೆಟ್‌ನಲ್ಲಿ ಮಾಡದೇ ಇದ್ದರೂ ಪೂರಕ ಅಂದಾಜಿನಲ್ಲಿ ನಾವು ತೆಗೆದುಕೊಂಡಿದ್ದೇವೆ. ಎರಡನೆಯದು, ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಬರುತ್ತದೆ ಎಂದು ಕೇಳಿದ್ದಾರೆ. 525 ಕೋಟಿ ರೂಪಾಯಿಗಳು ಕೇಂದ್ರ ಸರ್ಕಾರದಿಂದ ಬರುವಂತಹ ಒಂದು ನಿಧಿಯಾಗಿದ್ದು, ಅದನ್ನು ಕೂಡ ಅಳವಡಿಸಿಕೊಂಡಿದ್ದೇವೆ ಮತ್ತು 1,728 ಕೋಟಿ ರೂಪಾಯಿಗಳು it's an adjustment. It is not outflow of cash ಅಲ್ಲ. ಹೀಗಾಗಿ ಒಟ್ಟು ರೂ.10,118.69 ಕೋಟಿಗಳು cash outflow ಆಗಿದೆ ಎನ್ನುವುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ನಸೀರ್ ಅಹ್ಮದ್‌ರವರು ಅರಣ್ಯದ ಬಗ್ಗೆ ಮತ್ತು ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರು taxes, devolution of funds from Centre to State ಅನ್ನು ಕೂಡ ಕೇಳಿದ್ದಾರೆ. ಅರಣ್ಯಕ್ಕೆ ಸಂಬಂಧಪಟ್ಟ ವಿಚಾರವನ್ನು ಖಂಡಿತವಾಗಿಯೂ humanitarian grounds ಮೇಲೆ after March ಮಾಡುತ್ತೇವೆ. ಇದಕ್ಕೆ ಸೂಚನೆಯನ್ನು ಕೂಡ ನಾವು ಕೊಡುತ್ತೇವೆ. ನಮ್ಮ ಅಧಿಕಾರಿಗಳು ಕೋರ್ಟ್ ಆದೇಶ ಇದೆ ಎಂದು

ಹೇಳುತ್ತಿದ್ದಾರೆ. I have said it now, you should do it from March. ಆದರೂ ಕೂಡ ಮಾನವೀಯತೆಯ ದೃಷ್ಟಿಯಿಂದ . . .

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ನಸೀರ್ ಅಹ್ಮದ್‌ರವರೇ, ಸರ್ಕಾರ ನಡೆಸುತ್ತದೆ. ತಾವು ಚಿಂತೆ ಮಾಡಬೇಡಿ. Devolution of funds ಬಗ್ಗೆ ಕೇಳಿದ್ದಾರೆ. ಇದಕ್ಕೆ ಖಂಡಿತವಾಗಿಯೂ contributing states ಎಂದು ಇದೆ. ಅದರಲ್ಲಿ ತಾವು ಹೇಳಿದಂತೆ 4-5 ರಾಜ್ಯಗಳ ಜೊತೆಗೆ ತಮಿಳುನಾಡು, ಆಂಧ್ರಪ್ರದೇಶ ಎಲ್ಲವೂ ಇವೆ. Devolution of funds ಇಡೀ ದೇಶ, ಇಡೀ ರಾಜ್ಯ ಇವೆಲ್ಲವನ್ನೂ ಕೂಡ ನೋಡಬೇಕು. Yes, I believe in, 'strong states and strong centre will lead to a strong country'. So, it can't be neglected. ಆದರೆ, ಇದರಲ್ಲಿ ಏನಾಗಿದೆಯೆಂದರೆ, ನಾನು ಕೂಡ ನಿಮ್ಮ ರೀತಿಯೇ ವಾದವನ್ನು ಮಾಡಿದವನು. "Equity and efficiency are two horses we have to ride in the same direction, with the same speed." ಎಂದಾಗ ಮಾತ್ರ ದೇಶ ಉದ್ಧಾರವಾಗುತ್ತದೆ. ಈಗ ನಮ್ಮ ರಾಜ್ಯ contributory state ಇದೆ. ನಮಗೆ contributory state ಇರುವುದರಿಂದ, ನಮಗೆ ಎಷ್ಟು ಬೇಕೋ, ಅಷ್ಟು ಬರುತ್ತದೆ. ಯಾವುದೇ contributory state ಗೆ ಬರುವುದಿಲ್ಲ. ಆದರೆ, ಎಲ್ಲಿ contribution ಕಡಿಮೆ ಇದೆ. ಅದನ್ನು ಅಲ್ಲಿ ಸರಿದೂಗಿಸುವುದಕ್ಕೆ ಮಾಡುತ್ತಾರೆ. ಹಾಗೆಯೇ, constitutional provision ಇದೆ. ಇವತ್ತಿನಿಂದ ಅಲ್ಲ. ಮೊದಲಿನಿಂದಲೂ ಇದೆ. ಆದರೆ, ನಾನು ಕೂಡ GST Council ವಾದ ಮಾಡಿದ್ದೇನೆ. ಕನಿಷ್ಟ contributory states should not be penalised. If you can't reward you should not be penalised ಎನ್ನುವಂತಹದ್ದನ್ನು ಹೇಳಿದ್ದೇನೆ. ವಿಶೇಷವಾಗಿ ಒಂದು ವಿಶೇಷ ಸಂದರ್ಭ ಬಂದಾಗ 14ನೇ ಕಮಿಷನ್ ಮತ್ತು 15ನೇ ಕಮಿಷನ್ ವರದಿ ಕೊಟ್ಟಾಗ we have to

take care of the interest of the contributory states. So that they will be healthy to contribute further. ಈ ವಾದವನ್ನು ನಾನು ಅಷ್ಟರಮಟ್ಟಿಗೆ ಹೋಗುತ್ತೇನೆ. ಆದರೆ, ಎಷ್ಟು ಕಳುಹಿಸಿದ್ದೇವೆ, ಅಷ್ಟೇ ಬರಬೇಕೆಂದರೆ ಯಾವುದೇ democracy ಯಲ್ಲಾಗಲಿ, ಇನ್ನೊಂದರಲ್ಲಿ ಸಾಧ್ಯ ಇಲ್ಲ. ಉದಾಹರಣೆಗೆ ನಮ್ಮ ಕರ್ನಾಟಕದ ಒಟ್ಟು ಆದಾಯ, almost 55-60 percent comes from Bengaluru. ಎಲ್ಲಾ ಇಲ್ಲೇ ಖರ್ಚು ಮಾಡಿ ಎಂದು ಹೇಳಿದರೆ ಬೇರೆ ಕಡೆಗಳಲ್ಲೂ ಅಭಿವೃದ್ಧಿಯಾಗಬೇಕಲ್ಲವೇ? Similarly, it has been done. But however, we will not let loose our voice. ಪ್ರಸಂಗ ಬಂದಾಗ GST Council ಇರಬಹುದು, Chief Ministers' Conference ಇರಬಹುದು, I have raised this issue and ನಾನು ಪ್ರತಿಪಾದನೆ ಮಾಡಿದ್ದೇನೆ. "Strong state will only lead to strong centre and strong country." ಆದ್ದರಿಂದ, ಈಗ ಉದಾಹರಣೆಗೆ ನಮ್ಮ GST of Rs.14,101 is due. That we will get, part this year and part next year, ನಿರ್ದಿಷ್ಟವಾಗಿ ಕೇಳಿದ್ದಾರೆ. 2 ವರ್ಷ GST Council ನಲ್ಲಿ ಸಮಯವನ್ನು ತೆಗೆದುಕೊಂಡಿದ್ದರು. ಬಹುತೇಕವಾಗಿ ಈ ವರ್ಷ ಮತ್ತು ಮುಂದಿನ ವರ್ಷ ಸೆಪ್ಟೆಂಬರ್ - ಅಕ್ಟೋಬರ್ ಒಳಗೆ ಪೂರ್ತಿ ಬರುವಂತಹ ಎಲ್ಲಾ ಅವಕಾಶಗಳು ಇವೆ. ಆದರೆ, ಇಷ್ಟಕ್ಕೆ ನಾವು ಸುಮ್ಮನೆ ಕುಳಿತಿಲ್ಲ. IGST (Integrated Goods and Services Tax) inter-state component ಇದೆಯಲ್ಲವೇ, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಹೋದಾಗ IGST component ಇದೆ. ಅದು ನಮ್ಮ ರಾಜ್ಯಕ್ಕೆ ಬರಬೇಕೆಂದು 6 ಸಾವಿರ ಕೋಟಿ ರೂಪಾಯಿಗಳನ್ನು additional ಆಗಿ claim ಮಾಡಿದ್ದೇವೆ. ನಮ್ಮ 14,101 ಕೋಟಿ ರೂಪಾಯಿಗಳು ಅಲ್ಲದೇ 6 ಸಾವಿರ ಕೋಟಿ ರೂಪಾಯಿಗಳು ಬರಬೇಕೆಂದು claim ಮಾಡಿದ್ದೇವೆ. ಇದಕ್ಕೆ ಎರಡು ರಾಜ್ಯಗಳ ನಡುವೆ ಇರುವ Accountant General audit ಆಗಬೇಕು. Accountant General audit ಕೂಡ ಮಾಡಿಸಿದ್ದೇವೆ. ಈಗ CAG (Comptroller and Auditor General of India) ಗೆ ಕೇಂದ್ರ ಸರ್ಕಾರ ಅನುಮೋದನೆ ಕೊಟ್ಟರೆ ಮಾಡುತ್ತೇವೆ. ಇದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ಕೊಡಲೇ ಬೇಕಾಗುತ್ತದೆ. ಆ ಪ್ರಕ್ರಿಯೆ ನಡೆದಿದೆ. ನಾನು ಹಣಕಾಸು ಸಚಿವರ

ಹತ್ತಿರ ಹೋಗಿ ಮನವಿಯನ್ನು ಕೂಡ ಕೊಟ್ಟಿದ್ದೇನೆ. ಅವರು ಕೂಡ ಒಪ್ಪಿಕೊಂಡಿದ್ದಾರೆ. CAG report ಬಂದ ತಕ್ಷಣ 'without wasting any time I will release that money' ಎಂದು ಹೇಳಿದ್ದಾರೆ. ಹೀಗೆ ಎಲ್ಲಿಂದ ಏನೇನು ಬರುವುದಕ್ಕೆ ಸಾಧ್ಯ ಇದೆ. ಅದನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ, ತಾವು ಇದಕ್ಕೆ ಅನುಮೋದನೆಯನ್ನು ಕೊಡಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಮುಖ್ಯಮಂತ್ರಿಯವರೇ, . . .

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದೊಂದು . . .

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಮರಿತಿಬ್ಬೇಗೌಡರವರೇ, ಒಂದು ನಿಮಿಷ. ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರು ಇನ್ನು 2 ವಿಷಯಗಳ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಾವು ಮತ್ತು ಮಾನ್ಯ ಹೆಚ್.ಕೆ.ಪಾಟೀಲ್ ರವರು ಒಂದೇ ರೀತಿಯಲ್ಲಿ ಬರುತ್ತೀರಿ. ಅವರದೇನೂ script ಇದೆಯೋ, ಅದೇ ರೀತಿ ತಮ್ಮ script ಆಗಿದೆ. ನಾನು ಸ್ವಲ್ಪ ಏನಾದರೂ ಬದಲಾವಣೆಯಾಗುತ್ತದೆಯೇ ಎಂದು ಮಾಡಿದ್ದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವರಿಬ್ಬರು ಅಕ್ಕ-ಪಕ್ಕದವರು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ನಮಗೆ ಹಿರಿಯರು. ಅದೇ ರೀತಿ ನಾವು ಇದ್ದರೆ, ನಾವು ready ಮಾಡಿದರೆ, ಅದರ ಜೊತೆಗೆ... that doesn't matter.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಅದರಲ್ಲಿ ತಪ್ಪೇನೂ ಇಲ್ಲ. I know, ಆಯಿತು ಕುಳಿತುಕೊಳ್ಳಿ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಮುಖ್ಯಮಂತ್ರಿಯವರೇ, I am a sportsman, I have to ask about sports. Otherwise, that does not mean that I have…

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, You please sit down. You need not worry about my comment.

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಅರ್ಧ ಗಂಟೆ ಮುಂದೆ ಮಾನ್ಯ ಹೆಚ್.ಕೆ.ಪಾಟೀಲ್‌ರವರು ಬಂದಿದ್ದರು.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡುವುದಕ್ಕೆ ಏನು ತಪ್ಪಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ನಾನು ತಪ್ಪು ಎಂದು ಹೇಳಲಿಲ್ಲ. ನೀನೇ ತಪ್ಪು ಎಂದು ತಿಳಿದುಕೊಂಡಿದ್ದೀಯಾ. ಅವರು ಏನು word to word ಕೇಳಿದರು. ಅದನ್ನು ನೀನು ಹೇಳಿದ್ದೀಯಾ. ಸಂತೋಷ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಮುಖ್ಯಮಂತ್ರಿಯವರೇ, . . .

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಒಂದು ನಿಮಿಷ. ನಾನು ಹೇಳುವುದನ್ನು ಕೇಳು. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಒಬ್ಬ ನನ್ನ ಹಳೆಯ ಸ್ನೇಹಿತ. What you share, with whom you share, what different things you share ನನಗೆಲ್ಲಾ ಗೊತ್ತಿದೆ. ಆದ್ದರಿಂದ, ಇಷ್ಟಕ್ಕೆ ಅದನ್ನು ನಿಲ್ಲಿಸಿದರೆ ಒಳ್ಳೆಯದು. ಮಾನ್ಯ ಸಭಾಪತಿಯವರೇ, ಈಗಾಗಲೇ ಅವರು ಉತ್ತರ ಕೊಡುವಾಗ ಹೇಳಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, Commonwealth Games and Asian Games ಅನ್ನು ಗೆದ್ದವರಿಗೆ ಸ್ವಲ್ಪ honorarium ಜಾಸ್ತಿ ಮಾಡಿ ಎಂದು ಹೇಳಿದ್ದರು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅದನ್ನು ಖಂಡಿತವಾಗಿಯೂ ಪರಿಗಣಿಸುತ್ತೇವೆ. ಈಗಾಗಲೇ ಜಾಸ್ತಿ ಮಾಡಿದ್ದೇವೆ. Commonwealth Games, Olympics and Asian Games ನಲ್ಲಿ ಗೆದ್ದವರಿಗೆ ಇನ್ನಷ್ಟು ಜಾಸ್ತಿ ಮಾಡಬೇಕೆಂಬುದು ಅವರ ಅಭಿಲಾಷೆ ಇದೆ. whatever other states are giving, we will give on par with them. ಈಗಾಗಲೇ sports ಗೆ ಏನು ಗರಿಷ್ಠ ಮಟ್ಟದಲ್ಲಿ ಕೊಡಬೇಕೋ ಅದನ್ನು ಕೊಟ್ಟಿದ್ದೇವೆ. It need not be in the budget only, there are so many ways. ಉದಾಹರಣೆಗೆ, ಇವತ್ತು 75 Athletes and other sportsmen have been adopted for next Olympics for four years, which no states have done. And we are giving them Rs. 8 lakhs per year.

(ಮುಂದು)

(1018)22-09-2022(07-40)bsd-ak

**Sri BASAVARAJ BOMMAI (contd.)**

And lot of other people/sponsors have come around. ನಾವು ಮಾಡುತ್ತೇವೆ ಎಂದು ಬಂದರು. ಹೀಗೆ sports ಗೆ ಕೊರತೆ ಆಗದಂತೆ ನೋಡಿಕೊಳ್ಳುತ್ತೇವೆ. ಉದಾಹರಣೆಗೆ ಮೊನ್ನೆ ನಾವು ಗ್ರಾಮೀಣ ಕ್ರೀಡೆ ಎಂದು introduce ಮಾಡಿದ್ದು, ಅದು budget ನಲ್ಲಿಯೂ ಇರಲಿಲ್ಲ. We have introduced *'grameena kreede'.* Gram Panchayat, Taluk Panchayat, Zilla Panchayat and State level, ನಾಲ್ಕು level ಗಳಲ್ಲಿ ನಡೆಯಿತು. ಗ್ರಾಮೀಣ ಕ್ರೀಡೆ ಎಂದರೆ ಕಬ್ಬಡ್ಡಿ, ಕೋಕೋ, ಕುಸ್ತಿ, ಚಕ್ಕಡಿ, ಕಂಬಳ ಇತ್ಯಾದಿಗಳು ಬರುತ್ತಿದ್ದು, ಈ ಕ್ರೀಡೆಗಳನ್ನು encourage ಮಾಡುವ ಸಲುವಾಗಿ ಮಾಡುತ್ತಿದ್ದೇವೆ. ಅದಕ್ಕೆ ಆಗುವ ವೆಚ್ಚವನ್ನು ಕೊಡುತ್ತಿದ್ದೇವೆ.

ಹೀಗೆ sports ಗೆ ಏನೂ ಕೊರತೆ ಆಗದಂತೆ ನೋಡಿಕೊಳ್ಳುತ್ತೇವೆ ಮತ್ತು ಯಾವ ಸಂದರ್ಭದಲ್ಲಿ ಏನೇನು ಬೇಕೋ, ಅದನ್ನು ಮಾಡುತ್ತೇವೆ. ಉದಾಹರಣೆಗೆ ಮೊನ್ನೆ Under-18 Women's Asian Basketball Championship ಕ್ರೀಡೆ ನಡೆಯಿತು, ಡಾ: ಕೆ. ಗೋವಿಂದರಾಜ್ ರವರು ಸದನದಲ್ಲಿಯೇ ಇದ್ದಾರೆ. ಇದಕ್ಕಾಗಿ ಸುಮಾರು ಮೂರ್‍ನಾಲ್ಕು ಕೋಟಿ ರೂಪಾಯಿಗಳು ಖರ್ಚಾಗಿದೆ. ಅವರ ಹತ್ತಿರ ಇದ್ದ ಸ್ವಲ್ಪ ದುಡ್ಡು ಹಾಗೂ ಸರ್ಕಾರದ ಹಣವನ್ನು ಸೇರಿಸಿಕೊಂಡು ಮಾಡಿದ್ದಾರೆ. ಖೇಲೋ ಇಂಡಿಯಾ ಮಾಡಿದ್ದು, ಅದಕ್ಕೆ ವಿಶೇಷ ದುಡ್ಡು ಕೊಟ್ಟಿದ್ದೇವೆ. ಕೆಲವು ಕಡೆ finishing stage ಇರುವ sports complex ಗಳಿಗೂ ದುಡ್ಡು ಕೊಡುತ್ತಿದ್ದೇವೆ. ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು Special Package ನಿಮಗೆ ಗೊತ್ತಿದ್ದು, ಬೇರೆ ರಾಜ್ಯಗಳಿಗಿಂತ ಹೆಚ್ಚು ಹಣವನ್ನು ಕೊಡುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ ಮನೆಗಳು ಬಿದ್ದಾಗ ರೂ.95 ಸಾವಿರ ಪರಿಹಾರ ಕೊಟ್ಟು ಮುಗಿಸಿಬಿಡುತ್ತಾರೆ. ನಾವು ಸುಮಾರು 3 ರಿಂದ 5 ಲಕ್ಷಗಳವರೆಗೆ ಕೊಡುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ crop compensation ಪರಿಹಾರವಾಗಿ N.D.R.F. (National Disaster Response Fund) norms ಎಷ್ಟಿದೆಯೋ, ಅಂದರೆ ರೂ.13,800 ಗಳನ್ನು ಮಾತ್ರ ಕೊಡುತ್ತಿದ್ದು, ನಮ್ಮ ರಾಜ್ಯದಲ್ಲಿ ಒಣ ಬೇಸಾಯಕ್ಕೆ ರೂ.26,800 ಕೊಡುತ್ತಿದ್ದೇವೆ. I have doubled it. ಬೇರೆ ರಾಜ್ಯಗಳಲ್ಲಿ ನೀರಾವರಿಗೆ ರೂ.15,000 ಕೊಟ್ಟರೆ ನಾವು ರೂ.25,000 ಕೊಡುತ್ತಿದ್ದೇವೆ. ಇನ್ನು ಬೇರೆ ರಾಜ್ಯಗಳಲ್ಲಿ ಭಾಗಾಯ್ತುಗಾಗಿ ಅಂದರೆ ತೋಟಗಾರಿಕೆಗೆ ರೂ.17,000 ಕೊಟ್ಟರೆ ನಾವು ರೂ.25,000 ಕೊಡುತ್ತಿದ್ದೇವೆ. ರಾಜ್ಯ ಸರ್ಕಾರದ ಬೊಕ್ಕಸದಿಂದ ಇವೆಲ್ಲವನ್ನೂ ಕೊಡುತ್ತಿದ್ದೇವೆ. So, these are all special concessions. ಈ ಬಾರಿ what is the special thing ಎಂದರೆ commercial establishments ಗೆ ಪರಿಹಾರ ಕೊಡಲು N.D.R.F. norms ಗಳಲ್ಲಿ ಇಲ್ಲ, but I am giving it. ನಾನು ಹೋಗಿ ನೋಡಿರುವಂತೆ ಸಣ್ಣಪುಟ್ಟ ಅಂಗಡಿಗಳಿಗೆ ಬಹಳಷ್ಟು ತೊಂದರೆಯಾಗಿದೆ. ಅವುಗಳನ್ನು ಸರ್ವೆ ಮಾಡಿಸಿ, ಯಾವ್ಯಾವ ಊರುಗಳಲ್ಲಿ commercial establishment ಗಳಿಗೆ ನಷ್ಟವಾಗಿದೆ, ಅದಕ್ಕೂ ಪರಿಹಾರ ಕೊಡುತ್ತಿದ್ದೇವೆ. ಉದಾಹರಣೆಗೆ

ರಾಮನಗರದ silk ಗೆ ಸಂಬಂಧಪಟ್ಟಂತೆ N.D.R.F. norms ನಲ್ಲಿ ಬರದೇ ಇದ್ದರೂ I have decided to give. ಅದರ ಬಗ್ಗೆ estimate ಮಾಡುತ್ತಿದ್ದಾರೆ. ಅದರಲ್ಲಿ reeling ಇನ್ನೊಂದು ಮತ್ತೊಂದು ಇದ್ದು, ಅದರಲ್ಲಿ ಎಷ್ಟೆಷ್ಟು ಲಾಸ್ ಆಗಿರುತ್ತದೆ, we are going to compensate part of that loss. Landslide ನಲ್ಲಿ ಹೆಚ್ಚು ಹಣ ಬೇಕು ಎಂದು ಕೇಳಿದ್ದಕ್ಕೆ ಕೊಡುತ್ತಿದ್ದೇವೆ. Wherever it is essential, we are giving. ಯಾವುದಕ್ಕೂ ಕಡಿಮೆಯಾಗದಂತೆ ನೋಡಿಕೊಳ್ಳುತ್ತೇನೆ. ಮಾನ್ಯ ನಾಗರಾಜು ರವರು B.M.T.C. (Bangalore Metropolitan Transport Corporation) Chairman ಆಗಿದ್ದವರು, ಹಾಗಾಗಿ 'old and faithful' ಎಂದಿರುತ್ತದೆ. He is faithful to the institution which he has served. I appreciate that. ಬಹಳ ಜನ ಇದ್ದಾಗ ಮಾಡಿ, ನಂತರ ಬಿಟ್ಟುಬಿಡುತ್ತಾರೆ. He is very faithful. Motor Vehicle Tax ಅನ್ನು ಈ ಬಾರಿ exempt ಮಾಡಿದ ಹಾಗೆ ಅಲ್ಲವೇ? ನಾವು ಅದನ್ನು equity ಆಗಿ convert ಮಾಡಿದರೆ Balance Sheet ಹೆಚ್ಚಿಗೆ ಆಗುತ್ತದೆ. ಸುಮಾರು ರೂ.೮೦೦ ಕೋಟಿ Motor Vehicle Tax ಅನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದೇವೆ. ಏನಾಗುತ್ತದೆ ಎಂದರೆ ಈ ಸಂಸ್ಥೆಗಳಲ್ಲಿ tax collection ಅನ್ನು ಅವರಿಗೆ ಬಿಟ್ಟುಬಿಟ್ಟರೆ ಅಂದರೆ ಬಂದಿದ್ದನ್ನು ಅವರಿಗೆ ಬಿಟ್ಟುಬಿಟ್ಟರೆ ಅದು perfect ಆಗಿ use ಆಗುತ್ತದೋ ಇಲ್ಲವೋ? ಒಂದು ಬಾರಿ Consolidated Fund ಬಂದಮೇಲೆ ಅವರಿಗೆ ಯಾವ್ಯಾವುದಕ್ಕೆ ಬೇಕು ಎಂದು specific purpose ಗಳಿಗೆ ಕೊಡುವುದಕ್ಕೆ ಅನುಕೂಲವಾಗುತ್ತದೆ. ನಾವು ಹಿಂದೆ ಈ ರೀತಿ concession ಕೊಟ್ಟು ನೋಡಿದ್ದೇವೆ. Therefore, we have to have financial discipline and control and that should be used. We will use for them only but we will use for a purpose. ಆ ಕೆಲಸವನ್ನು ಮಾಡುವ ಸಲುವಾಗಿ ಮಾಡಿದ್ದು, ಈ ವರ್ಷ Motor Vehicle Tax ಅನ್ನು complete ಆಗಿ exemption ಮಾಡಲಾಗಿದೆ. And we are giving more than that. ನಾವು ಅವರದೇ ಹಣವನ್ನು ಅವರಿಗೆ ಕೊಡುತ್ತಿಲ್ಲ. We are giving more than last year. Last year Rs.೨೩೦೦ crores ಕೊಟ್ಟಿದ್ದೇವೆ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, B.M.T.C. building ಗಳನ್ನೇ mortgage ಮಾಡಿ ಸಂಸ್ಥೆಗಳನ್ನು ನಡೆಸುವ ಪರಿಸ್ಥಿತಿ ಬಂದಿದೆ ಎಂದರೆ ಬಹಳ ಖೇದನೀಯ ಸಂಗತಿ ಆಗಿರುವುದರಿಂದ ನಾನು ಕೇಳುತ್ತಿದ್ದೇನೆ. VAT exemption ಕೊಡಬೇಕು.

**Sri BASAVARAJ BOMMAI:** Don't worry. Diesel ದುಡ್ಡು ಸಮೇತವಾಗಿ ಎಲ್ಲವನ್ನೂ release ಮಾಡಿದ್ದೇನೆ. Salary…

**ಶ್ರೀ ಎಂ. ನಾಗರಾಜು:-** ಅವರಿಗೆ VAT exemption ಅನ್ನು ಕೊಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:-** ನಾನು ಆಗಲೇ ಏನು ಹೇಳಿದ್ದೇನೆ, the purpose of that taxation is ಆದಾಯ ಬಂದಮೇಲೆ specific purpose ಗೆ use ಮಾಡಬಹುದು. ಬರುವ ಆದಾಯವನ್ನು ಅವರಿಗೆ ಬಿಟ್ಟಾಗ they might or might not use it.

**Sri M. NAGARAJU:** I appreciate that, Sir. But the situation is very bad. Today, the main B.M.T.C. building is mortgaged there for sustaining it. That's a very bad state of affairs.

**Sri BASAVARAJ BOMMAI:** No, don't worry. B.M.T.C. ಗೆ ಏನು ಸಹಾಯ ಮಾಡಬೇಕೋ, ಆ ಸಹಾಯವನ್ನು ಅತೀ ಹೆಚ್ಚು ಮಾಡಿದ್ದೇವೆ ಮತ್ತು ಮುಂದೆಯೂ ಮಾಡಿದ್ದೇವೆ. ಈಗಾಗಲೇ ಮಾನ್ಯ ಶ್ರೀನಿವಾಸಮೂರ್ತಿರವರ ಒಂದು report ಬಂದಿದ್ದು, he has suggested lot many things for bringing in financial discipline and work discipline. We will follow that. And how to make themselves very strong and revenue increase ಗೆ ಏನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂಬುದನ್ನು ಹಾಗೂ ಸರ್ಕಾರದಿಂದ ಮಾಡುವ ಸಹಾಯವನ್ನೂ ಮಾಡುತ್ತೇವೆ. ಉದಾಹರಣೆಗೆ ೫೦ ೯೫೦ E.V (Electric Vehicle) bus ಗಳನ್ನು Government of India ದಿಂದ at a very low

rate of interest ನಾವು lease ಮೇಲೆ ತೆಗೆದುಕೊಳ್ಳುತ್ತಿದ್ದೇವೆ. ೨೫೦ E.V buses ಬಂದರೆ that's an asset to the institution. They can make more profit. ಹೀಗೆ ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಬೇರೆ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು sports ಬಗ್ಗೆ ಹೇಳಿದ್ದು, ಈಗಾಗಲೇ ಈ ವಿಚಾರದಲ್ಲಿ ಬಹಳ ಗಂಭೀರವಾಗಿ debate ಕೂಡ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ತಿಳಿದಿರಬೇಕಾಗಿರುತ್ತದೆ. ಏಕೆಂದರೆ ಹೋಬಳಿ ಮಟ್ಟ, cluster ಮಟ್ಟ ಕ್ರೀಡಾ ಕೂಟಗಳಿಗೆ ಎಲ್ಲಾ ಸೇರಿ ಕನಿಷ್ಠ ರೂ.4 ಸಾವಿರವನ್ನು ಕೊಡುತ್ತಿದ್ದಾರೆ. ಹೋಬಳಿ ಮಟ್ಟದ ಒಂದು sports event ಮಾಡಬೇಕೆಂದರೆ teacher ಗಳು ಎಷ್ಟು ಕಷ್ಟಪಡುತ್ತಾರೆ ಎಂಬ ಬಗ್ಗೆ ಎಲ್ಲಾ ಶಾಸಕರಿಗೂ ಗೊತ್ತಿದೆ. ಇದೇ ಪರಿಸ್ಥಿತಿ ಪ್ರತಿಭಾ ಕಾರಂಜಿಗೂ ಇದೆ. ಅಲ್ಲಿರುವ ಮಾಸ್ತರುಗಳು ಮನೆಮನೆಗೆ ಹೋಗಿ ದೇಣಿಗೆ ಎತ್ತಿಕೊಂಡು ಬರುತ್ತಾರೆ, ನಾವೆಲ್ಲರೂ ಸಹಾಯ ಮಾಡಿದ್ದೇವೆ. ಹೋಬಳಿ ಮಟ್ಟದಲ್ಲಿ ಮಾಡಲು minimum ನಾಲ್ಕೈದು ಲಕ್ಷ ರೂಪಾಯಿಗಳು ಖರ್ಚಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಶಾಸಕರುಗಳು ಸ್ವಲ್ಪ ಕೊಡಲಿ, ಅದರಲ್ಲಿ ಏನು ತಪ್ಪಿದೆ?

**Sri S.L. BOJEGOWDA:** Primary ಶಾಲೆಯ ಒಂದು ಮಗುವಿಗೆ ರೂ.10 ಗಳನ್ನು collect ಮಾಡುತ್ತೇವೆ. ೮ ರಿಂದ 10ನೇ class ನ High School ಹುಡುಗರಿಗೆ ರೂ.20 ಗಳನ್ನು collect ಮಾಡುತ್ತೇವೆ. ನಾವ್ಯಾಕೆ ಅವರಿಗೆ ಕೊಡಬೇಕು? ಅದನ್ನು ಅಲ್ಲಿಯೇ ಖರ್ಚು ಮಾಡಿಸಿ. ರೂ.20 ಗಳನ್ನು ಅಲ್ಲಿಯೇ ಖರ್ಚು ಮಾಡಿಸಲಿ, ರೂ.10ಗಳನ್ನು ಅಲ್ಲಿಯೇ ಖರ್ಚು ಮಾಡಿಸಿದರೆ ನಾವು ಸಮಾಧಾನವಾಗುತ್ತೇವೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಇದೇನು ಬಹಳ ದೊಡ್ಡ ವಿಚಾರವಲ್ಲ, ನಾನು debate ಮಾಡುವುದಕ್ಕೆ ತಯಾರಿಲ್ಲ. ಅದಕ್ಕೆ ಏನು ಹೆಚ್ಚಿಗೆ ಕೊಡಬೇಕೋ, ಅದನ್ನು ಕೊಡುವ ಕೆಲಸ ಮಾಡುತ್ತೇನೆ.

**Sri S.L. BOJEGOWDA:** Thank you.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಏನೆಂದರೆ, ಈ ರಾಜ್ಯದಲ್ಲಿ ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ 45 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. Primary ಯಿಂದ ಹಿಡಿದು ಉನ್ನತ ಶಿಕ್ಷಣದವರೆಗೂ ಹಾಗೂ technical education ನಲ್ಲಿಯೂ ಕೂಡ......

**ಸಭಾಪತಿಯವರು:-** ಅವರು ಎಲ್ಲೇ ಮಾತನಾಡಿದರು ಸುತ್ತಿಬಳಸಿ ಅಲ್ಲಿಗೆ ಬರುತ್ತಾರೆ. ಇಲ್ಲವೆಂದರೆ ಕಿರಿಕ್ ಮಾಡುವುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಇವರಿಗೆ 6 ತಿಂಗಳಿಗೊಮ್ಮೆ ಗೌರವಧನ ಕೊಡುತ್ತಿದ್ದು, ಇವರಿಗೆ 2 ತಿಂಗಳಿಗೊಮ್ಮೆ ಆದರೂ ಗೌರವಧನ ಸಿಗುವಂತೆ ಮಾಡಬೇಕು. ಇನ್ನು cycle ಬಗ್ಗೆ ಹೇಳಬೇಕೆಂದರೆ, ಕೋವಿಡ್-19 ಎಂದು 8ನೇ ತರಗತಿ ವಿದ್ಯಾರ್ಥಿಗಳಿಗೆ cycle ಕೊಡುವುದನ್ನು ನಿಲ್ಲಿಸಿ 3 ವರ್ಷಗಳಾಯಿತು. ಈ ಸಾಲಿನಲ್ಲಿಯಾದರೂ cycle ಕೊಡಿಸುವ ವ್ಯವಸ್ಥೆ ಮಾಡಿಸಬೇಕು. ಮೂರನೆಯದಾಗಿ 1 ರಿಂದ 8 ನೇ ತರಗತಿವರೆಗೂ ಸರ್ಕಾರಿ ಶಾಲೆಗಳ ಮಕ್ಕಳಿಗೆ ಮೊಟ್ಟೆ, ಮೊಟ್ಟೆಯನ್ನು ತಿನ್ನದಿದ್ದವರಿಗೆ ಬಾಳೆಹಣ್ಣು, ಬಾಳೆಹಣ್ಣು ತಿನ್ನದೇ ಇದ್ದವರಿಗೆ ಚಿಕ್ಕಿ (ಕಡಲೆಬೀಜದ ಭರ್ಫಿ) ನೀಡುವ ಕಾರ್ಯಕ್ರಮವನ್ನು ಸರ್ಕಾರ ಕೊಡುತ್ತಿದೆ. 8ನೇ ತರಗತಿ ಮಕ್ಕಳಿಗೆ ಈ ಕಾರ್ಯಕ್ರಮ ಕೊಡುತ್ತಿದ್ದು, 9 ಮತ್ತು 10 ನೇ ತರಗತಿ ಮಕ್ಕಳು ಒಂದೇ ಪಂಕ್ತಿಯಲ್ಲಿದ್ದರೂ ಈ ಪದಾರ್ಥಗಳನ್ನು ನೀಡುವುದಿಲ್ಲ. 9 ಮತ್ತು 10ನೇ ತರಗತಿಯ ಮಕ್ಕಳಿಗೂ ಕೊಡಲು ಈ ಯೋಜನೆಗೆ ರಾಜ್ಯ ಸರ್ಕಾರ ಹಣ ಕೊಡುವುದಕ್ಕೆ ಆಗುತ್ತಿಲ್ಲ ಎಂದು ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ ಎಂದು

ಇಲಾಖೆಯವರು ಹೇಳುತ್ತಾರೆ. 9 ಮತ್ತು 10 ನೇ ತರಗತಿಗಳ ಮಕ್ಕಳಿಗೂ ಮೊಟ್ಟೆ, ಹಣ್ಣು ಮತ್ತು ಚಿಕ್ಕಿ ಕಾರ್ಯಕ್ರಮವನ್ನು ಮಾಡಬೇಕು. ಏಕೆಂದರೆ ಇದು ಒಳ್ಳೆಯದಲ್ಲ! ಒಂದೇ ಪಂಕ್ತಿಯಲ್ಲಿರುವ ಮಕ್ಕಳಿಗೆ ಒಬ್ಬರಿಗೆ ಮೊಟ್ಟೆ ಕೊಟ್ಟು ಇನ್ನೊಬ್ಬರು ನೋಡುತ್ತಿರುವುದು, ದಯವಿಟ್ಟು ಈ ರೀತಿ ಆಗಬಾರದು, ಇದನ್ನು ಎಲ್ಲರಿಗೂ ಜಾರಿಗೆ ತರಬೇಕೆಂದು ವಿನಂತಿಸುತ್ತೇನೆ.

(ಮುಂದು)

(1019) 22.09.2022 7.50 ಹೆಚ್‌ವಿ:ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ(ಮುಂದು....):-**

ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು 9 ಮತ್ತು 10ನೇ ತರಗತಿ ಮಕ್ಕಳಿಗೂ ಸಹ ಮೊಟ್ಟೆ, ಹಣ್ಣು ಮತ್ತು ಕಡಲೇಬೀಜದ ಚಿಕ್ಕಿಯನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಒಂದೇ ಪಂಕ್ತಿಯಲ್ಲಿರುವ ಮಕ್ಕಳಿಗೆ ಒಬ್ಬರಿಗೆ ಮೊಟ್ಟೆ ಕೊಡುವುದು, ಮತ್ತೊಬ್ಬರು ನೋಡುತ್ತಾ ಇರುವಂತೆ ಆಗಬಾರದು. ಈ ರೀತಿಯ ವ್ಯತ್ಯಾಸವಾಗಬಾರದೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ(ಮಾನ್ಯ ಮುಖ್ಯಮಂತ್ರಿಗಳು):-** ಸನ್ಮಾನ್ಯ ಸಭಾಪತಿಯವರೇ, ನಾನು ಮತ್ತು ಮಾನ್ಯ ಮರಿತಿಬ್ಬೇಗೌಡರು ಬಹಳ ಹಳೆಯ ಸ್ನೇಹಿತರಾಗಿದ್ದೇವೆ. ನಾವಿಬ್ಬರು ಒಟ್ಟಿಗೆ ಕೆಲಸ ಮಾಡಿದ್ದೇವೆ. ಅವರ ಕಳಕಳಿಯನ್ನು ನಾನು ಮೆಚ್ಚುತ್ತೇನೆ. ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು, ಅವರು ಪ್ರಸ್ತಾಪ ಮಾಡಿರುವ ವಿಚಾರವನ್ನು ಅತ್ಯಂತ ಸಹಾನುಭೂತಿಯಿಂದ ಮಕ್ಕಳ ಮತ್ತು ಶಿಕ್ಷಣದ ಒಳಿತಿಗಾಗಿ ಏನು ಮಾಡಬಹುದು ಅದನ್ನು ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಮಾಡುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಸನ್ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

## 18. ವರದಿಯನ್ನೊಪ್ಪಿಸುವುದು

**ವಿಷಯ: ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ವರದಿ ಮಂಡನೆ.**

*****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿಯನ್ನು ಕೋರಿ ಸನ್ಮಾನ್ಯ ಅನ್ವರ್ ಮಾಣಿಪ್ಪಾಡಿಯವರು ಕರ್ನಾಟಕ ರಾಜ್ಯದ ಹಿಂದಿನ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರಾಗಿ ಕೊಟ್ಟಿರುವಂತಹ ವರದಿಯನ್ನು ಮಂಡಿಸುತ್ತಿದ್ದೇನೆ. ಪೂರ್ಣ ವರದಿಯನ್ನು ಮಂಡಿಸಬೇಕೆನ್ನುವ ಬೇಡಿಕೆ ಬಹು ದಿನಗಳಿಂದ ನಮ್ಮ ರಾಜ್ಯದಲ್ಲಿ ಮತ್ತು ಈ ಸದನದಲ್ಲಿ ಕೂಡ ಚರ್ಚೆಯಾಗಿತ್ತು. ರಾಜ್ಯದ ಉಚ್ಛ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯಗಳು ಇದರ ಬಗ್ಗೆ ತೀರ್ಪು ಕೊಟ್ಟು ಈ ವರದಿಯನ್ನು ಮಂಡಿಸಬೇಕೆಂದು ಹೇಳಿದ್ದವು. ಬೇರೆಬೇರೆ ಕಾರಣಗಳ ಹಿನ್ನೆಲೆಯಲ್ಲಿ ಈ ವರದಿಯ ಮಂಡನೆಗೆ ಅವಕಾಶವಾಗಿರಲಿಲ್ಲ. ಇದರಿಂದಾಗಿ ಬೀದರ್, ಗುಲ್ಬರ್ಗಾ ಸೇರಿದಂತೆ ಅನೇಕ ಪ್ರದೇಶಗಳಲ್ಲಿ ಸುಮಾರು 29 ಸಾವಿರ ಎಕರೆ ವಕ್ಫ್ ಆಸ್ತಿಯನ್ನು ಬಲಾಢ್ಯರು ವಶಪಡಿಸಿಕೊಂಡು ಅನುಭವಿಸುತ್ತಿದ್ದಾರೆ. ಅದನ್ನು ಬಿಡಿಸಬೇಕೆನ್ನುವ ಹಿನ್ನೆಲೆಯಲ್ಲಿ ವರದಿಗಳು ಮಂಡನೆಯಾಗಿದ್ದವು. ಸುಮಾರು 2 ರಿಂದ 3 ಲಕ್ಷ ಕೋಟಿ ರೂಪಾಯಿಗಳಷ್ಟು ಮೌಲ್ಯದ ಆಸ್ತಿ ಈ ಹಗರಣದಲ್ಲಿ ಒಳಗೊಂಡಿದೆ ಎನ್ನುವುದು ಅದರಲ್ಲಿತ್ತು. ಈ ಹಿನ್ನೆಲೆಯಲ್ಲಿ ಇದರ ಸತ್ಯಾಂಶವನ್ನು ತಿಳಿದುಕೊಳ್ಳಬೇಕೆನ್ನುವ ಕಾರಣಕ್ಕೋಸ್ಕರ ಈ ಸದನವೂ ಸೇರಿದಂತೆ ಸಾರ್ವಜನಿಕ ವಲಯಗಳಲ್ಲಿ ಅನೇಕ ಸಮಯದಿಂದ ಚರ್ಚೆಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸ್ಪಷ್ಟವಾಗಿರುವ ನಿರ್ಧಾರಗಳನ್ನು ತೆಗೆದುಕೊಂಡು ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದ ಮಾನ್ಯ ಅನ್ವರ್ ಮಾಣಿಪ್ಪಾಡಿಯವರು ಸಲ್ಲಿಸಿರುವ ವರದಿಯನ್ನು ಈ ಸದನದ ಮೂಲಕ ಸಾರ್ವಜನಿಕರಿಗೆ ಬಿಡುಗಡೆ ಮಾಡುತ್ತಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಈ ವರದಿಯಲ್ಲಿ ಅನೇಕ ಜನ ನಾಯಕರ ಬಗ್ಗೆ ಆರೋಪಗಳವೆ. ಉದಾಹರಣೆಗೆ ಹೇಳಬೇಕಾದರೆ, ಇದರಲ್ಲಿ ಸುಮಾರು 10-12 ಜನ ನಾಯಕರಿದ್ದಾರೆ. ಕೇಂದ್ರ ಸರ್ಕಾರದಲ್ಲಿರುವ ಹಾಲಿ ಜನಪ್ರತಿನಿಧಿಗಳಿದ್ದಾರೆ.

**ಶ್ರೀ ನಸೀರ್ ಅಹ್ಮದ್(ವಿಧಾನಸಭೆಯಿಂದ ಚುನಾಯಿತರಾದವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಎಸ್.ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಆ ವರದಿಯ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಹಿಂದಿನ ಬಾರಿಯೂ ಮಂಡನೆ ಮಾಡಲಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ನಸೀರ್ ಅಹ್ಮದ್‌ರವರೇ, ಮಾನ್ಯ ಸಭಾನಾಯಕರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಸನ್ಮಾನ್ಯ ಸಭಾಪತಿಯವರೇ, 10-12 ವರ್ಷಗಳ ನಂತರ ಈಗ ವರದಿಯನ್ನು ಮಂಡನೆ ಮಾಡುತ್ತಿದ್ದಾರೆ. It is diversion of attention.

**(ಗೊಂದಲ)**

**Sri NASEER AHMED:** It is diversion of attention.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಈ ವರದಿಯಲ್ಲಿ ಶ್ರೀಯುತರುಗಳಾದ ಜಾಫರ್ ಷರೀಫ್, ಎನ್.ಎ. ಹ್ಯಾರಿಸ್, ಜಮೀರ್ ಅಹಮದ್ ಖಾನ್, ನಜೀರ್ ಅಹ್ಮದ್, ಖಮರುಲ್

ಇಸ್ಲಾಂ ಅವರ ಹೆಸರಿದೆ........ ಹೀಗೆ ಸುಮಾರು 12 ಜನ ನಾಯಕರ ಹೆಸರಿದೆ. ಇದರ ಬಗ್ಗೆಯೂ ಸಹ ಸ್ಪಷ್ಟೀಕರಣವನ್ನು ಕೊಡಬೇಕು ಮತ್ತು ತನಿಖೆಯನ್ನು ಆರಂಭಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ವರದಿಯನ್ನು ಮಂಡಿಸಿದ್ದಾರೆ. ಯಾರ್ಯಾರ ಹೆಸರಿದೆ ಎನ್ನುವುದು ಈಗ ಬೇಕಾಗಿಲ್ಲ. ಆ ವರದಿಯ ಬಗ್ಗೆ ಈ ಸದನದಲ್ಲಿ ಸಂಪೂರ್ಣವಾಗಿ ನಾಳೆಯಿಂದಲೇ ಚರ್ಚೆಯಾಗಲಿ, ಯಾರಿಗೂ ಮಸಿ ಬಳಿಯುವಂತಹ ಕೆಲಸ ಮಾಡುವುದು ಬೇಡ. ವರದಿ ಮಂಡನೆ ಮಾಡಿದ್ದಾರೆ; ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಎಸ್.ರವಿ :-** ಆ ವರದಿ ಕೊಡಿ. ಅದನ್ನು ಸಿ.ಬಿ.ಐ.ಗೆ ಕೊಡಿ. ಅವರು ಐ.ಟಿ., ಇ.ಡಿ., ಸಿ.ಬಿ.ಐ.ಗೆ ಕೊಡಲಿ. ಯಾರು ಬೇಡ ಎನ್ನುತ್ತಾರೆ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಸನ್ಮಾನ್ಯ ಸಭಾಪತಿಯವರೇ, ಎಲ್ಲ ಮಹಾನ್ ನಾಯಕರುಗಳ ಇತಿಹಾಸ ಹೊರಗಡೆ ಬರಲಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಮಗೂ ಆ ವರದಿಯನ್ನು ಕೊಡಲಿ, ಚರ್ಚೆ ಮಾಡೋಣ. ಈಗಲೇ ಚರ್ಚೆ ಮಾಡುವುದು ಸೂಕ್ತ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಚರ್ಚೆಗೆ ಅವಕಾಶವನ್ನು ಕೊಡಿ. ಇಲ್ಲದಿದ್ದರೆ, ಸುಮ್ಮನೆ ಹೆಸರುಗಳನ್ನು ಹೇಳಿ, ಮಸಿ ಬಳಿಯುವಂತಹ ಕೆಲಸ ಮಾಡುವುದು ಬೇಡ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನ್ಯಾಯಾಲಯಗಳ ಆದೇಶದ ಮೇರೆಗೆ ಮತ್ತು ಜನರ ಬೇಡಿಕೆಯ ಮೇರೆಗೆ ಈ ವರದಿಯನ್ನು ಬಿಡುಗಡೆ ಮಾಡಲಾಗಿದೆ.

**(ಗೊಂದಲ)**

**ಸಭಾಪತಿಯವರು:-** ಸದನವನ್ನು ನಾಳೆ ಬೆಳಗ್ಗೆ 11-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 7 ಗಂಟೆ 56 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 23ನೇ ಸೆಪ್ಟೆಂಬರ್ ಮಾಹೆ, 2022ರ ಶುಕ್ರವಾರದಂದು ಬೆಳಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>